ಸಂಪುಟ ೨೩
ಸಂಚಿಕೆ ೨

ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ

ನವ್ಹೆಂಬರ-೧೯೯೦

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು :

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　　೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ　　೪. ಅಕ್ಷಯಾ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಸಂಪುಟ : ೨೩]   [ಸಂಚಿಕೆ ೨

ರಾಜ್ಯೋತ್ಸವ ಸಂಚಿಕೆ

ನವ್ಹಂಬರ, ೧೯೯೦

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೩ ಸಂಚಿಕೆ : ೨

ನವ್ಹಂಬರ–೧೯೯೦

ರಾಜ್ಯೋತ್ಸವ ಸಂಚಿಕೆ

ಪ್ರಕಾಶಕರು :

ಡಾ. ಆರ್. ಎಂ. ಷಡಕ್ಷರಯ್ಯ

ಕಾರ್ಯನಿರ್ವಾಹಕ ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಯ, ಧಾರವಾಡ

ಮುದ್ರಕರು :

ಜಿ. ಬಿ. ಮನ್ನಾಚಾರ,

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ

ಬಸವಾಪಟ್ಟಣದ ಜೈನ ಕಲಾವಶೇಷಗಳು

● ಎಚ್. ಆರ್. ರಘುನಾಥ ಭಟ್

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನ **ಬಸವಾಪಟ್ಟಣ** (೧೪°.೧೨' ಉತ್ತರ ಅಕ್ಷಾಂಶ ಮತ್ತು ೭೫°.೫೨' ಪೂರ್ವ ರೇಖಾಂಶ) ಚನ್ನಗಿರಿಯ ವಾಯುವ್ಯಕ್ಕೆ ಸುಮಾರು ಮೂವತ್ತೊಂದು ಕಿ.ಮೀ. ದೂರದಲ್ಲಿರುವ ಸ್ವಾರಸ್ಯಕರ ಚಾರಿತ್ರಿಕ ಸ್ಥಳ. ಸುತ್ತಲೂ ಬೆಟ್ಟಸಾಲುಗಳಿಂದ ಆವೃತವಾಗಿದ್ದು ಅವುಗಳಿಂದುಂಟಾದ ಕಣಿವೆಯಲ್ಲಿ ಈ ಊರು ಸುರಕ್ಷಿತವಾಗಿದ್ದಂತಿದೆ. ಈ ಪ್ರದೇಶದ ನಿಸರ್ಗ ಹಾಗೂ ಪರಿಸರ ರಮಣೀಯವಾಗಿದೆ. ಮಧ್ಯಕಾಲೀನ ಪಾಳೆಯಪಟ್ಟಿನ ಕೇಂದ್ರ ಸ್ಥಳವಾಗಿತ್ತೆಂಬುದಕ್ಕೆ ಇಲ್ಲಿರುವ ಭಗ್ನ ಕೋಟೆ ಕೊತ್ತಲಗಳು, ಗುಡಿಗುಂಡಾರಗಳು, ವೀರಗಲ್ಲು ಮಾಸ್ತಿಕಲ್ಲುಗಳು ಪುರಾವೆಗಳಾಗಿವೆ. ಬಸವಾಪಟ್ಟಣದ ಪಾಳೆಯಗಾರರು (ಸುಮಾರು ೧೫೪೦–೧೬೩೬) ಈ ಸ್ಥಳವನ್ನು ತಮ್ಮ ರಾಜಧಾನಿಯಾಗಿ ಅಭಿವೃದ್ಧಿಪಡಿಸಿದ್ದರು. ಈ ಮನೆತನದ ಮೊದಲಿಗ ಧೂಮರಾಜನು ಇವನ ಮಗ ಕೆಂಗಣ್ಣನಾಯಕ ಪ್ರಾಯಶಃ ಇಲ್ಲಿಯ ಕಾವಲುಗೋಡೆಯನ್ನು ನಿರ್ಮಿಸಿದ. ಕಾಲಾಂತರದಲ್ಲಿ ಈ ಪ್ರದೇಶವನ್ನು ಬಿದನೂರು ನಾಯಕರು ವಶಪಡಿಸಿಕೊಂಡು ಮತ್ತೊಮ್ಮೆ ಕೋಟೆಯನ್ನು ಬಲಪಡಿಸಿದರು. ಅನಂತರದಲ್ಲಿ ಮೊಘಲರು, ಆದಿಲ್‌ಶಾಹಿಗಳು, ಮರಾಠರು, ಹೈದರಾಲಿ ಟಿಪ್ಪುಸುಲ್ತಾನರೇ ಮುಂತಾದವರೂ ಈ ಸ್ಥಳವನ್ನು ಆಕ್ರಮಿಸಿದ್ದುಂಟು. ಸಿರಾಪ್ರಾಂತ್ಯಾಧಿಕಾರಿ ದಿಲಾವರ್‌ಖಾನನ ೨೦ ವರ್ಷಗಳ ಆಳ್ವಿಕೆಯಲ್ಲಿ ಈ ಪಟ್ಟಣ ಸಾಕಷ್ಟು ಸುಧಾರಿಸಿತ್ತು. ಆದರೆ ಹೈದರ್‌ಅಲಿ ಹಾಗೂ ಮರಾಠರ ಪರಶುರಾಮ ಭಾವು ಈ ಊರನ್ನು ಧ್ವಂಸಮಾಡಿದ್ದರು. ಹದಿನೆಂಟನೆಯ ಶತಮಾನದಲ್ಲಿ ಪುನರುಜ್ಜೀವನ ಪ್ರಯತ್ನವಾದರೂ ಮೊದಲಿದ್ದ ವೈಭವವನ್ನು ಮತ್ತೆ ಪಡೆಯಲಾಗಿಲ್ಲ.[೧] ಬಸವಾಪಟ್ಟಣ ವೃತ್ತದಲ್ಲಿರುವ ಶೃಂಗಾರಭಾಗ, ಹೊಸಕೆರೆ ಪ್ರದೇಶದ ಇನಾಂ ಜಮೀನುಗಳನ್ನು ಪರಿಶೀಲಿಸಿದರೆ ಹಲವು ಮತಗಳ ಪ್ರಭಾವಕ್ಕೊಳಗಾಗಿದ್ದ ಸಂಗತಿಯೂ ತಿಳಿದು ಬರುತ್ತದೆ. ಮಹಂತಿಮಠ, ಜಂಗಮ ಗೊಂದಿಮಠ, ವಿರೂಪಾಕ್ಷದೇವರು, ಗಂಗಾಧರೇಶ್ವರ ದೇವರು, ಬಸವಣ್ಣ ದೇವರು, ರಾಮೇಶ್ವರದೇವರು ಒಂದೆಡೆ, ಹನುಮಂತದೇವರು, ವೆಂಕಟರಮಣದೇವರು, ಕೇಶವದೇವರು, ಇನ್ನೊಂದೆಡೆ, ಸರರೊಮಕ್ಕನ್, ಲಾಲಷಾಮಕ್ಕನ್, ಮಂಜೂಷಾಮಕ್ಕನ್, ಜುಮ್ಮಾಮಹಜಿದ್, ಬಾಬಾ ಬುಡನ್‌ದರ್ಗ, ಸಾಗರಪೇಟಮಹಜಿದ್, ಮತ್ತೊಂದೆಡೆ ವಿವಿಧ ಮತೀಯ ಸಂಸ್ಥೆಗಳಿಗೆ ಖುಷ್ಕಿ, ತರಿ, ಬಾಗಾಯ್ತು ಜಮೀನುಗಳನ್ನು ಇನಾಂ ಬಿಡಲಾಗಿತ್ತೆಂಬುದು ಗತವೈಭವದ ಸೂಚಿಯಂತಿದೆ. ಈ ಹಿನ್ನೆಲೆಯಲ್ಲಿ ಈಚೆಗೆ ಪತ್ತೆ

ಯಾದ ಜೈನ ಶಿಲ್ಪಗಳು ಆ ಪ್ರದೇಶದ ಪ್ರಾಚೀನತೆಯನ್ನೂ ಅಲ್ಲಿದ್ದಿರಬಹುದಾದ ಜೈನ ಮತೀಯ ಆರಾಧನೆಯನ್ನೂ ತಿಳಿಯುವಲ್ಲಿ ಮೂಲ ಆಕರಗಳಾಗಿವೆ. ಅವುಗಳ ಒಂದು ವಿಶ್ಲೇಷಣೆಯನ್ನು ಇಲ್ಲಿ ನೀಡಲಾಗಿದೆ.[೨]

ಬಸವಾಪಟ್ಟಣದ ದಕ್ಷಿಣಕ್ಕಿರುವ ಕೋಟೆಯಬಳಿ 'ಬೂತನಪಟ್ಟಿ' ಎಂದು ಹೆಸರಾದ ಹೊಲದಲ್ಲಿ ತುಗ್ಗಲಿ ಮರದ ಕೆಳಗೆ ಅಗೆಯಲಾಗಿ ಕೆಲವು ಜೈನ ಶಿಲ್ಪಗಳು ಪತ್ತೆಯಾದವು. ಇವು ಊರಿನ ಶೃಂಗಾರಭಾಗದಲ್ಲಿ (ಸರ್ವೆ ನಂ. ೫೪/೭) ಭರ್ಮಪ್ಪ ಬಿನ್ ಸಿದ್ಧಲಿಂಗಪ್ಪ ಎಂಬ ರೈತರ ಹೊಲವಾಗಿದ್ದು ಅವರ ಮತ್ತು ಊರವರ ಪರಿಶ್ರಮದ ಫಲವಾಗಿ ಜಿನ ಬಿಂಬಗಳು ಸುರಕ್ಷಿತವಾಗಿ ಭೂತಳದಿಂದ ಹೊರಬಂದವು. ಇವುಗಳಲ್ಲಿ ಎರಡು ಜೈನ ತೀರ್ಥಂಕರರ ವಿಗ್ರಹಗಳು, ಎರಡು ಚಾಮರಧಾರರ ಶಿಲ್ಪಗಳು ಹಾಗೂ ಸಿಂಹಾಸನ ಭಾಗಗಳು ಪ್ರಮುಖವಾಗಿವೆ. (ಒಂದು ಚಾಮರಧಾರನ ವಿಗ್ರಹ, ಸಿಂಹಾಸನ ಹಾಗೂ ಪ್ರಭಾವಳಿ ಭಾಗಗಳನ್ನು ಶಿವಮೊಗ್ಗೆಯ ಜಿಲ್ಲಾ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿವೆ). ಇವೆಲ್ಲವನ್ನೂ ಅವು ದೊರೆತ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಭ್ಯಸಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಸುಮಾರು ಎರಡು ಮೀಟರ್ ಆಳದಿಂದ ಹೊರತೆಗೆದ ಎರಡು ಜಿನಬಿಂಬಗಳು ಚೆನ್ನಾಗಿವೆ. ಇವುಗಳ ಪೀಠದ ಮೇಲಾಗಲಿ ಅಥವಾ ಪ್ರಭಾವಳಿಯ ಹಿಂಗಡೆಯಲ್ಲಾಗಲಿ ಶಾಸನ ಕಂಡುಬಂದಿಲ್ಲ. ಆದರೆ ಆಯಾ ತೀರ್ಥಂಕರರಿಗೆ ಸಂಬಂಧಿಸಿದ ಲಾಂಛನಗಳನ್ನು ಪೀಠದ ಮುಂಗಡೆ ಕಂಡರಿಸಲಾಗಿದೆ. ಈ ಲಾಂಛನಗಳನ್ನು ಆಧರಿಸಿ ತೀರ್ಥಂಕರರ ವಿಗ್ರಹಗಳನ್ನು ಗುರುತಿಸಲಾಗಿದೆ.

೧. **ಶಾಂತಿನಾಥ** (ಹದಿನಾರನೆಯ ತೀರ್ಥಂಕರ): ಜೈನತೀರ್ಥಂಕರರಲ್ಲಿ ಬಹು ಜನಪ್ರಿಯ; ಪ್ರಮುಖ, ವಿಶ್ವಸೇನ-ಅಚಿರರ ಪುತ್ರ. ಹಸ್ತಿನಾಪುರದಲ್ಲಿ ಜನನ; ಸುವರ್ಣವರ್ಣ; ನಂದಿ; ವೃಕ್ಷದಡಿ ಕೇವಲಜ್ಞಾನ; ಚಕ್ರಾಯುಧ ಗಣ್ಯಗಣಧರ. ಹರಿಷೇಣ ಒಬ್ಬ ಪ್ರಮುಖ ಆರ್ಯಿಕಾ. (ಶ್ವೇತಾಂಬರರ ಪ್ರಕಾರ ಶುಚಿ;) ಕಿಂಪುರುಷ ಯಕ್ಷ; ಮಹಾಮಾನಸಿ-ಯಕ್ಷಿ (ದಿಗಂಬರ ಪರಂಪರೆ ಪ್ರಕಾರ); ಗರುಡ-ಯಕ್ಷ; ನಿರ್ವಾಣಿ-ಯಕ್ಷಿ (ಶ್ವೇತಾಂಬರರ ಪ್ರಕಾರ); ಶಾಸನ ದೇವಿ-ಮಾನಸಿ; ಈತನ ಅಧಿಕೃತ ಲಾಂಛನ-**ಹರಿಣ**. (ಕೆಲವೊಮ್ಮೆ ಆಮೆ ಎಂದಿದ್ದರೂ ಇದು ಅಷ್ಟು ಜನಪ್ರಿಯವಲ್ಲ). ಶಾಂತಿನಾಥ ತೀರ್ಥಂಕರನ ಆರಾಧನೆ, ಅದರಲ್ಲೂ ಶಾಂತಿ ಕರ್ಮಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ. ಕರ್ನಾಟಕದ ಹಲವೆಡೆಗಳಲ್ಲಿ ಹಳೇಬೀಡು, ಹೊಳಲ್ಕೆರೆ, ಶ್ರವಣಬೆಳ್ಗೊಳ, ಬೇಲೂರು, ಮೂಡಬಿದಿರೆ, ವೇಣೂರು ಮುಂತಾದೆಡೆ ಈ ತೀರ್ಥಂಕರನ ಪ್ರತಿಮೆಗಳಿವೆ.[೩] ಈಗ ಪತ್ತೆಯಾಗಿರುವ ಶಾಂತಿನಾಥ ವಿಗ್ರಹವನ್ನು ಈ ಪಟ್ಟಿಗೆ ಸೇರಿಸಬಹುದು.

ಇದೊಂದು ದುಂಡುಶಿಲ್ಪ; ಕಂಡರಣೆ ವಿವರ ಪೂರ್ಣವಾಗಿದೆ. ಮೇಲ್ಮೈಯನ್ನು ನುಣುಪುಗೊಳಿಸಲಾಗಿದೆ. ಬಳಪದಕಲ್ಲಿನಲ್ಲಿ ನಿರ್ಮಿಸಿದ ಈ ಪ್ರತಿಮೆ ಶಾಸ್ತ್ರಶುದ್ಧ ವಾಗಿದೆ. ಮಧ್ಯಕಾಲೀನ (ಚಾಳುಕ್ಯ-ಹೊಯ್ಸಳ) ಶಿಲ್ಪ ಶೈಲಿಯಲ್ಲಿದೆ. ಪದ್ಮಾಸನ ಅಥವಾ ಪರ್ಯಂಕಾಸನದಲ್ಲಿ ಕುಳಿತು ಬಲಗೈಯ ಹಸ್ತವನ್ನು ಎಡಗೈ ಹಸ್ತದ ಮೇಲಿಟ್ಟು ಏಕಚಿತ್ತದಿಂದ ಧ್ಯಾನಮಾಡುತ್ತಿರುವಂತೆ ತೋರಿಸಲಾಗಿದೆ. ಬಲಗೈ ಹಸ್ತದಲ್ಲಿ ಪದ್ಮ ವಿನ್ಯಾಸವನ್ನು ರೇಖಿಸಲಾಗಿದೆ. ಗೊಣ್ಣೆ ಗೊಣ್ಣೆಯಾಗಿ ಕಂಡರಿಸಿದ ಗುಂಗುರುಕೂದಲು, ನೀಳವಾದ ಮೂಗು, ಕಮಾನಾಗಿರುವ ಹುಬ್ಬು, ಅರೆತೆರೆದ ಕಣ್ಣು, ದಪ್ಪ-ಬಿಗಿಹಿಡಿದ ತುಟಿ, ಭುಜ ತಟ್ಟುವಷ್ಟು ಉದ್ದನೆಯ ಕಿವಿಗಳು, ಯಲೌಗಿಕ ಅಂಗಸೌಷ್ಟವ ಇವೆಲ್ಲಕ್ಕೂ ಮುಕುಟಪ್ರಾಯವಾದ ಆಧ್ಯಾತ್ಮಿಕ ತೇಜಸ್ಸು ನಮ್ಮ ಮನಸ್ಸನ್ನು ಆಕರ್ಷಿಸುತ್ತವೆ. ಧ್ಯಾನಿಜಿನಬಿಂಬ ಸ್ವಲ್ಪ ಕೂಡ ಮುಕ್ಕಾಗದೆ ಈಗ ತಾನೇ ಕಂಡರಿಸಿದಂತಿದೆ.

೨. **ನೇಮಿನಾಥ** (ಇಪ್ಪತ್ತೆರಡನೆಯ ತೀರ್ಥಂಕರ): ಅರಿಷ್ಟನೇಮಿಯೆಂದು ಹೆಸರಾದ ಈ ತೀರ್ಥಂಕರ ಸಮುದ್ರ ವಿಜಯ ಮತ್ತು ಶಿವಾದೇವಿಯರ ಪುತ್ರ. ಶೌರಿ ಪುರದಲ್ಲಿ ಜನನ. ಜಯಂತ ವಿಮಾನದಿಂದ (ಉತ್ತರ ಪುರಾಣದ ಪ್ರಕಾರ) ಅವತರಣ; (ಅಪರಾಜಿತ ವಿಮಾನದಿಂದ ಅವತರಣ- ತಿಲೊಯ ಪಣ್ಣತ್ತಿ, ಶ್ವೇತಾಂಬರ ಗ್ರಂಥಗಳ ಪ್ರಕಾರ). ಕಡುನೀಲವರ್ಣ, ರೈವತಕ ಪರ್ವತದಲ್ಲಿವತಸ ವೃಕ್ಷದಡಿ ಕೇವಲಜ್ಞಾನಪ್ರಾಪ್ತಿ. ವರದತ್ತ ಪ್ರಮುಖ ಗಣಧರ, ಪಾರ್ಶ್ವಯಕ್ಷ (ಗೋಮೇದ)ಕೂಷ್ಮಾಂಡೀ(ಅಂಬಿಕಾ)ಯಕ್ಷಿ (ತಿಲೊಯ ಪಣ್ಣತ್ತಿಪ್ರಕಾರ); ದಿಗಂಬರ ಪಂಥದ ಪ್ರಕಾರ ಸುವರ್ಣಯಕ್ಷಿ. ಶಂಖ ಈತನ ಲಾಂಛನವಾಗಿದ್ದು ಶಂಖಜಿನ ಎಂದೂ ಕರೆಯುವುದುಂಟು. ಲಕ್ಷ್ಮೇಶ್ವರ (ಪುಲಿಗೆರೆ)ದ ಶಂಖಜಿನಾಲಯದ ಮೂರ್ತಿ, ಶ್ರವಣಬೆಳಗೊಳ, ಕಂಬದ ಹಳ್ಳಿ, ಮರ್ಕುಳಿ ಮೂಡು ಬಿದಿರೆ,ಕಾರ್ಕಳ,ವೇಣೂರು ಮುಂತಾದೆಡೆಗಳಲ್ಲಿ ಈ ತೀರ್ಥಂಕರನ ವಿಗ್ರಹಗಳು ನೋಡತಕ್ಕ ವಂಥವು.[೪] ಬಸವಪಟ್ಟಣದಲ್ಲಿ ಪತ್ತೆಯಾದ ನೇಮಿನಾಥ ತೀರ್ಥಂಕರ ವಿಗ್ರಹ ಕೂಡ ವಿವರಪೂರ್ಣವಾಗಿ ಕಂಡರಿಸಿದ ಒಳ್ಳೆಯ ದುಂಡು ಶಿಲ್ಪವಾಗಿದೆ. ಇದಕ್ಕೆ ಬಳಸಿದ ಬಳಪದಕಲ್ಲು ನಯಗೊಳಿಸಲನುವು ಮಾಡಿದೆ. ಎದೆಭಾಗವನ್ನು ತುಸುಮುಂದುವರಿಸಿ ಪದ್ಮಾಸನದಲ್ಲಿ ಕುಳಿತ ಈ **ಜಿನ** ವಿಗ್ರಹ ಎಡಹಸ್ತದ ಮೇಲೆ ಬಲಹಸ್ತವನ್ನು ಒತ್ತಿಟ್ಟು ತದೇಕ ಚಿತ್ತದಿಂದ ಧ್ಯಾನಾಸಕ್ತವಾಗಿದೆ. ಬಲ ಹಸ್ತದಲ್ಲಿ ಕಮಲ ವಿನ್ಯಾಸ ಸ್ಪಷ್ಟವಾಗಿದೆ. ಗುಂಗುರು ಕೂದಲನ್ನು ಎದ್ದುಕಾಣುವಂತೆ ಕಂಡರಿಸಲಾಗಿದೆ. ಈ ವಿಗ್ರಹದ ಮುಖ ಮೈಮಾಟ ಶಾಂತಿನಾಥ ವಿಗ್ರಹದ ಮೈಮಾಟಕ್ಕಿಂತ ಹೆಚ್ಚು ನೀಳವಾಗಿರುವಂತೆ ತೋರುತ್ತದೆ. ವಯೋಮಾನದಲ್ಲಿ ಕೂಡ ಹರೆಯದ ವ್ಯಕ್ತಿತ್ವ ಈ ಪ್ರತಿಮೆಯಲ್ಲಿ ಮೂಡಿ ಬಂದಿದೆ; ಮಹಾಪುರುಷ ಲಕ್ಷಣಗಳು ಎದ್ದು ಕಾಣುತ್ತವೆ.

ಈ ಎರಡೂ ಪದ್ಮಾಸೀನ ಜಿನಬಿಂಬಗಳು ದೀರ್ಘವೃತ್ತಾಕಾರದ ಪದ್ಮ ಪೀಠದ ಮೇಲೆ ಕುಳಿತಿದ್ದು ಇವು ಆ ಭಾಗದಲ್ಲಿದ್ದಿರಬಹುದಾದ ಜಿನಾಲಯಗಳ ಗರ್ಭಗೃಹಗಳಲ್ಲಿ

ಪ್ರಧಾನ ಪೂಜಾವಿಗ್ರಹಗಳಾಗಿದ್ದಿರಬೇಕು. ಇವುಗಳಿಗೆ ಸಂಬಂಧಿಸಿದ ಪ್ರಭಾವಳಿ, ಸಿಂಹಾಸನದ ಬಿಡಿಭಾಗಗಳು, ಅಚೀಚೆ ತ್ರಿಭಂಗಿಯಲ್ಲಿ ನಿಂತಿರುವ ಚಾಮರಧರ ಬಿಂಬಗಳೂ ಈ ಊಹನೆಗೆ ಸಮರ್ಥನೆ ನೀಡುವವು

೩. **ಚಾಮರಧರ ವಿಗ್ರಹಗಳು :** ತ್ರಿಭಂಗಿಯಲ್ಲಿ ನಿಂತಿರುವ ಈ ಪ್ರತಿಮೆಗಳನ್ನು ಪ್ರಧಾನ ಜಿನವಿಗ್ರಹದ ಎಡ–ಬಲಕ್ಕೆ ನಿಲ್ಲಿಸಲೆಂದೇ ಒಂದು ನಿಶ್ಚಿತ ಕ್ರಮದಲ್ಲಿ ಕಂಡರಿಸಲಾಗಿವೆ. ವಿಗ್ರಹದ ಬುಡ (ಪಾದ)ಭಾಗ ಸಿಂಹಾಸನ–ಪ್ರಭಾವಳಿ ಭಾಗದಲ್ಲಿ ಅಂತರ್ಗತವಾಗುವುದರಿಂದ ಅದನ್ನು ವಿವರವಾಗಿ ಕೆತ್ತಲಿಲ್ಲ. ಜಿನನ ಪ್ರಾತಿಹಾರ್ಯರಲ್ಲಿ ಪ್ರಮುಖರಾದ ಈ ಚಾಮರಧರರು ವಾಸ್ತವವಾಗಿ ಚಾಮರ ಬೀಸುವ ಕೆಲಸದಲ್ಲಿ ನಿರತರಾಗಿರುವ ಯಕ್ಷರು. ಇವರ ಮೈಮಾಟ–ಅಲಂಕರಣೆ ಕಿರೀಟ ಆಭರಣ ಮುಂತಾದವು ಶೋಭಾಯಮಾನವಾಗಿವೆ. ದಿಗಂಬರ ನಿರಾಭರಣ ಜಿನಬಿಂಬಗಳಿಗೆ ಹೋಲಿಸಿದರೆ ತೀರ ಭಿನ್ನವಾಗಿ ತೋರುತ್ತವೆ: ಒಂದು ಅಲೌಕಿಕ ಇನ್ನೊಂದು ಲೌಕಿಕ ಎನ್ನುವಷ್ಟು ಬೇರೆಯಾಗಿ ಗೋಚರಿಸಿದರೂ ಒಂದಕ್ಕೆ ಮತ್ತೊಂದು ಪೂರಕವಾಗಿ ಜೋಡಿಸಲಾಗಿರುವುದು ಸಂಕೇತಾರ್ಥಪೂರ್ಣವಾಗಿದೆ. ಆದಿಪುರಾಣದಲ್ಲಿ ವಿದಿತವಾಗಿರುವಂತೆ ದಿಗಂಬರ ಜೈನ ಪರಂಪರೆಯಲ್ಲಿ ಅರವತ್ತುನಾಲ್ಕುಯಕ್ಷರು ಪ್ರತಿಸಮವಸರಣದಲ್ಲಿ ಚಾಮರಧರ ಕಾಯಕ ಮಾಡುತ್ತಾರೆ. ಸರ್ವಾಲಂಕಾರ ಭೂಷಿತ ಶ್ರೀಮಂತ ಬಿಂಬಗಳು ನಯನ ಮನೋಹರವಾಗಿವೆ. ಧರಿಸಿದ ರತ್ನಖಚಿತ ಕಿರೀಟ, ಕಂಠಹಾರ, ಭುಜಬಂಧ, ವೈಜಯಂತಿ, ಯಜ್ಞೋಪವೀತ, ಕಟಿಸೂತ್ರ, ಕೈಬಳೆ, ಕರ್ಣಕುಂಡಲ ಮುಂತಾದವುಗಳ ಕೆತ್ತನೆ ನಾಜೂಕಾಗಿವೆ. ಇವು ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ.

೪. **ಪ್ರಭಾವಳಿ ಸಿಂಹಾಸನ :** ಪ್ರಧಾನ ಜಿನಬಿಂಬಗಳಿಗೆ ಸಂಬಂಧಿಸಿದ ಸಿಂಹಾಸನ ಭಾಗ ಇಡಿಯಾಗಿ ಪತ್ತೆಯಾಗಿಲ್ಲ. ಅವುಗಳ ಬಿಡಿಭಾಗಗಳು ಮಾತ್ರ ಲಭ್ಯವಾಗಿವೆ. ಈ ಪ್ರಭಾವಳಿಯ ಮೇಲಣ ಯಾಳಿ ತನ್ನ ಮುಂಗಾಲುಗಳನ್ನು ಎತ್ತಿ ಮುಂದೆ ನಿಂತ ಸೈನಿಕನ ಭುಜದ ಮೇಲಿಟ್ಟು ಅಟ್ಟಹಾಸದಿಂದ ಹಿಂಗಾಲ ಮೇಲೆ ನಿಂತಿದೆ. ಸೈನಿಕನಾದರೋ ಕೈಯಲ್ಲಿ ಕತ್ತಿಗುರಾಣಿ ಹಿಡಿದು ವೀರಾವೇಶದಲ್ಲಿ ನಿಂತಿದ್ದಾನೆ. ಯಾಳಿಯ ಹಿಂಗಡೆಯಲ್ಲಿ ನಿಲ್ಲಿಸಿದ ಅರೆಕಂಬಗಳು ಬೋದಿಗೆಯ ಮೇಲಣ ತೊಲೆಯನ್ನು ಹೊತ್ತುಕೊಂಡಂತಿವೆ. ಈ ತೊಲೆಯ ಮೇಲೆ ಮಕರ ತೋರಣವನ್ನು ಚೆನ್ನಾಗಿ ಕೆತ್ತಲಾಗಿದೆ. ಮಕರದ ಹಿಂಗಡೆ ಸೈನಿಕರ ಪುಟ್ಟ ಪುಟ್ಟ ಬಿಂಬಗಳಿವೆ. ತೀರ್ಥಂಕರರ ಆಸನದ ಮೇಲೆ ಮೆತ್ತನೆಯ ದಿಂಬು ಇಟ್ಟಂತೆ ಕಂಡರಿಸಲಾಗಿದೆ. ಇವುಗಳ ಶೈಲಿ ಲಾಲಿತ್ಯಪೂರ್ಣವಾಗಿದ್ದು ಕಲ್ಯಾಣ ಚಾಳುಕ್ಯ ಪರಂಪರೆಗನುಗುಣವಾಗಿದೆ. ಈ ಪ್ರಭಾವಳಿ ಆಸನ ಪ್ರಮಾಣಗಳ ಜಿನಬಿಂಬದ ಪ್ರಮಾಣಕ್ಕೆ ಅನುಗುಣವಾಗಿರುವವು.

ಈ ಮೇಲೆ ವಿವರಿಸಿದ ಎಲ್ಲ ಬಿಡಿಶಿಲ್ಪಗಳನ್ನು ಶಾಸ್ತ್ರೀಯವಾಗಿ ಜೋಡಿಸಿ ಅಧ್ಯಯನ ಮಾಡಿದರೆ ಬಸವಾಪಟ್ಟಣದ ಜೈನ ಶಿಲ್ಪ ಕಲಾವಂತಿಕೆಯ ಒಟ್ಟಂದವು ಎದ್ದು

ಕಾಣುತ್ತದೆ. ಅಲಂಕೃತ ಉಬ್ಬುಗೆತ್ತನೆಯ ಶಿಲ್ಪಗಳು ನಿರಲಂಕೃತ ದುಂಡು ಶಿಲ್ಪಗಳಿಗೆ ಎಷ್ಟು ಸಮಂಜಸವಾದ ರೀತಿಯಲ್ಲಿ ಪೂರಕವಾಗಿವೆಯೆಂಬುದು ಮನದಟ್ಟಾಗುತ್ತದೆ. ಆ ಪ್ರದೇಶದಲ್ಲೆಲ್ಲೊ ಇದ್ದಿರ ಬಹುದಾದ ಸಿದ್ಧಾಯತನ (ಜೈನಬಸ್ತಿ)ದ ಶೋಧನೆಗೆ, ಮಹಾಪುರುಷ ಲಕ್ಷಣಗಳಿಂದ ಕೂಡಿದ ಈ ಜಿನ ಬಿಂಬಗಳೂ, ಸರ್ವಾಲಂಕಾರಯುಕ್ತ ಚಾಮುಂಡಿರರ ಉಬ್ಬು ಶಿಲ್ಪಗಳೂ ಸ್ಫೂರ್ತಿ–ಚೈತನ್ಯ ನೀಡುವಂತಿವೆ.

ಅಡಿಟಿಪ್ಪಣಿಗಳು

೧. ಹಯವದನರಾವ್ ಸಿ., ಮೈಸೂರು ಗೆಜೆಟಿಯರ್, ಸಂ V., ಬೆಂಗಳೂರು, ೧೯೩೦, ಪು. ೧೨೬೬

೨. ಬಸವಾಪಟ್ಟಣದಲ್ಲಿ ನಾನು ಕೈಕೊಂಡ ಕ್ಷೇತ್ರಕಾರ್ಯದ ಪೂರ್ಣವರದಿ ಪ್ರಕಟವಾಗಿದ್ದು ಈ ದಿಶೆಯಲ್ಲಿ ಪ್ರೋತ್ಸಾಹನೀಡಿದ ಪ್ರೊ. ಎ. ವಿ. ವೆಂಕಟರತ್ನಂ ಅವರಿಗೂ ಆ ಊರಿನ ಗಣ್ಯರೆಲ್ಲರಿಗೂ ನನ್ನ ಕೃತಜ್ಞತೆಗಳು. ನೋಡಿ. JHS Vol. XVII (೧೯೮೩) ಪು. ೧–೬

೩. ಶಾ, ಯು. ಪಿ., ಜೈನರೂಪಮಂಡನ, ಸಂ. ೧, ನವದೆಹಲಿ, ೧೯೮೭

೪. ಅದೇ

ಪೊನ್ನವುರಪುರವರಾಧೀಶ್ವರ ಕಾಮದೇವರಸನ ಹಳದೀಪುರ-ಚಂಡೇಶ್ವರದ ವೀರಗಲ್ಲು ಶಾಸನ, ಶಕವರ್ಷ ೧೦೦೨

● ಶ್ರೀನಿವಾಸ ಪಾಡಿಗಾರ ಮತ್ತು
● ಎಸ್. ಗಣಪತಿಗೌಡಾ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಹಳದೀಪುರದಿಂದ ಸುಮಾರು ೨ ಕಿ. ಮೀ. ದೂರದಲ್ಲಿರುವ ಚಂಡೇಶ್ವರ ದೇವಾಲಯದೆದುರು ವಿಶಿಷ್ಟ ಮಾದರಿಯ ವೀರಗಲ್ಲೊಂದು ನಿಂತಿದೆ. ಇದರ ಮೇಲಿನ ಶಾಸನವನ್ನು ಈ ಶತಮಾನದ ಐದನೇ ದಶಕದಲ್ಲಾಗಲೇ ಶ್ರೀಯುತ ವಿದ್ಯಾರತ್ನ ಪಂಚಮುಖಿಯವರು ಗಮನಿಸಿದ್ದಾರೆ.[೧] ಆದರೆ ಈ ಶಾಸನದ ಪಾಠವಾಗಲಿ. ವಿವರವಾದ ಅಧ್ಯಯನವಾಗಲಿ ನಮಗೆ ತಿಳಿದಂತೆ ಈವರೆಗೆ ಪ್ರಕಟವಾಗಿಲ್ಲ.[೨]

ಚೌಕ ವಿನ್ಯಾಸದ ಸುಮಾರು ೬ ಅಡಿ ಎತ್ತರದ ಈ ಕಂಬದ ಪಶ್ಚಿಮ ಮುಖದಲ್ಲಿ ಪ್ರಸ್ತುತ ಶಾಸನವಿದ್ದು. ಉಳಿದ ಮೂರು ಮುಖಗಳಲ್ಲಿ ಕಾಳಗದ ಮತ್ತು ರಾಮಾಯಣ ದಿಂದಾಯ್ದ ದೃಶ್ಯಗಳ ಸುಂದರ ಶಿಲ್ಪ ಪಟ್ಟಿಕೆಗಳಿವೆ. ಶಾಸನ ೩೬ ಸಾಲುಗಳನ್ನೊಳ ಗೊಂಡಿದ್ದು ಕ್ರಿ. ಶ. ೧೧ನೇ ಶತಮಾನದ ಕನ್ನಡ ಲಿಪಿ. ಕನ್ನಡ ಗದ್ಯ ಭಾಷೆಯಲ್ಲಿದೆ. ಕಾಲ ಶಕವರ್ಷ ೧೦೦೨ (=ಕ್ರಿ.ಶ. ೧೦೮೦) ಬರಹಗಾರನೋ ಲಿಪಿಕಾರನೋ ಬರವಣಿಗೆ ಯಲ್ಲಿ ಅಲ್ಲಲ್ಲಿ ಎಡವಿದ್ದಾನೆ

ವಿಶ್ಲೇಷಣೆ

ಈ ಶಾಸನದಲ್ಲಿ ಉಲ್ಲಿಖಿತ ವಿಷಯಗಳನ್ನು ಕೆಳಗಿನಂತೆ ಪಟ್ಟಿಮಾಡಬಹುದು.

೧. ಮಹಾಮಂಡಳೇಶ್ವರ "ಪೊನ್ನವುರಪುರವರಾಧೀಶ್ವರ" ಇತ್ಯಾದಿ ಪ್ರಶಸ್ತಿಗಳುಳ್ಳ ಕಾಮದೇವರಸನು "ಗೋಕರ್ಣಪುರವರಾಧೀಶ್ವರ" ನಾಗವರ್ಮದೇವನು ಇದ್ದ ಪೊನ್ನವುರ (=ಹೊನ್ನಾವರ) ಕೋಟೆಯನ್ನು ಗೆದ್ದುಕೊಂಡನು.

೨. ಇದು ಶಕವರ್ಷ ೧೦೦೨. ಸಿದ್ಧಾರ್ಥಿಸಂವತ್ಸರ, ಅಶ್ವಯುಜ ಶುದ್ಧ ಪಂಚಮಿ. ಮಙ್ಗಳವಾರದಂದು ನಡೆಯಿತು. (ಕ್ರಿ.ಶ.೧೦೮೦, ಸೆಪ್ಟೆಂಬರ್ ೩. ಮಂಗಳವಾರ)

೩. ಪೊನ್ನವುರದ ಕೋಟೆಯನ್ನು ಜಯಕೇಶಿದೇವನು ಕಟ್ಟಿಸಿದ್ದನು.

೪. ಪೊನ್ನವುರದ ಕೋಟೆಯನ್ನು ಮುತ್ತಿದಾಗ ನಡೆದ ಕಾಳಗದಲ್ಲಿ ತತ್ರಹಾಳ

ಜವನುವ ಮಗನಾದ ಮದ್ದುಗಹಳಿತನು ಮುನ್ನುಗ್ಗಿ ವೀರಭಟರನ್ನು ಇರಿದು ದೇವ ಲೋಕಕ್ಕೆ ಸನ್ದನು.

೫. ಮದ್ದುಗಹಳಿಯಿತನ ವಧು ಬಸ್ತಿಯಬ್ಬೆ, ಮಂಬಳಿಯ ಬೂತಬ್ಬೆಗೆಲ್ಲಿತಿಯು ಮತ್ತು ಅಜ್ಜಮಗೆಲ್ಲನ ಮಗಳಾದ ಮಾರಬ್ಬೆ ಈ ಕಲ್ಲನ್ನು ಮಾಡಿಸಿದರು.

೬. ಶಾಸನವನ್ನು ಬರೆದವನು ಸೇನಬೋವ ಶ್ರೀಧರಯ್ಯ.

೭. ಶಿಲ್ಪಿ ದಿಕೋರ (ದೀಬೂರ?) ನಾಗೋಜನ ಮಗನಾದ ಜಕ್ಕ.

೮. ಮತ್ತೊಮ್ಮೆ ಅಜ್ಜಮಗೆಲ್ಲನ ಉಲ್ಲೇಖ.

ಶಾಸನದ ಕಾಲವನ್ನು ಗಮನಿಸಿದರೆ ಇದು ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಅಧಿಕಾರಾವಧಿಗೆ ಸೇರುತ್ತದೆಂಬುದು ಸ್ಪಷ್ಟ. ಹಾಗಾದರೆ ಶಾಸನದಲ್ಲಿ ಉಲ್ಲಿಖಿತ ಕಾಮದೇವನು ಯಾರು? ಯಾವ ವಂಶಜನು?- ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಇವನ್ನು ಉತ್ತರಿಸಲು ಇತರ ಆಕರಗಳಿಂದ ನಮಗೆ ಈಗಾಗಲೇ ಗೊತ್ತಿರುವ ವಿಷಯಗಳನ್ನು ಇಲ್ಲಿ ನೋಡಲು ಪಟ್ಟಿ ಮಾಡಿಕೊಳ್ಳುವುದೊಳಿತು:

೧. ಕ್ರಿ.ಶ. ೧೧೧೨ರ ಬಳ್ಳಿಗಾವೆಯ ಶಾಸನವೊಂದರಿಂದ[೩] ಚಾಲುಕ್ಯ ಆರನೇ ವಿಕ್ರಮಾದಿತ್ಯನ ಮಾಂಡಲಿಕನಾಗಿದ್ದ ಕಾಮದೇವನೆಂಬ ಅರಸನ ಬಗ್ಗೆ ತಿಳಿಯುತ್ತದೆ. ಇವನು "ಪಾಂಡ್ಯವಂಶ ಚೂಡಾಮಣಿ", "ಕೊಂಕಣರಾಷ್ಟ್ರಪಾಲ", "ಗೋಕರ್ಣಪುರವ ರಾಧೀಶ್ವರ" ಮುಂತಾಗಿ ವರ್ಣಿಸಲ್ಪಟ್ಟಿದ್ದು, ಇವನ ಪೂರ್ವಜರು ಹೈವೆ ಪ್ರದೇಶದಲ್ಲಿದ್ದ "ಶಿಶುಗಲಿ"ಯಿಂದ ಆಳುತ್ತಿದ್ದರೆಂದು ಗೊತ್ತಾಗುತ್ತದೆ. ಅವನ ವಂಶಾವಳಿ ಹೀಗಿದೆ :

ಹೈವೆಯ ಶಿಶುಗಲಿಯಲ್ಲಿ ಆಳಿದ
ಅನೇಕ ಪಾಂಡ್ಯ ಅರಸುಗಳು
|
ಚಂದ್ರ
ರಾಣಿ ಕಮ್ಮಲದೇವಿ
|
ಕಾಮ
ರಾಣಿ ಭಾಗಲದೇವಿ
|
(ಇಮ್ಮಡಿ) ಚಂದ್ರ
ರಾಣಿ ಸಾವಲದೇವಿ
|
ತ್ರಿಭುವನಮಲ್ಲ (ಇಮ್ಮಡಿ) ಕಾಮದೇವ

"ಶಿಶುಗಲಿ" ಹೊನ್ನಾವರ ತಾಲೂಕಿನ ಗುಂಡಬಾಳದ ಪರ್ಯಾಯ ನಾಮವಾಗಿರಬೇಕೆಂದು ನಾವು ಈಗಾಗಲೇ ಸೂಚಿಸಿದ್ದೇವೆ.[೪] ಇದಲ್ಲದಿದ್ದರೆ ಈಗ ಶಶಿಗುಳಿ ಎಂದು

ಕರೆಯಲಾಗುವ ಸಿದ್ದಾಪುರ ತಾಲೂಕಿನ ಗ್ರಾಮವಿದಾಗಿರಬಹುದು. ಅಂತೂ ಬಳ್ಳಿಗಾವೆ ಶಾಸನದ "ಪಾಂಡ್ಯವಂಶಚೂಡಾಮಣಿ" ಇಮ್ಮಡಿ ಕಾಮದೇವನು ಹೈವೆ ಪ್ರದೇಶದ ಅರಸನಾಗಿದ್ದನೆಂಬುದು ಸ್ಪಷ್ಟವಿದೆ. ಕ್ರಿ. ಶ. ೧೧೧೨ರಲ್ಲಿ ಗೋಕರ್ಣ ಇನ್ನೂ ಒಂದು ರಾಜಧಾನಿಯಾಗಿದ್ದಿರಬೇಕು.

೨. ಪ್ರಸ್ತುತ ಹಳದೀಪುರದ ಶಾಸನ ಬರೆಯಲ್ಪಡುವ ಮುಂಚೆ ಈ ಪ್ರದೇಶದಲ್ಲಿ ಆಳಿದ ಜಯಕೇಶಿಯೆಂದರೆ ಗೋವೆಯ ಕದಂಬ ವಂಶದ ಮೊದಲನೇ ಜಯಕೇಶಿ (ಕ್ರಿ. ಶ. ಸು. ೧೦೫೦–೧೦೭೮). ಹೊನ್ನಾವರದ ಕೋಟೆಯನ್ನು ಇವನು ಕಟ್ಟಿಸಿದ್ದನೆಂದ ಮೇಲೆ ಆ ಕೋಟೆ ಕ್ರಿ. ಶ. ೧೦೫೦–೭೮ರ ಗಡುವಿನಲ್ಲಿ ನಿರ್ಮಾಣವಾಗಿರಬೇಕು.

೩. ಗೋವೆಯ ಕದಂಬ ವಂಶದ ಶಾಸನಗಳಿಂದ ಮೊದಲನೆಯ ಜಯಕೇಶಿಯು ಕಾಮದೇವನೆಂಬ ಅರಸನನ್ನು ಸೋಲಿಸಿ ನಿಗ್ರಹಿಸಿದ್ದನೆಂದು ತಿಳಿಯುತ್ತದೆ. ಈ ಕಾಮದೇವನು ಯಾವ ವಂಶಜನೆಂಬುದು ಗೊತ್ತಿಲ್ಲ.[೫]

೪. ಮೊದಲನೇ ಜಯಕೇಶಿಯು ಕದಂಬರನ್ನು ಒಟ್ಟಾಗಿಸಿ ಆಳುಪರನ್ನು ಗೆದ್ದು ಚಾಲುಕ್ಯ (ಆರನೇ ವಿಕ್ರಮಾದಿತ್ಯ)ನನ್ನು ಪ್ರತಿಷ್ಠಾಪಿಸಿದನೆಂದು ಗೋವೆ ಕದಂಬ ವಂಶದ ಶಿವಚಿತ್ತ ಮತ್ತು ವಿಷ್ಣುಚಿತ್ತ ಇವರ ಹಲಸಿ ಶಾಸನ (ಕ್ರಿ. ಶ. ೧೨ ನೇ ಶತಮಾನ)ದಿಂದ ತಿಳಿಯುತ್ತದೆ.[೬] ಅಂದರೆ ಆರನೇ ವಿಕ್ರಮಾದಿತ್ಯನು ಪಟ್ಟಕ್ಕೇರುವ ಪೂರ್ವದಲ್ಲಿ ಕ್ರಿ. ಶ. ೧೦೭೬ ಕ್ಕೆ ಮುಂಚೆ ಜಯಕೇಶಿಯು ಆಳುಪರನ್ನು ಸೋಲಿಸಿದ್ದನೆಂದಾಯಿತು. ಆಗ ಪಟ್ಟಿಯೊಡೆಯನು ಆಳುಪ ರಾಜನಾಗಿದ್ದನು.

೫. ಶಕವರ್ಷ ೧೦೦೦ (ಕ್ರಿ. ಶ. ೧೦೭೭–೭೮) ಮಿತಿಯ ಕೆಕ್ಕಾರಿನ (ಹೊನ್ನಾವರ ತಾಲೂಕು) ವೀರಗಲ್ಲು ಶಾಸನದಿಂದ ಕಾಮದೇವನ ಪರವಾಗಿ ಯುದ್ಧ ಮಾಡಿದ ಪಡವಳ ನಂದಿ ಮತ್ತು ಪಡವಳ ಬುದ್ಧರು ಗೋಕರ್ಣದಲ್ಲಿ ಸತ್ತ ವಿಷಯ ತಿಳಿಯುತ್ತದೆ.[೭] ಅಂದರೆ ಕ್ರಿ. ಶ. ೧೦೭೭-೭೮ ರಲ್ಲಿ "ಪೊನ್ನವುರ ಪುರವರಾಧೀಶ್ವರ" ಕಾಮದೇವರಸನು ಗೋಕರ್ಣವನ್ನು ಗೆಲ್ಲಲು ಪ್ರಯತ್ನ ಪಟ್ಟನೆಂದಾಯಿತು.

೬. ಪ್ರಸ್ತುತ ಹಳದೀಪುರ ವೀರಗಲ್ಲು ಶಾಸನ ಹಾಗೂ ಅದೇ ದಿವಸದ ಉಲ್ಲೇಖವಿರುವ ಕೆಕ್ಕಾರಿನ ಇನ್ನೊಂದು ವೀರಗಲ್ಲು ಶಾಸನ[೮] ತಿಳಿಸುವಂತೆ ಕ್ರಿ. ಶ. ೧೦೭೯ ರಲ್ಲಿ ಕಾಮದೇವನು ಪೊನ್ನವುರ ಕೋಟೆಯನ್ನು ಗೆದ್ದುಕೊಳ್ಳುವ ಮೊದಲು "ಗೋಕರ್ಣ ಪುರವರಾಧೀಶ್ವರ" ನಾಗವರ್ಮರಸನು ಆ ಕೋಟೆಯನ್ನು ಹಿಡಿದುಕೊಂಡಿದ್ದನು. ಕೋಟೆಯನ್ನು ಮರಳಿ ಗೆಲ್ಲಲು ಕಾಮದೇವನು "ಬಲ್ಲಾಳ ಬಯಲು" ಮತ್ತು ಹೊನ್ನಾವರ ಕೋಟೆಯ ಪರಿಸರದಲ್ಲಿ ನಾಗವರ್ಮನ ಸೈನಿಕರೊಂದಿಗೆ ಕಾದಾಡಬೇಕಾಯಿತು.

೭. ಕ್ರಿ. ಶ. ೧೧೪೦ ರ ಇಮ್ಮಡಿ ಮಲ್ಲಿದೇವನ (ಇಮ್ಮಡಿ ಕಾಮದೇವನ ಮಗಳ ಮೊಮ್ಮಗ) ಕಾಲದ ತುಂಬೊಳ್ಳಿ ಶಾಸನದಲ್ಲಿ ಇಮ್ಮಡಿ ಕಾಮದೇವನಿಂದಾದ ಆಳುವ ಅರಸನು ಬಿಲ್ಲಲಾಗಲಿಲ್ಲವೆಂದು ಹೇಳಿದೆ.[೮] ಅಂದರೆ ಇಮ್ಮಡಿ ಕಾಮದೇವನೂ ಆಳುಪರೊಂದಿಗೆ ಕಾದಿರಬೇಕೆಂದು ಅರ್ಥವಾಗುತ್ತದೆ.

ಸಂಶ್ಲೇಷಣೆ

ಮೇಲೆ ಗಮನಿಸಲಾದ ಪುರಾವೆಗಳ ಹಿನ್ನೆಲೆಯಲ್ಲಿ ಕಾಮದೇವನ ಕುರಿತಾದ ಇತಿಹಾಸವನ್ನು ಈ ಕೆಳಗಿನಂತೆ ಪುನಾರಚಿಸಬಹುದು :

ಹಳದೀಪುರ ಶಾಸನದಲ್ಲಿ ಉಲ್ಲೇಖಿತ "ಪೊನ್ನವುರ ಪುರಾಧೀಶ್ವರ" ಕಾಮದೇವರಸನು ಬಳ್ಳಿಗಾವೆಯ ಶಾಸನದ ಶಿಶುಗಲಿಯ ಪಾಂಡ್ಯವಂಶ ಚೂಡಾಮಣಿ ಇಮ್ಮಡಿ ಕಾಮದೇವನೇ ಆಗಿದ್ದಾನೆ. ನಂಜುಂಡಸ್ವಾಮಿಯವರು ಅಭಿಪ್ರಾಯಪಟ್ಟಂತೆ ಇವನು ಚಂದಾವರ ಕದಂಬ ವಂಶದವನಲ್ಲ. ಸೈದೆ ಪ್ರದೇಶದಲ್ಲಿ ಇವನು ಕ್ರಿ. ಶ. ೧೦೭೬ ಕ್ಕೆ ಮುಂಚೆಯೆ ಚಿಕ್ಕ ಸಾಮಂತನಾಗಿದ್ದರೂ ಪ್ರಭಾವಿಯಾಗಿದ್ದನು. ಗೋವೆಯ ಕದಂಬ ಮೊದಲನೇ ಜಯಕೇಶಿಯು (ಕ್ರಿ. ಶ. ೧೦೫೦-೮೦) ನಿಗ್ರಹಿಸಿದ ಕಾಮದೇವನು ಇವನೇ. ಚಾಲುಕ್ಯ ಇಮ್ಮಡಿ ಸೋಮೇಶ್ವರನಿಗೂ ಅವನ ತಮ್ಮ ಆರನೇ ವಿಕ್ರಮಾದಿತ್ಯನಿಗೂ ಆದ ಕಲಹದಲ್ಲಿ ಜಯಕೇಶಿಯು ವಿಕ್ರಮಾದಿತ್ಯನ ಪರವಹಿಸಿದನಷ್ಟೆ. ವಿಕ್ರಮಾದಿತ್ಯನು ಪಟ್ಟಕ್ಕೇರುವ ಮುಂಚೆಯೇ ಅವನೊಂದಿಗೆ ಜಯಕೇಶಿಯು ಆಳುಪರು, ಪಾಂಡ್ಯರು ಮತ್ತು ಚೋಳರ ವಿರುದ್ಧ ದಂಡಯಾತ್ರೆಗೈದನು.[೧೧] ಜಯಕೇಶಿಯು ಆಳುಪರೊಂದಿಗೆ ಮಾಡಿದ ಯುದ್ಧ ಸುಮಾರು ಕ್ರಿ. ಶ. ೧೦೭೦-೭೬ರ ನಡುವೆ ಆಗಿರಬೇಕು. ಈ ಸಂದರ್ಭದಲ್ಲಿ ಜಯಕೇಶಿಯು ಆಳುಪರನ್ನು ನಿಗ್ರಹಿಸಲು ಸುಲಭವಾಗುವಂತೆ ಹೊನ್ನಾವರ ಕೋಟೆಯನ್ನು ನಿರ್ಮಿಸಿರಬೇಕು. ಜಯಕೇಶಿಯಿಂದ ನಿಗ್ರಹಿಸಲ್ಪಟ್ಟ ಕಾಮದೇವನು ಆಳುಪರೊಂದಿಗೆ ಆದ ಕದನದಲ್ಲಿ ಜಯಕೇಶಿಯ ಪರವಹಿಸಿದನು. ಹೀಗಾಗಿ ಅವನ ಸಹಾಯ-ಸಹಕಾರಗಳಿಂದ ಸಂಪ್ರೀತರಾದ ಜಯಕೇಶಿ ಮತ್ತು ಆರನೇ ವಿಕ್ರಮಾದಿತ್ಯ ಕಾಮದೇವನಿಗೆ ಹೊನ್ನಾವರದ ಅಧಿಕಾರವಹಿಸಿಕೊಟ್ಟರೆಂದು ಕಾಣುತ್ತದೆ. ಹೀಗೆ ಅವನು "ಪೊನ್ನವುರವರಾಧೀಶ್ವರ"ನಾದನು.

ಆರನೇ ವಿಕ್ರಮಾದಿತ್ಯನು ಪಟ್ಟಕ್ಕೇರಿದ ಮರು ವರ್ಷವೇ ಕಾಮದೇವನು ಗೋಕರ್ಣದ ನಾಗವರ್ಮನೊಂದಿಗೆ ಕಾದುವ ಪ್ರಸಂಗವೊದಗಿತು. ನಾಗವರ್ಮನು ವಿಕ್ರಮಾದಿತ್ಯನ ಪರನಾಗಿರಲಿಲ್ಲವೇನೊ. ಅಂತೆಯೇ ಕಾಮದೇವನು ತನ್ನ ಸೈನ್ಯದೊಂದಿಗೆ ಗೋಕರ್ಣವನ್ನು ಮುತ್ತಿದನು. ಕೆಕ್ಕಾರಿನ ಶಕವರ್ಷ ೧೦೦೦ ದ ಶಾಸನದಲ್ಲಿ ಉಲ್ಲಿಖಿತ ಕಾಮದೇವನ ಭಟರು ಗೋಕರ್ಣದಲ್ಲಾದ ಕಾಳಗದಲ್ಲಿ ಸತ್ತರೆಂದು ತೋರುತ್ತದೆ. ಅಂತೂ ಕಾಮದೇವನ ಸೈನ್ಯ ಹಿಂದೇಟು ಹಾಕುವ ಪರಿಸ್ಥಿತಿ ಉಂಟಾಯಿತಲ್ಲದೆ

ಗೋಕರ್ಣದ ನಾಗವರ್ಮನು ಹೊನ್ನಾವರದ ಕೋಟೆಯನ್ನು ಆಕ್ರಮಿಸುವ ಮಟ್ಟಕ್ಕೆ ತಲುಪಿತು. ಕಾಮದೇವನು ತನ್ನ ಪ್ರಯತ್ನಗಳನ್ನು ಮುಂದುವರಿಸಿ ೧೦೭೯ ರಲ್ಲಿ "ಬಲ್ಲಾಳ ಬಯಲಿ"ನಲ್ಲಿ ನಾಗವರ್ಮನ ಸೈನ್ಯವನ್ನು ಸೋಲಿಸುವದರಲ್ಲಿ ಯಶಸ್ವಿಯಾದನು. ಮುಂದೆ ಉಳಿದದ್ದು ಕಳೆದುಕೊಂಡಿದ್ದ ಹೊನ್ನಾವರ ಕೋಟೆಯನ್ನು ಮರಳಿ ಗೆಲ್ಲುವದು. ಕಾಮದೇವನು ಹೊನ್ನಾವರ ಕೋಟೆಯನ್ನು ಮುತ್ತಿದನು. ಆ ಕೋಟೆಯನ್ನು ಗೆಲ್ಲುವದರಲ್ಲೂ ಯಶಸ್ವಿಯಾದನು. ಈ ಯುದ್ಧದಲ್ಲಿ ನಾಗವರ್ಮನು ತೀರಿದಂತೆ ತೋರುತ್ತದೆ. ಅಂತಾಗಿ ಗೋಕರ್ಣವು ಕಾಮದೇವನ ಇನ್ನೊಂದು, ಮುಖ್ಯ ರಾಜಧಾನಿಯಾಯಿತು. ಹೀಗಾಗಿ ಬಳ್ಳಿಗಾವೆಯ ಶಾಸನ ಅವನನ್ನು "ಗೋಕರ್ಣಪುರವರಾಧೀಶ್ವರ"ನೆಂದು "ಕೊಂಕಣ ರಾಷ್ಟ್ರಪಾಲ"ನೆಂದೂ ಕರೆದಿದೆ.

ಹೆಚ್ಚಾಗಿ ಶಾಂತಿಯುತವಾಗಿ ಸಾಗಿದ ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಇಮ್ಮಡಿಕಾಮದೇವನು ಹೊಸ ಸಾಧನೆಗೈಯಲು ಅವಕಾಶವಿರಲಿಲ್ಲ. ಆದ್ದರಿಂದ ಮಹಾ ಶಿವಭಕ್ತನಾಗಿ "ಸುಖಸಂಕಥಾವಿನೋದದಿಂ" ರಾಜ್ಯಂಗೆಯ್ದನು[೧೧] ಸಾಕಷ್ಟು ವಿಸ್ತಾರವಾದ ಪ್ರದೇಶದ ಮೇಲೆ ಅವನ ಪ್ರಭುತ್ವವಿತ್ತು. ಸದ್ಯ ಲಭ್ಯವಿರುವ ಪುರಾವೆಗಳಾಧಾರದ ಮೇಲೆ ಸುಮಾರು ಕ್ರಿ. ಶ. ೧೦೭೦ ರಿಂದ ೧೧೦೨ ರ ವರೆಗೆ ಕಾಮದೇವನು ಆಳ್ವಿಕೆ ಮಾಡಿದನೆಂದು ಹೇಳಲಡ್ಡಿಯಿಲ್ಲ.

ಪೊನ್ನವುರ ಕೋಟೆ ಕಾಳಗದಲ್ಲಿ ಮಡಿದಾತ ಮದ್ದುಗಹಳಿಯಿತ ಮಾಬವನು. ಅವನು ತತ್ರಹಾಳ ಜವಸುವ ಮಗ. "ತತ್ರಹಾಳ" ಸ್ಥಳನಾಮವಾಗಿರಲು ಸಾಕು. ಮದ್ದುಗಹಳಿಯಿತನ ಮಡದಿ ಬಂದಿಯಬ್ಬೆ[೧೨] ಮಾರಬ್ಬೆ ಇನ್ನೊಬ್ಬ ಮಡದಿಯೆಂದು ತೋರುತ್ತದೆ. ಈಕೆ "ಮಂಚಳಿಯ" ಬೂತಬ್ಬೆಗೆಲ್ಲತಿ ಮತ್ತು ಅಜ್ಜಮಗಲ್ಲನ ಮಗಳು. "ದಿಳೋರ" ನಾಗೋಜನ ಉಲ್ಲೇಖವಿದ್ದು ಇದಾವ ಗ್ರಾಮವೆಂಬುದು ಗೊತ್ತಾಗಿಲ್ಲ. ಕುಮಟಾ ತಾಲೂಕಿನ "ದಿವಳ್ಳಿ"ಯೆ?

ಶಾಸನದ ಪಾಠ[೧೩]

೧. ಸ್ವಸ್ತಿ ಸಮಧಿಗತ ಪಞ್ಚ
೨. ಮಹಾಸಬ್ದ ಮಹಾಮ-
೩. ಣ್ಡಳೇಸ್ವರಂ ಪೊನ್ನವುರ ಪು-
೪. ರವರಾಧೀಸ್ವರಂ ಪರನಾರೀ
೫. ದೂರ ನಗಸಂಕಸೂಲ ಕ-
೬. ಲಿಗಳ ಮೊಗದ ಕೈ ನಾಪಮಾ-
೭. ದಿ ಸಮಸ್ತ ಪ್ರಸಸ್ತಿ ಸ-

೮. ಹಿತ ಶ್ರೀಮತು ಕಾಮದೇ-
೯. ವರಸರುಂ ಗೋಂಕರ್ಣ್ನಪುರ-
೧೦. ವರಾಧೀಸ್ವರಂ ನಾಗವರ್ಮ್ಮ
೧೧. ದೇವರುಮಿದ್ದ ಪೊ-
೧೨. ನ್ನಾವುರ ಕೋಟೆಯು ಮು-
೧೩. ತ್ತಿ ಸಕವರಿಸಂ ಸಾಸಿರ-
೧೪. ದೆರಡನೆಯ ಸಿದ್ಧಾರ್ತ್ಥಿ ಸಂ-
೧೫. ವತ್ಸರದಾಸ್ವೆದ ಸುದ್ಧ
೧೬. ಪಞ್ಚಮಿ ವಡ್ಡವಾರ-
೧೭. ದಂದು ಜಯುಗೆಯ್ದುರ-
೧೮. ಲ್ಲಿ ತತ್ರಹಾಳ ಜವನು-
೧೯. ಪ ಮಗಂ ಮದ್ದುಗಹಳಿ-
೨೦. ಯಿತಂ ಪೊರೆದಾಳ್ದ ಕಾ-
೨೧. ವದೇವರಸರ ಡ್ಯಾಳ-
೨೨. ದಲಿ ನೋಂಕೆ ಜಯಕೇಸಿ
೨೩. ದೇವ ಕಟ್ಟಿಸಿದ ಕೋಟೆ-
೨೪. ಯಂ ಜಯಂಗೆಯ್ವನೆನ್ದು-
೨೫. ಲ್ಲಂಘಿಸಿ ವೀರಭಟರನಿ-
೨೬. ಱಿದು ದೇವಲೋಕಕ್ಕೆ ಸನ್ದ [*]
೨೭. ಅಶನವಧು ಬನ್ದಿಯುಟೆ
೨೮. ಮುಂಬಳಿಯು ಭೂತಬೆಗೆಲ್ಲಿತಿ-
೨೯. ಯು ಅಜ್ಜಮಗೆಲ್ಲನ ಮಗಳು
೩೦. ಮಾರಬ್ಬೆ ಮಾಡಿಸಿದ
೩೧. ಕಲ್ಲು (ಐ) ಬರೆದಂ
೩೨. ಸೇನಬೋವ ಶ್ರೀಧ-
೩೩. ರಯ್ಯ॥
೩೪. ದಿಳೋರ ನಾಗೋಜನಮ -
೩೫. ಗಂ ಡಕ್ಕನ ಖಣ್ಡರಣ(*)
೩೬. ಅಜ್ಜಮಗೆಲ್ಲಂ...

ಅಡಿ ಟಿಪ್ಪಣಿಗಳು

೧ ಪಂಚಮುಖಿ ಆರ್. ಎಸ್. ಧಾರವಾಡ, ೧೯೪೮ :
Progress of Kannada Research in Bombay Province (1941–46) ಪು. 6–7

೨ ಡಾ. ಸದಾನಂದ ನಾಯಕರು ತಮ್ಮ ಲೇಖನವೊಂದರಲ್ಲಿ ಈ ಶಾಸನವನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಸದಾನಂದ ನಾಯಕ. ಧಾರವಾಡ, ೧೯೭೪. ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ ಪು. ೬೦–೯೭

೩ *Epigraphia Carnatica*, ಸಂಪುಟ VII. SK. [illegible] ಹಾಗೂ ಸದಾನಂದ ನಾಯಕ, ಅದೇ, ಪು. ೮೧–೮೮

೪ ಶ್ರೀನಿವಾಸ ಪಾಡಿಗಾರ ಮತ್ತು ಎಸ್. ಗಣಪತಿಗೌಡ, ಧಾರವಾಡ, ೧೯೯೦ : "ಚಂದಾವರ ಕದಂಬ ಅರಸು ತ್ರಿಭುವನಮಲ್ಲ ಮಲ್ಲಿದೇವನ ಗುಂಡಬಾಳದ ಶಾಸನ, ಶಕವರ್ಷ ೧೦೬೩", ಕರ್ನಾಟಕ ಭಾರತಿ, ಸಂಪುಟ ೨೨, ಸಂಚಿಕೆ ೧.

೫ ಗೋಪಾಲ ಬಿ. ಆರ್. ಮದ್ರಾಸ ೧೯೮೨ : *Minor Dynasties of South India Karnataka, Vol I*, ಪು. ೫೪

೬ *Journal of Bombay Branch of Royal Asiatic Society*, ಸಂಪುಟ *IX*, ಪು. ೨೭೮ ಮತ್ತು ೨೮೨ :

ಯಶ್ಶಾಲುಕ್ಯಂ ನಿಜೇರಾಜ್ಯೇ
ಸ್ಥಾಪಯನ್ನಿಜಿತಾಲುಪಃ ।
ಕದಂಬಿತ ಕದಂಬೋsಲಂ–
ಕೃತಾರ್ಥೀಕೃತವಾನ್ ಪ್ರಭುಃ॥

ಸಾಲೆತ್ತೂರ ರಮೇಶ ಕೆ. ವಿ. ಧಾರವಾಡ. ೧೯೭೦ : *A History of South Kanara*. ಪು. ೧೦೭

೭ ಕೆಕ್ಕಾರಿನ ಅಮ್ಮನವರ ದೇವಸ್ಥಾನದ ಕಂಬದ ಮೇಲಿರುವ ಈ [illegible] ಶಾಸನ [illegible] ಅಪ್ರಕಟಿತ.

೮ ಅಮ್ಮನವರ ದೇವಸ್ಥಾನದಲ್ಲಿರುವ ಇನ್ನೊಂದು ಕಂಬದ ಮೇಲಿರುವ ಈ ಶಾಸನವು ಅಪ್ರಕಟಿತ ಇಲ್ಲಿ ಉಲ್ಲೇಖಿತ ಭಾಗ ಹೀಗಿದೆ.

. . . ಪೊನ್ನವುರ ಪುರವರಾಧೀಶ್ವರಂ ಶ್ರೀಮತು
ಕಾಂವದೇವರಸರುಂ ಗೋಕರ್ಣ್ಣಪುರವರಾಧೀಸ್ವರಂ
ಶ್ರೀಮತು ನಾಗವರ್ಮ್ಮರಸರುಂ ವಿರ್ವ್ವರುಂ
ಬಲ್ಲಾಳ ಬಯಲಲು ಬಿಟ್ಟು ಒಡ್ಡೊಡ್ಡಿ ಕಾಳೆಗಂ
ಕಾದಿದಲ್ಲಿ . . .''

೯ ಹೊನ್ನಾವರ ತಾಲೂಕಿನ [illegible] ಶಾಸನವು [illegible] ಅಗ್ರಹಾರದಲ್ಲಿ ಇಮ್ಮಡಿ ಕಾಮದೇವನ [illegible] ಗೃಹವನ್ನು ನಿರ್ಮಿಸಿದನ್ನು ಉಲ್ಲೇಖಿಸುತ್ತದೆ. (ಪಾಠ ಅಪ್ರಕಟಿತ) ಇಮ್ಮಡಿ ಕಾಮದೇವನ್ನ ಕುರಿತಾದ ಒಂದು ಪದ್ಯ :

[illegible]
[illegible]
ನೆಱೆದಾತಂ ಬಳಿಕಂಜಿ ಬಾರದಿರೆ ಗೆಲ್ಲಂಗೊಣ್ಡ.

ಇತ್ಯಾದಿಯಾಗಿ ಹೊಗಳುತ್ತದೆ.

೧೦ ಗೋಪಾಲ ಬಿ. ಆರ್. ಅದೇ ಪು. ೫೩

೧೧ *Epigraphia Carnatica*, ಸಂಪುಟ VII, Sk ೯೯

"ಸಮಧಿಗತ ಪಞ್ಚ ಮಹಾಶಬ್ದ ಮಹಾಮಣ್ಡಳೇಶ್ವರ।
ಗೋಕರ್ಣಪುರವರಾಧೀಶ್ವರ। ಪಾಣ್ಡ್ಯವಂಶ ಚೂಡಾಮಣಿ।
.....ಕೊಂಕಣ ರಾಷ್ಟ್ರಪಾಲ।..... ಶಿರಃಶೇಖರೀಭೂತ
ಶ್ರೀಮತ್ರಿಭುವನಮಲ್ಲದೇವ ಪಾದಾರವಿನ್ದ। ....
ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮತ್ರಿಭುವನಮಲ್ಲ
ಕಾಮದೇವರಸ ಸುಖಸಂಕಥಾವಿನೋದದಿಂ ರಾಜ್ಯಗೆ-
ಯ್ಯುತ್ತಮಿರ್ದ್ದನ್ನಂ ದೇವರ ಶಿವಧರ್ಮ್ಮ ಕಥಾಕಥನ ಪ್ರಸಂಗದೊಳ್.."

೧೨ ಸದಾನಂದ ನಾಯಕರು (ಅದೇ ಪು.೭೧) ಹೇಳಿದಂತೆ ಈಕೆ ಯುದ್ಧದಲ್ಲಿ ಮಿಂಚಿದ ಮಹಿಳೆಯಲ್ಲ

೧೩ ಪಡಿಯಚ್ಚಿನಿಂದ ಓದಿದ ಪಾಠ

ಧಾರವಾಡ ಜಿಲ್ಲೆಯಲ್ಲಿ ದೊರೆತ ರಾಷ್ಟ್ರಕೂಟರ ಮತ್ತು ಈ ಕಾಲ ಪೂರ್ವದ ಶಿಲ್ಪಗಳು

● ರು. ಮ. ಷಡಕ್ಷರಯ್ಯ

ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಪ್ರಾಚ್ಯವಸ್ತುಗಳ ಅನ್ವೇಷಣೆಯನ್ನು ಧಾರವಾಡ ಜಿಲ್ಲೆಯ ಕೆಲ ಹಳ್ಳಿಗಳಲ್ಲಿ ಕೈಕೊಂಡಾಗ ಹಲವಾರು ಪ್ರಾಚೀನ-ಮಧ್ಯ ಯುಗದ ಜನವಸತಿಯ ನೆಲೆಗಳು, ದೇವಾಲಯಗಳು, ಶಿಲ್ಪಗಳು, ನಾಣ್ಯಗಳು, ಶಾಸನಗಳು ಕಂಡುಬಂದವು. ರಾಷ್ಟ್ರಕೂಟ ಮತ್ತು ಆ ಕಾಲಕ್ಕಿಂತ ಪೂರ್ವದ ಶಿಲ್ಪಗಳನ್ನು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಶಿಲ್ಪಗಳು ಈ ಜಿಲ್ಲೆಯ ಸಿಗ್ಗಾಂವಿ. ಬನ್ನಿಯೂರು, ಹುಲಗೂರು (ಸಿಗ್ಗಾಂವಿ ತಾ.), ಗುಡಗೇರಿ, ಸಂಶಿ (ಕುಂದಗೋಳ ತಾ.). ಹಂಸಭಾವಿ. ಚಿಕ್ಕೇರೂರು. ಸಾತೇನಹಳ್ಳಿ (ಹಿರೇಕೆರೂರ ತಾ.) ಗ್ರಾಮಗಳಲ್ಲಿವೆ. ಅವುಗಳಲ್ಲಿ ಒಡೆದ ಕೆಲವನ್ನು ಮಾತ್ರ ಕನ್ನಡ ಸಂಶೋಧನ ಸಂಸ್ಥೆಗೆ ತರಲಾಗಿದೆ.

ಈ ಕಾಲದ ಶಿಲಾಶಾಸನಗಳು ಬೆಳಕಿಗೆ ಬಂದಿದ್ದರೂ ಅವುಗಳ ಸಹಾಯದಿಂದ ಅಲ್ಲಿ ದೊರೆಯಬಹುದಾದ ಶಿಲ್ಪಗಳ ಕಡೆಗೆ ಗಮನ ಹರಿಸಿದಂತೆ ಕಾಣುವದಿಲ್ಲ. ಇದಲ್ಲದೆ ಶಾಸನಗಳಲ್ಲಿ ಉಲ್ಲೇಖಗೊಂಡ ಮೂರ್ತಿಗಳನ್ನು ಗುರುತಿಸಿದಂತೆ ಕಾಣುವುದಿಲ್ಲ. ಈ ದಿಸೆಯಲ್ಲಿ ಪ್ರಯತ್ನಗಳೂ ಹೆಚ್ಚು ನಡೆದಿಲ್ಲ. ಈ ಕಾಲದ (ಸು. ೧೧ನೆಯ ಶತಮಾನದ ಅಂತ್ಯದ ವರೆಗೆ) ಶಾಸನಗಳು-ಬನ್ನಿಯೂರು ಮತ್ತು ಸಿಗ್ಗಾಂವಿಗಳಲ್ಲಿ (ಬಾದಾಮಿ ಚಾಲುಕ್ಯರ ವಿಜಯಾದಿತ್ಯನ ಸು. ೮ನೆಯ ಶತಮಾನ). ಹುಲಗೂರು. ಚಿಕ್ಕೇರೂರು. ಗುಡಗೇರಿ ಸಿಗ್ಗಾಂವಿಗಳಲ್ಲಿವೆ. (ರಾಷ್ಟ್ರಕೂಟರ ಅಮೋಘ ವರ್ಷ-೧, ಇಂದ್ರ-೩ ಇತ್ಯಾದಿ-ಕ್ರಿ.ಶ. ೯-೧೧ನೆಯ ಶತಮಾನ). ಬನ್ನಿಯೂರು[೧] ಶಾಸನದಲ್ಲಿ ಅರ್ಜುನೇಶ್ವರ ದೇವಾಲಯ ಮತ್ತು ನಂದಿಯ ಹೆಸರುಗಳಿವೆ. ಸಿಗ್ಗಾಂವಿ[೨] ತಾಮ್ರಶಾಸನದಲ್ಲಿ ಪುಲುಗೆರೆಯಲ್ಲಿ ಕುಂಕುಮ ಮಹಾದೇವಿ ಕಟ್ಟಿಸಿದ ಜೈನಬಸದಿಯ ವಿಷಯವಿದೆ. ಗುಡಗೇರಿ ಇತ್ಯಾದಿ ಗ್ರಾಮಗಳನ್ನು ದತ್ತಿ ನೀಡಿದ ವಿವರವಿದೆ. ಈ ವಿವರದಿಂದ ಗುಡಗೇರಿ. ಸಿಗ್ಗಲಿ. ಅಲಗುಂಡಿ. ಪಾಟಳಿ. ಮರಗುಂಡಿ. ಸೇರಿಲಿ, ಪನವಾಸಿ, ಕಿಪ್ಪುರ (ಕುಂದವೂರ ವಿಷಯ) ಗ್ರಾಮಗಳ ತಕ್ಕಮಟ್ಟಿನ ಭೌಗೋಲಿಕ ವಿವರ ಕಾಣುವದು.

ರಾಷ್ಟ್ರಕೂಟರ ಕಾಲದ ಶಾಸನಗಳಿಂದ ಅಮೋಘವರ್ಷನ ಕ್ರಿ.ಶ. ೮೬೬ರ ಕಾಲದ ಸಿಗ್ಗಾಂವಿಯ[೩] ಮೂಲಸ್ಥಾನ ಮಹಾದೇವಾಲಯ, ಸು. ಕ್ರಿ.ಶ. ೯ನೆಯ ಶತಮಾನದ ಗುಡಗೇರಿಯ ಗೋಸಾಸ. ಕ್ರಿ.ಶ. ೯೭೦ರ ಹುಲಗೂರಿನ ಫುಲ್ಲಿಂಗೊರಬ್ಬೆ ದೇವತೆ ಹೆಸರುಗಳಿವೆ. ಸು. ಕ್ರಿ.ಶ. ೯ನೆಯ ಶತಮಾನದ ಸಾತೇನಹಳ್ಳಿಯ[೪] ಇಂದಿನ ರಾಮಲಿಂಗೇಶ್ವರ ಇಟ್ಟಿಗೆ ದೇವಾಲಯವನ್ನು ಕ್ರಿ.ಶ. ೧೧೬೭ರ ಶಾಸನದಿಂದ ಗುಂಡೇಶ್ವರ ಎಂದು ಕರೆದಿ

ರುವ ಉಲ್ಲೇಖ ಸಿಗುತ್ತದೆ. ಈ ಕಾಲದಲ್ಲಿ ಕೈಕೊಂಡ ಜೀರ್ಣೋದ್ಧಾರ ಮತ್ತು ಕಳಸ ಸ್ಥಾಪನೆಯ ವಿವರ ತಿಳಿಯುವುದು.

ಈ ಭಾಗಗಳಲ್ಲಿ ಅಲ್ಪಕಾಲದ ಅನ್ವೇಷಣೆಯನ್ನು ಎರಡು ಕಾರಣದಿಂದ ಕೈಕೊಳ್ಳಲಾಯಿತು. ಹಿರೇಕೆರೂರು ತಾಲೂಕಿನ ಮತ್ತಿಹಳ್ಳಿ ಗ್ರಾಮದ ಸೋಮೇಶ್ವರ ದೇವಾಲಯದ ಟ್ರಸ್ಟ್ ಕಮಿಟಿಯವರು ಅಲ್ಲಿಯ ಮೂರು ವಿಗ್ರಹಗಳನ್ನು ತೆಗೆದುಕೊಂಡು ಹೋಗಲು ವಿನಂತಿಸಿದ್ದರು. ಈ ಕಾರ್ಯಕ್ಕಾಗಿ ಹೋದಾಗ ಆ ಗ್ರಾಮದ ಬದಿಯಲ್ಲಿಯ ಕೆಲ ಹಳ್ಳಿಗಳನ್ನು ಅನ್ವೇಷಣೆ ಮಾಡಲಾಯಿತು. ಜತೆಗೆ ಮರಳಿ ಬರುವಾಗ ಆ ಗ್ರಾಮದಿಂದ ಸುಂದರವಾದ ವಿಷ್ಣು, ಬ್ರಹ್ಮ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪಗಳನ್ನು ತರಲಾಯಿತು. ಇನ್ನೊಂದು ಸಂದರ್ಭವು ಒಂದು ಶಿವ ದೇವಸ್ಥಾನದ ಹೊಲದಲ್ಲಿ ಬೆಳಕಿಗೆ ಬಂದಿದೆ. ಅದನ್ನು ಅಭ್ಯಾಸ ಮಾಡಲು ಬರಬೇಕೆಂದು ಶಿಗ್ಗಾಂವ ತಾಲೂಕಿನ ಹುಲಗೂರ ಗ್ರಾಮದ ಮಂಡಲ ಪಂಚಾಯತಿ ಅಧ್ಯಕ್ಷರು ವಿನಂತಿಸಿದ್ದರು. ಈ ಕಾರ್ಯ ಕೈಕೊಂಡಾಗ ಹುಲಗೂರು ಗ್ರಾಮ ಮತ್ತು ಅದರ ಬದಿಯ ಕೆಲ ಗ್ರಾಮಗಳನ್ನು ಅನ್ವೇಷಣೆ ಮಾಡಲಾಯಿತು. ಭೈರವ ಮತ್ತು ಶಿವಲಿಂಗ ಮೂರ್ತಿಗಳನ್ನು ಹುಲಗೂರಿನಿಂದ ತರಲಾಯಿತು.

ಅನ್ವೇಷಣೆಯಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡ ಶಿಲ್ಪಗಳನ್ನು ಹುಡುಕಿ ಗುರುತಿಸುವುದು ಮತ್ತು ಇನ್ನಿತರ ಶಿಲ್ಪಗಳನ್ನು ಹುಡುಕಲಾಯಿತು. ಅಲ್ಲಿ ದೊರೆತ ಈ ಕಾಲದ ಶಿಲ್ಪಗಳನ್ನು ಸ್ಥೂಲವಾಗಿ ಈ ಕೆಳಗೆ ಅಧ್ಯಯನ ಮಾಡಲಾಗಿದೆ.

ಬಾದಾಮಿ ಚಾಲುಕ್ಯರ ಮತ್ತು ಈ ಕಾಲ ಪೂರ್ವದ ಶಿಲ್ಪಗಳು :

ಶಿವಲಿಂಗಗಳು : ಈ ಕಾಲದ ಒಟ್ಟು ನಾಲ್ಕು ಶಿವಲಿಂಗಗಳು ಬೆಳಕಿಗೆ ಬಂದಿದ್ದು ಅವುಗಳಲ್ಲಿ ಚಿಕ್ಕೇರೂರಿನ ಒಂದು ಶಿವಲಿಂಗವು ಅತ್ಯಂತ ಪ್ರಾಚೀನವಾದುದು. (ಚಿತ್ರ ನಂ. ೧) ಉಳಿದವುಗಳು ಸಾತೇನಹಳ್ಳಿ, ಚಿಕ್ಕಯೂರಗಳಲ್ಲಿವೆ.

ಚಿಕ್ಕೇರೂರು : ಈ ಗ್ರಾಮದ ಪಕ್ಕದಲ್ಲಿರುವ ಹನುಮಂತ ಗುಡಿಯ ಹೊರಗಡೆ ಬಲಭಾಗದಲ್ಲಿ ಒಂದು ಶಿವಲಿಂಗವಿದೆ. ಆ ಶಿವಲಿಂಗದ ಕೆಳಭಾಗ ಮಣ್ಣಲ್ಲಿ ಹೂತಿದೆ. ಅದಕ್ಕೆ ಒಟ್ಟು ಮೂರು ಭಾಗಗಳಿವೆ. ಮೇಲಿನ ಭಾಗ ಅರ್ಧ ವೃತ್ತಾಕಾರದಲ್ಲಿದ್ದು ಅದನ್ನು ಸಂಪೂರ್ಣ ನುಣುಪು ಮಾಡಲಾಗಿದೆ. ಬ್ರಹ್ಮಸೂತ್ರದ ಗೆರೆಗಳು ಅದರ ಮೇಲಿವೆ. ಅದು ಬಾಣದಂತೆ ಕಾಣುತ್ತದೆ. ಪಾರ್ಶ್ವನಾಡಿಗಳು ಮೇಲೆ ಒಂದೆಡೆಯಿಂದ ಪ್ರಾರಂಭವಾಗಿ ಬಾಣದಂತೆ ಸ್ವಲ್ಪ ಕೆಳಗಿಳಿದು ಹಿಂದೆ ತಿರುಗಿ ಒಂದೆಡೆ ಸೇರಿವೆ. ಅದರ ಕೆಳಗಡೆಯ ಭಾಗಕ್ಕೆ ಎಂಟು ಮುಖಗಳಿವೆ. ಅದರ ಕೆಳಭಾಗಕ್ಕೆ ನಾಲ್ಕು ಮುಖಗಳಿವೆ. ಇಂತಹ ಲಕ್ಷಣವುಳ್ಳ ಸು. ಕ್ರಿ.ಶ. ೨-೩ನೆಯ ಶತಮಾನದ ಶಿವಲಿಂಗಗಳು ಬೋಳೆ[೯] (ಉತ್ತರ ಕನ್ನಡ ಜಿಲ್ಲೆ), ಚಂದ್ರವಳ್ಳಿ[೧೦] (ಚಿತ್ರದುರ್ಗ ಜಿಲ್ಲೆ)ಗಳಲ್ಲಿವೆ. ಬೋಳೆ ಮತ್ತು ಚಂದ್ರವಳ್ಳಿಯಂತೆ ಈ ಲಿಂಗದ ಮೂರೂ ಭಾಗಗಳ ಎತ್ತರಗಳು ಒಂದೇ ಇವೆ.

ಸಾತೇನಹಳ್ಳಿ : ಸಾತೇನಹಳ್ಳಿಯ ರಾಮಲಿಂಗೇಶ್ವರವೆಂದು ಕರೆಯುವ ಇಟ್ಟಿಗೆಯ ಗುಂಡೇಶ್ವರ ದೇವಾಲಯದ ಗರ್ಭಗೃಹದಲ್ಲಿ ಒಂದು ಬೃಹತ್ ಶಿವಲಿಂಗವಿದೆ. ಆದರ ಲಿಂಗ ಮತ್ತು ಪೀಠಗಳು ವಿವಿಧ ಕಾಲಕ್ಕೆ ಸಂಬಂಧಿಸಿವೆ. ಅದರ ಲಿಂಗದ ಗಾತ್ರ ೨.೭೦ ಸೆಂ. ಮೀ. ಉದ್ದ ಮತ್ತು ೦.೪೦ ಸೆಂ. ಮೀ. ಅಗಲ. ಪೀಠದ ಗಾತ್ರ ೦.೭೫ ಸೆಂ. ಮೀ. ಉದ್ದ ಮತ್ತು ೧.೩೦ ಸೆಂ. ಮೀ. ಅಗಲ. ಲಿಂಗದ ಮುಖವು ಸಂಪೂರ್ಣ ನುಣುಪಾಗಿದ್ದು ಬ್ರಹ್ಮಸೂತ್ರವನ್ನು ಅದರ ಮೇಲೆ ಕೊರೆಯಲಾಗಿದೆ. ಇಲ್ಲಿ ಪಾರ್ಶ್ವನಾಡಿಗಳು ಬಾಣದಂತೆ ಎರಡು ಲಂಬಕೋನ ಗೆರೆಗಳ ತುದಿಯಿಂದ ಪ್ರಾರಂಭವಾಗಿ ಕೆಳಗಿಳಿಯುತ್ತ ಬದಿಗಳಲ್ಲಿ ವಿಸ್ತಾರವಾಗುತ್ತ ಹಿಂದೆ ಸರಿದು ಒಂದೆಡೆ ಸೇರಿವೆ. ಇಂತಹ ಲಕ್ಷಣವುಳ್ಳ ಶಿವಲಿಂಗವು ಪಟ್ಟದಕಲ್ಲು ಮಹಾಕೂಟದ (ಸು. ಕ್ರಿ. ಶ ೬-೭ನೆಯ ಶತಮಾನ) ಲಿಂಗಗಳನ್ನು ಹೋಲುತ್ತದೆ.

ಬನ್ನಿಕೊಪ್ಪ ಧರ್ಮರಾಯನ ಗುಡಿಯಲ್ಲಿ ಈ ಮಾದರಿಯ ಒಂದು ಶಿವಲಿಂಗವಿದೆ. ಈ ಗ್ರಾಮದ ಪಂಚಪಾಂಡವರ ದೇವಾಲಯಗಳಲ್ಲಿ ಧರ್ಮರಾಯನ ಗುಡಿ ಒಂದಾಗಿದೆ. ಇನ್ನೊಂದು ಭೀಮೇಶ್ವರ ಗುಡಿ ಸ್ವಲ್ಪ ದೂರದಲ್ಲಿದೆ. ಈ ಗುಡಿಗಳು ಬನ್ನಿಕೊಪ್ಪ ಗ್ರಾಮದ ಬದಿಯಲ್ಲಿವೆ. ಧರ್ಮರಾಯನ ಗುಡಿಯ ಎದುರು ಕೃಷ್ಣನ ಗುಡಿ, ಅದರ ಬಲಬದಿಗೆ ನಂದಿಯ ಗುಡಿ. ಅದರ ಎದುರು ಕಾಳಮ್ಮನ ಗುಡಿ ಇವೆ. ಕೃಷ್ಣ ಮತ್ತು ಧರ್ಮರಾಯನ ಗುಡಿಗಳ ಮಧ್ಯ ತೆರೆದ ಒಂದು ಮಂಟಪವಿದೆ. ಧರ್ಮರಾಯನ ಗುಡಿಯ ಕೆಲ ಮೂರ್ತಿಗಳನ್ನು ಧರ್ಮರಾಯ, ಕುಂತಾದೇವಿ ದ್ರೋಣಾಚಾರ್ಯ, ಅರ್ಜುನ, ನಕುಲ, ಸಹದೇವ ಎಂಬ ಹೆಸರುಗಳಿಂದ ಕರೆಯಲಾಗುತ್ತಿದೆ. ವ್ಯಕ್ತಿಗಳ ಹೆಸರಿನ ಕೆಲ ಮೂರ್ತಿಗಳಿವೆ. ಮತ್ತು ಕೆಲವು ಶಿವಲಿಂಗಗಳಿಗೆ ವ್ಯಕ್ತಿಗಳ ಹೆಸರನ್ನು ಕೊಡಲಾಗಿದೆ. ಇದಲ್ಲದೆ ಕೃಷ್ಣನ ಗುಡಿಯಲ್ಲಿಯ ಮೂರ್ತಿಯು ಸೂರ್ಯನ ಮೂರ್ತಿಯಾಗಿದೆ.

ಧರ್ಮರಾಯನ ಗುಡಿಯನ್ನು ಇತ್ತೀಚೆಗೆ ಕಟ್ಟಲಾಗಿದೆ. ವಿಶಾಲವಾದ ಈ ಗುಡಿಗೆ ಹಿಂಬದಿಯಲ್ಲಿ ಒಂದು ಗರ್ಭಗುಡಿ ಅದರ ಮುಂದೆ ವಿಶಾಲವಾದ ಮುಚ್ಚಿದ ಅಂಕಣ. ಅದರ ಎದುರಿಗೆ ತೆರೆದ ವಿಶಾಲ ಸ್ತಂಭ-ಮಂಟಪವಿದೆ. ಈ ಅಂಕಣ ಬದಿಗಳಲ್ಲಿ ಚಿಕ್ಕ ಚಿಕ್ಕ ಗುಡಿಗಳಿವೆ ಕುಂತಾದೇವಿ ಮತ್ತು ಧರ್ಮರಾಯ ಎಂಬ ಹೆಸರುಗಳ ಎರಡು ಶಿವಲಿಂಗಗಳು ಈ ಗುಡಿಯ ಗರ್ಭಗೃಹದಲ್ಲಿವೆ. ಅದರ ಮುಂದಿನ ಅಂಕಣದಲ್ಲಿ ಅರ್ಜುನ ಮತ್ತು ಕಾರ್ತಿಕೇಯ ವಿಗ್ರಹಗಳಿವೆ. ಅವುಗಳಿಗೆ ಅರ್ಜುನ ಮತ್ತು ದ್ರೋಣಾಚಾರ್ಯ ಎಂದು ಹೆಸರು. ಸ್ತಂಭ-ಮಂಟಪ ಬದಿಯ ಗುಡಿಗಳಲ್ಲಿಯ ಶಿವಲಿಂಗಗಳಿಗೆ ನಕುಲ ಮತ್ತು ಸಹದೇವ ಎಂದು ಹೆಸರು. ಸಹದೇವನ ಗುಡಿಯ ಶಿವಲಿಂಗ ಶೈಲಿಯ ದೃಷ್ಟಿಯಿಂದ ಪ್ರಾಚೀನದ್ದಾಗಿದ್ದು ಈಗ ಅದು ಪ್ರವೇಶ ದ್ವಾರದ ಇನ್ನೊಂದು ಬದಿಗೆ ಮುಖ ಮಾಡಿ ಇಟ್ಟಿರುವುದರಿಂದ ಅದರ ಮೂಲ ಸ್ಥಳ ಬದಲಾವಣೆಯಾಗಿರುವುದು ಗೊತ್ತಾಗುತ್ತದೆ.

ಈ ಶಿವಲಿಂಗದ ಚಿತ್ರ ಕಡಿದಿರುವುದು ಅದರ ಮೇಲ್ಭಾಗವನ್ನು ನಯಮಾಡಲಾಗಿದೆ. ಅದರಲ್ಲಿಯ ಬ್ರಹ್ಮಸೂತ್ರದ ಭಾಗವನ್ನು ಎರಡು ಸಮಾಂತರ ನಾಲಿಗಳಿಂದ ಸೂಚಿಸಿರುವುದು ವಿಶೇಷವಾಗಿದೆ. ಅದರ ಗಾತ್ರ ೦.೩೫ ಸೆ.ಮಿ.(ಉದ್ದ) ೦.೨೦ಸೆಂ.ಮಿ. (ಅಗಲ). ಅದರ ಪೀಠದ ಗಾತ್ರ ೦.೮೨ ಸೆಂ.ಮಿ. (ಉದ್ದ) ೦.೬೦ ಸೆಂ.ಮೀ. (ಅಗಲ) ಶೈಲಿಯ ದೃಷ್ಟಿಯಿಂದ ಇದು ಸು. ಕ್ರಿ. ಶ. ೬-೭ನೆಯ ಶತಮಾನದ್ದು.

ಈ ಗುಡಿಯ ಸಮೀಪದಲ್ಲಿ ಬಾದಾಮಿ ಚಾಲುಕ್ಯರ ವಿಜಯಾದಿತ್ಯನ (ಸು.ಕ್ರಿ.ಶ. ೮ನೆಯ ಶತಮಾನ) ಶಾಸನವಿದ್ದು ಅದರಲ್ಲಿ ಉಲ್ಲೇಖಿಸಿದ್ದ ಅರ್ಜುನೇಶ್ವರ ದೇವಾಲಯ ಮತ್ತು ನಂದೀಶ್ವರದ ಉಲ್ಲೇಖಗಳಿವೆ. ಈ ಕಾಲ ಮತ್ತು ಅದಕ್ಕಿಂತ ಪೂರ್ವದ ಕೆಲವು ಶಿಲ್ಪಗಳೂ ಅಲ್ಲಿರುವುದು ಅನ್ವೇಷಣೆಯಿಂದ ತಿಳಿದುಬಂದಿತು. ಆ ಶಿಲ್ಪಗಳು : ಅರ್ಜುನ, ಶಿವಲಿಂಗ ಮತ್ತು ನಂದಿ. ಇಲ್ಲಿ ಅರ್ಜುನ ಮತ್ತು ಶಿವಲಿಂಗ (ಈಶ್ವರ)ಗಳು ಇರುವುದರಿಂದ ಶಾಸನದಲ್ಲಿ ಅರ್ಜುನೇಶ್ವರನೆಂದು ಕರೆದಿರಬೇಕು. ಅದೇ ರೀತಿ ನಂದಿ ಮತ್ತು ಶಿವಲಿಂಗಕ್ಕೆ ನಂದೀಶ್ವರ ಎಂದಿರಬೇಕು. ಕಾರಣ ಗುಡಿಯ ಎದುರಿನ ನಂದಿಗುಡಿಯಲ್ಲಿ ಈ ಕಾಲದ ನಂದಿ ವಿಗ್ರಹವಿರುವುದು.

ಗಜಲಕ್ಷ್ಮೀ ತೋರಣ ಫಲಕಗಳು :

ಈ ಕಾಲದ ಒಟ್ಟು ಎರಡು ಗಜಲಕ್ಷ್ಮೀ ತೋರಣ ಫಲಕಗಳು ದೊರಕಿ ಬಂದಿವೆ. ಅವು ಸಿಗ್ಗಾಂವಿ ತಾಲೂಕ ಕಛೇರಿಯ ಹಿತ್ತಲಿನಲ್ಲಿವೆ. ಈ ತೋರಣ ಫಲಕಗಳು ಸುಮಾರಾಗಿ ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದಲ್ಲಿದ್ದು, ಕೆಳಭಾಗದ ಎರಡೂ ಬದಿಗಳಲ್ಲಿ ರಂಧ್ರಗಳಿವೆ. ಕಂಬಗಳನ್ನು ಕೂಡಿಸುವುದಕ್ಕೆ ಮಾಡಿದ ರಂಧ್ರಗಳಾಗಿವೆ. ತೋರಣ ಫಲಕ-೧ : (೧.೫೦ ಸೆಂ.ಮೀ. ೦.೫೦ ಸೆಂ.ಮೀ.) ಫಲಕದ ಮಧ್ಯದಲ್ಲಿ ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿರುವಳು. ಬಲಗೈಯಲ್ಲಿ ಕಮಲವನ್ನು ಎತ್ತಿ ಹಿಡಿದು ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿರುವಳು. ಅವಳ ಬದಿಗಳಲ್ಲಿ ನಿಂತ ಆನೆಗಳಿವೆ. ಅವುಗಳ ಮುಂದಿನ ಕಾಲುಗಳನ್ನು ಎತ್ತಿ ನಿಂತಿವೆ. ಸೊಂಡಿಲಿನಲ್ಲಿ ಚಾಮರಗಳನ್ನು ಹಿಡಿದು ಲಕ್ಷ್ಮಿಯ ಕಡೆ ಮುಖ ಮಾಡಿ ನಿಂತಿವೆ. ಮೇಲುಗಡೆ ವಿದ್ಯಾಧರರ ಜೋಡು ಚಿತ್ರಗಳೂ ಎರಡೂ ಕಡೆಯಲ್ಲಿವೆ. ಅರ್ಧ ವೃತ್ತಾಕಾರದ ಚೌಕಟ್ಟಿನ ಕೆಳಭಾಗದ ಬದಿಗಳಲ್ಲಿ ಹೊರಗಡೆ ಮುಖಮಾಡಿದ ಮಕರ ಮತ್ತು ಅದರ ಸವಾರನ ಚಿತ್ರಗಳು ಎರಡೂ ಕಡೆಗಳಲ್ಲಿವೆ. ಲಕ್ಷ್ಮಿಯ ತಲೆಯ ಮೇಲೆ ಮಧ್ಯದಲ್ಲಿ ಛತ್ರಿಯನ್ನು ತೋರಿಸಲಾಗಿದೆ. ಅವಳಿಗೆ ಕರಂಡ ಮುಕುಟ, ಕರ್ಣಕುಂಡಲಗಳು, ಕಂಠಹಾರ ಕೈ-ತೋಳು-ಕಾಲುಗಳಲ್ಲಿ ಬಳೆಗಳು, ಸೊಂಟಕ್ಕೆ ಪಟ್ಟಿ ಇತ್ಯಾದಿ ಆಭರಣಗಳ ಅಲಂಕಾರವಿದೆ. ಈ ಫಲಕದ ಬಲ ಬದಿಯಲ್ಲಿ ಮತ್ತು ಎಡ ಬದಿಯ ಮಕರದ ಸವಾರರ ಚಿತ್ರ ಒಡೆದಿವೆ, ಚಿತ್ರ ನಂ. ೩)

ತೋರಣ ಫಲಕ ೨: (೧.೬೬ ಸೆ. ಮೀ. ೦.೬೨ ಸೆ. ಮೀ.) ಈ ಫಲಕದಲ್ಲಿಯು ಕೆಲ ಚಿತ್ರಗಳು ಮತ್ತು ಶೈಲಿ ಒಂದೇ ಇವೆ ಆದರೆ ಇಲ್ಲಿ ಪದ್ಮಕ್ಕೆ ಉದ್ದವಾದ ದಂಡವಿದೆ. ಲಕ್ಷ್ಮಿಯು ತನ್ನ ಎರಡೂ ಕಾಲುಗಳನ್ನು ಕೆಳಗೆ ಇಳಿಬಿಟ್ಟು ಕುಳಿತಿರುವಳು. ಒಂದೊಂದು ಜೋಡಿ ಆನೆಗಳು ಲಕ್ಷ್ಮಿಯ ಬದಿಯಲ್ಲಿವೆ. ಮೇಲ್ಭಾಗದಲ್ಲಿ ತೋರಿಸಿದ ಆನೆಗಳು ಸೊಂಡಿಲಿನಲ್ಲಿ ಚೌರಿಗಳನ್ನು ಹಿಡಿದಿದ್ದು ಕೆಳಗಿನವುಗಳು ಪೂರ್ಣ ಕುಂಭಗಳನ್ನು ಹೊತ್ತಿವೆ ಬದಿಯಲ್ಲಿ ಹೆಂಗಸರು ಚೌರಿಯನ್ನು ಹೊತ್ತು ತ್ರಿಭಂಗಿಯಲ್ಲಿ ನಿಂತಿರುವರು. ಅವರ ಬದಿಗೆ ತುರುಬು ಕಟ್ಟಿದ ವ್ಯಕ್ತಿಗಳಿದ್ದಾರೆ. (ಚಿತ್ರ ನಂ. ೪) ಇಂತಹ ಗಜಲಕ್ಷ್ಮಿ ತೋರಣ ಫಲಕಗಳು ಸು. ಕ್ರಿ. ಶ. ೭-೮ ನೆಯ ಶತಮಾನದ ಶಿವಮೊಗ್ಗ ಜಿಲ್ಲೆಯ ಕುಪ್ಪಗದ್ದೆ ಮತ್ತು ತಾಳಗುಂದ[೧೧] ಇನ್ನಿತರ ಸ್ಥಳಗಳಲ್ಲಿ ಕಂಡು ಬಂದಿವೆ.

ಶಿಗ್ಗಾಂವಿಯ ಶಾಸನದಲ್ಲಿ ಈ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಶೈವ ದೇವಸ್ಥಾನದ ಉಲ್ಲೇಖ ಕಂಡು ಬರುತ್ತದೆ. ಆ ದೇವಸ್ಥಾನ ಶಿಗ್ಗಾಂವಿಯಲ್ಲಿ ಎಲ್ಲಿತ್ತು ಎಂಬುದು ಇನ್ನೂ ತಿಳಿದಿಲ್ಲ. ಇದಲ್ಲದೆ ಈ ಮೇಲೆ ತಿಳಿಸಿದ ಗಜಲಕ್ಷ್ಮಿ ಮಕರ ತೋರಣ ಫಲಕಗಳ ಮೂಲ ಸ್ಥಳಗಳು ತಿಳಿದಿಲ್ಲ. ಬಹುಶಃ ಒಂದು ತೋರಣ ಫಲಕ ಅಲ್ಲಿಯ ಬಾದಾಮಿ ಚಾಲುಕ್ಯರ ಕಾಲದ ಶೈವ ದೇವಸ್ಥಾನಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ. ಇನ್ನೊಂದು ಆ ಭಾಗದ್ದಿರಬಹುದು. ಅಥವಾ ಬೇರೆ ಗ್ರಾಮದಿಂದ ತಂದು ಅಲ್ಲಿ ಇಟ್ಟಿರಬಹುದು. ಏಕೆಂದರೆ ವಿವಿಧ ಗ್ರಾಮಗಳಿಂದ ತಂದ ಶಿಲಾಶಾಸನಗಳೂ ಅಲ್ಲಿವೆ.

ರಾಷ್ಟ್ರಕೂಟರ ಕಾಲದ ಶಿಲ್ಪಗಳು: (ಕ್ರಿ.ಶ. ೮-೧೦ ನೆಯ ಶತಮಾನ)

ಶಿವಲಿಂಗ : (೮.೫೨ ೦.೧೫ ಸೆಂ. ಮೀ.) ಹುಲಗೂರಿನ ಗ್ರಾಮದಲ್ಲಿ ದೊರೆತ ಒಂದು ಶಿವಲಿಂಗ ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ. ಆ ಗ್ರಾಮದ ಸಾರ್ವಜನಿಕರ ಸಹಕಾರದಿಂದ ಸಂಸ್ಥೆಗೆ ತರಲಾಯಿತು. ಈ ಲಿಂಗಕ್ಕೆ ಸ್ಪಷ್ಟವಾದ ಮೂರು ಭಾಗಗಳಿವೆ. ಮೇಲ್ಭಾಗ ಅರ್ಧ ವೃತ್ತಾಕಾರ ಹಾಗೂ ನಯವಾಗಿದ್ದು ಮಧ್ಯಭಾಗಕ್ಕೆ ಎಂಟು ಮುಖಗಳಿದ್ದು ಕೆಳಭಾಗಕ್ಕೆ ನಾಲ್ಕು ಮುಖಗಳಿವೆ. ಕೆಳಭಾಗವು ಎತ್ತರದಲ್ಲಿ ಬಹು ಚಿಕ್ಕದಾಗಿದ್ದು ಉಳಿದ ಭಾಗಗಳ ಎತ್ತರ ಒಂದೇ ಇವೆ. ಸುಂದರವಾಗಿ ನಯ ಮಾಡಿದ ಮೇಲ್ಭಾಗಕ್ಕೆ ಬ್ರಹ್ಮಸೂತ್ರವಿದೆ. ಆ ಸೂತ್ರವು ಮಧ್ಯದಲ್ಲಿ ಎರಡು ಸಮಾಂತರ ಲಂಬ ರೇಖೆಗಳಿದ್ದು ಮೇಲಿಂದ ಬಾಣದಂತೆ ಪ್ರಾರಂಭವಾಗಿ ಸ್ವಲ್ಪ ಕೆಳಗೆ ಇಳಿದು ವಿಸ್ತರಿಸುತ್ತ ಅವು ಹಿಂಬದಿಯಲ್ಲಿ ತಿರುಗಿ ಒಂದೆಡೆ ಸೇರಿವೆ. ಶೈಲಿಯ ದೃಷ್ಟಿಯಿಂದ ಈ ಲಿಂಗವು ಸು.ಕ್ರಿ.ಶ. ೮ ನೆಯ ಶತಮಾನದ ಶಿವಲಿಂಗಗಳನ್ನು ಹೋಲುತ್ತದೆ. (ಚಿತ್ರ ನಂ. ೫)

ಶಿಲ್ಪ ಶಾಸ್ತ್ರದ ಪ್ರಕಾರ ಈ ಮೂರು ಭಾಗಗಳಿಗೆ ಬ್ರಹ್ಮ, ವಿಷ್ಣು ಮತ್ತು ರುದ್ರ ಅಥವಾ ಶಿವ ಎಂದು ಕರೆಯಲಾಗಿದೆ.

ನಂದಿ :

ಹುಲಗೂರಿನ ಒಂದು ಹಾಳಾದ ಚಿಕ್ಕ ದೇವಾಲಯಕ್ಕೆ ಹಿರೇಮಠ ಎಂದು ಕರೆಯುವರು. ಈ ದೇವಸ್ಥಾನದ ಎದುರಿಗೆ (ಹೊರಗಡೆ) ನಂದಿಯ ವಿಗ್ರಹವಿದೆ (ಚಿತ್ರ ಸಂ. ೭). ಕುಳಿತ ಭಂಗಿಯಲ್ಲಿರುವ ನಂದಿಯ ಕೊರಳಲ್ಲಿ ದಪ್ಪ ಹುಗ್ಗದ ಗಂಟೆ ಹಾರವಿದೆ. ಅದರ ಮುಂದೆ ಮಧ್ಯದಲ್ಲಿ ದೊಡ್ಡ ಗಂಟೆಯನ್ನು ತೋರಿಸುವ ಬದಲು ಮನುಷ್ಯನ ಚಿಕ್ಕ ಮುಖ ತೋರಿಸಿರುವುದು ವಿಶೇಷವಾಗಿದೆ. ದೊಡ್ಡದಾದ ದುಂಡು ಗಂಟೆಗಳ ಸರಮಾಲೆ ಇನ್ನೊಂದಿದೆ. ಬಾಯಿಯ ಅಲ್ಪ ಭಾಗ ಒಡೆದಿದೆ. ಶೈಲಿಯ ದೃಷ್ಟಿಯಿಂದ ಅದು ಸು. ಕ್ರಿ. ಶ. ೯ ನೆಯ ಶತಮಾನ. ಇದೇ ರೀತಿ ದೊಡ್ಡದಾಗಿ ಚಿತ್ರಿಸಿದ ಪೂರ್ಣ ಮನುಷ್ಯನ ಚಿತ್ರವನ್ನು ನಂದಿ ಕೊರಳಿನ ಹಾರದ ಮುಂದೆ ತೋರಿಸಿದ ಶಿಲ್ಪಗಳು ಹಂದಿಗಿ[೧೨] ಮಲ್ಲಿಕಾರ್ಜುನ ದೇವಾಲಯದ ಮುಂದೆ ಮತ್ತು ಕೊಲ್ಲಾಪುರದ[೧೩] ಶೈವದೇವಾಲಯದ ಮುಂದೆ ಇವೆ. ಇವುಗಳು ಸು.ಕ್ರಿ.ಶ. ೧೧-೧೨ ನೆಯ ಶತಮಾನದವು. ಇಂತಹ ವೈಶಿಷ್ಟ್ಯವನ್ನು ಶಿಲ್ಪದಲ್ಲಿ ಅಳವಡಿಸುವ ಪದ್ಧತಿ ಯಾವಾಗ ಮತ್ತು ಏಕೆ ಪ್ರಾರಂಭವಾಯಿತು ಎಂಬುದನ್ನು ತಿಳಿಯಬೇಕಾಗಿದೆ.

ಬ್ರಹ್ಮಸ್ತಂಭ :

ಹುಲಗೂರ ಗ್ರಾಮದ ಪೂರ್ವಕ್ಕೆ ಒಂದು ಮೂಲೆಯಲ್ಲಿ ನಾಲ್ಕು ಮುಖವುಳ್ಳ ಒಂದು ಸ್ತಂಭಶಿಲ್ಪವಿದೆ (ಚಿತ್ರ ಸಂ. ೮) ಒಂದು ಮುಖಕ್ಕೆ ಗಡ್ಡವಿದ್ದು ನಾಲ್ಕು ತಲೆಗಳಿಗೆ ಜಟಾ ಮುಕುಟಗಳಿವೆ. ಸರಳವಾದ ಕೊರಳಲ್ಲಿ ಹಾರ, ಕಿವಿಗಳಲ್ಲಿ ಓಲೆ ಇತ್ಯಾದಿ ಆಭರಣಗಳಿವೆ. ಶಿರದ ಕೆಳಭಾಗ ದಪ್ಪ ಹಾಗೂ ಉದ್ದವಿದ್ದು ಅದನ್ನು ಅಲ್ಲಿ ಕೂಡಿಸಲಾಗಿದೆ. ಇದು ಬ್ರಹ್ಮಸ್ತಂಭವಿರಬೇಕು. ಇಂತಹ ಬ್ರಹ್ಮಸ್ತಂಭ ಹಂಸಭಾವಿಯ[೧೪] ಉತ್ತರಕ್ಕೆ ಒಂದು ಮೂರ್ತಿಯಲ್ಲಿದೆ.

ಕೆಲವರ್ಗದ ಜನರಿಗೆ ಕಾಯಿಲೆ, ರೋಗಗಳು ಬಂದರೆ ಆ ವಿಗ್ರಹಕ್ಕೆ ಎಣ್ಣೆಯನ್ನು ಎರೆದು ಆರಾಧಿಸುವ ಪದ್ಧತಿ ಈಗಲೂ ಉಂಟು. ಇದನ್ನು ಬ್ರಹ್ಮಭರಮಪ್ಪ ಎಂದು ಕರೆಯುವರು. ಶೈಲಿಯ ದೃಷ್ಟಿಯಿಂದ ಇದು ಸು.ಕ್ರಿ.ಶ ೧೦ನೆಯ ಶತಮಾನದ ಅಂತ್ಯ ಭಾಗಕ್ಕೆ ಸಂಬಂಧಿಸಿದೆ.

ಸೂರ್ಯ:

ಬನ್ನಿಯೂರಿನ ಧರ್ಮರಾಯನ ಗುಡಿ ಎದುರಿನ ಕೃಷ್ಣ ದೇವರೆಂದು ಹೇಳುವ ಮೂರ್ತಿಯು ಸೂರ್ಯನದಾಗಿದೆ. (ಚಿತ್ರ ಸಂ. ೯). ಸಮಭಂಗದಲ್ಲಿದ್ದು ಆತನ ಎರಡು ಕೈಗಳಲ್ಲಿ ಕಮಲ ದಂಡಗಳಿವೆ. ಕೆಳಗೆ ಬದಿಗಳಲ್ಲಿ ಉದ್ದವಾದ ಬಿಲ್ಲು ಬಾಣ ಹೊತ್ತುನಿಂತ ಉಷಾ ಪ್ರತ್ಯುಷರ ಚಿತ್ರಗಳಿವೆ. ಸೂರ್ಯನ ಪಾದದ ಕೆಳಗೆ ಮುಂಭಾಗದಲ್ಲಿ ಏಳು ಕುದುರೆಗಳ ಚಿತ್ರ ಇವೆ. ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ಪ್ರಭಾವಳಿಯಿದ್ದು ಅರ್ಧಗಂಬ ಘಟ್ಟಿಕೆಯ ಮೇಲೆ ಮಕರಗಳು ಬದಿಗಳಲ್ಲಿವೆ. ಕಿರೀಟ ಮುಕುಟು, ಕರ್ಣಕುಂಡಲ, ಕಂಠಹಾರ, ಯಜ್ಞೋಪವೀತ, ಹಾರಗಳು ಹಾಗೂ ಬಳೆಗಳನ್ನು ಧರಿಸಿ

ದ್ದಾನೆ. ಬಲಗೈ ಒಡೆದಿದೆ. ಶೈಲಿಯ ದೃಷ್ಟಿಯಿಂದ ಇದು ಸು. ಕ್ರಿ. ಶ. ೧೦ನೆಯ ಶತಮಾನದ ಅಂತ್ಯ ಭಾಗದ್ದಾಗಿದೆ.

ದಕ್ಷ:

ಹುಲಿಗೂರಿನ ದೇವಿಗುಡಿಯ ಎದುರಿನ ಕಟ್ಟೆಯಲ್ಲಿ ದೊರೆತ ಒಡೆದ ದಕ್ಷನ ಮೂರ್ತಿಯನ್ನು ಕನ್ನಡ ಸಂಶೋಧನ ಸಂಸ್ಥೆಗೆ ತರಲಾಗಿದೆ (ಚಿತ್ರ ನಂ. ೯). ಆಡಿನ ಮುಖ. ಕಿವಿ. ಕೋಡು ಇದ್ದು ಈ ವಿಗ್ರಹ ನಿಂತ ಭಂಗಿಯಲ್ಲಿದೆ. ಎರಡೂ ಕೈಗಳಲ್ಲಿ ಕಮಲಗಳಿವೆ. ತೊಡೆಯ ಭಾಗದಿಂದ ಕೆಳಗೆ ಒಡೆದುಹೋಗಿದೆ. ಜಟಾ ಮುಕುಟ, ಕಂಠಹಾರಗಳು. ಕೈಬಳೆಗಳು. ಸೊಂಟಪಟ್ಟಿ ಇತ್ಯಾದಿ ಆಭರಣಗಳನ್ನು ಧರಿಸಲಾಗಿದೆ. ಶೈಲಿಯ ದೃಷ್ಟಿಯಿಂದ ಇದು ಸು. ಕ್ರಿ. ಶ. ೧೦ನೆಯ ಶತಮಾನದ್ದಾಗಿದೆ. ನಿಂತ ಮತ್ತು ಕುಳಿತ ದಕ್ಷನ ವಿಗ್ರಹಗಳು (ಸು. ಕ್ರಿ. ಶ, ೧೧–೧೨ನೆಯ ಶತಮಾನ) ಅಲ್ಲಲ್ಲಿ ಕಂಡು ಬಂದಿವೆ.

ಭೈರವ:

ಹುಲಿಗೂರಿನಲ್ಲಿ ಈ ಮೇಲೆ ತಿಳಿಸಿದ ಮೂರ್ತಿಯ ಸಂಗಡ ಈ ಭೈರವನ ಮೂರ್ತಿಯನ್ನು ಇಟ್ಟಿರಿಸಲಾಗಿತ್ತು. (ಚಿತ್ರ ನಂ ೧೦). ಕೈಗಳು. ಮುಖ, ಮತ್ತು ಕೆಳಭಾಗ ಪೂರ್ಣ ಒಡೆದು ಹೋಗಿವೆ. ಮೇಲಿನ ಎಡಗೈಯಲ್ಲಿ ಡಮರು ಮಾತ್ರ ಕಾಣುತ್ತದೆ. ತಲೆಯ ಗುಂಗುರು ಆದ ಕೂದಲನ್ನು ಹಿಂದಕ್ಕೆ ಎಳೆದು ತುರುಬಿನಂತೆ ತೋರಿಸಿ ಅದನ್ನು ನಾಗಬಂಧ (ಬಿಗಿದಿದೆ) ಮೇಲ್ಭಾಗದಲ್ಲಿ ಕಟ್ಟಲಾಗಿದೆ. ಕೊರಳು. ಕಿವಿ. ಕೈ ಎದೆ ಮೇಲೆ ಆಭರಣಗಳ ಸುಂದರ ಅಲಂಕಾರವಿದೆ. ರುಂಡಮಾಲಾ ಧರಿಸಲಾಗಿದೆ. ಶೈಲಿಯ ದೃಷ್ಟಿಯಿಂದ ಇದು ಸು.ಕ್ರಿ.ಶ. ೧೦ನೆಯ ಶತಮಾನದ್ದಾಗಿದೆ.

ಮಂಗಳ ಚಿಹ್ನೆಯುಳ್ಳ ಗಜಲಕ್ಷ್ಮಿ

ಹುಲಿಗೂರು ಕಲ್ಮೇಶ್ವರ ದೇವಾಲಯದ ಪಕ್ಕದಲ್ಲಿರುವ ಕ್ರಿ. ಶ. ೧೧೬೧ನೆಯ ಕಾಲದ ಒಂದು ಶಾಸನದ ಮೇಲ್ಭಾಗದಲ್ಲಿ ಹದಿನಾರು ಮಂಗಳ ಚಿಹ್ನೆಗಳುಳ್ಳ ಗಜಲಕ್ಷ್ಮಿಯ ಸುಂದರ ಚಿತ್ರವಿದೆ. (ಚಿತ್ರ ನಂ. ೧೧). ಮಧ್ಯದಲ್ಲಿ ದೊಡ್ಡದಾಗಿ ಗಜಲಕ್ಷ್ಮಿಯಿದ್ದು ಬದಿಗಳಲ್ಲಿ ಗಣೇಶ ಮತ್ತು ಮಹಿಷಾಸುರಮರ್ದಿನಿ ಚಿತ್ರಗಳಿವೆ. ಗಜಲಕ್ಷ್ಮಿಯ ಬದಿಯಲ್ಲಿ ಆಕಳು. ಕರು (ಎಡಕ್ಕೆ) ಮತ್ತು ಶಿವಲಿಂಗವನ್ನು (ಬಲಕ್ಕೆ) ಒಂದು ವಿಶಾಲ ಅಗಲವಾದ ಪಟ್ಟಿಕೆಯಲ್ಲಿ ತೋರಿಸಲಾಗಿದೆ. ಎರಡು ಕಂಬಗಳು ಈ ಮಂಟಪಕ್ಕಿವೆ. ಲಕ್ಷ್ಮಿಯ ಬದಿಗಳಲ್ಲಿ ಗಜಗಳು ಸೊಂಡಿಲಿನಲ್ಲಿ ಕಲಶಗಳನ್ನು ಎತ್ತಿ ಹಿಡಿದು ನಿಂತಿವೆ. ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿರುವಳು. ಇದರ ಕೆಳಗೆ ಚಿಕ್ಕ ಚಿಕ್ಕ ಮಂಗಳ ಚಿಹ್ನೆಗಳಿವೆ. ಅವುಗಳೆಂದರೆ: ಚೌರಿಗಳು. ನಂದಿ. ಪೂರ್ಣಕುಂಭ. ದರ್ಪಣ. ಸೂರ್ಯ ಸ್ವಸ್ತಿಕ. ಚಂದ್ರ ಮತ್ತು ರವಿ. ಈ ಮಂಟಪದ ಛತ್ತಿನಲ್ಲಿ ಇಳಿಬಿಟ್ಟ ಕಮಲ ಅದರ ಮೇಲೆ ಕಾಲು ನಮೂನೆ ಬಿಡಿಸಿದ್ದು ಎರಡು ಕೀರ್ತಿಮುಖ ಮಧ್ಯ ಚೈತ್ಯಾಕಾರದ ಅಲಂಕಾರವಿದೆ. ಈ ಚಿತ್ರ ಫಲಕವು ಸು.ಕ್ರಿ.ಶ. ೧೨ನೆಯ ಶತಮಾನದ ಶೈಲಿಯಲ್ಲಿದೆ.

ಆದರೆ ಕ್ರಿ. ಶ. ೧೧೭೭ರ ಶಾಸನ ಅವರ ಬಂಡೆಯ ಮೇಲೆ ತಮ ನಂತರ ಮೂಲ ಶಾಸನವನ್ನು ಅಳಿಸಿ ಕೊರೆಸಿರಬೇಕೆಂದು ಹೇಳಬಹುದು. ಶಾಸನದ ಮೇಲೆ ಅಲ್ಲಲ್ಲಿ ಗೀಜಿದ ಕುರುಹುಗಳುಂಟು. ಇಂತಹ ಫಲಕ ದೊರೆತಿರುವುದು ವಿಶೇಷವಾಗಿದೆ.

ಗಜಲಕ್ಷ್ಮಿ ತೋರಣ ಫಲಕಗಳು: ಶಾಸನಗಳಲ್ಲಿ ಹೆಚ್ಚಾಗಿ ಗಜಲಕ್ಷ್ಮಿಯ ಫಲಕಗಳಿಗೆ ಸು. ಕ್ರಿ. ಶ. ೮೭೨ ರಿಂದ ಬಾದುಷ್ಟ್ರಿ ಎಂಬ ಹೆಸರುಗಳ ಉಲ್ಲೇಖವುಂಟು. (ಡಿ. ಎಲ್. ನರಸಿಂಹಾಚಾರ್. ಪು. ೮೨).

ಶಿಗ್ಗಾಂವಿಯ ಕೋಣ ಕಟ್ಟೆಯ ಸ್ಥಳದಲ್ಲಿ ಗಜಲಕ್ಷ್ಮಿ ತೋರಣ ಫಲಕವಿದೆ. ಇಲ್ಲಿ ಲಕ್ಷ್ಮಿಯು ಕಮಲವನ್ನು ಹಿಡಿದು ಸ್ವಲ್ಪ ಎತ್ತರದ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವಳು. ಬದಿಯಲ್ಲಿ ಆನೆಗಳಿವೆ. ಅರ್ಧವೃತ್ತಾಕಾರದಂತೆ ಬದಿಗಳ ಮಕರ ಬಾಲಗಳ ಅಲಂಕಾರವಿದೆ. ಕಂಬಗಳನ್ನು ಕೂಡಿಸುವ ರಂಧ್ರಗಳು ಕೆಳಗಿವೆ. (ಚಿತ್ರ ಸಂ. ೧೨) ಶೈಲಿಯ ದೃಷ್ಟಿಯಿಂದ ಇದು ಸು.ಕ್ರಿ.ಶ. ೯ನೆಯ ಶತಮಾನ. ಈ ಫಲಕವು ಅಲ್ಲಿಯ ಕ್ರಿ. ಶ. ೮೬೫ರ ಮೂಲಸ್ಥಾನ ಮಹಾದೇವಾಲಯದ ಬಾಗಿಲ ಚೌಕಟ್ಟಿನ ಫಲಕವಿರಬೇಕು.

ಮುಲಗೂರಿನಲ್ಲಿ ಈ ದೇವರ ಹಿಂದಿನ ಬೃಹತ್ಸ್ತಂಭ ಪಕ್ಕದಲ್ಲಿ ಗಜಲಕ್ಷ್ಮಿಯ ತೋರಣ ಫಲಕವಿದೆ. ಮೇಲ್ಭಾಗ ಅರ್ಧ ವೃತ್ತಾಕಾರದಲ್ಲಿದೆ. ಲಕ್ಷ್ಮಿಯು ಅಗಲವಾದ ಒಂದು ಮಂಟಪದ ಮೇಲೆ ಪದ್ಮಾಸನದಲ್ಲಿ ಕಮಲವಿಡಿದು ಕುಳಿತಿರುವಳು. ಮುಂದಿನ ಕಾಲುಗಳನ್ನು ಎತ್ತಿ ಗಜಗಳು ಸೊಂಡಿಲಿನಲ್ಲಿ ಚೌರಿ ಹಿಡಿದುನಿಂತಿವೆ. ಮಕರ ತೋರಣದ ಅಲಂಕಾರ ಅಂಚಿನಲ್ಲಿ ತೋರಿಸಲಾಗಿದೆ. (ಚಿತ್ರ ಸಂ. ೧೩) ಇದು ಅಲ್ಲಿಯ ಕ್ರಿ.ಶ. ೯೭೭ ಪುಲ್ಲುಂಗೆಸೆರಬ್ಬೆ ದೇವತೆ ಎಂದು ಕರೆದಿರಬೇಕು. ಶೈಲಿಯ ದೃಷ್ಟಿಯಿಂದ ಇದು ಸು.ಕ್ರಿ.ಶ. ೧೦ನೆಯ ಶತಮಾನ. ಇದೇ ಕಾಲದ ಬಾಗಿಲು ಚೌಕಟ್ಟಿನಲ್ಲಿ ಗಜಲಕ್ಷ್ಮಿ ಫಲಕವು ಮತ್ತೀಹಳ್ಳಿಯ ಸೋಮೇಶ್ವರ ದೇವಸ್ಥಾನದ ಒಂದು ಬಾಗಿಲಿಗೆ, ಚಿಕ್ಕೇರೂರಿನ ಒಂದು ಶಿವ ದೇವಸ್ಥಾನದಲ್ಲಿ ಇವೆ. ಮತ್ತೀಹಳ್ಳಿಯ ಫಲಕದ ಶಾಸನವಿದೆ. ಅದನ್ನು ಅಧ್ಯಯನ ಮಾಡಲಾಗುತ್ತಿದೆ.

ಸಪ್ತಮಾತೃಕೆಯರು:

ಮುಲಗೂರಿನ ಕಲ್ಮೇಶ್ವರ ದೇವಾಲಯದಲ್ಲಿ ಸಪ್ತಮಾತೃಕೆಯರ ಫಲಕವಿದೆ. ಏಳು ದೇವತೆಯರ ಚಿತ್ರ ಬಿಟ್ಟು ಗಣೇಶ ವೀರಭದ್ರನ ಚಿತ್ರಗಳನ್ನು ತೋರಿಸಿರುವುದಿಲ್ಲ. ಇದು ವಿಶೇಷವಾಗಿದೆ. (ಚಿತ್ರ ಸಂ. ೧೪) ಶೈಲಿಯ ದೃಷ್ಟಿಯಿಂದ ಇದು ಸು. ಕ್ರಿ. ಶ. ೧೦ನೆಯ ಶತಮಾನದ ಅಂತ್ಯ ಭಾಗ.

ಗೋಸಾಸ:

ಗೋಸಾಸ ಕಲ್ಲುಗಳು ಸಾತೇನಹಳ್ಳಿ ಹನುಮಾನ ದೇವಸ್ಥಾನದ ಮುಂದೆ ನಾಲ್ಕು ಚಿಕ್ಕೇರೂರಲ್ಲಿ ಎರಡು, ಗುಡಗೇರಿಯ ಪರ್ವತ ದೇವರಗುಡಿಯ ಮುಂದೆ ಎರಡು ಕಂಡು ಬಂದಿವೆ. (ಚಿತ್ರ ಸಂ. ೧೬), ಶೈಲಿಯ ದೃಷ್ಟಿಯಿಂದ ಇವು ಸು.ಕ್ರಿ.ಶ. ೯ನೆಯ ಶತಮಾನ.

ಸಿಂಹಪೀಠ :

ಹುಲಗೂರಿನ ಮಡಿವಾಳೇಶ್ವರ ದೇವಾಲಯದಲ್ಲಿ ಸಿಂಹಪೀಠವಿದೆ. ಬಹುಶಃ (ಇದು ತೀರ್ಥಂಕರನ ಪೀಠವಿರಬೇಕು. ಸು.ಕ್ರಿ. ಶ ೧೦ ನೆಯ ಶತಮಾನ.)

ಗಜಲಕ್ಷ್ಮೀ ಫಲಕಗಳು :

ಗಜಲಕ್ಷ್ಮಿ ಫಲಕಗಳು ಮತ್ತಿಹಳ್ಳಿಯಲ್ಲಿ ಮತ್ತು ಚಿಕ್ಕೇರೂರಿನಲ್ಲಿ ಕಂಡುಬಂದಿವೆ. ಸೋಮೇಶ್ವರ ದೇವಾಲಯದ (ಮತ್ತಿಹಳ್ಳಿ) ಒಂದು ಬಾಗಿಲು ಚೌಕಟ್ಟಿನ ಲಲಾಟ ಬಿಂಬದ ಗಜಲಕ್ಷ್ಮಿ ಈ ಕಾಲದ್ದು. ಪದ್ಮಾಸನದಲ್ಲಿ ಕುಳಿತು ಕೈಗಳಲ್ಲಿ ಕಮಲಗಳನ್ನು ಹಿಡಿದ ಲಕ್ಷ್ಮಿಯ ಬದಿಯಲ್ಲಿ ಚೌರಿಯನ್ನು ಸೊಂಡೆಯಲ್ಲಿ ಹೊತ್ತ ಆನೆಗಳು ನಿಂತಿವೆ.

ವೀರಗಲ್ಲು :

ಹುಲಗೂರಿನ ಈ ಮೇಲೆ ತಿಳಿಸಿದ ದಕ್ಷ ಮತ್ತು ಭೈರವನ ವಿಗ್ರಹಗಳ ಪಕ್ಕದಲ್ಲಿ ಒಡೆದ ಶಾಸನವುಳ್ಳ ಒಂದು ವೀರಗಲ್ಲು ಇದೆ. ಕೇವಲ ಚಿತ್ರವುಳ್ಳ ಮೇಲ್ಭಾಗ ಫಲಕ ಉಳಿದಿದೆ. ಚಿತ್ರದಲ್ಲಿ ಒಬ್ಬ ವ್ಯಕ್ತಿ ಪದ್ಮಾಸನದಲ್ಲಿ ಕುಳಿತಿದ್ದು ಎಡಗೈಯಲ್ಲಿ ಪದ್ಮ (?) ಹಿಡಿದಿರುವನು. ಅವನು ಕಿರೀಟಧಾರಿಯಾಗಿದ್ದು, ಕಿವಿಗಳಲ್ಲಿ ಕುಂಡಲ, ಕೊರಳಲ್ಲಿ ಹಾರ, ಎದೆಗೆ ಸೊಂಟಕ್ಕೆ ಪಟ್ಟಿ ಅಭರಣಗಳ ಅಲಂಕಾರವಿದೆ. ಅವನ ಬದಿಗಳಲ್ಲಿ ಚೌರಿ ಬೀಸುವ ಹೆಂಗಸರಿರುವರು. ಶಾಸನದ ಪಾಠಕ್ರಮ ಈ ಕೆಳಗೆ ಕೊಡಲಾಗಿದೆ.

೧. ಸ್ವಸ್ತಿ (೧) ಶ್ರೀಕೊಙ್ಕಣಿಗಸ್ರಮ್ಮಣನ ಕಲ್ಲು (೧) ಮಣಿ ನಾ
೨. ಗೋಜರಾ ಮಗ ಮಾರಸಿಙ್ಗನ ಬೆಸ

ಈ ಶಾಸನದಿಂದ ಚಿತ್ರದಲ್ಲಿಯ ವ್ಯಕ್ತಿಯು ಕೊಙ್ಕಣಿಗ ಸ್ರಮ್ಮಣನೆಂದು ಉಕ್ತವಾಗುತ್ತದೆ. ಶಾಸನದಲ್ಲಿ ಬರುವ ಮಣಿನಾಗೋಜರಾ ಮಗ ಮಾರಸಿಙ್ಗನ ಹೆಸರು ಬಿಜಾಪುರ ಜಿಲ್ಲೆಯ ಮಹಾಕೂಟದ ಸು.ಕ್ರಿ ೮-೯ನೇಯ ಶತಮಾನದ ಮಹಾಕೂಟೇಶ್ವರ ದೇವಾಲಯದ ಕಂಬದ ಶಾಸನದಲ್ಲಿ ಕಾಣುವುದು ವಿಶೇಷವಾಗಿದೆ. ಈ ಒಡೆದ ಫಲಕದ ಕೆಳಗಡೆ ಎತ್ತಿದ ಖಡ್ಗದ ಅಲ್ಪಭಾಗವಿದೆ. (ಚಿತ್ರ ನಂ. ೧೪) ಈ ವ್ಯಕ್ತಿಯು ಕೊಙ್ಕಣ ದೇಶದವನೆಂದು ಶಿಲ್ಪಾಧಾರದಿಂದ ಪ್ರಥಮ ಬಾರಿಗೆ ತಿಳಿದಿರುವುದು ಮಹತ್ವದ್ದಾಗಿದೆ. ಈ ಫಲಕದ ಶಾಸನ ಮತ್ತು ಶಿಲ್ಪವು ಶೈಲಿಯಿಂದ ಸು. ಕ್ರಿ.ಶ. ೯ನೆಯ ಶತಮಾನದ್ದೆಂದು ಹೇಳಬಹುದು.

ಅರ್ಜುನ :

ಸುಮಾರು ಎರಡು ಮೀಟರ ಎತ್ತರದ ಇಲ್ಲಿಯ ಪುರುಷಾಕೃತಿಯ ಮೂರ್ತಿಗೆ ಅರ್ಜುನ ಎಂದು ಕರೆಯುತ್ತಾರೆ. ದ್ವಿಭುಜಗಳಿರುವ ಈತನು ಸ್ವಲ್ಪ ಬಾಗಿ ನಿಂತಿದ್ದಾನೆ. ಬಲಗೈಯಲ್ಲಿ ಮೇಲ್ಮುಖವಾಗಿ ಬಾಣವನ್ನು ತನ್ನ ಎತ್ತರದಷ್ಟೇ ಬಿಲ್ಲನ್ನು ಎಡಗೈಯಲ್ಲಿ ಹಿಡಿದು ನಿಂತಿದ್ದಾನೆ ಬತ್ತಳಿಕೆಗಳನ್ನು ಬೆನ್ನಿನ ಹಿಂಬದಿಯಲ್ಲಿ ಎರಡೂ ಬದಿಗೆ ಸಾಲಾಗಿ

ಧರಿಸಿರುವನು. ತಲೆಗೆ ಕಿರೀಟ, ಕಿವಿಗಳಲ್ಲಿ ಓಲೆ, ಕೊರಳಲ್ಲಿ ಮಣಿಹಾರ, ಎದೆಗೆ ಯಜ್ಞೋಪವೀತ, ಉದರಕ್ಕೆ ಪಟ್ಟಿ, ಸೊಂಟಕ್ಕೆ ವಸ್ತ್ರ, ಕೈಗಳಲ್ಲಿ ಬಳೆ, ಕಾಲುಗಳಲ್ಲಿ ಕಡಗ, ರಟ್ಟೆಗಳಲ್ಲಿ ಪಟ್ಟಿಗಳಿಂದ ಈತನು ಅಲಂಕೃತನಾಗಿದ್ದಾನೆ. ಈತನ ಬಿಲ್ಲಿನ ಎಡಬದಿಯಲ್ಲಿ ಪ್ರತ್ಯೇಕವಾಗಿ ತೋರಿಸಿದ ಮಂಗನ ಚಿತ್ರವಿದೆ. ಈ ಕಪಿಯು ಕುಳಿತು ಹಣ್ಣು ತಿನ್ನುತ್ತಿರುವುದು (ಚಿತ್ರ ನಂ.) ಈತನ ಬಲಭುಜಕ್ಕೆ ಹೊಂದಿ ಚಕ್ರ ಹಾಗೂ ಎಡಗಡೆಯ ಬಿಲ್ಲಿನ ಬದಿಗೆ ಶಂಖಗಳಿರುವುದು ವಿಶಿಷ್ಟವಾಗಿದೆ. ಶಂಖ ಮತ್ತು ಚಕ್ರಗಳನ್ನು ತೋರಿಸಲಾಗಿದೆ. ಆದರೆ ಇವುಗಳನ್ನು ಹಿಡಿದ ಕೈಗಳು ಗೋಚರಿಸುವುದಿಲ್ಲ. ಈ ಆಯುಧಗಳಿಂದ ಈ ವಿಗ್ರಹವು ಮೂಲತಃ ಅರ್ಜುನನದೇ ಎಂಬ ಅನುಮಾನ ಬರುತ್ತದೆ. ಈ ಮೂರ್ತಿಯಲ್ಲಿ ಕಾಣುವ ವಸ್ತ್ರಾಭರಣ, ಆಯುಧಗಳ ಶೈಲಿ ಮತ್ತು ನಿಂತ ಭಂಗಿ ಇವುಗಳನ್ನು ಗಮನಿಸಿದಾಗ ಈ ಶಿಲ್ಪವು ಸುಮಾರು ಕ್ರಿ. ಶ. ೮ನೇ ಶತಮಾನದ್ದೆಂದು ಹೇಳಬಹುದು. ಈ ಮಾತನ್ನು ಪುಷ್ಟೀಕರಿಸಲಿಕ್ಕೆ ಈ ದೇವಾಲಯ ಮುಂದಿರುವ ಒಂದು ಶಾಸನ ಈ ಕಾಲಕ್ಕೆ ಸೇರಿದೆ. ಇದರಲ್ಲಿ ಅರ್ಜುನೇಶ್ವರ ದೇವಾಲಯದ ಉಲ್ಲೇಖವಿರುವುದು. ಆದರೆ ಈ ವಿಗ್ರಹಕ್ಕೆ ಶಂಖ ಮತ್ತು ಚಕ್ರಗಳು ಇರುವುದರಿಂದ ಪ್ರಾಯಶಃ ಇದು ಕೃಷ್ಣನ ಒಂದು ಅವತಾರವಾದ ಶ್ರೀರಾಮನದು ಇದ್ದಿರಬಹುದೆಂಬ ಅನುಮಾನ ಬರುತ್ತದೆ.

ಈ ದೇವಾಲಯ ಪರಿಸರದಲ್ಲಿ ಈ ಕಾಲದ ಶಿವಲಿಂಗ (ಬ್ರಹ್ಮ ಸೂತ್ರವಿದೆ), ನಂದಿ (ಕಾಳವ್ವ ಗುಡಿ ಎದುರಿನ ಬಸವಣ್ಣನ ಗುಡಿಯಲ್ಲಿ ಎದುರಿನ ಬಸವಣ್ಣ ಗುಡಿಯಲ್ಲಿದೆ.) ದೇವಾಲಯದ ಅವಶೇಷಗಳಾದ ಕಂಬ ಇತ್ಯಾದಿಗಳಿವೆ. ಈ ಶಿವಲಿಂಗವನ್ನೇನಾದರು ಅರ್ಜುನೇಶ್ವರ ಎಂದು ಕರೆದಿರಬಹುದೆ ಹೇಗೆ? ಎಂಬ ಸಂಶಯಕ್ಕೆ ಎಡೆಯಿದೆ. ಈ ಕಾಲದ ಶಾಸನದಲ್ಲಿ ಅರ್ಜುನೇಶ್ವರ ದೇವಾಲಯವು ಕ್ರಿ. ಶ. ೮ನೇ ಶತಮಾನ ಪೂರ್ವದಲ್ಲಿದ್ದಿತ್ತೆಂಬುದು ತಿಳಿದುಬರುತ್ತದೆ. ಇದರಿಂದ ಈ ಭಾಗದಲ್ಲಿ ಪಂಚಪಾಂಡವರ ಹೆಸರುಗಳು ಪ್ರಚಲಿತವಾಗಿದ್ದವೆಂದು ತರ್ಕಿಸಬಹುದು.

ದೇವಾಲಯದ ಅವಶೇಷಗಳು :

ಚಿಕ್ಕೇರೂರಿನಲ್ಲಿ ವೀರಭದ್ರ ದೇವಾಲಯ ಪಕ್ಕದಲ್ಲಿ ಮತ್ತು ಹುಲಗೂರಿನ ಹಿರೇಮಠ, ಮತ್ತು ಸಿದ್ದಲಿಂಗೇಶ್ವರ ದೇವಾಲಯದ ಮುಂದಿನ ಕೆಲ ಕಂಬಗಳು, ಹನುಮಂತ ದೇವಾಲಯದ ಛತ್ತಿನಲ್ಲಿಯ ಕಮಲದ ಹೂವಿನ ಸುಂದರ ವೃತ್ತಾಕಾರದಲ್ಲಿ ಕೊರೆದ ಚಿತ್ರಗಳು, ಬನ್ನಿಯೂರಿನ ಧರ್ಮರಾಯ ಗುಡಿ ಸಮೂಹದ ಮಂಟಪದ ಕಂಬಗಳು ಮತ್ತು ಕೆಲ ಅರ್ಧಗಂಬಗಳು. ಇಟ್ಟಿಗೆಯ ಸಾತೇನಹಳ್ಳಿ ರಾಮೇಶ್ವರ ದೇವಾಲಯ, ಬನ್ನಿಯೂರಿನ ಭೀಮ ದೇವಾಲಯ, ಚಿಕ್ಕೇರೂರಿನ ಬಳಾರಮ ದೇವಾಲಯ ತಳಪಾಯ, ಹುಲಗೂರಿನ ಈಶ್ವರ ದೇವಾಲಯಗಳು ಸು.ಕ್ರಿ.ಶ. ೮-೧೦ ನೆಯ ಶತಮಾನದ್ದಾಗಿವೆ. ಚಿಕ್ಕೇರೂರ, ಮಂತ್ರೀಹಳ್ಳಿ, ಸಾತೇನಹಳ್ಳಿ, ಶಿಗ್ಗಾವ, ಬನ್ನಿಯೂರುಗಳಲ್ಲಿ ಅಪ್ರಕಟಿತ ಶಾಸನಗಳು ದೊರೆತಿದ್ದು ಅವುಗಳನ್ನು ಅಭ್ಯಾಸ ಮಾಡಲಾಗುತ್ತಿದೆ. ಅವುಗಳಲ್ಲಿ ಚಿಕ್ಕೇರೂರಿನ ಒಂದು ಶಾಸನ ಮಾತ್ರ ಸು. ಕ್ರಿ. ಶ. ೯ನೆಯ ಶತಮಾ

ನಮ್ಮ ಉಳಿದವು ಸು.ಕ್ರಿ.ಶ. ೧೦–೧೨ನೇಯ ಶತಮಾನ. ಇದರಿಂದಾಗಿ ಮುಖ್ಯವಾಗಿ ರಾಷ್ಟ್ರಕೂಟರ ಕಾಲದ ತಕ್ಕಮಟ್ಟಿನ ಈ ಭಾಗದ ಶಿಲ್ಪಜ್ಞಾನ ತಿಳಿಯಲು ಸಾಧ್ಯವಾಯಿತೆಂದರೆ ತಪ್ಪಾಗಲಾರದು

ಕೃತಜ್ಞತೆಗಳು :

ಈ ಅನ್ವೇಷಣೆಯನ್ನು ಕೈಕೊಳ್ಳಲು ಪರವಾನಿಗೆ ನೀಡಿದ ಡಾ. ಜಿ.ಕೆ. ನಾರಾಯಣರೆಡ್ಡಿ, ಕುಲಪತಿಗಳು ಮತ್ತು ಡಾ. ಪಿ. ಪಿ. ಬಿದಿಗೇರಿ, ಕುಲಸಚಿವರು, ಕ.ವಿ.ವಿ. ಧಾರವಾಡ, ಮತ್ತಿಹಳ್ಳಿ ಸೋಮೇಶ್ವರ ದೇವಾಲಯದ ಟ್ರಸ್ಟ್ ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ಮತ್ತು ಶ್ರೀ ಪಾಟೀಲ ಮತ್ತು ಕಾರ್ಯದರ್ಶಿ ಇವರು ನೀಡಿದ ಆಹ್ವಾನ: ಸಹಕಾರ ಮತ್ತು ಬ್ರಹ್ಮ. ವಿಷ್ಣು ಮತ್ತು ಮಹಿಷಾಸುರ ಮರ್ದಿನಿ ವಿಗ್ರಹಗಳನ್ನು ಕನ್ನಡ ಸಂಶೋಧನ ಸಂಸ್ಥೆಗೆ ನೀಡಿದ ಸಹಕಾರಕ್ಕೆ ಡಾ. ಅ. ಸುಂದರ (ನನ್ನ ಗುರುಗಳು) ನೀಡಿದಕೆಲ ಶಿಲ್ಪಗಳ ಮಾಹಿತಿಗೆ ಕೃತಜ್ಞತೆಗಳು.

ಆಧಾರ ಗ್ರಂಥಗಳು:

1 SII XVII No. 3 (ಶಾಸನ ದೊರೆತ ಗ್ರಾಮ ಚಿಕ್ಕಯಾದವ ಬಾಲು ಚಿಕ್ಕೆರೆಪ್ಪವೆಂದಿದೆ)
2 EI XXXII p. 317–24, 707 A.D.
3 KI–I 14, 15 etc
4 ARIE 1944 f 45 No. 21. 970 A,D.
5 ಶಾಸನ ಇತ್ತೀಚಿನ ನಮ್ಮ ಅನ್ವೇಷಣೆಯಲ್ಲಿ ಸಿಕ್ಕಿದೆ.
6 SII XX 12 7) KI–IV 3 8) K I I 13
7 ಅ. ಸುಂದರ : ೧೯೬೬, ಕ್ರಿಸ್ತಶಕ ಪ್ರಾರಂಭದ ಶಿವದೇವಾಲಯ, ಕರ್ನಾಟಕ ಭಾರತಿ, ಪು. ೯೫–೯೬ ಸಂ. ೮, ಸಂ. ೩. ಕ.ವಿ.ವಿ. ಧಾರವಾಡ
8 ಅ. ಸುಂದರ ; ೧೯೭೮ " ,,
9 ಈ ವಿಷಯವನ್ನು ಡಾ. ಅ. ಸುಂದರ ಅವರು ಒದಗಿಸಿದವರು
10 ೧೪). ೧೫) ಲೇಖಕರಿಗೆ ತಿಳಿದಿದ್ದು ಅನ್ವೇಷಣೆಯಲ್ಲಿ ಈ ಶಿಲ್ಪಗಳು ಮತ್ತು ಗುಡಗೇರಿಯ ಗೋಸಾಸನಕಲ್ಲಿನ ಶಾಸನ SII XX 32 ರಲ್ಲಿ ಗೋಸಾಸ ಹಾಗೂ ಸ್ತಂಭೋದ್ಧಾರ ಉಲ್ಲೇಖ ಪ್ರಕಟವಾಗಿದ್ದಿತು.
11 ಡಾ. ಉಷಾ ಬೆಂಡೆಯವರು ಈ ವಿಷಯ ಒದಗಿಸಿರುವರು
12 ಪ್ರೊ. ಡಿ. ಎಲ್. ನರಸಿಂಹಾಚಾರ್, ಶಬ್ದವಿಹಾರ, ಪು. ೨೬
13 ಈ ಲೇಖನದ ಪ್ರಬಂಧವನ್ನು ತುಮಕೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಸಮ್ಮೇಳನದಲ್ಲಿ ಮಂಡಿಸಲಾಯಿತು. (೧೯೯೦)

ಸೊಲ್ಲಾಪುರದ ಎರಡು ಕನ್ನಡ ಶಾಸನಗಳು

● ಆರ್. ಆರ್. ಜೋಶಿ

೧೧-೧೨ನೇ ಶತಮಾನದ ಎರಡು ಕನ್ನಡ ಶಾಸನಗಳು ಸೊಲ್ಲಾಪುರದ ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿ ಇತ್ತೀಚೆಗೆ ಶೋಧಿಸಲ್ಪಟ್ಟಿವೆ. ಎರಡು ಸಾಲುಗಳುಳ್ಳ ಈ ಶಾಸನಗಳು ಹೆಚ್ಚು ತ್ರುಟಿತವಾಗಿದ್ದರೂ ಮಹತ್ವದ್ದಾಗಿವೆ ಒಂದು ಶಾಸನ ಪ್ರಾಚೀನ ಸಂಪ್ರದಾಯವನ್ನು ಹೇಳಿದರೆ ಇನ್ನೊಂದು ಶಾಸನ ಶಿವಶರಣ ಶ್ರೀ ದೋಕಯ್ಯನ ವಚನದಿಂದ ಪ್ರಾರಂಭವಾಗುತ್ತದೆ

ಮೊದಲನೆಯ ಶಾಸನ

ಶಾಸನ ಪಾಠ

೧. ಸ್ವಸ್ತಿ ಶ್ರೀ ಮಹಾಲಕ್ಷ್ಮೀ ದೇವಿಯರಲ್ಲಿಗೆ ಬಳಿ ಬನ್ನ (ಬನ್ನಪ) … …
೨. ಸೋಮವಾರ ಮಾಲಾಗಾರ ಮುದ್ದಯ್ಯ ದೇವಿಯಬಗ್ಗೆ (ಮುದಗೊಂಡು) ಕೊ(ಟ್ಟರು) … …

ಶಾಸನ ಪಾಠದ ಅರ್ಥ

ಸೋಮವಾರದಾದು ಮಾಲಾಗಾರ ಮುದ್ದಯ್ಯ ಶ್ರೀ ಮಹಾಲಕ್ಷ್ಮೀ ದೇವಿಯ ಬಳಿಗೆ ಬನ್ನು ಮುದದಿಂದ (ಪ್ರೀತಿಯಿಂದ ಇಲ್ಲವೆ ಭಕ್ತಿಪೂರ್ವಕವಾಗಿ) ದಾನವನ್ನು ಕೊಟ್ಟನೆಂದು ತಿಳಿಸುತ್ತದೆ.

ಎರಡನೆಯ ಶಾಸನ

ಶಾಸನ ಪಾಠ

೧. ವಿಜಯಿತ ನೋಡಿರ್ದ್ದರ ಅಧಿಕ ಗಂಡರ ದೇವ ನಡುತ ವಿಜಯಮಾ 'ಭುಜಂಗದರಂ ಮಾರುತಲಿ………
೨. ಬ್ರಹ್ಮನೊ…ಸಭಿರಾ…ರಂಪು… ಜನಭಯಕರಂ -ದ- ಶಿಖರನೆಯ್ಯ ಘನೆ ಶ್ರೀ ದೋಕಯ್ಯ……

ಶಾಸನ ಅಧಿಕ ತ್ರುಟಿತವಾಗಿದ್ದರಿಂದ ಶಾಸನವನ್ನು ಅರ್ಥೈಸುವುದು ಕಷ್ಟ. ಬಹುಶಃ ಈ ಶಾಸನ ವಚನದಿಂದ ಪ್ರಾರಂಭವಾಗುತ್ತದೆ. ಕೊನೆಯಲ್ಲಿ ಉಲ್ಲೇಖಿತವಾದ ದೋಕಯ್ಯ ಎಂಬ ಶಿವಶರಣನಿಂದ ಈ ವಚನ ರಚಿಸಲ್ಪಟ್ಟಿರಬಹುದು.

ಇಲ್ಲಿ ಈ ಶಿವಶರಣನ ಜನಪ್ರಿಯತೆ ಕಾಣುತ್ತದೆ. ಈತನ ವಚನಗಳು ಪ್ರಸಿದ್ಧಿಯಲ್ಲಿದ್ದು ಶಾಸನ ಪ್ರಾರಂಭದಲ್ಲಿ ಪ್ರಾರ್ಥನೆಯಂತೆ ಉಪಯೋಗಿಸಲ್ಪಟ್ಟಿವೆ.

ಸಂಗಯ್ಯ ಅಂಕಿತ ನೀಲಾಂಬಿಕೆಯವರದಲ್ಲವೆ

ಪಿ. ಎಂ. ಗಿರಿರಾಜು

೧. ಸಂಗಯ್ಯ ವಚನಾಂಕಿತದ ಕರ್ತೃ ಬಸವರ ಧರ್ಮಪತ್ನಿ ನೀಲಾಂಬಿಕೆಯವರಲ್ಲ
೨. ಬಸವರಿಗೆ ಗಂಗಾಂಬಿಕೆ-ನೀಲಾಂಬಿಕೆಯರೆಂಬ ಇಬ್ಬರು ಧರ್ಮಪತ್ನಿಯರಿರಲಿಲ್ಲ.
೩. ಬಸವರ ಏಕೈಕ ಪತ್ನಿಯ ಅಧಿಕೃತ ! ಹೆಸರು 'ನೀಲಗಂಗಾ'
೪. ಲಕ್ಕಣ್ಣದಂಡೇಶನು "ಬಸವರಿಗೆ ಇಬ್ಬರು ಹೆಂಡತಿ"ಯ ಕಥೆಯನ್ನು ಕಟ್ಟಿದನು.
೫, ನೀಲಮ್ಮನು ಬಿಜ್ಜಳನ ತಂಗಿಯೆಂಬ ಲಕ್ಕಣದಂಡೇಶರ ಮಾತಿಗೆ ಐತಿಹಾಸಿಕ ಆಧಾರವಿಲ್ಲ !

ಮೇಲ್ಕಂಡ ಐದಂಶದ ವಾದವನ್ನು ಬಸವಪಥ ಲೇಖನದಲ್ಲಿ ದೇವೀರಪ್ಪನವರು ಸೃಷ್ಟಿಸಿದರು. ಅದರ ಔಚಿತ್ಯ ಸಾಂಗತ್ಯವನ್ನು ನಾವು ಅನುದ್ವೇಗಕರ ವಾಕ್ಯಗಳಲ್ಲಿ ಸತ್ಯವಾಗಿ ಪ್ರಿಯವಾಗಿ ಸ್ವಾಧ್ಯಾಯ ಅಭ್ಯಾಸಪೂರ್ವಕವಾಗಿ ವಾಙ್ಮಯತಪದವಾಗಿ ಪ್ರಶ್ನಿಸಿದೆವು ! ಜಾಣರಾದ ಬಸವಪಥ ಸಂಪಾದಕ ಮಂಡಲಿ ನಮ್ಮ ಪ್ರಶ್ನೆಯನ್ನು ಶ್ರೀ ದೇವೀರಪ್ಪನವರಿಗೆ ರವಾನಿಸಿ ಅವರ ಮಾರುತ್ತರವನ್ನು ಪಡೆದು ಉಭಯ ಬರಹಗಳನ್ನು ಬಸವಪಥ ಸಂಪುಟ ೮ ಸಂಚಿಕೆ ೬ ರಲ್ಲಿ ಪ್ರಕಟಿಸಿ ಹೋಲಿಸಿ ತೂಗಲು ಅವಕಾಶ ಕಲ್ಪಿಸಿ ಅಭಿನಂದನಾರ್ಹರಾಗಿದ್ದಾರೆ.

ಅಕಾರಣಚರಿತ್ರ ಶರಣ ಎಂಬ ಮಹಾವಾಕ್ಯ ವಚನಾಗಮದಲ್ಲಿ ಎದ್ದು ಕಾಣಿಸುತ್ತದೆ ! ವಚನಾಗಮದಲ್ಲಿ ವ್ಯಕ್ತಿಗತ ಸಂಗತಿಗಳಾಗಲಿ ಕಾಕುಘೋಷಿತ ಹೊತ್ತುಗಳೆಯುವ ಕಥಾಕಾಲಕ್ಷೇಪಗಳಾಗಲಿ ಇರುವುದಿಲ್ಲ. ಅವುಗಳು ಆತ್ಮ ಸಂಬೋಧನ – ಲೋಕ ಸಂಬೋಧನ – ದೇವಸಂಬೋಧನ ರೂಪಗಳಲ್ಲಿ ಶುದ್ಧಾಂಗವಾಗಿ ತತ್ತ್ವಚಿಂತನಗಳನ್ನೆ ಹಿಡಿಯುತ್ತವೆ. ಒಂದಾನೊಂದು ವಚನ ಯಾರಿಂದ ಹೇಳಲ್ಪಟ್ಟಿತು ಎಂಬುದು ನಮ್ಮ ಲೌಕಿಕ ಸೌಲಭ್ಯಕ್ಕಾಗಿಯೇ ಹೊರತು ಬೇರಲ್ಲ ! ವಚನದಲ್ಲಿ ಏನನ್ನು ಸಂದೇಶಿಸಲಾಗಿದೆ. ಎಂಬುದು ಮುಖ್ಯವೆ ಹೊರತು ಮಿಕ್ಕವ ರಾಮಾಯಣ ಮಹಾಭಾರತ ಕಥೆಗಳಿಗೆ ಪ್ರಸಕ್ತಿಯಿಲ್ಲ. ಉದಾಹರಣೆಗೆ ಋಗ್ವೇದದಲ್ಲಿ ಐದುಸಾವಿರ ಚಿಲ್ಲರೆ ಮಂತ್ರಗಳು ಸೂಕ್ತಗಳಲ್ಲಿವೆ. ಸೂಕ್ತಾವಳಿಯಲ್ಲಿ ಮಂತ್ರ ಋಷಿಗಳನ್ನು ಹೆಸರಿಸಲಾದರೂ ಮಂತ್ರವಿಮರ್ಶೆಯೇ ಕರ್ತವ್ಯ ಪ್ರಧಾನವೆ ಹೊರತಾಗಿ ಋಷಿ ಸಂಗತಿಯಲ್ಲ. ಇದು ಆರೋಗ್ಯಕರ ಪದ್ಧತಿಯಾಗಿದೆ ! ತದನ್ವಯದಲ್ಲಿ ನಾವು ವಚನ ತತ್ತ್ವಗಳತ್ತ ಚಿಂತನ ಶೀಲರಾಗಬೇಕೆ ಹೊರತು ಮತ್ತ ಬಿಡಿಯಾಗಬಾರದು !

ಈ ದೃಷ್ಟಿಯಿಂದ ಆಸಿಕೆಗಳನ್ನು ನಾವು ತಾತ್ತ್ವಿಕವಾಗಿ ಲಕ್ಷ್ಯಿಸಬೇಕಿಲ್ಲ ಹಾಗಿದ್ದರೂ ಜನಸಾಮಾನ್ಯರಲ್ಲಿ ಏನೇನೋ ಗೊಂದಲಗಳನ್ನು ಹುಟ್ಟಿಹಾಕುವ ಪ್ರಯತ್ನ ನಡೆದಾಗ ಅನಿವಾರ್ಯವಾಗಿ ಸಿದ್ಧಾಂತಯೋಗ್ಯವಲ್ಲದಿದ್ದರೂ ವಿಮರ್ಶಿಸಬೇಕಾಗುತ್ತದೆ:

ಪ್ರಬಲ ದೃಢಸಾಕ್ಷ್ಯಾಧಾರಗಳಿಂದ ತದ್ಭಿನ್ನವಾದ ಅಭಿಪ್ರಾಯಗಳನ್ನು ಸಾದರ ಪಡಿಸುವಲ್ಲಿ ಯಾರಿಗೂ ಆತಂಕವಿಲ್ಲ. ಎಂಬುದನ್ನು ಯಾರೂ ಮರೆಯಲಾಗದು. ಮಾರುತ್ತರವನ್ನು ವಿಶ್ಲೇಷಿಸುವುದು ಅನಿವಾರ್ಯವಾಗಿದೆ.

೧. ಸಂಗಯ್ಯ ವಚನಾಂಕಿತದ ಕರ್ತೃ ಯಾರು ? ಎಂಬ ಪ್ರಶ್ನೆಯು ಒಂದಾನೊಂದು ಅದೃಢವಾದದ ವಸ್ತುನಿಷ್ಠವಿಮರ್ಶೆಯೇ ಹೊರತು ಯಾರ ಬಗೆಗಿನ 'ಒಳ್ಳೆಯ ಕೆಟ್ಟ' ಮಾತುಗಳಲ್ಲ. !

೨. ಶಾಂತಲಿಂಗ ದೇಶಿಕರ ಕುಲಗೋತ್ರ ವಿದ್ಯಾಪ್ರವರಗಳನ್ನು ಯಥಾವತ್ ಉಲ್ಲೇಖಿಸದೆ ಹೋಗಿದ್ದಲ್ಲಿ ಓದುಗರು ಮಾಡಿದಂತೆ ನಿರಾಕರಣವೂ ಬರಿ ಊಹಾಪೋಹದ ಗೊಂದಲದ ಆಸಿಕೆ ಎಂದು ತಪ್ಪಾಗಿ ಭಾವಿಸಲು ಅವಕಾಶವಾಗುತ್ತಿತ್ತು.

೩. ಜಂಗಮ ಪ್ರಾಣಿಯೆಂದೆ ಲೋಕವಿಖ್ಯಾತರಾದ ಬಸವರು ಕ್ರಿಯಾವಿಶ್ರಾಂತಿಗೆ ಜಂಗಮಸಂಗೈಕ್ಯಕ್ಕೆಂದೆ ಕಪ್ಪಡಿಗೆ ತೆರಳಿದರು. ಬಸವರ ಹಿರಿಯ ಧರ್ಮಪತ್ನಿ ನೀಲಾಂಬಿಕೆ ತಾಯಿಯು ಲಿಂಗಪ್ರಾಣಿಯಾಗಿ ಮಾರ್ಗಕ್ರಿಯಾ ನಿಷ್ಠರಾದ ನಿಮಿತ್ತ ಉದ್ದೇಶ ಗಮನನಿರಸನದಲ್ಲಿ ಕಪ್ಪಡಿಗೆ ಹೋಗಲು ನಿರಾಕರಿಸಿ ಸ್ವೇಷ್ಟ ಲಿಂಗದಲ್ಲಿ ಐಕ್ಯರಾದರು ಬಸವರ ಮತ್ತೊಬ್ಬ ಧರ್ಮ ಪತ್ನಿ ಗಂಗಾಂಬಿಕೆ ತಾಯಿಯು ಜಂಗಮ ಪ್ರಾಣಿತ್ವ–ಲಿಂಗ ಪ್ರಾಣಿತ್ವಕ್ಕಿಂತ ಮಿಗಿಲಾಗಿ ಜ್ಞಾನಾಶ್ರಿತೆಯಾದ ನಿಮಿತ್ತ ಗುರುಜ್ಞಾನಾಶ್ರಯದಲ್ಲಿ ಬಯಲಾದರೂ ಎನ್ನುವ ಶಾಂತಲಿಂಗ ದೇಶಿಕರ ಇತಿಹಾಸ ಕಥನದಲ್ಲಿ ಇಲ್ಲದ ಸಲ್ಲದ ಊಹಾಪೋಹವೇನೂ ಇಲ್ಲ. ಗುರು–ಲಿಂಗ–ಜಂಗಮ ಪ್ರಾಣಿತ್ವಗಳು ಅನುಕ್ರಮವಾಗಿ ಅರಿವು–ಆಚಾರ–ಅನುಭಾವಗಳ ಆಶ್ರಯವನ್ನು ಸಮುಚಿತವಾಗಿ ಸೂಚಿಸುತ್ತವೆ. ಇದಕ್ಕೆ ಪ್ರತಿಬಂಧಕವೇನು ?

೪. ಮೇಲಿನ ಕೇವಲ ಪ್ರಚಾರದಿಂದ ಕೀರ್ತಿವಾರ್ತೆಯನ್ನು ಬಯಸುವ ಇಂದಿನ ಮಹಾನುಭಾವರಿಗಿಂತ ಹಲವು ದಶಕಗಳ ಹಿಂದೆ ಇದ್ದ ಧರ್ಮನಿಷ್ಠರಾದ ಓರ್ವ ವಿರಕ್ತನ ಮಾತನ್ನು ಮಿಗಿಲಾಗಿ ನಂಬಬಹುದು ಎಂಬಲ್ಲಿ ಸಂಶಯವೇಕೆ? ಇನ್ನೂ ಹಳಬರಾದ ಪುರಾಣಿಕಾರರ 'ಪುರಾಣೋ ಜಲ್ಪನಕಥಾ'ಗಳಲ್ಲಿ ರುಚಿಯಿದ್ದವರು ಅವಲಂಬಿಸಲಿ. ಪ್ರತಿಬಂಧಕವೇನೂ ಇಲ್ಲ.!

೫. ವಚನಕಾರ್ತಿಯರು ಮಾತ್ರ ವಚನಕಾರ ಗಂಡಂದಿರ ನಾಮ–ಅಂಕಿತಗಳನ್ನು ತಮ್ಮ ಅಂಕಿತದಲ್ಲಿ ಜೋಡಿಸಿಕೊಂಡರೆಂಬ ಊಹಾಪೋಹ ಅತಿರೇಕವೆ! ಕೆಲವರು ವಚನಕಾರರು ತಮ್ಮ ಆದರ್ಶರಾದ ಶರಣರ ನಾಮ–ಅಂಕಿತಗಳನ್ನು ವಚನಾಂಕಿತದಲ್ಲಿ ಅಳವಡಿಸಿದಂತೆ ಕೆಲವರು ವಚನಕಾರ್ತಿಯರೂ ಅಳವಡಿಸಿದ್ದಾರೆ. ಹಾಗೆಯೇ ಮಾಡ

ಬೇಕೆಂಬ ಕಡ್ಡಾಯ ನಿರ್ಬಂಧವೇನೂ ಇಲ್ಲವೆಂಬುದು ಪುರಾವತ್ತರಕ್ಕೆ ಮೀರಿದ ವಚನ ಕಾರ್ತಿಯರ ಅಂಕಿತಗಳ ಅವಲೋಕನದಿಂದ ತಿಳಿದುಬರುತ್ತದೆ. ಇದಕ್ಕೆ ಆತಿವಾದ ವೇಕೆ? ನೀಲಾಂಬಿಕೆ ತಾಯಿಯ ಅಂಕಿತದಲ್ಲಿ ಬಸವ ನಾಮ-ಅಂಕಿತಗಳ ಸೇರುವೆಯಿಲ್ಲವೆಂಬ ವಾದ ಆಕ್ಷೇಪದಲ್ಲಿ ತೂಕವಿಲ್ಲ! ನೀಲಾಂಬಿಕೆ ತಾಯಿಯ 'ಸಂಗಯ್ಯ' ಅಂಕಿತದ ೧೨೫ ವಚನಗಳಲ್ಲಿ ೩೮೦ ಸಲ ಬಸವಸ್ಮರಣ ಬಂದುದಕ್ಕೆ ಪ್ರತಿಬಂಧಕ ಆಪತ್ತೇನು? ಅದನ್ನು ಎಣಿಸಿದ್ದೆ ಪ್ರಯೋಜನ!

೬. ನೀಲಮ್ಮನದೆನ್ನಲಾದ ವಚನಶಾಸ್ತ್ರ ಸಾರೋಕ್ತ ಬಸವಪ್ರಿಯಕೂಡಲ ಸಂಗಮದೇವಾಂಕಿತದ ಒಂದು ವಚನ ಯಾವುದು? ಲಿಂ॥ ಫ। ಗು। ಹಳಕಟ್ಟಿಯವರ ಮೂಲಗ್ರಂಥ ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧದ ಪುಟ ೨೯೨ರ ೧೩೮ನೇಯ ನಮೂದಿನಲ್ಲಿ ಸ್ವಯಂ ಹಳಕಟ್ಟಿಯವರೆ ಆ ಅಂಕಿತದ ವಚನವನ್ನು ಬಳಸಿಕೊಂಡಿಲ್ಲವೆಂದು ನಕ್ಷತ್ರಚುಕ್ಕೆಯನ್ನು ಬಳಸದೆ ಸೂಚಿಸಿದ್ದಾರೆ! ಮಾರುತ್ತರಕಾರರು ಅದನ್ನು ನೋಡಿದಂತಿಲ್ಲ! ಇನ್ನು ಗದುಗು ಶ್ರೀಮಠದ ಪರಿಷ್ಕೃತವಚನ ಶಾಸ್ತ್ರಸಾರದ ಪುಟ ೭೨೪ರಲ್ಲಿ ೬೦ನೆಯ ನಮೂದಿನ ಬಸವಪ್ರಿಯ ಕೂಡಲಸಂಗಮ ದೇವಾಂಕಿತದ ಒಂದು ವಚನವೆಂದು ೫೪೩ ನೆಯ ವಚನವನ್ನು ಸಾರಲಾಗಿದ್ದರೂ ಆ ವಚನ ಹಾಗೂ ಮೂಲಗ್ರಂಥದ ಸಂವಾದಿ ವಚನ (ವಚನಶಾಸ್ತ್ರ ಸಾರ ಭಾಗ ೧ ಪೂರ್ವಾರ್ಧ ಪುಟ ೧೪೪ರಲ್ಲಿ ೧೧ನೆಯ ವಚನ) ಬಸವಪ್ರಿಯಕೂಡಲ ಚೆನ್ನಸಂಗಮದೇವ ಅಂಕಿತವನ್ನು ಹೊಂದಿದೆ! ಇದು ಹಡಪದ ಅಪ್ಪಣ್ಣನವರ ವಚನವಾಗಿದೆ! ಮಾರುತ್ತರಕಾರರು ಕೃಪೆಯಿಟ್ಟು ಬಸವಪ್ರಿಯ ಕೂಡಲ ಸಂಗಮ ದೇವ ಅಂಕಿತದ ವಚನಶಾಸ್ತ್ರ ಸಾರೋಕ್ತ ವಚನವನ್ನು ನಿರ್ದೇಶಿಸಬಲ್ಲರೆ? ಅಧ್ಯಯನದ ಕೊರತೆಯಿಂದ ಇಂತಹ ಗೊಂದಲಗಳು ಸಹಜವೆ!

೭. ಮಾರುತ್ತರಕಾರರು ಮತ್ತೆ ಉಲ್ಲೇಖಿಸಿದ 'ಸಂಗಯ್ಯ' ಅಂಕಿತದ ೧೨೪. ೧೨೫ನೇಯ ವಚನಗಳಲ್ಲಿ ಅವು ನೀಲಲೋಚನೆ ತಾಯಿಯವರದಲ್ಲ ಎಂದು ಊಹಾ ಪೋಹ ಮಾಡಲು ಯಾವ ಸಾಮಗ್ರಿಯೂ ಇಲ್ಲ! ಒಂದು ವಚನದಲ್ಲಿ ಭಿನ್ನಭಿನ್ನ ಕಾಲ ದೇಶಗಳಲ್ಲಿದ್ದ ದೇಶಕಾಲಾತೀತ ಮಹಾನುಭಾವರನ್ನು ಏಕಪಂಕ್ತಿಯಲ್ಲಿ ಸ್ತುತಿಸಿದರೆ ನಮ್ಮ ಗಂಟೇನು ಹೋಯಿತು! ಸ್ವಯಂ ಬಸವರೂ ತಮ್ಮ ವಚನದಲ್ಲಿ ಪೂರ್ವದ ಶೈವಾಚಾರ್ಯರುಗಳನ್ನು ಏಕಪಂಕ್ತಿಯಲ್ಲಿ ಸ್ತುತಿಸಿದ್ದಾರೆ! ಇದಕ್ಕೆ ಆಕ್ಷೇಪವೇಕೆ?

೮ ಸಂಗಯ್ಯ ಅಂಕಿತದ ೧೨೫ ನೆಯ ವಚನ ನಾನು ನಿಮ್ಮ ವಕ್ಕಲವಯ್ಯ ಎಂಬುದು ಎಳಮಲೆಯ ಗುರುಶಾಂತದೇವರ. "ಸೇರಿಸಿದ ಮಿಶ್ರಸ್ತೋತ್ರ ವಚನಗಳು" ಕೃತಿಯಿಂದ ಆಯ್ದುದ್ದಾಗಿದೆ. ಈ ವಚನ ಪ್ರಕ್ಷಿಪ್ತವೆಂತಲೂ ಅದನ್ನು ಎಳಮಲೆಯ ಗುರುಶಾಂತದೇವರೆ ಮೋಸದಿಂದ 'ಸಂಗಯ್ಯ' ಅಂಕಿತವಿಟ್ಟು ಸೇರಿದರು ಎಂದು ಅಪಾದಿಸುವ ಮಾರುತ್ತರಕಾರರು ಆ ಆಪಾದನೆಗೆ ಪ್ರಬಲವಾದ ಕಾರಣ ಆಧಾರ ಪ್ರಮಾಣಗಳನ್ನು ನೀಡದಿರುವುದರಿಂದ ಈ ಆಪಾದನೆಯನ್ನು ಮಾರುತ್ತರಕಾರರ ಸ್ವಂತ ಅನಿಸಿಕೆಯೆಂದು ತಳ್ಳಿಹಾಕಬೇಕಾಗುತ್ತದೆ. ಸುಮ್ಮನೆ ಗುಮ್ಮನೆ ಬೋಟಾ ಎಂದು

ಕೂಗಿದರೆ ಪ್ರಯೋಜನವಿಲ್ಲ ! ಸಾಧಾರ ಸಪ್ರಮಾಣವಾಗಿ ಸಾಧಿಸಬೇಕಾಗುತ್ತದೆ ! ಇನ್ನು ಪ್ರಕ್ಷಿಪ್ತ ವಚನಗಳು ಹೇಗೆ ಬೆಳೆಯುತ್ತವೆ ಅವನ್ನು ಹೇಗೆ ಬೇಸ ಬೇಕೆಂಬುವನ್ನು ಮಾರುತ್ತರಕಾರರು ಚೆನ್ನಾಗಿ ತಿಳಿದಿರಬಹುದು । ಹಿಂದೆ ಕದಳಿ ವನ ಸಂಶೋಧನೆಯ ನೆಪ ಹಿಡಿದು ಶ್ರೀಶೈಲದ ಕಾಡಿನಲ್ಲಿ ನಿಂತು ಚನ್ನಮಲ್ಲಿಕಾರ್ಜುನ ಅಂಕಿತದಲ್ಲಿ ಖೋಟಾ ವಚನಗಳನ್ನು ನೆಯ್ದು ಮಹಾದೇವಿಯಕ್ಕನ ತಲೆಗೆ ಕಟ್ಟಿ ಪ್ರಕಟಿಸಿ ಆಧಾರ ಪ್ರಮಾಣ ಆಕಾರ ಕೇಳಿದಾಗ ಸಿಕ್ಕಿಬಿದ್ದು ಮುಖಭಂಗಿತರಾದ ಮಹಾನುಭಾವರು ಇವನ್ನು ಚೆನ್ನಾಗಿ ಬಲ್ಲರು !

೯ ಬಸವರಿಗೆ ನೀಲಾಂಬಿಕೆ ಗಂಗಾಂಬಿಕೆಯರೆಂಬ ಇಬ್ಬರ ಧರ್ಮಪತ್ನಿಯರಿದ್ದರೆಂದು ನಂಬಲು ಸಾಧ್ಯವಿಲ್ಲವೆಂದು ಹಿಂದೆ ಮಾರುತ್ತರಕಾರರು ಕೊಟ್ಟ ಕಾರಣಗಳು ಪ್ರಬಲದೃಢ ಸಾಕ್ಷಾಧಾರವೆಂದೆನ್ನಿಸದೆ ಬರಿ ಸ್ವಂತ ಅನಿಸಿಕೆಗಳು ಮಾತ್ರವಾಗಿವೆ !

೧೦ ನೀಲಗಂಗಮ್ಮ ಎಂಬ ಶಬ್ದವು ಕೇವಲ ಕೃತಕ ಸೃಷ್ಟಿಮಾತ್ರವಾಗಿದೆ. ನೀಲಗಂಗಮ್ಮನಿಂದಲೇ ನೀಲಮ್ಮ ಗಂಗಮ್ಮ ಆಯಿತೆಂಬುದು ದೇವಿರಪ್ಪನವರಿಂದಲೆ ದೇವಪ್ಪ ಈರಪ್ಪ ಆಯಿತೆಂಬುವ ಅತಿಮಾನವಂತೆ ನಿರರ್ಥಕವಾಗುತ್ತದೆ. ! ವೀರಶೈವ ಪ್ರಾಚೀನ ವಾಙ್ಮಯದಲ್ಲಿ ಬಸವರ ಪತ್ನಿ ನೀಲಗಂಗಮ್ಮ ಎನ್ನುವ ಮಾತನ್ನು ಒಂದೇ ಒಂದು ಕಡೆ ತೋರಿಸಲು ಮಾರುತ್ತರಕಾರರಿಗೆ ಆದೀತೆ ? ಇಲ್ಲ ! ಇದಕ್ಕೆ ಸಂಬಂಧ ವಿಲ್ಲದ ಶಾಸ್ತ್ರ ವಾಕ್ಯದ ಶಿಫಾರಸ್ಸು ಅನಪೇಕ್ಷಿತ !

೧೧ ಸೋಮನಾಥನು ಹೇಳುವ ಗಂಗಾದೇವಿಯು ನೀಲಗಂಗಾದೇವಿಯೇ ಎನ್ನುವ ಮಾತು 'ಬಿದ್ದು ಹೋಗುವ ಭಾಷ್ಯ' ಎನ್ನಿಸುತ್ತದೆ !

೧೨. ನೀಲಗಂಗಾ ಶಬ್ದವೇ ಕಪೋಲಕಲ್ಪಿತವಾಗಿರುವಾಗ ಅದರ ಅರ್ಥವನ್ನು ಸಂಬಂಧಿಸದ ವಿಜ್ಞಾನಪಂಕ್ತಿಗಳಿಂದ ಸಾಧಿಸುವ ಪ್ರಯತ್ನ ಹಾಸ್ಯಾಸ್ಪದ ! ಬಂಜೆಯ ಮಗ ಮೊದಲ ಕೊಂಬಿಗೆ ಆಕಾಶ ಪುಷ್ಪವನ್ನು ಅಲಂಕರಿಸಿದಂತೆ ಅತ್ಯಂತ ವಿಚಿತ್ರ ಎನ್ನಿಸುತ್ತದೆ.

೧೩. 'ಬಸವಣ್ಣನಿಗೆ ಇಬ್ಬರು ಹೆಂಡತಿಯರು ಗಂಗಮ್ಮ ನೀಲಮ್ಮ' ಇದ್ದರೆಂದು ಲಕ್ಕಣ್ಣನೆ ಕಥೆ ಕಟ್ಟಿರಬೇಕು ಎನ್ನುವ ಬಾಯಿಯೆ ೧೯೬೦ರಲ್ಲಿ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯ ಪ್ರಸ್ತಾವನೆಯಲ್ಲಿ ಪಲುಕಿದ ಮಾತುಗಳು ಚಿಂತನಾರ್ಹವಾಗಿವೆ.

"—ಇಷ್ಟೇ ಅಲ್ಲ! ಈ ಮಹಾರಾಯ (ಲಕ್ಕಣ್ಣ ದಂಡೇಶ!) ವರ್ತಮಾನ ಪತ್ರಗಳ ಸುಳ್ಳುಸುಳಿವೂ ಇಲ್ಲದ, ಅಂಚೆಸಂಚಾರ ಸಾರಿಗೆ ವ್ಯವಸ್ಥೆಗಳು ಇಂದಿನಷ್ಟು ತೃಪ್ತಿಕರ ವಾಗಿಲ್ಲದ ಆ ಕಾಲದಲ್ಲಿ ನೂತನಗಣಂಗಳ ಪಟ್ಟಿಯನ್ನು ಹೇಗೆ ಸಿದ್ಧಪಡಿಸಿದ ! ನೂರಾರು ಶಿವಶರಣರು ಅವರಲ್ಲಿ ಕನ್ನಡ ನಾಡಿನವರಿದ್ದಾರೆ. ಆಂಧ್ರದವರಿದ್ದಾರೆ, ತಮಿಳು ದೇಶದವರಿದ್ದಾರೆ, ಒಡ್ಡಿಯ ದೇಶದವರು, ಕೇರಳದವರು, ಗುಜರಾತಿನವರು, ಮಹಾರಾಷ್ಟ್ರೀಯರು ಈ ನೂತನ ಗಣಗಳ ಸುದೀರ್ಘವಾದ ಪಟ್ಟಿಯು ಮೂವತ್ತೆಂಟನೆಯ ಸಂಧಿಯ ೨೫೦ ವಾರ್ಧಕಗಳಲ್ಲಿ ಅಸಾಧಾರಣ ಜಾಣ್ಮೆಯಿಂದ. ಓದುಗರ ಮನ

ಒಪ್ಪುವಂತೆ, ಕಿವಿಗೆ ಹಿತವಾಗುವಂತೆ ಹೆಣೆಯಲ್ಪಟ್ಟಿದೆ. ಹಲವು ಪ್ರಾಂತಗಳಲ್ಲಿ ಬಾಳಿ ಬೆಳಗಿ ಜನಜೀವನವನ್ನು ಅವರವರ ಪ್ರಾಂತ್ಯವನ್ನು ಹಸನುಗೊಳಿಸಿ ಪಾವನಗೊಳಿಸಿದ ಆ ಶರಣಶ್ರೇಷ್ಠರೆಲ್ಲರ ನಾಮನಿರ್ದೇಶನವಷ್ಟೆ ಇಲ್ಲ ಅಲ್ಲಿ! ಎಲ್ಲ ಶರಣರ ಮಹಾತ್ಮ್ಯವೂ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿಲ್ಲವಾದರೂ ಪ್ರತಿಯೊಬ್ಬ ಶರಣನ ಊರು ಹೆಸರು ತಪ್ಪದೆ ಹೇಳಲ್ಪಟ್ಟಿದೆ! ಕೆಲವು ಗ್ರಾಮಗಳಲ್ಲಿನ ಶಿವಶರಣರ ಸಮೂಹ ದೊಡ್ಡದಾಗಿತ್ತೊ, ಅಲ್ಲಿ ಶರಣರ ಹೆಸರುಗಳು ಗೊತ್ತಾಗದಿದ್ದುದರಿಂದಲೊ ಆ ಗ್ರಾಮದ ಹೆಸರನ್ನು ಮಾತ್ರ ಹೇಳಿ ಅಲ್ಲಿಯ ಭಕ್ತರ ಸುಚರಣಾಂಬುಜಕ್ಕೆ ಶರಣು ಎಂದಿದ್ದಾನೆ." ಹೀಗೆಲ್ಲ ಅಲ್ಲಿ ಹೊಗಳಿದ ದೇವಿರಪ್ಪನವರು ಇಲ್ಲಿ ಲಕ್ಕಣ್ಣನನ್ನು ಕಟ್ಟು ಕಥೆಗಾರ ಎನ್ನುವುದು ಯಾವ ಸೀಮೆಯ ನ್ಯಾಯ! ಅರ್ಧ ಶತಮಾನ ಇಡೀ ದಕ್ಷಿಣ ಇಂಡಿಯಾವನ್ನೇ ದಂಡ ಶಾಸನದಿಂದ ಶಾಸಿಸಿ ೧೭ ಶಾಸನಗಳಿಗೆ ಕಾರಣನಾದವನೂ ಸಿಂಹಳಾದಿ ದ್ವೀಪಾಂತರಗಳನ್ನೂ ಗೆದ್ದು ದಕ್ಷಿಣ ಸಮುದ್ರಾಧಿಪತಿಯೆಂದು ಬಿರುದು ಹೊತ್ತವನೂ, ಮಹಾ ಭಕ್ತಶ್ರೇಷ್ಠನೂ ಆದ ಲಕ್ಕಣದಂಡೇಶರನ್ನು ಶ್ರೀ ದೇವಿರಪ್ಪನವರು ಸದರವಾಗಿ ಕಥೆ ಕಟ್ಟುವವನು ಎಂದ ಕಾರಣವೇನು? ನಿಜ! ಲಕ್ಕಣದಂಡೇಶ ಶಿವತತ್ತ್ವ ಚಿಂತಾಮಣಿಯಲ್ಲಿ ಬಸವಾದಿ ಪ್ರಮಥರನ್ನು ಮೇರೆ ಮೀರಿ ಹೊಗಳಿಯೂ ದೀಕ್ಷಾ ಪ್ರಕರಣದಲ್ಲಿ ಮರುಳ ಸಿದ್ಧನನ್ನು ಉಲ್ಲೇಖಿಸಿಲ್ಲ! ನಾಲ್ಕು ಜನ ಆಚಾರ್ಯರ ಹೆಸರು ಲಕ್ಕಣ ದಂಡೇಶನ ಕಾಲದಲ್ಲಿ ಇನ್ನೂ ತಯಾರಾಗಿರಲಿಲ್ಲ! ಮೂರು ಮನೆಯ ಕುಗ್ರಾಮದ ಕೀಳುಕುಲ ಕಸುಬಿನ ಜಡಭಕ್ತರ ಪಾದಕ್ಕೆ ಶರಣು ಎನ್ನುವ ಈ ಲಕ್ಕಣ್ಣ ಮರುಳಸಿದ್ಧನನ್ನು ಉಲ್ಲೇಖಿಸಲಿಲ್ಲ! ಪಾರುತ್ತರಕಾರರು ಮುಂದೊಂದು ದಿನ ಲಕ್ಕಣ್ಣನ ಶಿವತತ್ತ್ವ ಚಿಂತಾಮಣಿಯ ೩೯ನೆಯ ಸಂಧಿಯು ವಿಶೇಷವಾಗಿಯೂ ಇಡೀ ಗ್ರಂಥ ಸಾಮಾನ್ಯವಾಗಿಯೂ ಲಕ್ಕಣ್ಣನ ಠಕ್ಕು ಕಥೆಯೆಂದು ಘೋಷಿಸಿದರೂ ಆಶ್ಚರ್ಯವಿಲ್ಲ!

ಶ್ರೀ ಹಳಕಟ್ಟಿಯವರು- 'ನವಕರ್ನಾಟಕ' ವಾರಪತ್ರಿಕೆ
(ಸಮೂಹ ಸಂವಹನ ಮಾಧ್ಯಮವಾಗಿ)

● ದೇವೇಂದ್ರಕುಮಾರ ಹಕಾರಿ

ಭಾರತೀಯ ಪತ್ರಿಕೋದ್ಯಮ ೧೯೯೦ರ ಈ ದಶಕದಲ್ಲಿ ತುಂಬಿ ವ್ಯಾಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ದಿನಪತ್ರಿಕೆ, ವಾರ, ಪಾಕ್ಷಿಕ, ಮಾಸಿಕ, ವಾರ್ಷಿಕದ ವರೆಗೆ ಹರಹುಪಡೆದು 'ನಾಲ್ಕನೆಯ ಎಸ್ಟೇಟ್' ಎನ್ನುವ ಗರಿಯಲ್ಲಿ ಒಂದು ಅತ್ಯಂತ ಪ್ರಭಾವಶಾಲಿ ಸಮೂಹ ಸಂವಹನ ಮಾಧ್ಯಮವಾಗಿದೆ ಮತ್ತು ಅದು ಒಂದು ಉದ್ಯಮವಾಗಿ ರೂಪುಗೊಂಡು ವಿವಿಧ ಪ್ರದೇಶ, ಭಾಷೆಗಳ ಜನಸಮೂಹಕ್ಕೆ ಅಗತ್ಯವಾದ ಎಲ್ಲ ಬಗೆಯ ಸುದ್ದಿ ವಿಚಾರಗಳಿಗೆ ಅಭಿಪ್ರಾಯಗಳನ್ನು ಸಂವಹನಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ವೃತ್ತಪತ್ರಿಕಾರಂಗದ ಈ ಬೆಳವಣಿಗೆಗೆ ಸುಮಾರು ಎರಡು ಶತಮಾನಗಳ ಚರಿತ್ರೆಯಿದ್ದು ಅದು ವಿವಿಧ ಘಟ್ಟಗಳನ್ನು ದಾಟಿ, ಬಂದ ಅಡ್ಡಿ ಆತಂಕಗಳನ್ನು ಎದುರಿಸಿ ಮುನ್ನಡೆದಿರುವುದು ಗಮನಾರ್ಹ.

೧. ಕ್ರಿ. ಶ. ೧೭೮೦ರ ಜನವರಿ ೨೯ರಂದು ಕಲಕತ್ತಾದಲ್ಲಿ ಮುದ್ರಣಗೊಂಡು ಪ್ರಕಟವಾದ 'ದಿ ಬೆಂಗಾಲ್ ಗೆಜೆಟ್' ಅಥವಾ 'ದಿ ಕಲ್ಕತ್ತಾ ಜನರಲ್ ಅಡ್ವರ್ಟೈಜರ್' ಭಾರತದಲ್ಲಿ ಆರಂಭವಾದ ಪ್ರಥಮ ವೃತ್ತಪತ್ರಿಕೆ. ಇದರ ಸಂಪಾದಕ ಜೇಮ್ಸ್ ಅಗಸ್ಟಸ್ ಹಿಕ್ಕಿ. ಇಂಗ್ಲೀಷ ಭಾಷೆಯ ಈ ಪತ್ರಿಕೆ ಅಂದಿನ ರಾಜಕೀಯ, ವ್ಯಾಪಾರ, ವಾಣಿಜ್ಯ ಮತ್ತು ಇತರ ವ್ಯಕ್ತಿಗತವಾದ ಸುದ್ದಿ ಸಂಗತಿಗಳನ್ನು ಪ್ರಕಟಿಸುತ್ತ ಬಂದಿತು. ಈಸ್ಟ್ ಇಂಡಿಯಾ ಕಂಪನಿಯ ಸಾಮ್ರಾಜ್ಯಶಾಹಿ ಧೋರಣೆಗಳನ್ನು ವಿರೋಧಿಸುತ್ತ ಬಂದ, ಸ್ವತಂತ್ರ ಮನೋಭಾವದ ಅಗಸ್ಟಸ್ ಹಿಕ್ಕಿ ಕಂಪನಿಯ ಕಣ್ಣುರಿಪ್ಪಿಗೆ ಒಳಗಾಗಿ ಅನೇಕ ತೊಂದರೆಗಳನ್ನು ಅನುಭವಿಸಿದ. ಛಲವಾದಿ, ಜಗ್ಗದ ಹಿಕ್ಕಿ ಮಾನವನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ.

ಜನರನ್ನು ಸಂಘಟಿಸಿ, ವಿವಿಧ ಬಗೆಯ ಸರಿಯಾದ ಅಭಿಪ್ರಾಯಗಳನ್ನು ಜನತೆಗೆ ಸಂವಹನಗೊಳಿಸುವ ಸಂಘಟನಾ ಸ್ವಾತಂತ್ರ್ಯ, ಭಾಷಾ ಸ್ವಾತಂತ್ರ್ಯ, ಎಲ್ಲರಿಗೂ ದೊರೆಯಬೇಕಾದ ಶಿಕ್ಷಣದ ಅಗತ್ಯತೆ ಸಾಮಾಜಿಕ ಧಾರ್ಮಿಕ ರಂಗದಲ್ಲಿ ತನಗೆ ತೋರಿದ ಸತ್ಯವನ್ನು ನಿರ್ಭಯವಾಗಿ ಬಿಚ್ಚಿಹೇಳುವ ವ್ಯಕ್ತಿಸ್ವಾತಂತ್ರ್ಯ, ಮುಂತಾದ ವಿಷಯಗಳನ್ನು ಅಗಸ್ಟಸ್ ಹಿಕ್ಕಿ ನಿರ್ಭೀತಿಯಿಂದ ತನ್ನ ಪತ್ರಿಕೆಯಲ್ಲಿ ಬಲವಾಗಿ ಪ್ರತಿಪಾದಿಸಿದ. ಕಂಪನಿ ಸರಕಾರದ ಜನವಿರೋಧಿ ಧೋರಣೆಗಳ ಖಂಡನೆ, ಬ್ರಿಟಿಷ್ ಅಧಿಕಾರಿಗಳ ನಡವಳಿಕೆಯ ಟೀಕೆ ಸಹ ಈ ಪತ್ರಿಕೆಯ ಅಂಕಣಗಳಲ್ಲಿ ಪ್ರಕಟಗೊಂಡವು. ವಾರನ್ ಹೆಸ್ಟಿಂಗ್ಸ್ ಮುಂತಾದ

ಉನ್ನತಾಧಿಕಾರಿಗಳ ಕ್ರೌರ್ಯಕ್ಕೆ ಸಿಕ್ಕಿ ತುತ್ತಾದ. ಯಾವುದಕ್ಕೂ ಸೊಪ್ಪುಹಾಕದ ಆಗಸ್ಟಸ್ ಹಿಕ್ಕಿ ಅಧಿಕಾರಿಗಳ ಹೀನ ಪ್ರವೃತ್ತಿಯನ್ನು ಖಂಡಿಸುತ್ತ ವ್ಯಕ್ತಿಯ ಮೂಲ ಭೂತ ಹಕ್ಕುಗಳನ್ನು ಹತ್ತಿಕ್ಕುವ, ದುರಾಕ್ರಮಣ ನಡೆಸುವ ಶಕ್ತಿಗಳಿಗೆ ಎಂದೂ ತಲೆ ಬಾಗಕೂಡದು ಎನ್ನುವ ದೃಢನಿರ್ಧಾರಕ್ಕೆ ಅಂಟಿಕೊಂಡ. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಮತ್ತು ಈತ ಪ್ರತಿಪಾದಿಸಿದ ಜನಪರ ಧೋರಣೆಗಳಿಗಾಗಿ ಈತನನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ' ಎಂದೂ ಆತನ ಸಾಧನೆಯನ್ನು ನೆನಪು ಮಾಡಿಕೊಳ್ಳುವುದೇ ಅವನು ಭಾರತೀಯ ಪತ್ರಿಕೋದ್ಯಮಕ್ಕೆ ಕೊಟ್ಟ ಕಾಣಿಕೆಯ ಶ್ರೇಷ್ಠ ಸ್ಮಾರಕ, ದ್ಯೋತಕ, ಎಂದೂ ಕರೆಯಲಾಗಿದೆ.[೧]

ಕರ್ನಾಟಕದ ವೃತ್ತಪತ್ರಿಕಾರಂಗದ ಬೆಳವಣಿಗೆಯನ್ನು ಗಮನಿಸಿದರೆ ಡಾ. ಹಳಕಟ್ಟಿಯವರನ್ನು ಉತ್ತರ ಕರ್ನಾಟಕದ ವೃತ್ತಪತ್ರಿಕಾರಂಗದ 'ಭೀಷ್ಮ' ಎಂದು ಕರೆಯಬಹುದು. ೧೮೧೯ರಲ್ಲಿ ಗಂಗಾಧರ ಭಟ್ಟಾಚಾರ್ಯ ಆರಂಭಿಸಿದ ಬೆಂಗಾಲ್ ಗಜೆಟ್ ಮೊದಲ ಭಾರತೀಯ ಪತ್ರಿಕೆ, ಅಂದಿನಿಂದ ಸುಮಾರು ಐದು ದಶಕಗಳ ಅವಧಿಯಲ್ಲಿ ಹುಟ್ಟಿಕೊಂಡ ಪರ್ಷಿಯನ್ ಬಂಗಾಲಿ (ಸಂಬಂಧಕೌಮುದಿ) ಮುಂತಾದ ದೇಶಭಾಷಾ ಪತ್ರಿಕೆಗಳು ಬ್ರಿಟಿಷರ ಆಡಳಿತೆಗೆ ವಿರುದ್ಧವಾದ ಮನೋಭಾವನೆಗಳನ್ನು ಭಾರತೀಯರಲ್ಲಿ ಹರಡಿದವು. ೧೮೭೦ರಲ್ಲಿ ಮೂಡಿಬಂದ ಪತ್ರಿಕಾಮಸೂದೆ ಜನತೆಯ ಸ್ವತಂತ್ರ ಮನೋಭಾವನೆಗಳನ್ನು ದಮನಗೊಳಿಸುವ ಗುರಿಯಿಂದಲೇ ಮೂಡಿಬಂದಿತು. ವೃತ್ತಪತ್ರಿಕೆಗಳನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸುವ ವಿವಿಧ ಕುತಂತ್ರಗಳನ್ನು ಕತ್ತರಿಸುತ್ತ ಭಾರತೀಯ ಪತ್ರಿಕಾರಂಗ ಬೆಳೆದುಬಂದುದೇ ಒಂದು ರೋಮಾಂಚಕಾರಿ ಚರಿತ್ರೆ.

೧೮೫೭ರ ಸಿಪಾಯಿದಂಗೆ, ೧೯೨೦ರ ವಂದೇ ಮಾತರಂ ಮತ್ತು ಅಸಹಕಾರ ಚಳವಳಿ, ಅಲ್ಲಿಂದ ಒಂದು ನಿರ್ದಿಷ್ಟ ರೂಪಪಡೆದ 'ಮಾಡು ಇಲ್ಲವೆ ಮಡಿ' ಹೋರಾಟದ ದಿನಗಳಿಂದ ಮೊದಲುಗೊಂಡು ೧೯೪೭ರ ವರೆಗೆ, ಆ ಬಳಿಕ 'ಅಂಧಕಾರ ಕಾಲವೆಂದು ಕರೆಯಬಹುದಾದ ೧೯೭೫ರ ತುರ್ತುಪರಿಸ್ಥಿತಿಯ ಕಾಲಾವಧಿ ಮತ್ತು ಇತ್ತೀಚೆಗೂ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ಗದಾಪ್ರಹಾರಗಳ ವರೆಗೆ, ಭಾರತೀಯ ಕೆಲವು ವೃತ್ತ ಪತ್ರಿಕೆಗಳು ಜನತೆಗೆ ಸರಿಯಾದ ಸುದ್ದಿ, ಸತ್ಯಸಂಗತಿಗಳನ್ನು ತಿಳಿಸುವ ತಮ್ಮ ವಸ್ತುನಿಷ್ಠ ಧೋರಣೆಯ ದೃಢಸಂಕಲ್ಪದಿಂದ ವಿಮುಖವಾಗದೆ, ಒಂದು ಪ್ರಬಲ ಸಂವಹನ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಮತ್ತು ಅದರಲ್ಲಿ ಕೆಲಮಟ್ಟಿಗೆ ಶ್ರೇಯಸ್ಸು ಪಡೆಯುತ್ತ ಬಂದಿರುವುದು ಒಂದು ಸಮಾಧಾನಕರ ಅಂಶ.

---

೧ ನಾಡಿಗ ಕೃಷ್ಣಮೂರ್ತಿ 'ಭಾರತೀಯ ಪತ್ರಿಕೋದ್ಯಮ.' ಪು. ೨೩. ವಿ. ವಿ. ೧೯೬೯

೨. ಶ್ರೀ ಹಳಕಟ್ಟಿಯವರ 'ನವಕರ್ನಾಟಕ' ವಾರಪತ್ರಿಕೆಯನ್ನು ಕುರಿತು ವಿವೇಚನೆ ವಿಶ್ಲೇಷಣೆಗಳನ್ನು ಕೈಗೆತ್ತಿಕೊಳ್ಳುವ ಮೊದಲು ಈ ಪತ್ರಿಕೆ ಪ್ರಕಟವಾದ ೨೦ನೆಯ ಶತಮಾನದ ಎರಡನೆಯ ದಶಕದ ಸ್ವಲ್ಪ ಆಚೆ ಈಚೆ ಕಣ್ಣಾಡಿಸಿದರೆ ಕರ್ನಾಟಕದ ಪತ್ರಿಕಾರಂಗದ ಚಟುವಟಿಕೆಗಳು ಕುತೂಹಲಕಾರಿಯಾಗಿರುವುದು ಕಂಡು ಬರುತ್ತದೆ. ಜೊತೆಗೆ ಈ ಕಾಲಾವಧಿಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ಅನೇಕ ದೃಷ್ಟಿಯಿಂದ ಮಹತ್ವ ಪಡೆದಿರುವುದು ನಿಶ್ಚಿತ ಏಕೆಂದರೆ ಇದು ಎರಡು ಮಹತ್ವದ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮಸ್ಯೆಗಳ ಸಂಘರ್ಷದ ಕಾಲಾವಧಿ. ಒಂದು ಭಾರತ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭ್ಯವಾಗಿರಲಿಲ್ಲ; ಎರಡು ಚೆದುರಿದ್ದ ಕನ್ನಡ ಪ್ರದೇಶಗಳು ಒಂದುಗೂಡಿ ಕರ್ನಾಟಕರಾಜ್ಯ ಅಸ್ತಿತ್ವಕ್ಕೆ ಬಂದಿರಲಿಲ್ಲ. ೧೯೨೦ ರಿಂದ ೧೯೫೬ರ ವರೆಗಿನ ಕಾಲಾವಧಿ ಭಾರತದ ಜನತೆಗೆ ಹೇಗೋ ಹಾಗೆ ವೃತ್ತ ಪತ್ರಿಕಾರಂಗಕ್ಕೂ ಒಂದು ಆಹ್ವಾನವನ್ನು ನೀಡಿದ ಸಮಯ. ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಕರ್ನಾಟಕ ರಾಜ್ಯೋದಯ ಈ ಜ್ವಲಂತ ಸಮಸ್ಯೆಗಳ ಚೂಲಮೂಲವನ್ನು ವಿವೇಚಿಸುವ ಜನತೆಯನ್ನು ಎಚ್ಚರಿಸುವ ಮತ್ತು ಜನತೆಯನ್ನು ಸಂಘಟಿಸಿ ಈ ಉದ್ದೇಶಗಳನ್ನು ಸಾಧಿಸುವತ್ತ ಅವರನ್ನು ಮುನ್ನಡೆಸುವ ಮಹತ್ವದ ಹೊಣೆಯನ್ನು ಈ ಕಾಲದ ಪತ್ರಿಕೆಗಳು ಹೊತ್ತುಕೊಳ್ಳಬೇಕಾಯಿತು.

೨.೧ ೧೮೪೩ರ ಸುಮಾರು ಮಂಗಳೂರಿನ ಜರ್ಮನ್ ಮಿಶನರಿಯವರು ಪ್ರಕಟಿಸಿದ 'ಕನ್ನಡ ಸಮಾಚಾರ' ಎನ್ನುವ ಪತ್ರಿಕೆ, ಕನ್ನಡ ಪತ್ರಿಕಾ ಪ್ರಪಂಚದ ನಾಂದಿ ಎಂದು ಭಾವಿಸಲಾಗಿದೆ. ಕಾಲಾನಂತರದಲ್ಲಿ ಪ್ರಕಟವಾದ ವಿವಿಧ ಭಾಗದ ವಾರ, ಪಾಕ್ಷಿಕ, ಮಾಸ, ವಾರ್ಷಿಕ ಮುಂತಾದ ಪತ್ರಿಕೆಗಳು ಕನ್ನಡ ಜನತೆಯ ಸಾಮಾಜಿಕ ರಾಜಕೀಯ ಮತ್ತು ಸಾಹಿತ್ಯಕ ಆಶೋತ್ತರಗಳನ್ನು ರೂಪಿಸುವಲ್ಲಿ, ಹೆಚ್ಚಿನ ಕಾರ್ಯವೆಸಗಿದಂತೆ ತೋರುತ್ತದೆ. ಆ ಅವಧಿಯಲ್ಲಿ ತಲೆಎತ್ತಿದ ಕೆಲವು ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳ ಹೆಸರು ಓದಿದರೆ 'ಕರ್ನಾಟಕ ಪ್ರಕಾಶಿಕೆ' 'ಕರ್ನಾಟಕ ವೈಭವ' ನವಕರ್ನಾಟಕ' 'ಜಯಕರ್ನಾಟಕ' 'ಸಂಯುಕ್ತ ಕರ್ನಾಟಕ' 'ವಿಶಾಲ ಕರ್ನಾಟಕ' ಅಂದಿನ ಕನ್ನಡಿಗರಲ್ಲಿ ತಾವೆಲ್ಲ ಒಂದುಗೂಡಬೇಕು, ತಮ್ಮದೇ ಆದ ಪಾತ್ರ ರೂಪುಗೊಳ್ಳಬೇಕು. ಎನ್ನುವ ಪ್ರಬಲವಾದ ಹಂಬಲ ಮೂಡಿದ್ದು ಸ್ಪಷ್ಟ. ಅವರ ಈ ಪ್ರಾದೇಶಿಕ ಪ್ರಜ್ಞೆ ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಸಮರಸಗೊಂಡಿತ್ತೆನ್ನುವುದೂ ಇಲ್ಲಿ ಗಮನಾರ್ಹ. ಅಂದು ಪ್ರಕಟವಾಗುತ್ತಿದ್ದ ಕೆಲವು ಪತ್ರಿಕೆಗಳು : ೧೮೮೩ರ. ಧಾರವಾಡದ (ಹೊನ್ನಾಪುರಮಠ ಗದಿಗೆಯ್ಯ) 'ಚಂದ್ರೋದಯ', ೧೯೦೦ರ ಮೈಸೂರಿನ (ಯಜಮಾನ ವೀರಬಸಪ್ಪ) 'ಮೈಸೂರಸ್ಟಾರ್' ಬಳ್ಳಾರಿಯ (ಪಂ. ನಾಗೇಶ ಶಾಸ್ತ್ರಿ) ಕರ್ನಾಟಕ ಬಂಧು, ಹೊಸಕೇರಿ ಅಣ್ಣಾಚಾರ್ಯರ 'ವಿಜಯ' ಜಠಾರ ವಾಮನರಾಯರ 'ರಾಜಹಂಸ', ಬೆಳಗಾಂವಿಯ (ಪಂಡಿತಪ್ಪ ಚಿಕ್ಕೋಡಿ) ವಿಭಾಕರ (ಸವಣೂರ ಹನಮಂತರಾವ್) 'ಕರ್ನಾಟಕ ಮಿತ್ರ'

'ಕರ್ನಾಟಕ ವೈಭವ' (ಜಿ. ಎಮ್. ದೇಶಪಾಂಡೆ) ಉತ್ತರ ಕನ್ನಡ ಜಿಲ್ಲೆಯ 'ಕಾನಡಾವೃತ್ತ' 'ಕಾನಡಾ ಧುರೀಣ' ಹೀಗೆ ಹತ್ತಾರು ವಾರಪತ್ರಿಕೆಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಮೂಡಿ ಬಂದವು. ಇದೇ ಸಂದರ್ಭದಲ್ಲಿ ಮಹಿಳೆಯರಿಗಾಗಿ ಪ್ರಕಟವಾಗುತ್ತಿದ್ದ 'ಸರಸ್ವತಿ' (ಆರ್. ಕಲ್ಯಾಣಮ್ಮ) ಹೆಸರಿಸಬಹುದಾದ ಮತ್ತೊಂದು ಪತ್ರಿಕೆ (ಇದೇ ಅವಧಿಯಲ್ಲಿ ತಲೆಯೆತ್ತಿದ ಸಾಹಿತ್ಯ ಪತ್ರಿಕೆ ಮತ್ತು ವಿದ್ವತ್ (ಸಂಶೋಧನೆ ಇತ್ಯಾದಿ) ಪತ್ರಿಕೆಗಳು ಈ ಪ್ರಬಂಧದ ಉದ್ದೇಶಕ್ಕೆ ಹೊರತಾಗಿರುವುದರಿಂದ ಇಲ್ಲಿ ಅವುಗಳ ವಿಷಯ ಕೈಬಿಡಲಾಗಿದೆ.)

ಸಾಹಿತ್ಯ, ಧರ್ಮಗಳ ಕ್ಷೇತ್ರವನ್ನು ಗಮನಿಸಿದಾಗ ಶ್ರೀ ಹಳಕಟ್ಟಿ ಅವರು ಮಾಡಿದ ಕಾರ್ಯ ಚಿರಸ್ಮರಣೀಯವಾಗಿದೆ. ೧೯೨೬ನೆಯ ಫೆಬ್ರುವರಿ ತಿಂಗಳಲ್ಲಿ ಆರಂಭಿಸಿದ ಅವರ 'ಶಿವಾನುಭವ' ಪತ್ರಿಕೆ ಮರೆತುಹೋದ ವಚನ ಸಂಪತ್ತನ್ನು ಅಖಂಡವಾಗಿ ನಾಲ್ಕು ದಶಕದವರೆಗೆ ಪ್ರಕಟಿಸಿ ಕನ್ನಡನಾಡಿಗೆ ಮಹದುಪಕಾರ ಮಾಡಿದ ಕಾರ್ಯ ಯಾರೂ ಮರೆಯುವಂಥದಲ್ಲ. ಅವರನ್ನು ಜನಮನ್ನಿಸಿ 'ವಚನಪಿತಾಮಹ' ಎಂದು ಕರೆದು ಗೌರವಿಸಿದುದೇ ಸಾಕ್ಷಿ.

೨.೨ ಶ್ರೀ ಹಳಕಟ್ಟಿಯವರ ಜೀವನದ ಗುರಿ ಇಷ್ಟಕ್ಕೆ ಸೀಮಿತವಾಗಲಿಲ್ಲ 'ಕರ್ನಾಟಕಸ್ಥರು' ಸರ್ವತೋಮುಖವಾದ ಏಳಿಗೆ ಪಡೆಯಬೇಕು, ರಾಜಕೀಯ, ಸಾಮಾಜಿಕ ಪ್ರಜ್ಞೆಯುಳ್ಳ ಜಾಗೃತ ನಾಗರಿಕರಾಗಿ ಬಾಳಬೇಕು. ಸಮಕಾಲಿನ ಜೀವನದ ಎಲ್ಲ ಮಗ್ಗಲುಗಳನ್ನು ಆಮೂಲಾಗ್ರವಾಗಿ ಅರ್ಥಮಾಡಿಕೊಳ್ಳಬೇಕು. ನಡೆಯುತ್ತಿರುವ ಪ್ರಾದೇಶಿಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರತಿಯೊಂದು ರಂಗದ ಮಹತ್ವದ ಸಂಗತಿಗಳನ್ನು ಅರಿತು ಸ್ಪಂದಿಸುತ್ತಲೇ ರಾಷ್ಟ್ರೀಯ ಪ್ರಜ್ಞೆ ಮತ್ತು ಜನಾಂಗ ಪ್ರಜ್ಞೆಗಳನ್ನು ಸಂವರ್ಧಿಸುತ್ತ ನಾಡಿನ ಸರ್ವಾಂಗೀಣ ಪ್ರಗತಿಗೆ ಅಹರ್ನಿಶಿ ಶ್ರಮಿಸಬೇಕು. ಈ ದೇಶದ ಪ್ರಜ್ಞಾವಂತ ಪ್ರಜೆಗಳಾಗಿ ಬದುಕಿನ ವಿವಿಧರಂಗಗಳಲ್ಲಿ ವಿಕಾಸಹೊಂದಿ ಕರ್ನಾಟಕದ ವಿಕಾಸಕ್ಕೆ ತನ್ಮೂಲಕ ಭಾರತದ ಪ್ರಗತಿಗೆ ಸಿದ್ಧರಾಗಬೇಕು ಇತ್ಯಾದಿ ಘನವಾದ ಉದ್ದೇಶಗಳಿಂದ ಅವರು ಪ್ರೇರಿತರಾದರು. ತಮ್ಮ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಹಗಲಿರುಳು ಚಿಂತನೆ ಮಾಡಿದ ಈ ಮಹಾನುಭಾವ ಶಿವಾನುಭವ ತ್ರೈಮಾಸಿಕ ಪತ್ರಿಕೆ ಆರಂಭಿಸಿದ ಮಾರನೆಯ ವರ್ಷವೇ 'ನವಕರ್ನಾಟಕ' ಎನ್ನುವ ವಾರ ಪತ್ರಿಕೆಯನ್ನು ಆರಂಭಿಸಿ ತಮ್ಮ 'ಹಿತಚಿಂತಕ' ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು.

೧೯೨೬ರಲ್ಲಿ ತ್ರೈಮಾಸಿಕ 'ಶಿವಾನುಭವ'ದ ಪ್ರಥಮ ಸಂಪುಟದ ಮೊದಲ ಸಂಚಿಕೆ ಪ್ರಕಟವಾಗಿದ್ದರೆ ೧೯೨೭ರ ಅಕ್ಟೋಬರದಲ್ಲಿ ವಾರಪತ್ರಿಕೆ 'ನವಕರ್ನಾಟಕ'ದ ಪ್ರಥಮ ಸಂಪುಟದ ಮೊದಲಸಂಚಿಕೆ ಬೆಳಕುಕಂಡಿತು. ಈ ಪತ್ರಿಕೆ ಆಕಾರದಲ್ಲಿ ೧೨ ಪುಟಗಳು

ಪ್ರತಿಯೊಂದು ಪುಟಕ್ಕೆ ಎರಡು 'ಕಾಲಂ' (ಇಂದಿನ ವೃತ್ತ ಪತ್ರಿಕೆಯ ಎರಡು 'ಕಾಲಂ' ಗಳಿಗೆ ಸಮನಾದ ಒಂದು 'ಕಾಲಂ'). ಆಶ್ವಿನ ಶುದ್ಧ ೧೦ ಶಕೆ ೧೮೪೪ ಗುರುವಾರ ಆರನೆಯ ಅಕ್ಟೋಬರ್ ೧೯೨೨ ರಂದು ಪ್ರಕಾಶಗೊಂಡ ನವಕರ್ನಾಟಕ ವಾರ ಪತ್ರಿಕೆಯು ಬಿಡಿ ಸಂಚಿಕೆಯ ಬೆಲೆ ೧ ಆಣೆ ಮತ್ತು ವಾರ್ಷಿಕ ವರ್ಗಣಿ ೩ರೂ. ೧೨ಆಣೆ ಸಂಪಾದಕ ರಾ||ಸಾ|| ಫ. ಗು. ಹಳಕಟ್ಟಿ ಸಂಪಾದಕರ ಹೆಸರು ನಮೂದಿಸುವಲ್ಲಿಯೇ ಅವರು ಇಂಗ್ಲಿಷ್ ಭಾಷೆಯ ಆಂಗ್ಲರ ನಡವಳಿಕೆಗೆ ಜೋತುಬಿದ್ದ ರಾವಸಾಹೇಬರಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಎಫ್. ಜಿ. ಹಳಕಟ್ಟಿ ಎಂದು ಬರೆದುಕೊಳ್ಳದೆ ಫ. ಗು. ಹಳಕಟ್ಟಿ ಎಂದು ಬರೆದಿರುವುದೇ ಅದಕ್ಕೆ ಒಂದು ನಿದರ್ಶನ.

೨.೩ ವಿವಿಧ ಸಮೂಹ ಸಂವಹನ ಮಾಧ್ಯಮಗಳಲ್ಲಿ ಮುದ್ರಣ ಮಾಧ್ಯಮ ಭಾರತದಂಥ ದೇಶದಲ್ಲಿ ಬಹಳ ಪ್ರಬಲವಾದುದು. ಪ್ರತಿಶತ ೬೫–೭೦ ಅನಕ್ಷರಸ್ಥರಿರುವ ಈ ದೇಶದಲ್ಲಿ ಮುದ್ರಿತ ವಿಷಯ ಸತ್ಯವೆಂದೇ ಭಾವಿಸುವ. ನಂಬುವ ಜನರೇ ಅಧಿಕ ಈ ದೃಷ್ಟಿಯಿಂದ ಈಮಾಧ್ಯಮದ ಮೂಲಕ ತನ್ನ ವಿಚಾರ. ಆಲೋಚನೆ. ವಿವೇಚನೆ, ಸಂದೇಶಗಳನ್ನು ಜನತೆಗೆ ಮುಟ್ಟಿಸುವ ವ್ಯಕ್ತಿ ಒಬ್ಬ ಸಮರ್ಥ ಮತ್ತು ಸಮಗ್ರದೃಷ್ಟಿಯ ಸಂವಹನಕಾರನಾಗಿರುವುದು ಅತ್ಯಗತ್ಯ ತನ್ನ ಸುತ್ತಣ ಯಾವುದೇ ಬಗೆಯ ವಿಸ್ತೃತಹ ಆಗುಹೋಗುಗಳಿಗೆ ಘಟನೆಗಳಿಗೆ ಮನಸ್ಸನ್ನು ತೆರೆದಿಟ್ಟು ಸತ್ಯಾಸತ್ಯತೆಗಳನ್ನು ಗಮನಿಸಿ ಜನಪರವಾಗಿ ನಿಲುವು ತಳೆದು. ಜನಹಿತಧೋರಣೆಗಳನ್ನು ತನ್ನ ವೃತ್ತ ಪತ್ರಿಕೆಯ ಮೂಲಕ ಸಂವಹನಗೊಳಿಸುವ ಹೊಣೆಗಾರಿಕೆಯನ್ನು ನಿರಂತರ ಜಾಗರೂಕತೆಯಿಂದ ನಿರ್ವಹಿಸುವ ವ್ಯಕ್ತಿ-ವರದಿಗಾರ, ಸಂಪಾದಕ ಒಬ್ಬ ಶ್ರೇಷ್ಠ ಸಂವಹನಕಾರನಾಗಿರುತ್ತಾನೆ ಶ್ರೀ ಹಳಕಟ್ಟಿ ಅಂಥ ಒಬ್ಬ ಸಮಗ್ರ ದೃಷ್ಟಿಯ ವಸ್ತುನಿಷ್ಠ ಸಂವಹನಕಾರರಾಗಿದ್ದರು ಎನ್ನುವುದಕ್ಕೆ ಅವರ ನವಕರ್ನಾಟಕ ಪತ್ರಿಕೆ ಕೈಗನ್ನಡಿಯಾಗಿದೆ.

೨.೪ ಸುಮಾರು ೧೫ ವರ್ಷಕಾಲ ನವಕರ್ನಾಟಕ 'ವಾರ ಪತ್ರಿಕೆ'ಯ ಸಂಪಾದಕ ರಾಗಿ ಅದನ್ನು ವಾರದಿಂದವಾರಕ್ಕೆ ವಿಶಿಷ್ಟವಾಗಿ ರೂಪಿಸುತ್ತ, ವರ್ಷದಿಂದ ವರ್ಷಕ್ಕೆ ಅದೊಂದು ಸಮರ್ಥ ಸಂವಹನ ಮಾಧ್ಯಮವಾಗಿ ಉತ್ಕರ್ಷಹೊಂದಿ ಜನತೆಗೆ ಅವರ ಭಾಷೆಯಲ್ಲಿಯೇ ಹೇಳುವುದಾದರೆ 'ಕರ್ನಾಟಕಸ್ಥ'ರಿಗೆ–ಅಗತ್ಯವಾದ ಪ್ರಜ್ಞೆ ಮೂಡಿಸು ವಲ್ಲಿ ಅರಿವು ನೀಡುವಲ್ಲಿ ಎಚ್ಚರ ಗೊಳಿಸುವಲ್ಲಿ ಅಗತ್ಯವಾದ ವಿಷಯಗಳನ್ನು ಸಂಗ್ರಹಿಸಿ ಪ್ರಸರಣ ಗೊಳಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ನವಕರ್ನಾಟಕ ಪತ್ರಿಕೆಯ ಉದ್ದೇಶವನ್ನು ಅವರ ಪ್ರಥಮ ಸಂಪುಟದ ಮೊದಲ ಸಂಚಿಕೆಯ ಸಂಪಾದಕೀಯ ಟಿಪ್ಪಣಿಯಲ್ಲಿ ಅದರ ಸಂಪಾದಕ ಶ್ರೀ ಹಳಕಟ್ಟಿ ಸ್ಪಷ್ಟ ಪಡಿಸಿರುವುದು ಹೀಗೆ: ಇದರಲ್ಲಿ ರಾಜಕೀಯ ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳಲ್ಲಿ ಕರ್ನಾಟಕ ಸ್ಥರು ಹ್ಯಾಗೆ ಮುಂದುವರಿಯಬೇಕು. ಎಂಬುದರ ಬಗ್ಗೆ ವಿವೇಚನೆಗಳೂ, ಆ ಬಗ್ಗೆ ಪ್ರಯತ್ನಗಳೂ ಈ ಪತ್ರಿಕೆ ದ್ವಾರಾ ಮಾಡಲ್ಪಡುವವು. ಇದು ಸಮಾಜ ಮಂಗಡ.

ಜಾತಿ ಈ ಬಗ್ಗೆ ಯಾವ ತರದ ಭೇದಭಾವಗಳನ್ನು ಎಣಿಸದೆ ಯಾವುದು ಸತ್ಯವಾದದ್ದೋ ನ್ಯಾಯವಾದದ್ದೋ ಅದನ್ನೇ ನಿಷ್ಪಕ್ಷಪಾತನೆಯಿಂದಲೂ ನಿರ್ಭಯದಿಂದಲೂ ಜರುಗಿಸಲಿಕ್ಕೆ ಸಿದ್ಧವಾಗಿರುವದು. ಇದರಲ್ಲಿ ಕರ್ನಾಟಕದ ಸಂಸ್ಕೃತಿಯ ಹೆಚ್ಚಳವು ಬಹುವಿಶದವಾಗಿ ವಾಚಕರ ಮುಂದೆ ಇಡಲ್ಪಡುವದು. ಸರ್ವ ವಿಷಯದಲ್ಲಿಯೂ ಕರ್ನಾಟಕವು ಮುಂದುವರಿದು 'ನವಕರ್ನಾಟಕ' ವನ್ನು ಸಿದ್ಧಗೊಳಿಸುವುದೇ ಈ ಪತ್ರಿಕೆಯ ಮುಖ್ಯ ಧ್ಯೇಯವಾಗಿದೆ. ೧೯೨೭ ರ ಈ ಸಂಪಾದಕೀಯ ಟಿಪ್ಪಣಿ ೧೯೮೭ ಯಾವುದೇ ಪತ್ರಿಕಾ ಸಂಪಾದಕನಿಗೂ ಒಂದು ಮಾರ್ಗದರ್ಶಿ ಸೂತ್ರವಾಗಿದೆ.

ಶ್ರೀ ಹಳಕಟ್ಟಿ ವಿವರಿಸಿದ ಪತ್ರಿಕೆಯ ಧ್ಯೇಯಗಳನ್ನು ಸೂತ್ರಬದ್ಧವಾಗಿ ಹೇಳುವುದಾದರೆ :

ಅ) ಕರ್ನಾಟಕಸ್ಥರು ರಾಜಕೀಯ, ಸಾಮಾಜಿಕ ಔದ್ಯೋಗಿಕ ಶೈಕ್ಷಣಿಕ ವಿಷಯಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು.

ಆ) ಪತ್ರಿಕೆ ವಿಷಯ ನಿರೂಪಣೆಯಲ್ಲಿ ಯಾವುದೇ ತರದ ಭೇದಭಾವಗಳನ್ನು ಎಣಿಸಕೂಡದು. ಮತ್ತು ಸತ್ಯವಾದದ್ದನ್ನು ನ್ಯಾಯವಾದದನ್ನು ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತವಾಗಿ ಜನರಿಗೆ ಮುಟ್ಟಿಸಲು ಸಿದ್ಧವಾಗಿರಬೇಕು.

ಇ) ಕರ್ನಾಟಕ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸವಿಸ್ತಾರವಾಗಿ ವಾಚಕರಿಗೆ ವಿವರಿಸಿ ತಿಳಿಸಿ ಹೇಳಬೇಕು.

ಈ ಮುಂದೆ ಅಸ್ತಿತ್ವದಲ್ಲಿ ಬರುವ 'ನವಕರ್ನಾಟಕ' ಎಲ್ಲ ದೃಷ್ಟಿಯಿಂದಲೂ ಮುಂದುವರೆದ ರಾಜ್ಯವಾಗಿರಬೇಕು. ಆ ದಿಕ್ಕಿನಲ್ಲಿ ಜನತೆಯನ್ನು ಸಿದ್ಧಗೊಳಿಸಬೇಕು. ಅದೇ ಈ ಪತ್ರಿಕೆಯ ಮುಖ್ಯಧ್ಯೇಯ.

ಯಾವುದೇ ಜನಾಂಗದ ಸರ್ವಾಂಗೀಣ ವಿಕಾಸವಾಗಬೇಕಾದರೆ ಜನತೆ ಎಲ್ಲ ಬಗೆಯ ವಿಷಯ ಸುದ್ದಿ-ಸಂಗತಿಗಳ ತಿಳುವಳಿಕೆ ಪಡೆಯುತ್ತ ಪ್ರಜ್ಞಾವಂತನಾಗರಿಕರಾಗಬೇಕು ಮತ್ತು ತಮ್ಮ ಪ್ರದೇಶದ ನಾಡಿನ ಸಂಸ್ಕೃತಿ ಸಂವರ್ಧನೆಗೆ ಕಾರಣರಾಗಬೇಕು. ಶ್ರೀ ಹಳಕಟ್ಟಿಯವರ ಈ ಧ್ಯೇಯಧೋರಣೆ, ವಿಶಾಲದೃಷ್ಟಿ. ಪತ್ರಿಕಾಕರ್ತರಿಗೆ ನಿರಂತರ ಪ್ರಸ್ತುತ ಎಂದು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿದೆಯೇ ?

೩. 'ನವಕರ್ನಾಟಕ' ಪತ್ರಿಕೆಯ ಮೂಲಕ ಜನತೆಗೆ ಸಂವಹನಗೊಂಡ ವಿಷಯ ಪಟ್ಟಿಗಳನ್ನು ಗಮನಿಸಿದರೆ ಶ್ರೀ ಹಳಕಟ್ಟಿ ಎಂಥ ಅದ್ಭುತ ವ್ಯಕ್ತಿ ಮತ್ತು ಎಂಥ ಪ್ರಜ್ಞಾವಂತ ಪತ್ರಿಕಾಕರ್ತರಾಗಿದ್ದರು ಎನ್ನುವುದು ಸ್ಪಷ್ಟಗೊಳ್ಳುತ್ತದೆ. ಒಂದು ಸ್ಥೂಲವಾದ ವಿಷಯ ಪಟ್ಟಿಯನ್ನು (ಕೇವಲ ಒಂದು ವರ್ಷದ ೫೨ ಸಂಚಿಕೆಗಳನ್ನು ಗಮನಿಸಿ) ಕೊಡಲಾಗಿದೆ. ಒಂದನೆಯ ಸಂಪುಟದ ೧೫ನೆಯ ಸಂಚಿಕೆಯಿಂದ

(೧೯ ಜನವರಿ ೧೯೨೮) ಪತ್ರಿಕೆಯು ವಿನ್ಯಾಸದಲ್ಲಿ ಬದಲಾವಣೆ ಮಾಡಿದಂತೆ ತೋರುತ್ತದೆ. **ಈ** ಸಂಚಿಕೆಯಿಂದ ಮುಂದಿನ ಎಲ್ಲ ಸಂಚಿಕೆಗಳಿಗೂ **ವಿಷಯಾನುಕ್ರಮಣಿಕೆ**ಯನ್ನೂ ಮುದ್ರಿಸಲಾಗಿದೆ.

ಈ ಪತ್ರಿಕೆಯ ಸಂಪಾದನ ವಿನ್ಯಾಸದಲ್ಲಿ ಎದ್ದು ಕಾಣುವ ಅಂಶಗಳು :

೧. ಸಂಪಾದಕೀಯ ಟಿಪ್ಪಣಿ–ಓರ್ವ ಕನ್ನಡಿಗನಿಂದ ೨. ಲೇಖನಮಾಲೆಗಳು. ೩. ಪತ್ರವ್ಯವಹಾರ ೪. ಸುದ್ದಿಗಳು ವಿಮರ್ಶೆಗಳು ೫. ವಿವಿಧ ವಿಷಯಗಳು ೬. ವರ್ತಮಾನಸಾರ ೭. ಜಾಹಿರಾತುಗಳು ೮. ನೋಟಿಸು ಇತ್ಯಾದಿ ಮೊದಲ ೧೪ ಸಂಚಿಕೆಗಳ ವಿಷಯ ಪಟ್ಟಿಯ ವಿವರಣೆಗಳನ್ನು ಗಮನಿಸಿದರೆ ಇನ್ನುಳಿದ ಸಂಚಿಕೆಗಳು ರೂಪ–ಸ್ವರೂಪಗಳ ವ್ಯಾಪ್ತಿ ಬೆರಗುಗೊಳಿಸುತ್ತದೆ.

೩.೧ ಹಳ್ಳಿ, ತಾಲೂಕು ಜಿಲ್ಲೆ, ವಿವಿಧ ರಾಜಧಾನಿಗಳು, ಮೊದಲುಗೊಂಡು ಪರರಾಷ್ಟ್ರಗಳ ವರೆಗೆ ಇಲ್ಲಿಯ ವಿಷಯ ವೈವಿಧ್ಯದ ವಿಸ್ತಾರ ಹರಡಿಕೊಂಡಿದೆ.

ಅ) ಮಳೆ–ಬೆಳೆ, ಕೃಷಿ (ಒಕ್ಕಲುತನ) ಶೇತಕಿ ಬೋರ್ಡ್, ರೈತರ ಸ್ಥಿತಿಗತಿ ಒಕ್ಕಲುತನದ ಸಂಗತಿ, ದನಗಳ ಸಂಗೋಪನೆ, ಒಕ್ಕಲುತನದ ಪ್ರದರ್ಶನ, ಹತ್ತಿಬೆಳೆ, ಗ್ರಾಮಸುಧಾರಣೆ, ಮುಂತಾದವು **ಗ್ರಾಮೀಣ ಕೃಷಿಪ್ರಧಾನ ಸುದ್ದಿ ಸಂಗತಿಗಳು.**

ಆ) ನೌಕಾಕಂಪನಿ, ಮಹಾರಾಷ್ಟ್ರ ವ್ಯಾಪಾರೀ ಮಂಡಳಿ, ಬಾಂಬೇ ಕಾಟನ್ ಮಾರ್ಕೆಟ್ ಬಿಲ್ಲು, ಮುಂಬಯಿ ಗಿರಣಿಗಳು, ಮಂಗಳೂರು ಹಂಚಿನ ಕಾರಖಾನೆ, ಮೈಸೂರು ರೇಲ್ವೆ, ಬ್ಯಾಂಕು, ಸಹಕಾರೀ ಜಮೀನು ಪತ್ತಿ ಮತ್ತು ಬ್ಯಾಂಕು, ಸಹಕಾರೀ ಸಂಘಗಳ ಬೆಳವಣಿಗೆ ಮುಂತಾದವು **ವ್ಯಾಪಾರ ವಾಣಿಜ್ಯ ಕ್ಷೇತ್ರದ ವಿಷಯಗಳು.**

ಇ) ಶಿಕ್ಷಣ ಕ್ಷೇತ್ರವನ್ನು ಕುರಿತ ಶ್ರೀ ಹಳಕಟ್ಟಿಯವರ ವಿಶೇಷ ಕಾಳಜಿ ಪತ್ರಿಕೆಯ ಮಹತ್ವದ ಅಂಶವಾಗಿದೆ. ಹಿಂದುಸ್ತಾನದ ಪ್ರಾಚೀನ ಶಿಕ್ಷಣ, ಗಾಂವಠೀ ಶಾಲೆ, ಆಲಮಟ್ಟಿ ಹರ್ಡೇಕರ ಮಂಜಪ್ಪನವರ ವಿದ್ಯಾಲಯ, ಶಾರೀರಿಕ ಶಿಕ್ಷಣ, ವೈದ್ಯಕೀಯ, ಆಯುರ್ವೇದ ಶಿಕ್ಷಣ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳು, ಸ್ಕೂಲ್ ಬೋರ್ಡ್ ಒತ್ತಾಯದ ಶಿಕ್ಷಣ, ಉನ್ನತ ಶಿಕ್ಷಣ, ಡೆಹರಾಡೂನಿನ ಲಷ್ಕರೀ ಕಾಲೇಜು, ಒಕ್ಕಲುತನದ ಶಾಲೆ–ಕಾಲೇಜು, ಶಿಲ್ಪಶಾಸ್ತ್ರ ಶಿಕ್ಷಣ, ಬಾಲವೀರ ಅಥವಾ ಸ್ಕೌಟ, ಅರಣ್ಯ ಕಾಲೇಜು, ಚಿರಸಂಗೀತರ ಕಾಲೇಜ, ಆಂಧ್ರ ವಿಶ್ವವಿದ್ಯಾಲಯ, ರಂಗೂನ ವಿಶ್ವವಿದ್ಯಾಲಯ, ಶಿಕ್ಷಕ–ಶಿಕ್ಷಣ, ಸಿವಿಲ್ ಸರ್ವೀಸ್ ಪರೀಕ್ಷೆ, ಲಂಡನ್ನಿನಲ್ಲಿ ಜರುಗಿದ ಮುಸಲ್ಮಾನ ಶಿಕ್ಷಣ ಪರಿಷತ್ತು, ಹೀಗೆ ಅಗಣಿತಸ್ತರದ ಶೈಕ್ಷಣಿಕ ಕಾರ್ಯ ಚಟುವಟಿಕೆ ಪ್ರಗತಿಪರ ಧೋರಣೆಗಳು ನಿರೂಪಿತವಾಗಿವೆ.

ಬೇಕೆಂಬ ಕಡ್ಡಾಯ ನಿರ್ಬಂಧವೇನೂ ಇಲ್ಲವೆಂಬುದು ಮೂವತ್ತೆಕ್ಕೆ ಮೀರಿದ ವಚನಕಾರ್ತಿಯರ ಅಂಕಿತಗಳ ಅವಲೋಕನದಿಂದ ತಿಳಿದುಬರುತ್ತದೆ. ಇದಕ್ಕೆ ಅತಿವಾದವೇಕೆ? ನೀಲಾಂಬಿಕೆ ತಾಯಿಯ ಅಂಕಿತದಲ್ಲಿ ಬಸವ ನಾಮ-ಅಂಕಿತಗಳ ಸೇರುವೆಯಿಲ್ಲವೆಂಬ ವಾದ ಆಕ್ಷೇಪದಲ್ಲಿ ತೂಕವಿಲ್ಲ! ನೀಲಾಂಬಿಕೆ ತಾಯಿಯ 'ಸಂಗಯ್ಯ' ಅಂಕಿತದ ೧೨೫ ವಚನಗಳಲ್ಲಿ ೩೭೦ ಸಲ ಬಸವಸ್ಮರಣೆ ಬಂದುದಕ್ಕೆ ಪ್ರತಿಬಂಧಕ ಆಪತ್ತೇನು? ಅದನ್ನು ಎಣಿಸಿದ್ದ ಪ್ರಯೋಜನ!

೬. ನೀಲಮ್ಮನದೆನ್ನಲಾದ ವಚನಶಾಸ್ತ್ರ ಸಾರೋಕ್ತ ಬಸವಪ್ರಿಯಕೂಡಲ ಸಂಗಮದೇವಾಂಕಿತದ ಒಂದು ವಚನ ಯಾವುದು? ಡಾ|| ಫ | ಗು | ಹಳಕಟ್ಟಿಯವರ ಮೂಲಗ್ರಂಥ ವಚನಶಾಸ್ತ್ರಸಾರ ಭಾಗ ೧ ಪೂರ್ವಾರ್ಧದ ಪುಟ ೫೭೨ರ ೧೩೮ನೇಯ ನಮೂದಿನಲ್ಲಿ ಸ್ವಯಂ ಹಳಕಟ್ಟಿಯವರೆ ಆ ಅಂಕಿತದ ವಚನವನ್ನು ಬಳಸಿಕೊಂಡಿಲ್ಲವೆಂದು ನಕ್ಷತ್ರಚುಕ್ಕೆಯನ್ನು ಬಳಸದೆ ಸೂಚಿಸಿದ್ದಾರೆ! ಮಾರುತ್ತರಕಾರರು ಅದನ್ನು ನೋಡಿದಂತಿಲ್ಲ! ಇನ್ನು ಗದಗು ಶ್ರೀಮಠದ ಪರಿಷ್ಕೃತವಚನ ಶಾಸ್ತ್ರಸಾರದ ಪುಟ ೬೨೪ರಲ್ಲಿ ೬೦ನೆಯ ನಮೂದಿನ ಬಸವಪ್ರಿಯ ಕೂಡಲಸಂಗಮ ದೇವಾಂಕಿತದ ಒಂದು ವಚನವೆಂದು ೫೪೩ನೆಯ ವಚನವನ್ನು ಸಾರಲಾಗಿದ್ದರೂ ಆ ವಚನ ಹಾಗೂ ಮೂಲಗ್ರಂಥದ ಸಂವಾದಿ ವಚನ (ವಚನಶಾಸ್ತ್ರ ಸಾರ ಭಾಗ ೧ ಪೂರ್ವಾರ್ಧ ಪುಟ ೧೪೪ರಲ್ಲಿ ೧೦ನೆಯ ವಚನ) ಬಸವಪ್ರಿಯಕೂಡಲ ಚೆನ್ನಸಂಗಮದೇವ ಅಂಕಿತವನ್ನು ಹೊಂದಿದೆ! ಇದು ಹಡಪದ ಅಪ್ಪಣ್ಣನವರ ವಚನವಾಗಿದೆ! ಮಾರುತ್ತರಕಾರರು ಕೃಪೆಯಿಟ್ಟು ಬಸವಪ್ರಿಯ ಕೂಡಲ ಸಂಗಮ ದೇವ ಅಂಕಿತದ ವಚನಶಾಸ್ತ್ರ ಸಾರೋಕ್ತ ವಚನವನ್ನು ನಿರ್ದೇಶಿಸಬಲ್ಲರೆ? ಅಧ್ಯಯನದ ಕೊರತೆಯಿಂದ ಇಂತಹ ಗೊಂದಲಗಳು ಸಹಜವೆ!

೭. ಮಾರುತ್ತರಕಾರರು ಮತ್ತೆ ಉಲ್ಲೇಖಿಸಿದ 'ಸಂಗಯ್ಯ' ಅಂಕಿತದ ೧೨೪, ೧೨೫ನೇಯ ವಚನಗಳಲ್ಲಿ ಅವು ನೀಲಲೋಚನೆ ತಾಯಿಯವರದಲ್ಲ ಎಂದು ಊಹಾಪೋಹ ಮಾಡಲು ಯಾವ ಸಾಮಗ್ರಿಯೂ ಇಲ್ಲ! ಒಂದು ವಚನದಲ್ಲಿ ಭಿನ್ನಭಿನ್ನ ಕಾಲ ದೇಶಗಳಲ್ಲಿದ್ದ ದೇಶಕಾಲಾತೀತ ಮಹಾನುಭಾವರನ್ನು ಏಕಪಂಕ್ತಿಯಲ್ಲಿ ಸ್ತುತಿಸಿದರೆ ನಮ್ಮ ಗಂಟೇನು ಹೋಯಿತು! ಸ್ವಯಂ ಬಸವರೂ ತಮ್ಮ ವಚನದಲ್ಲಿ ಪೂರ್ವದ ಶೈವಾಚಾರ್ಯರುಗಳನ್ನು ಏಕಪಂಕ್ತಿಯಲ್ಲಿ ಸ್ತುತಿಸಿದ್ದಾರೆ! ಇದಕ್ಕೆ ಆಕ್ಷೇಪವೇಕೆ?

೮ ಸಂಗಯ್ಯ ಅಂಕಿತದ ೧೨೫ನೆಯ ವಚನ ನಾನು ನಿಮ್ಮವಳಲ್ಲವಯ್ಯ ಎಂಬುದು ಎಳಮಲೆಯ ಗುರುಶಾಂತದೇವರು "ಸೇರಿಸಿದ ಮಿಶ್ರಸ್ತೋತ್ರ ವಚನಗಳು" ಕೃತಿಯಿಂದ ಆಯ್ದುದ್ದಾಗಿದೆ. ಈ ವಚನ ಪ್ರಕ್ಷಿಪ್ತವೆಂತಲೂ ಅದನ್ನು ಎಳಮಲೆಯ ಗುರುಶಾಂತದೇವರೆ ಮೋಸದಿಂದ 'ಸಂಗಯ್ಯ' ಅಂಕಿತವಿಟ್ಟು ಹೇರಿದರು ಎಂದು ಆಪಾದಿಸುವ ಮಾರುತ್ತರಕಾರರು ಆ ಆಪಾದನೆಗೆ ಪ್ರಬಲವಾದ ಕಾರಣ ಆಧಾರ ಪ್ರಮಾಣಗಳನ್ನು ನೀಡದಿರುವುದರಿಂದ ಈ ಆಪಾದನೆಯನ್ನು ಮಾರುತ್ತರಕಾರರ ಸ್ವಂತ ಅನಿಸಿಕೆಯೆಂದು ತಳ್ಳಿಹಾಕಬೇಕಾಗುತ್ತದೆ. ಸುಮ್ಮನೆ ಗುಮ್ಮನೆ [illegible] ಎಂದು

ಕೂಗಿದರೆ ಪ್ರಯೋಜನವಿಲ್ಲ ! ಸಾಧಾರ ಸಪ್ರಮಾಣವಾಗಿ ಸಾಧಿಸಬೇಕಾಗುತ್ತದೆ ! ಇನ್ನು ಪ್ರಕ್ಷಿಪ್ತ ವಚನಗಳು ಹೇಗೆ ಬೆಳೆಯುತ್ತವೆ ಅವನ್ನು ಹೇಗೆ ಬೇಸ ಬೇಕೆಂಬುದನ್ನು ಮಾರುತ್ತರಕಾರರು ಚೆನ್ನಾಗಿ ತಿಳಿದಿರಬಹುದು । ಹಿಂದೆ ಕದಳಿ ವನ ಸಂಶೋಧನೆಯ ನೆಪ ಹಿಡಿದು ಶ್ರೀಶೈಲದ ಕಾಡಿನಲ್ಲಿ ನಿಂತು ಚನ್ನಮಲ್ಲಿಕಾರ್ಜುನ ಅಂಕಿತದಲ್ಲಿ ಖೋಟಾ ವಚನಗಳನ್ನು ನೆಯ್ದು ಮಹಾದೇವಿಯಕ್ಕನ ತಲೆಗೆ ಕಟ್ಟಿ ಪ್ರಕಟಿಸಿ ಆಧಾರ ಪ್ರಮಾಣ ಆಕಾರ ಕೇಳಿದಾಗ ಸಿಕ್ಕಿಬಿದ್ದು ಮುಖಭಂಗಿತರಾದ ಮಹಾನುಭಾವರು ಇವನ್ನು ಚೆನ್ನಾಗಿ ಬಲ್ಲರು !

೯ ಬಸವರಿಗೆ ನೀಲಾಂಬಿಕೆ ಗಂಗಾಂಬಿಕೆಯರೆಂಬ ಇಬ್ಬರ ಧರ್ಮಪತ್ನಿಯರಿದ್ದರೆಂದು ನಂಬಲು ಸಾಧ್ಯವಿಲ್ಲವೆಂದು ಹಿಂದೆ ಮಾರುತ್ತರಕಾರರು ಕೊಟ್ಟ ಕಾರಣಗಳು ಪ್ರಬಲದೃಢ ಸಾಕ್ಷಾಧಾರವೆಂದೆನ್ನಿಸದೆ ಬರಿ ಸ್ವಂತ ಅನಿಸಿಕೆಗಳು ಮಾತ್ರವಾಗಿವೆ !

೧೦ ನೀಲಗಂಗಮ್ಮ ಎಂಬ ಶಬ್ದವು ಕೇವಲ ಕೃತಕ ಸೃಷ್ಟಿಮಾತ್ರವಾಗಿದೆ. ನೀಲಗಂಗಮ್ಮನಿಂದಲೇ ನೀಲಮ್ಮ ಗಂಗಮ್ಮ ಆಯಿತೆಂಬುದು ದೇವಿರಪ್ಪನವರಿಂದಲೆ ದೇವಪ್ಪ ಈರಪ್ಪ ಆಯಿತೆಂಬುವ ಅತಿವಾದದಂತೆ ನಿರರ್ಥಕವಾಗುತ್ತದೆ. ! ವೀರಶೈವ ಪ್ರಾಚೀನ ವಾಙ್ಮಯದಲ್ಲಿ ಬಸವರ ಪತ್ನಿ ನೀಲಗಂಗಮ್ಮ ಎನ್ನುವ ಮಾತನ್ನು ಒಂದೇ ಒಂದು ಕಡೆ ತೋರಿಸಲು ಮಾರುತ್ತರಕಾರರಿಗೆ ಆದೀತೆ ? ಇಲ್ಲ ! ಇದಕ್ಕೆ ಸಂಬಂಧ ವಿಲ್ಲದ ಶಾಸ್ತ್ರ ವಾಕ್ಯದ ಶಿಫಾರಸ್ಸು ಅನಪೇಕ್ಷಿತ !

೧೧ ಸೋಮನಾಥನು ಹೇಳುವ ಗಂಗಾದೇವಿಯು ನೀಲಗಂಗಾದೇವಿಯೇ ಎನ್ನುವ ಮಾತು 'ಬಿದ್ದು ಹೋಗುವ ಭಾಷ್ಯ' ವೆನ್ನಿಸುತ್ತದೆ !

೧೨. ನೀಲಗಂಗಾ ಶಬ್ದವೇ ಕಪೋಲಕಲ್ಪಿತವಾಗಿರುವಾಗ ಅದರ ಅರ್ಥವನ್ನು ಸಂಬಂಧಿಸದ ವಿಜ್ಞಾನಪಂಕ್ತಿಗಳಿಂದ ಸಾಧಿಸುವ ಪ್ರಯತ್ನ ಹಾಸ್ಯಾಸ್ಪದ ! ಬಂಜೆಯ ಮಗ ಮೊದಲ ಕೊಂಬಿಗೆ ಆಕಾಶ ಪುಷ್ಪವನ್ನು ಅಲಂಕರಿಸಿದಂತೆ ಅತ್ಯಂತ ವಿಚಿತ್ರ ವೆನ್ನಿಸುತ್ತದೆ.

೧೩. 'ಬಸವಣ್ಣನಿಗೆ ಇಬ್ಬರು ಹೆಂಡತಿಯರು ಗಂಗಮ್ಮ ನೀಲಮ್ಮ' ಇದ್ದರೆಂದು ಲಕ್ಕಣ್ಣನೆ ಕಥೆ ಕಟ್ಟಿರಬೇಕು ಎನ್ನುವ ಬಾಯಿಯೆ ೧೯೬೦ರಲ್ಲಿ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯ ಪ್ರಸ್ತಾವನೆಯಲ್ಲಿ ಪಲುಕಿದ ಮಾತುಗಳು ಚಿಂತನಾರ್ಹವಾಗಿವೆ.

"—ಇಷ್ಟೇ ಅಲ್ಲ! ಈ ಮಹಾರಾಯ (ಲಕ್ಕಣ್ಣದಂಡೇಶ!) ವರ್ತಮಾನ ಪತ್ರಗಳ ಸುದ್ದಿಸುಳಿವೂ ಇಲ್ಲದ, ಅಂಚೆಸಂಚಾರ ಸಾರಿಗೆ ವ್ಯವಸ್ಥೆಗಳು ಇಂದಿನಷ್ಟು ತೃಪ್ತಿಕರ ವಾಗಿಲ್ಲದ ಆ ಕಾಲದಲ್ಲಿ ನೂತನಗಣಂಗಳ ಪಟ್ಟಿಯನ್ನು ಹೇಗೆ ಸಿದ್ಧಪಡಿಸಿದ ! ನೂರಾರು ಶಿವಶರಣರು ಅವರಲ್ಲಿ ಕನ್ನಡ ನಾಡಿನವರಿದ್ದಾರೆ. ಆಂಧ್ರದವರಿದ್ದಾರೆ. ತಮಿಳು ದೇಶದವರಿದ್ದಾರೆ. ಒಡ್ಡಿಯ ದೇಶದವರು. ಕೇರಳದವರು. ಗುಜರಾತಿನವರು. ಮಹಾರಾಷ್ಟ್ರೀಯರು ಈ ನೂತನ ಗಣಗಳ ಸುದೀರ್ಘವಾದ ಪಟ್ಟಿಯು ಮೂವತ್ತೆಂಟನೆಯ ಸಂಧಿಯ ೨೫೦ ವಾರ್ಧಕಗಳಲ್ಲಿ ಅಸಾಧಾರಣ ಚಾತುರ್ಯದಿಂದ. ಓದುಗರ ಮನ

ಒಪ್ಪುವಂತೆ, ಶಿವಗೆ ಹಿತವಾಗುವಂತೆ ಹೇಳಲ್ಪಟ್ಟಿದೆ. ಹಲವು ಪ್ರಾಂತಗಳಲ್ಲಿ ಬಾಳಿ ಬೆಳಗಿ ಜನಜೀವನವನ್ನು ಅವರವರ ಪ್ರಾಂತ್ಯವನ್ನು ಹಸನುಗೊಳಿಸಿ ಪಾವನಗೊಳಿಸಿದ ಆ ಶರಣಶ್ರೇಷ್ಠರೆಲ್ಲರ ನಾಮನಿರ್ದೇಶನವಷ್ಟೆ ಇಲ್ಲಿ ಅಲ್ಲಿ! ಎಲ್ಲ ಶರಣರ ಮಹಾತ್ಮ್ಯವೂ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿಲ್ಲವಾದರೂ ಪ್ರತಿಯೊಬ್ಬ ಶರಣನ ಊರು ಹೆಸರು ತಪ್ಪದೆ ಹೇಳಲ್ಪಟ್ಟಿದೆ! ಕೆಲವು ಗ್ರಾಮಗಳಲ್ಲಿನ ಶಿವಶರಣರ ಸಮೂಹ ದೊಡ್ಡದಾಗಿತ್ತೊ ಅಲ್ಲಿ ಶರಣರ ಹೆಸರುಗಳು ಗೊತ್ತಾಗದಿದ್ದುದರಿಂದಲೊ ಆ ಗ್ರಾಮದ ಹೆಸರನ್ನು ಮಾತ್ರ ಹೇಳಿ ಅಲ್ಲಿಯ ಭಕ್ತರ ಸಂಚರಣಾಂಬುಜಕ್ಕೆ ಶರಣು ಎಂದಿದ್ದಾನೆ." ಹೀಗೆಲ್ಲ ಅಲ್ಲಿ ಹೊಗಳಿದ ದೇವಿರಪ್ಪನವರು ಇಲ್ಲಿ ಲಕ್ಕಣನನ್ನು ಕಟ್ಟು ಕಥೆಗಾರ ಎನ್ನುವುದು ಯಾವ ಸೀಮೆಯ ನ್ಯಾಯ! ಅರ್ಧ ಶತಮಾನ ಇಡೀ ದಕ್ಷಿಣ ಇಂಡಿಯಾವನ್ನೇ ದಂಡ ಶಾಸನದಿಂದ ಶಾಸಿಸಿ ೧೭ ಶಾಸನಗಳಿಗೆ ಕಾರಣನಾದವನೂ ಸಿಂಹಳಾದಿ ದ್ವೀಪಾಂತರ ಗಳನ್ನೂ ಗೆದ್ದು ದಕ್ಷಿಣ ಸಮುದ್ರಾಧಿಪತಿಯೆಂದು ಬಿರುದು ಹೊತ್ತವನೂ. ಮಹಾ ಭಕ್ತಶ್ರೇಷ್ಠನೂ ಆದ ಲಕ್ಕಣದಂಡೇಶರನ್ನು ಶ್ರೀ ದೇವಿರಪ್ಪನವರು ಸವರವಾಗಿ ಕಥೆ ಕಟ್ಟುವವನು ಎಂದ ಕಾರಣವೇನು? ನಿಜ! ಲಕ್ಕಣದಂಡೇಶ ಶಿವತತ್ತ್ವ ಚಿಂತಾಮಣಿಯಲ್ಲಿ ಬಸವಾದಿ ಪ್ರಮಥರನ್ನು ಮೇರೆ ಮೀರಿ ಹೊಗಳಿಯೂ ದೀಕ್ಷಾ ಪ್ರಕರಣದಲ್ಲಿ ಮರುಳ ಸಿದ್ಧನನ್ನು ಉಲ್ಲೇಖಿಸಿಲ್ಲ! ನಾಲ್ಕು ಜನ ಆಚಾರ್ಯರ ಹೆಸರು ಲಕ್ಕಣ ದಂಡೇಶನ ಕಾಲದಲ್ಲಿ ಇನ್ನೂ ತಯಾರಾಗಿರಲಿಲ್ಲ! ಮೂರು ಮನೆಯ ಕುಗ್ರಾಮದ ಕೀಳುಕುಲ ಕಸುಬಿನ ಬಡಭಕ್ತರ ಪಾದಕ್ಕೆ ಶರಣು ಎನ್ನುವ ಈ ಲಕ್ಕಣ್ಣ ಮರುಳಸಿದ್ಧನನ್ನು ಉಲ್ಲೇಖಿಸಲಿಲ್ಲ! ಮಾರುತ್ತರಕಾರರು ಮುಂದೊಂದು ದಿನ ಲಕ್ಕಣನ ಶಿವತತ್ತ್ವ ಚಿಂತಾ ಮಣಿಯ ೩೭ನೆಯ ಸಂಧಿಯೂ ವಿಶೇಷವಾಗಿಯೂ ಇಡೀ ಗ್ರಂಥ ಸಾಮಾನ್ಯವಾಗಿಯೂ ಲಕ್ಕಣ್ಣನ ಕಟ್ಟು ಕಥೆಯೆಂದು ಘೋಷಿಸಿದರೂ ಆಶ್ಚರ್ಯವಿಲ್ಲ!

ಶ್ರೀ ಹಳಕಟ್ಟಿಯವರು- 'ನವಕರ್ನಾಟಕ' ವಾರಪತ್ರಿಕೆ
(ಸಮೂಹ ಸಂವಹನ ಮಾಧ್ಯಮವಾಗಿ)

● ದೇವೇಂದ್ರಕುಮಾರ ಹಕಾರಿ

ಭಾರತೀಯ ಪತ್ರಿಕೋದ್ಯಮ ೧೯೯೦ರ ಈ ದಶಕದಲ್ಲಿ ತುಂಬ ವ್ಯಾಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ದಿನಪತ್ರಿಕೆ, ವಾರ, ಪಾಕ್ಷಿಕ, ಮಾಸಿಕ, ವಾರ್ಷಿಕದ ವರೆಗೆ ಹರಹುಪಡೆದು 'ಇದರಲ್ಲಿ ಏನುಂಟು ಏನಿಲ್ಲ' ಎನ್ನುವ ಗತಿಯಲ್ಲಿ ಒಂದು ಅತ್ಯಂತ ಪ್ರಭಾವಶಾಲಿ ಸಮೂಹ ಸಂವಹನ ಮಾಧ್ಯಮವಾಗಿದೆ ಮತ್ತು ಅದು ಒಂದು ಉದ್ಯಮವಾಗಿ ರೂಪುಗೊಂಡು ವಿವಿಧ ಪ್ರದೇಶ, ಭಾಷೆಗಳ ಜನಸಮೂಹಕ್ಕೆ ಅಗತ್ಯವಾದ ಎಲ್ಲ ಬಗೆಯ ಸುದ್ದಿ ತಿಳುವಳಿಕೆ ಆಲೋಚನೆಗಳನ್ನು ಸಂವಹನಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ವೃತ್ತಪತ್ರಿಕಾರಂಗದ ಈ ಬೆಳವಣಿಗೆಗೆ ಸುಮಾರು ಎರಡು ಶತಮಾನಗಳ ಚರಿತ್ರೆಯಿದ್ದು ಅದು ವಿವಿಧ ಘಟ್ಟಗಳನ್ನು ದಾಟಿ, ಬಂದ ಅಡ್ಡಿ ಆತಂಕಗಳನ್ನು ಎದುರಿಸಿ ಮುನ್ನಡೆದಿರುವುದು ಗಮನಾರ್ಹ.

೧. ಕ್ರಿ. ಶ. ೧೭೮೦ರ ಜನವರಿ ೨೯ರಂದು ಕಲಕತ್ತಾದಲ್ಲಿ ಮುದ್ರಣಗೊಂಡು ಪ್ರಕಟವಾದ 'ದಿ ಬೆಂಗಾಲ್ ಗೆಜೆಟ್' ಅಥವಾ 'ದಿ ಕಲ್ಕತ್ತಾ ಜನರಲ್ ಅಡ್ವರ್ಟೈಜರ್' ಭಾರತದಲ್ಲಿ ಆದ್ಯದ ಪ್ರಥಮ ವೃತ್ತಪತ್ರಿಕೆ. ಇದರ ಸಂಪಾದಕ ಜೇಮ್ಸ್ ಅಗಸ್ಟಸ್ ಹಿಕ್ಕಿ. ಇಂಗ್ಲೀಷ ಭಾಷೆಯ ಈ ಪತ್ರಿಕೆ ಅಂದಿನ ರಾಜಕೀಯ, ವ್ಯಾಪಾರ, ವಾಣಿಜ್ಯ ಮತ್ತು ಇತರ ವ್ಯಕ್ತಿಗತವಾದ ಸುದ್ದಿಸಂಗತಿಗಳನ್ನು ಪ್ರಕಟಿಸುತ್ತ ಬಂದಿತು. ಈಸ್ಟ್ ಇಂಡಿಯಾ ಕಂಪನಿಯ ಸಾಮ್ರಾಜ್ಯಶಾಹೀ ಧೋರಣೆಗಳನ್ನು ವಿರೋಧಿಸುತ್ತ ಬಂದ. ಸ್ವತಂತ್ರ ಮನೋಭಾವದ ಅಗಸ್ಟಸ್ ಹಿಕ್ಕಿ ಕಂಪನಿಯ ಕ್ರೂರದೃಷ್ಟಿಗೆ ಬಲಿಯಾಗಿ ಅನೇಕ ತೊಂದರೆಗಳನ್ನು ಅನುಭವಿಸಿದ. ಯಾವುದಕ್ಕೂ ಜಗ್ಗದ ಹಿಕ್ಕಿ ಮಾನವನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ.

ಜನರನ್ನು ಸಂಘಟಿಸಿ, ವಿವಿಧ ಬಗೆಯ ಸರಿಯಾದ ಅಭಿಪ್ರಾಯಗಳನ್ನು ಜನತೆಗೆ ಸಂವಹನಗೊಳಿಸಲು ಸಂಘಟನಾ ಸ್ವಾತಂತ್ರ್ಯ, ಭಾಷಾ ಸ್ವಾತಂತ್ರ್ಯ, ಎಲ್ಲರಿಗೂ ದೊರೆಯಬೇಕಾದ ಶಿಕ್ಷಣದ ಅಗತ್ಯತೆ ಸಾಮಾಜಿಕ ಧಾರ್ಮಿಕ ರಂಗದಲ್ಲಿ ತನಗೆ ತೋಚಿದ ಸತ್ಯವನ್ನು ನಿರ್ಭಯವಾಗಿ ಬಿಚ್ಚಿಹೇಳುವ ವ್ಯಕ್ತಿಸ್ವಾತಂತ್ರ್ಯ, ಮುಂತಾದ ವಿಷಯಗಳನ್ನು ಅಗಸ್ಟಸ್ ಹಿಕ್ಕಿ ನಿರ್ಭಿಡೆಯಿಂದ ತನ್ನ ಪತ್ರಿಕೆಯಲ್ಲಿ ಬಲವಾಗಿ ಪ್ರತಿಪಾದಿಸಿದ ಕಂಪನಿ ಸರಕಾರದ ಜನವಿರೋಧಿ ಧೋರಣೆಗಳ ಖಂಡನೆ, ಬ್ರಿಟಿಷ್ ಅಧಿಕಾರಿಗಳ ನಡವಳಿಕೆಯ ಟೀಕೆ ಸಹ ಈ ಪತ್ರಿಕೆಯ ಅಂಕಣಗಳಲ್ಲಿ ಪ್ರಕಟಗೊಂಡವು. ವಾರನ್ ಹೇಸ್ಟಿಂಗ್ಸ್ ಮುಂತಾದ

ಉನ್ನತಾಧಿಕಾರಿಗಳ ಕ್ರೌರ್ಯಕ್ಕೆ ಹಿಕ್ಕಿ ತುತ್ತಾದ. ಯಾವುದಕ್ಕೂ ಸೊಪ್ಪುಹಾಕದ ಆಗಸ್ಟಸ್ ಹಿಕ್ಕಿ ಅಧಿಕಾರಿಗಳ ಹೀನ ಪ್ರವೃತ್ತಿಯನ್ನು ಹಿಂಡಿಸುತ್ತ ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ. ದುರಾಕ್ರಮಣ ನಡೆಸುವ ಶಕ್ತಿಗಳಿಗೆ ಎಂದೂ ತಲೆಬಾಗಕೂಡದು ಎನ್ನುವ ದೃಢನಿರ್ಧಾರಕ್ಕೆ ಅಂಟಿಕೊಂಡ. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಮತ್ತು ಈತ ಪ್ರತಿಪಾದಿಸಿದ ಜನಪರ ಧೋರಣೆಗಳಿಗಾಗಿ ಈತನನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ' ಎಂದೂ ಆತನ ಸಾಧನೆಯನ್ನು ನೆನಪು ಮಾಡಿಕೊಳ್ಳುವುದೇ ಅವನು ಭಾರತೀಯ ಪತ್ರಿಕೋದ್ಯಮಕ್ಕೆ ಕೊಟ್ಟ ಕಾಣಿಕೆಯ ಶ್ರೇಷ್ಠ ಸ್ಮಾರಕ, ದ್ಯೋತಕ, ಎದೂ ಕರೆಯಲಾಗಿದೆ.[೧]

ಕರ್ನಾಟಕದ ವೃತ್ತಪತ್ರಿಕಾರಂಗದ ಬೆಳವಣಿಗೆಯನ್ನು ಗಮನಿಸಿದರೆ ಡಾ. ಹಳಕಟ್ಟಿಯವರನ್ನು ಉತ್ತರ ಕರ್ನಾಟಕದ ವೃತ್ತಪತ್ರಿಕಾರಂಗದ 'ಭೀಷ್ಮ' ಎಂದು ಕರೆಯಬಹುದು. ೧೮೧೬ರಲ್ಲಿ ಗಂಗಾಧರ ಭಟ್ಟಾಚಾರ್ಯ ಆರಂಭಿಸಿದ ಬೆಂಗಾಲ್ ಗಜೆಟ್ ಮೊದಲ ಭಾರತೀಯ ಪತ್ರಿಕೆ, ಅಂದಿನಿಂದ ಸುಮಾರು ಐದು ದಶಕಗಳ ಅವಧಿಯಲ್ಲಿ ಹುಟ್ಟಿಕೊಂಡ ಪರ್ಷಿಯನ್ ಬಂಗಾಲಿ (ಸಂಬಂಧಿಕೌಮುದಿ) ಮುಂತಾದ ದೇಶಭಾಷಾ ಪತ್ರಿಕೆಗಳು ಬ್ರಿಟಿಷರ ಆಡಳಿತೆಗೆ ವಿರುದ್ಧವಾದ ಮನೋಭಾವನೆಗಳನ್ನು ಭಾರತೀಯರಲ್ಲಿ ಹರಡಿದವು. ೧೮೭೦ರಲ್ಲಿ ಮೂಡಿಬಂದ ಪತ್ರಿಕಾಮಸೂದೆ ಜನತೆಯ ಸ್ವತಂತ್ರ ಮನೋಭಾವನೆಗಳನ್ನು ದಮನಗೊಳಿಸುವ ಗುರಿಯಿಂದಲೇ ಮೂಡಿಬಂದಿತು. ವೃತ್ತಪತ್ರಿಕೆಗಳನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸುವ ವಿವಿಧ ಕುತಂತ್ರಗಳನ್ನು ಕತ್ತರಿಸುತ್ತ ಭಾರತೀಯ ಪತ್ರಿಕಾರಂಗ ಬೆಳೆದುಬಂದುದೇ ಒಂದು ರೋಮಾಂಚಕಾರಿ ಚರಿತ್ರೆ.

೧೮೫೭ರ ಸಿಪಾಯಿದಂಗೆ, ೧೯೨೦ರ ವಂದೇ ಮಾತರಂ ಮತ್ತು ಅಸಹಕಾರ ಚಳವಳಿ, ಅಲ್ಲಿಂದ ಒಂದು ನಿರ್ದಿಷ್ಟ ರೂಪಪಡೆದ 'ಮಾಡು ಇಲ್ಲವೆ ಮಡಿ' ಹೋರಾಟದ ದಿನಗಳಿಂದ ಮೊದಲುಗೊಂಡು ೧೯೪೭ರ ವರೆಗೆ. ಆ ಬಳಿಕ 'ಅಂಧಕಾರ ಕಾಲ'ವೆಂದು ಕರೆಯಬಹುದಾದ ೧೯೭೫ರ ತುರ್ತುಪರಿಸ್ಥಿತಿಯ ಕಾಲಾವಧಿ ಮತ್ತು ಇತ್ತೀಚೆಗೂ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ಗದಾಪ್ರಹಾರಗಳ ವರೆಗೆ, ಭಾರತೀಯ ಕೆಲವು ವೃತ್ತ ಪತ್ರಿಕೆಗಳು ಜನತೆಗೆ ಸರಿಯಾದ ಸುದ್ದಿ. ಸತ್ಯಸಂಗತಿಗಳನ್ನು ತಿಳಿಸುವ ತಮ್ಮ ವಸ್ತುನಿಷ್ಠ ಧೋರಣೆಯ ದೃಢಸಂಕಲ್ಪದಿಂದ ವಿಮುಖವಾಗದೆ, ಒಂದು ಪ್ರಬಲ ಸಂವಹನ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಮತ್ತು ಅದರಲ್ಲಿ ಕೆಲಮಟ್ಟಿಗೆ ಶ್ರೇಯಸ್ಸು ಪಡೆಯುತ್ತ ಬಂದಿರುವುದು ಒಂದು ಸಮಾಧಾನಕರ ಅಂಶ.

---

೧ ನಾಡಿಗ ಕೃಷ್ಣಮೂರ್ತಿ 'ಭಾರತೀಯ ಪತ್ರಿಕೋದ್ಯಮ.' ಪು. ೨೫. ವಿ. ವಿ. ೧೯೬೯

೨. ಶ್ರೀ ಹಳಕಟ್ಟಿಯವರ 'ನವಕರ್ನಾಟಕ' ವಾರಪತ್ರಿಕೆಯನ್ನು ಕುರಿತು ವಿವೇಚನೆ ವಿಶ್ಲೇಷಣೆಗಳನ್ನು ಕೈಗೆತ್ತಿಕೊಳ್ಳುವ ಮೊದಲು ಈ ಪತ್ರಿಕೆ ಪ್ರಕಟವಾದ ೨೦ನೆಯ ಶತಮಾನದ ಎರಡನೆಯ ದಶಕದ ಸ್ವಲ್ಪ ಆಚೆ ಈಚೆ ಕಣ್ಣಾಡಿಸಿದರೆ ಕರ್ನಾಟಕದ ಪತ್ರಿಕಾರಂಗದ ಚಟುವಟಿಕೆಗಳು ಕುತೂಹಲಕಾರಿಯಾಗಿರುವುದು ಕಂಡು ಬರುತ್ತದೆ. ಜೊತೆಗೆ ಈ ಕಾಲಾವಧಿಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ಅನೇಕ ದೃಷ್ಟಿಯಿಂದ ಮಹತ್ವ ಪಡೆದಿರುವುದು ನಿಶ್ಚಿತ ಏಕೆಂದರೆ ಇದು ಎರಡು ಮಹತ್ವದ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮಸ್ಯೆಗಳ ಸಂಘರ್ಷದ ಕಾಲಾವಧಿ. ಒಂದು ಭಾರತ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭ್ಯವಾಗಿರಲಿಲ್ಲ; ಎರಡು ಚೆದುರಿದ್ದ ಕನ್ನಡ ಪ್ರದೇಶಗಳು ಒಂದುಗೂಡಿ ಕರ್ನಾಟಕರಾಜ್ಯ ಅಸ್ತಿತ್ವಕ್ಕೆ ಬಂದಿರಲಿಲ್ಲ. ೧೯೨೦ ರಿಂದ ೧೯೫೬ರ ವರೆಗಿನ ಕಾಲಾವಧಿ ಭಾರತದ ಜನತೆಗೆ ಹೇಗೋ ಹಾಗೆ ವೃತ್ತ ಪತ್ರಿಕಾರಂಗಕ್ಕೂ ಒಂದು ಆಹ್ವಾನವನ್ನು ನೀಡಿದ ಸಮಯ. ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಕರ್ನಾಟಕ ರಾಜ್ಯೋದಯ ಈ ಜ್ವಲಂತ ಸಮಸ್ಯೆಗಳ ಮೂಲಮೂಲವನ್ನು ವಿವೇಚಿಸುವ, ಜನತೆಯನ್ನು ಎಚ್ಚರಿಸುವ ಮತ್ತು ಜನತೆಯನ್ನು ಸಂಘಟಿಸಿ ಈ ಉದ್ದೇಶಗಳನ್ನು ಸಾಧಿಸುವತ್ತ ಅವರನ್ನು ಮುನ್ನಡೆಸುವ ಮಹತ್ವದ ಹೊಣೆಯನ್ನು ಈ ಕಾಲದ ಪತ್ರಿಕೆಗಳು ಹೊತ್ತುಕೊಳ್ಳಬೇಕಾಯಿತು.

೨.೧ ೧೮೪೩ರ ಸುಮಾರು ಮಂಗಳೂರಿನ ಜರ್ಮನ್ ಮಿಶನ್‌ನವರು ಪ್ರಕಟಿಸಿದ 'ಕನ್ನಡ ಸಮಾಚಾರ' ಎನ್ನುವ ಪತ್ರಿಕೆ, ಕನ್ನಡ ಪತ್ರಿಕಾ ಪ್ರಪಂಚದ ನಾಂದಿ ಎಂದು ಭಾವಿಸಲಾಗಿದೆ. ಕಾಲಾನಂತರದಲ್ಲಿ ಪ್ರಕಟವಾದ ವಿವಿಧ ಭಾಗದ ವಾರ, ಪಾಕ್ಷಿಕ, ಮಾಸ, ವಾರ್ಷಿಕ ಮುಂತಾದ ಪತ್ರಿಕೆಗಳು ಕನ್ನಡ ಜನತೆಯ ಸಾಮಾಜಿಕ ರಾಜಕೀಯ ಮತ್ತು ಸಾಹಿತ್ಯಕ ಆಶೋತ್ತರಗಳನ್ನು ರೂಪಿಸುವಲ್ಲಿ, ಹೆಚ್ಚಿನ ಕಾರ್ಯವೆಸಗಿದಂತೆ ತೋರುತ್ತದೆ. ಆ ಅವಧಿಯಲ್ಲಿ ತಲೆಎತ್ತಿದ ಕೆಲವು ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳ ಹೆಸರು ಓದಿದರೆ 'ಕರ್ನಾಟಕ ಪ್ರಕಾಶಿಕೆ' 'ಕರ್ನಾಟಕ ವೈಭವ' ನವಕರ್ನಾಟಕ' 'ಜಯಕರ್ನಾಟಕ' 'ಸಂಯುಕ್ತ ಕರ್ನಾಟಕ' 'ವಿಶಾಲ ಕರ್ನಾಟಕ' ಅಂದಿನ ಕನ್ನಡಿಗರಲ್ಲಿ ತಾವೆಲ್ಲ ಒಂದುಗೂಡಬೇಕು, ತಮ್ಮದೇ ಆದ ಪಾತ್ರ ರೂಪುಗೊಳ್ಳಬೇಕು. ಎನ್ನುವ ಪ್ರಬಲವಾದ ಹಂಬಲ ಮೂಡಿದ್ದು ಸ್ಪಷ್ಟ. ಅವರ ಈ ಪ್ರಾದೇಶಿಕ ಪ್ರಜ್ಞೆ ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಸಮರಸಗೊಂಡಿತ್ತೆನ್ನುವುದೂ ಇಲ್ಲಿ ಗಮನಾರ್ಹ. ಅಂದು ಪ್ರಕಟವಾಗುತ್ತಿದ್ದ ಕೆಲವು ಪತ್ರಿಕೆಗಳು : ೧೮೮೩ರ, ಧಾರವಾಡದ (ಹೊನ್ನಾಪುರಮಠ ಗದಿಗೆಯ್ಯ) 'ಚಂದ್ರೋದಯ', ೧೯೦೦ರ ಮೈಸೂರಿನ (ಯಜಮಾನ ವೀರಬಸಪ್ಪ) 'ಮೈಸೂರಸ್ಟಾರ್' ಬಳ್ಳಾರಿಯ (ಪಂ. ನಾಗೇಶ ಶಾಸ್ತ್ರಿ) ಕರ್ನಾಟಕ ಬಂಧು, ಹೊಸಕೇರಿ ಅಣ್ಣಾಚಾರ್ಯರ 'ವಿಜಯ' ಜಠಾರ ವಾಮನರಾಯರ 'ರಾಜಹಂಸ', ಬೆಳಗಾಂವಿಯ (ಪಂಡಿತಪ್ಪ ಚಿಕ್ಕೋ ವಿಭಾಕರು (ಸರ್ವೂರ ಹನಮಂತರಾವ್) 'ಕರ್ನಾಟಕ ಮಿತ್ರ'

‘ಕರ್ನಾಟಕ ವೈಭವ’ (ಜಿ. ಎಸ್. ದೇಶಪಾಂಡೆ) ಉತ್ತರ ಕನ್ನಡ ಜಿಲ್ಲೆಯ ‘ಕಾನಡಾವೃತ್ತ’ ‘ಕಾನಡಾ ಧುರೀಣ’ ಹೀಗೆ ಹತ್ತಾರು ವಾರಪತ್ರಿಕೆಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಮೂಡಿ ಬಂದವು ಇದೇ ಸಂದರ್ಭದಲ್ಲಿ ಮಹಿಳೆಯರಿಗಾಗಿ ಪ್ರಕಟವಾಗುತ್ತಿದ್ದ ‘ಸರಸ್ವತಿ’ (ಆರ್. ಕಲ್ಯಾಣಮ್ಮ) ಹೆಸರಿಸಬಹುದಾದ ಮತ್ತೊಂದು ಪತ್ರಿಕೆ (ಇದೇ ಅವಧಿಯಲ್ಲಿ ತಲೆಯೆತ್ತಿದ ಸಾಹಿತ್ಯ ಪತ್ರಿಕೆ ಮತ್ತು ವಿದ್ವತ್ (ಸಂಶೋಧನೆ ಇತ್ಯಾದಿ) ಪತ್ರಿಕೆಗಳು ಈ ಪ್ರಬಂಧದ ಉದ್ದೇಶಕ್ಕೆ ಹೊರತಾಗಿರುವುದ ರಿಂದ ಇಲ್ಲಿ ಅವುಗಳ ವಿಷಯ ಕೈಬಿಡಲಾಗಿದೆ.)

ಸಾಹಿತ್ಯ, ಧರ್ಮಗಳ ಕ್ಷೇತ್ರವನ್ನು ಗಮನಿಸಿದಾಗ ಶ್ರೀ ಹಳಕಟ್ಟಿ ಅವರು ಮಾಡಿದ ಕಾರ್ಯ ಚಿರಸ್ಮರಣೀಯವಾಗಿದೆ. ೧೯೨೬ನೆಯ ಫೆಬ್ರುವರಿ ತಿಂಗಳಲ್ಲಿ ಆರಂಭಿಸಿದ ಅವರ ‘ಶಿವಾನುಭವ’ ಪತ್ರಿಕೆ ಮರೆತುಹೋದ ವಚನ ‘ಶಿವನಿಧಿಯನ್ನು’ ಅಖಂಡವಾಗಿ ನಾಲ್ಕು ದಶಕದವರೆಗೆ ಪ್ರಕಟಿಸಿ ಕನ್ನಡನಾಡಿಗೆ ಮಹದುಪಕಾರ ಮಾಡಿದ ಕಾರ್ಯ ಯಾರೂ ಮರೆಯುವಂಥದಲ್ಲ ಅವರನ್ನು ಜನಮನ್ನಿಸಿ ‘ವಚನಪಿತಾಮಹ’ ಎಂದು ಕರೆದು ಗೌರವಿಸಿದುದೇ ಸಾಕ್ಷಿ.

೨೨ ಶ್ರೀ ಹಳಕಟ್ಟಿಯವರ ಜೀವನದ ಗುರಿ ಇಷ್ಟಕ್ಕೆ ಸೀಮಿತವಾಗಲಿಲ್ಲ ‘ಕರ್ನಾಟಕಸ್ಥರು’ ಸರ್ವತೋಮುಖವಾದ ಏಳಿಗೆ ಪಡೆಯಬೇಕು, ರಾಜಕೀಯ, ಸಾಮಾಜಿಕ ಪ್ರಜ್ಞೆಯುಳ್ಳ ಜಾಗೃತ ನಾಗರಿಕರಾಗಿ ಬಾಳಬೇಕು ಸಮಕಾಲಿನ ಜೀವನದ ಎಲ್ಲ ಮಗ್ಗಲುಗಳನ್ನು ಆಮೂಲಾಗ್ರವಾಗಿ ಅರ್ಥಮಾಡಿಕೊಳ್ಳಬೇಕು. ನಡೆಯುತ್ತಿರುವ ಪ್ರಾದೇಶಿಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರತಿಯೊಂದು ರಂಗದ ಮಹತ್ವದ ಸಂಗತಿಗಳನ್ನು ಅರಿತು ಸ್ಪಂದಿಸುತ್ತಲೇ ರಾಷ್ಟ್ರೀಯ ಪ್ರಜ್ಞೆ ಮತ್ತು ಜನಾಂಗ ಪ್ರಜ್ಞೆ ಗಳನ್ನು ಸಂವರ್ಧಿಸುತ್ತ ನಾಡಿನ ಸರ್ವಾಂಗೀಣ ಪ್ರಗತಿಗೆ ಅಹರ್ನಿಶಿ ಶ್ರಮಿಸಬೇಕು. ಈ ದೇಶದ ಪ್ರಜ್ಞಾವಂತ ಪ್ರಜೆಗಳಾಗಿ ಬದುಕಿನ ವಿವಿಧರಂಗಗಳಲ್ಲಿ ವಿಕಾಸಹೊಂದಿ ಕರ್ನಾಟಕದ ವಿಕಾಸಕ್ಕೆ ತನ್ಮೂಲಕ ಭಾರತದ ಪ್ರಗತಿಗೆ ಸಿದ್ಧರಾಗಬೇಕು ಇತ್ಯಾದಿ ಘನವಾದ ಉದ್ದೇಶಗಳಿಂದ ಅವರು ಪ್ರೇರಿತರಾದರು ತಮ್ಮ ಉದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ಹಗಲಿರುಳು ಚಿಂತನೆ ಮಾಡಿದ ಈ ಮಹಾನುಭಾವ ಶಿವಾನುಭವ ತ್ರೈಮಾಸಿಕ ಪತ್ರಿಕೆ ಆರಂಭಿಸಿದ ಮಾರನೆಯ ವರ್ಷವೇ ‘ನವಕರ್ನಾಟಕ’ ಎನ್ನುವ ವಾರ ಪತ್ರಿಕೆಯನ್ನು ಆರಂಭಿಸಿ ತಮ್ಮ ‘ಹಿತಚಿಂತಕ’ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು.

೧೯೨೬ರಲ್ಲಿ ತ್ರೈಮಾಸಿಕ ‘ಶಿವಾನುಭವ’ದ ಪ್ರಥಮ ಸಂಪುಟದ ಮೊದಲ ಸಂಚಿಕೆ ಪ್ರಕಟವಾಗಿದ್ದರೆ ೧೯೨೭ರ ಅಕ್ಟೋಬರನಲ್ಲಿ ವಾರಪತ್ರಿಕೆ ‘ನವಕರ್ನಾಟಕ’ದ ಪ್ರಥಮ ಸಂಪುಟದ ಮೊದಲ ಸಂಚಿಕೆ ಬೆಳಕು ಕಂಡಿತು. ಈ ಪತ್ರಿಕೆ ಆಕಾರದಲ್ಲಿ ೧೨ ಪುಟಗಳು

ಪ್ರತಿಯೊಂದು ಪುಟಕ್ಕೆ ಎರಡು 'ಕಾಲಂ' (ಇಂದಿನ ವೃತ್ತ ಪತ್ರಿಕೆಯ ಎರಡು 'ಕಾಲಂ' ಗಳಿಗೆ ಸಮನಾದ ಒಂದು 'ಕಾಲಂ'). ಅಶ್ವಿನ ಶುದ್ಧ ೧೦ ಶಕೆ ೧೮೪೯ ಗುರುವಾರ ಆರನೆಯ ಅಕ್ಟೋಬರ್ ೧೯೨೭ ರಂದು ಪ್ರಕಾಶಗೊಂಡ ನವಕರ್ನಾಟಕ ವಾರ ಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ ೧ ಆಣೆ ಮತ್ತು ವಾರ್ಷಿಕ ವರ್ಗಣಿ ೩ ರೂ. ೧೨ ಆಣೆ ಸಂಪಾದಕ ರಾ||ಸಾ|| ಫ. ಗು. ಹಳಕಟ್ಟಿ ಸಂಪಾದಕರ ಹೆಸರು ನಮೂದಿಸುವಲ್ಲಿಯೇ ಅವರು ಇಂಗ್ಲಿಷ್ ಭಾಷೆಯ ಆಂಗ್ಲರ ನಡವಳಿಕೆಗೆ ಜೋತುಬಿದ್ದ ರಾವಸಾಹೇಬರಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಎಫ್. ಜಿ. ಹಳಕಟ್ಟಿ ಎಂದು ಬರೆದುಕೊಳ್ಳದೆ ಫ. ಗು. ಹಳಕಟ್ಟಿ ಎಂದು ಬರೆದಿರುವುದೇ ಅದಕ್ಕೆ ಒಂದು ನಿದರ್ಶನ.

೨.೩ ವಿವಿಧ ಸಮೂಹ ಸಂವಹನ ಮಾಧ್ಯಮಗಳಲ್ಲಿ ಮುದ್ರಣ ಮಾಧ್ಯಮ ಭಾರತದಂಥ ದೇಶದಲ್ಲಿ ಬಹಳ ಪ್ರಬಲವಾದುದು. ಪ್ರತಿಶತ ೬೫–೬೭ ಅನಕ್ಷರಸ್ಥರಿರುವ ಈ ದೇಶದಲ್ಲಿ ಮುದ್ರಿತ ವಿಷಯ ಸತ್ಯವೆಂದೇ ಭಾವಿಸುವ, ನಂಬುವ ಜನರೇ ಅಧಿಕ ಈ ದೃಷ್ಟಿಯಿಂದ ಈ ಮಾಧ್ಯಮದ ಮೂಲಕ ತನ್ನ ವಿಚಾರ, ಆಲೋಚನೆ, ವಿವೇಚನೆ, ಸಂದೇಶಗಳನ್ನು ಜನತೆಗೆ ಮುಟ್ಟಿಸುವ ವ್ಯಕ್ತಿ ಒಬ್ಬ ಸಮರ್ಥ ಮತ್ತು ಸಮಗ್ರದೃಷ್ಟಿಯ ಸಂವಹನಕಾರನಾಗಿರುವುದು ಅತ್ಯಗತ್ಯ ತನ್ನ ಸುತ್ತಣ ಯಾವುದೇ ಬಗೆಯ ವಿಸ್ತಾರದ ಆಗುಹೋಗುಗಳಿಗೆ ಘಟನೆಗಳಿಗೆ ಮನಸ್ಸನ್ನು ತೆರೆದಿಟ್ಟು ಸತ್ಯಾಸತ್ಯತೆಗಳನ್ನು ಗಮನಿಸಿ ಜನಪರವಾಗಿ ನಿಲುವು ತಳೆದು, ಜನಹಿತಧೋರಣೆಗಳನ್ನು ತನ್ನ ವೃತ್ತ ಪತ್ರಿಕೆಯ ಮೂಲಕ ಸಂವಹನಗೊಳಿಸುವ ಹೊಣೆಗಾರಿಕೆಯನ್ನು ನಿರಂತರ ಜಾಗರೂಕತೆಯಿಂದ ನಿರ್ವಹಿಸುವ ವ್ಯಕ್ತಿ-ವರದಿಗಾರ, ಸಂಪಾದಕ ಒಬ್ಬ ಶ್ರೇಷ್ಠ ಸಂವಹನಕಾರನಾಗಿರುತ್ತಾನೆ ಶ್ರೀ ಹಳಕಟ್ಟಿ ಅಂಥ ಒಬ್ಬ ಸಮಗ್ರ ದೃಷ್ಟಿಯ ವಸ್ತುನಿಷ್ಠ ಸಂವಹನಕಾರರಾಗಿದ್ದರು ಎನ್ನುವುದಕ್ಕೆ ಅವರ ನವಕರ್ನಾಟಕ ಪತ್ರಿಕೆ ಕೈಗನ್ನಡಿಯಾಗಿದೆ.

೨.೪ ಸುಮಾರು ೧೫ ವರ್ಷಕಾಲ ನವಕರ್ನಾಟಕ 'ವಾರ ಪತ್ರಿಕೆ'ಯ ಸಂಪಾದಕರಾಗಿ ಅದನ್ನು ವಾರದಿಂದವಾರಕ್ಕೆ ವಿಶಿಷ್ಟವಾಗಿ ರೂಪಿಸುತ್ತ, ವರ್ಷದಿಂದ ವರ್ಷಕ್ಕೆ ಅದೊಂದು ಸಮರ್ಥ ಸಂವಹನ ಮಾಧ್ಯಮವಾಗಿ ಉತ್ಕರ್ಷಹೊಂದಿ ಜನತೆಗೆ ಅವರ ಭಾಷೆಯಲ್ಲಿಯೇ ಹೇಳುವುದಾದರೆ 'ಕರ್ನಾಟಕಸ್ಥ'ರಿಗೆ–ಅಗತ್ಯವಾದ ಪ್ರಜ್ಞೆ ಮೂಡಿಸುವಲ್ಲಿ ಅರಿವು ನೀಡುವಲ್ಲಿ ಎಚ್ಚರ ಗೊಳಿಸುವಲ್ಲಿ ಅಗತ್ಯವಾದ ವಿಷಯಗಳನ್ನು ಸಂಗ್ರಹಿಸಿ ಪ್ರಸರಣ ಗೊಳಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ನವಕರ್ನಾಟಕ ಪತ್ರಿಕೆಯ ಉದ್ದೇಶವನ್ನು ಅವರ ಪ್ರಥಮ ಸಂಪುಟದ ಮೊದಲ ಸಂಚಿಕೆಯ ಸಂಪಾದಕೀಯ ಟಿಪ್ಪಣಿಯಲ್ಲಿ ಅದರ ಸಂಪಾದಕ ಶ್ರೀ ಹಳಕಟ್ಟಿ ಸ್ಪಷ್ಟ ಪಡಿಸಿರುವುದು ಹೀಗೆ: ಇದರಲ್ಲಿ ರಾಜಕೀಯ ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳಲ್ಲಿ ಕರ್ನಾಟಕಸ್ಥರು ಹ್ಯಾಗೆ ಮುಂದುವರಿಯಬೇಕು. ಎಂಬುದರ ಬಗ್ಗೆ ವಿವೇಚನೆಗಳೂ, ಆ ಬಗ್ಗೆ ಪ್ರಯತ್ನಗಳೂ ಈ ಪತ್ರಿಕೆ ದ್ವಾರಾ ಮಾಡಲ್ಪಡುವವು. ಇದು ಸಮಾಜ ಮಂಗಡ.

ಜಾತಿ ಈ ಬಗ್ಗೆ ಯಾವ ತರದ ಭೇದಭಾವಗಳನ್ನು ಎಣಿಸದೆ ಯಾವುದು ಸತ್ಯವಾದದ್ದೋ ನ್ಯಾಯವಾದದ್ದೋ ಅದನ್ನೇ ನಿಷ್ಪಕ್ಷಪಾತನೆಯಿಂದಲೂ ನಿರ್ಭಯದಿಂದಲೂ ಜರುಗಿಸಲಿಕ್ಕೆ ಸಿದ್ಧವಾಗಿರುವದು. ಇದರಲ್ಲಿ ಕರ್ನಾಟಕದ ಸಂಸ್ಕೃತಿಯ ಹೆಚ್ಚಳವು ಬಹುವಿಶದವಾಗಿ ವಾಚಕರ ಮುಂದೆ ಇಡಲ್ಪಡುವದು. ಸರ್ವ ವಿಷಯದಲ್ಲಿಯೂ ಕರ್ನಾಟಕವು ಮುಂದುವರಿದು 'ನವಕರ್ನಾಟಕ' ವನ್ನು ಸಿದ್ಧಗೊಳಿಸುವುದೇ ಈ ಪತ್ರಿಕೆಯ ಮುಖ್ಯ ಧ್ಯೇಯವಾಗಿದೆ. ೧೯೨೭ ರ ಈ ಸಂಪಾದಕೀಯ ಟಿಪ್ಪಣಿ ೧೯೮೭ ಯಾವುದೇ ಪತ್ರಿಕಾ ಸಂಪಾದಕನಿಗೂ ಒಂದು ಮಾರ್ಗದರ್ಶಿ ಸೂತ್ರವಾಗಿದೆ.

ಶ್ರೀ ಹಳಕಟ್ಟಿ ವಿವರಿಸಿದ ಪತ್ರಿಕೆಯ ಧ್ಯೇಯಗಳನ್ನು ಸೂತ್ರಬದ್ಧವಾಗಿ ಹೇಳುವುದಾದರೆ :

ಅ) ಕರ್ನಾಟಕಸ್ಥರು ರಾಜಕೀಯ, ಸಾಮಾಜಿಕ ಔದ್ಯೋಗಿಕ ಶೈಕ್ಷಣಿಕ ವಿಷಯಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು.

ಆ) ಪತ್ರಿಕೆ ವಿಷಯ ನಿರೂಪಣೆಯಲ್ಲಿ ಯಾವುದೇ ತರದ ಭೇದಭಾವಗಳನ್ನು ಎಣಿಸಕೂಡದು. ಮತ್ತು ಸತ್ಯವಾದದ್ದನ್ನು ನ್ಯಾಯವಾದದನ್ನು ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತವಾಗಿ ಜನರಿಗೆ ಮುಟ್ಟಿಸಲು ಸಿದ್ಧವಾಗಿರಬೇಕು.

ಇ) ಕರ್ನಾಟಕ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸವಿಸ್ತಾರವಾಗಿ ವಾಚಕರಿಗೆ ವಿವರಿಸಿ ತಿಳಿಸಿ ಹೇಳಬೇಕು.

ಈ ಮುಂದೆ ಅಸ್ತಿತ್ವದಲ್ಲಿ ಬರುವ 'ನವಕರ್ನಾಟಕ' ಎಲ್ಲ ದೃಷ್ಟಿಯಿಂದಲೂ ಮುಂಮುಂದುವರೆದ ರಾಜ್ಯವಾಗಿರಬೇಕು. ಆ ದಿಕ್ಕಿನಲ್ಲಿ ಜನತೆಯನ್ನು ಸಿದ್ಧಗೊಳಿಸಬೇಕು. ಅದೇ ಈ ಪತ್ರಿಕೆಯ ಮುಖ್ಯಧ್ಯೇಯ.

ಯಾವುದೇ ಜನಾಂಗದ ಸರ್ವಾಂಗೀಣ ವಿಕಾಸವಾಗಬೇಕಾದರೆ ಜನತೆ ಎಲ್ಲ ಬಗೆಯ ವಿಷಯ ಸುದ್ದಿ-ಸಂಗತಿಗಳ ತಿಳುವಳಿಕೆ ಪಡೆಯುತ್ತ ಪ್ರಜ್ಞಾವಂತನಾಗರಿಕರಾಗಬೇಕು ಮತ್ತು ತಮ್ಮ ಪ್ರದೇಶದ ನಾಡಿನ ಸಂಸ್ಕೃತಿ ಸಂವರ್ಧನೆಗೆ ಕಾರಣರಾಗಬೇಕು. ಶ್ರೀ ಹಳಕಟ್ಟಿಯವರ ಈ ಧ್ಯೇಯಧೋರಣೆ, ವಿಶಾಲದೃಷ್ಟಿ, ಪತ್ರಿಕಾಕರ್ತರಿಗೆ ನಿರಂತರ ಪ್ರಸ್ತುತ ಎಂದು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿದೆಯೇ ?

೩. 'ನವಕರ್ನಾಟಕ' ಪತ್ರಿಕೆಯ ಮೂಲಕ ಜನತೆಗೆ ಸಂಪನ್ನಗೊಂಡ ವಿಷಯ ಪಟ್ಟಿಗಳನ್ನು ಗಮನಿಸಿದರೆ ಶ್ರೀ ಹಳಕಟ್ಟಿ ಎಂಥ ಅದ್ಭುತ ವ್ಯಕ್ತಿ ಮತ್ತು ಎಂಥ ಪ್ರಜ್ಞಾವಂತ ಪತ್ರಿಕಾಕರ್ತರಾಗಿದ್ದರು ಎನ್ನುವುದು ಸ್ಪಷ್ಟಗೊಳ್ಳುತ್ತದೆ. ಒಂದು ಸ್ಥೂಲವಾದ ವಿಷಯ ಪಟ್ಟಿಯನ್ನು (ಕೇವಲ ಒಂದು ವರ್ಷದ ೫೨ ಸಂಚಿಕೆಗಳನ್ನು ಗಮನಿಸಿ) ಕೊಡಲಾಗಿದೆ. ಒಂದನೆಯ ಸಂಪುಟದ ೧೫ನೆಯ ಸಂಚಿಕೆಯಿಂದ

(೧೯ ಜನವರಿ ೧೯೨೮) ಪತ್ರಿಕೆಯು ವಿನ್ಯಾಸದಲ್ಲಿ ಬದಲಾವಣೆ ಮಾಡಿದಂತೆ ತೋರುತ್ತದೆ. ಈ ಸಂಚಿಕೆಯಿಂದ ಮುಂದಿನ ಎಲ್ಲ ಸಂಚಿಕೆಗಳಿಗೂ ವಿಷಯಾನುಕ್ರಮಣಿಕೆಯನ್ನೇ ಮುದ್ರಿಸಲಾಗಿದೆ.

ಈ ಪತ್ರಿಕೆಯ ಸಂಪಾದನ ವಿನ್ಯಾಸದಲ್ಲಿ ಎದ್ದು ಕಾಣುವ ಅಂಶಗಳು :

೧. ಸಂಪಾದಕೀಯ ಟಿಪ್ಪಣಿ-ಓರ್ವ ಕನ್ನಡಿಗನಿಂದ ೨. ಲೇಖನಮಾಲೆಗಳು. ೩. ಪತ್ರವ್ಯವಹಾರ ೪. ಸುದ್ದಿಗಳು ವಿಮರ್ಶೆಗಳು ೫. ವಿವಿಧ ವಿಷಯಗಳು ೬. ವರ್ತಮಾನಸಾರ ೭. ಜಾಹಿರಾತುಗಳು ೮. ನೋಟೀಸು ಇತ್ಯಾದಿ ಮೊದಲ ೧೪ ಸಂಚಿಕೆಗಳ ವಿಷಯ ಪಟ್ಟಿಯ ವಿವರಣೆಗಳನ್ನು ಗಮನಿಸಿದರೆ ಇನ್ನುಳಿದ ಸಂಚಿಕೆಗಳ ರೂಪ-ಸ್ವರೂಪಗಳ ವ್ಯಾಪ್ತಿ ಬೆರಗುಗೊಳಿಸುತ್ತದೆ.

೩.೧ ಹಳ್ಳಿ, ತಾಲೂಕು ಜಿಲ್ಲೆ, ವಿವಿಧ ರಾಜಧಾನಿಗಳು, ಮೊದಲುಗೊಂಡು ಪರರಾಷ್ಟ್ರಗಳ ವರೆಗೆ ಇಲ್ಲಿಯ ವಿಷಯ ವೈವಿಧ್ಯದ ವಿಸ್ತಾರ ಹರಡಿಕೊಂಡಿದೆ.

ಅ) ಮಳೆ-ಬೆಳೆ, ಕೃಷಿ (ಒಕ್ಕಲುತನ) ಶೇತಕಿ ಬೋರ್ಡ್. ರೈತರ ಸ್ಥಿತಿಗತಿ ಒಕ್ಕಲುತನದ ಸಂಗತಿ, ದನಗಳ ಸಂಗೋಪನೆ, ಒಕ್ಕಲುತನದ ಪ್ರದರ್ಶನ, ಹತ್ತಿಬೆಳೆ, ಗ್ರಾಮಸುಧಾರಣೆ, ಮುಂತಾದವು **ಗ್ರಾಮೀಣ ಕೃಷಿಪ್ರಧಾನ ಸುದ್ದಿ ಸಂಗತಿಗಳು.**

ಆ) ನೌಕಾಕಂಪನಿ, ಮಹಾರಾಷ್ಟ್ರ ವ್ಯಾಪಾರೀ ಮಂಡಳಿ, ಬಾಂಬೇ ಕಾಟನ್ ಮಾರ್ಕೆಟ್ ಬಿಲ್ಲು, ಮುಂಬಯಿ ಗಿರಣಿಗಳು, ಮಂಗಳೂರು ಹಂಚಿನ ಕಾರಖಾನೆ, ಮೈಸೂರು ರೇಲ್ವೆ, ಬ್ಯಾಂಕು, ಸಹಕಾರೀ ಜಮೀನು ಪತ್ತಿ ಮತ್ತು ಬ್ಯಾಂಕು, ಸಹಕಾರೀ ಸಂಘಗಳ ಬೆಳವಣಿಗೆ ಮುಂತಾದವು **ವ್ಯಾಪಾರ ವಾಣಿಜ್ಯ ಕ್ಷೇತ್ರದ ವಿಷಯಗಳು.**

ಇ) ಶಿಕ್ಷಣ ಕ್ಷೇತ್ರವನ್ನು ಕುರಿತ ಶ್ರೀ ಹಳಕಟ್ಟಿಯವರ ವಿಶೇಷ ಕಾಳಜಿ ಪತ್ರಿಕೆಯ ಮಹತ್ವದ ಅಂಶವಾಗಿದೆ. ಹಿಂದುಸ್ಥಾನದ ಪ್ರಾಚೀನ ಶಿಕ್ಷಣ, ಗಾಂವಠೀ ಶಾಲೆ, ಆಲಮಟ್ಟಿ ಹರ್ಡೇಕರ ಮಂಜಪ್ಪನವರ ವಿದ್ಯಾಲಯ, ಶಾರೀರಿಕ ಶಿಕ್ಷಣ, ವೈದ್ಯಕೀಯ, ಆಯುರ್ವೇದ ಶಿಕ್ಷಣ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳು, ಸ್ಕೂಲ್ ಬೋರ್ಡ್ ಒತ್ತಾಯದ ಶಿಕ್ಷಣ, ಉನ್ನತ ಶಿಕ್ಷಣ, ಡೆಹರಾಡೂನಿನ ಲಷ್ಕರೀ ಕಾಲೇಜು, ಒಕ್ಕಲುತನದ ಶಾಲೆ-ಕಾಲೇಜು, ಶಿಲ್ಪಶಾಸ್ತ್ರ ಶಿಕ್ಷಣ, ಬಾಲವೀರ ಅಥವಾ ಸ್ಕೌಟ, ಅರಣ್ಯ ಕಾಲೇಜು, ಶಿರಸಂಗೀಕರ ಕಾಲೇಜ, ಆಂಧ್ರ ವಿಶ್ವವಿದ್ಯಾಲಯ, ರಂಗೂನ ವಿಶ್ವವಿದ್ಯಾಲಯ, ಶಿಕ್ಷಕ-ಶಿಕ್ಷಣ, ಸಿವಿಲ್ ಸರ್ವೀಸ್ ಪರೀಕ್ಷೆ, ಲಂಡನ್ನಿನಲ್ಲಿ ಜರುಗಿದ ಮುಸಲ್ಮಾನ ಶಿಕ್ಷಣ ಪರಿಷತ್ತು, ಹೀಗೆ ಅಗಣಿತಸ್ತರದ ಶೈಕ್ಷಣಿಕ ಕಾರ್ಯ ಚಟುವಟಿಕೆ ಪ್ರಗತಿಪರ ಧೋರಣೆಗಳು ನಿರೂಪಿತವಾಗಿವೆ.

ಈ) ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕಾಣುವ ವಿಷಯಗಳು. ಮರಾಠಿ ಕನ್ನಡ. ತೆಲುಗು, ಕನ್ನಡ ಪಠ್ಯಪುಸ್ತಕಗಳು ಅವುಗಳ ಪರಿಷ್ಕರಣ, ವೀರಶೈವ ಕಾವ್ಯ, ವಚನವಾಙ್ಮಯ. ಜೈನ ವಾಙ್ಮಯ ಪ್ರದರ್ಶನ. ದಾಸ ಸಾಹಿತ್ಯ. ಫಿರಕೀ ಲೈಬ್ರರಿ ಆಗಮ ವಾಙ್ಮಯ ಪ್ರಚಾರ, ಸಂಸ್ಕೃತ ಪಾಠಶಾಲೆ. ಉರ್ದು ಭಾಷೆಯ ಸುಧಾರಣೆ ಇತ್ಯಾದಿ.

ಉ) ಸಾಮಾಜಿಕ ಧಾರ್ಮಿಕ ರಂಗದ ವಿಷಯ ಸಂಗ್ರಹ ಮತ್ತು ವಿವೇಚನೆ ಈ ಪತ್ರಿಕೆ ಮತ್ತೊಂದು ವೈಶಿಷ್ಟ್ಯ :

ಗಂಗಾಮತ ಪರಿಷತ್ತು. ಅಸ್ಪೃಶ್ಯರ ಉದ್ಧಾರ. ವೀರಶೈವ ತರುಣ ಸಂಘ, ಒಳ ಪಂಗಡಗಳ ಏಕೀಕರಣ, ಬ್ರಾಹ್ಮಣ ಸಭೆ. ವೀರಶೈವ ಮಹಾಸಭೆ. ಸೋಮವಂಶ ಕ್ಷತ್ರಿಯರ ಸಭೆ, ಆಲ್‌ಇಂಡಿಯಾ ಮುಸ್ಲಿಂಲೀಗ್, ಹಿಂದುಸ್ತಾನೀ ಸೇವಾದಲದ ಹನುಮಾನ ಶಿಬಿರ, ಹಿಂದೂ ಮುಸಲ್ಮಾನರ ಐಕ್ಯ. ಈ ಕೆಲವು ಗಮನಾರ್ಹ ವಿಷಯ ಪಟ್ಟಿಗಳು ಶ್ರೀ ಹಳಕಟ್ಟಿಯವರ ಸಮತೋಲ ದೃಷ್ಟಿಗೆ ದ್ಯೋತಕವಾಗಿವೆ.

ಊ) ರಾಜಕೀಯಕ್ಕೆ ಸಂಬಂಧಿಸಿದ ವಿಷಯಪಟ್ಟಿ ಜನರಲ್ಲಿ ಪ್ರಾಂತ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಕುದುರಿಸುವಲ್ಲಿ ಮಹತ್ವದ ಕಾರ್ಯನಿರ್ವಹಿಸುವದು ಪತ್ರಿಕೆಯ ಪುಟ ಪುಟದಲ್ಲಿ ಎದ್ದುಕಾಣುವ ಸಂಗತಿ. ಕರ್ನಾಟಕ ಏಕೀಕರಣ, ಕರ್ನಾಟಕಸ್ಥರ ಕರ್ತವ್ಯ, ಭಾರತ ಸ್ವಾತಂತ್ರ್ಯ, ಕಾಂಗ್ರೆಸ್ ಅಧಿವೇಶನ, ಕರ್ನಾಟಕದ ಏಳ್ಗೆ, ಮುಂಬಯಿ ಇಲಾಖೆಯಿಂದ ಕರ್ನಾಟಕಕ್ಕೆ ಹಾನಿ. ಆಲ್ ಇಂಡಿಯಾ ವಿದ್ಯಾರ್ಥಿ ಪರಿಷತ್ತು. ಸ್ವದೇಶೀ ಸರಕುಗಳು. ಖಾದಿ ಕರ್ನಾಟಕದ ಸಾಂಪತ್ತಿಕ ಉನ್ನತಿ, ಇನಾಮದಾರರ ಪರಿಷತ್ತು. ಮೊದಲ ಮಹಾಯುದ್ಧದ ಪರಿಣಾಮ. ಕಾಂಗ್ರೆಸ್ ಠರಾವು. ಸೈಮನ್ ಕಮೀಶನ್. ರಾಯಲ್ ಕಮೀಶನ್, ಹೀಗೆ ಸಮಕಾಲೀನ ಸಾಮಾಜಿಕ ರಾಜಕೀಯ ಸಂಗತಿಗಳನ್ನು ಸಂವಹನಗೊಳಿಸಿದ ಶ್ರೀ ಹಳಕಟ್ಟಿ ಕನ್ನಡಿಗರು ಸುಸಂಘಟಿತರಾಗಬೇಕು, ರಾಜಕೀಯ ಪ್ರಜ್ಞೆಹೊಂದಿ ನಾಡಿನ ಹಿತಾಹಿತಗಳನ್ನು ವಸ್ತುನಿಷ್ಠ ದೃಷ್ಟಿಯಿಂದ ವಿವೇಚಿಸುವ ಸಾಮರ್ಥ್ಯ ಪಡೆಯಬೇಕು ಎಂದು ಸಂಕಲ್ಪಿಸಿದರು.

ಊ) ಕಾಯಿದೆ ಪದವೀಧರರಾದ ಅವರು ಕೌಟುಂಬಿಕ, ಸಾಮಾಜಿಕ ಶೈಕ್ಷಣಿಕ ಮತ್ತು ರಾಜಕೀಯ ವಿಷಯಗಳನ್ನು ತಾರ್ಕಿಕವಾಗಿ ಪ್ರತಿಪಾದಿಸುತ್ತ ಬಂದರು. ಬಾಲ ವಿವಾಹ ಪ್ರತಿಬಂಧಕ, ಜನಸಂಖ್ಯೆ ಬಾಂಬೇಕಾಟನ್ ಮಾರ್ಕೆಟ್ ಬಿಲ್ಲು, ಸ್ಕೂಲಬೋರ್ಡ ಲೋಕಲ್‌ಬೋರ್ಡುಗಳ ನಡವಳಿ–ನಡವಳಿಕೆ, ಸಹಕಾರೀ ಬ್ಯಾಂಕು, ಸಹಕಾರಿ ಸಂಘಗಳು ನಗರ ರಚನೆ, ನಗರ ಸುಧಾರಣೆ, ಮಂತ್ರಿಗಳ ವೆಚ್ಚ, ವಿವಿಧ ಆಯೋಗಗಳ ನೇಮಕಾತಿ. ಕ್ರಮಬದ್ಧತೆ, ಕಾನೂನಿನ ಕ್ರಮಗಳು ಇತ್ಯಾದಿಗಳನ್ನು ಕನ್ನಡ ಜನತೆಗೆ ಕಾಲಕಾಲಕ್ಕೆ ಪರಿಚಯಿಸಿ ಕಾಯಿದೆ-ಕಾನೂನುಗಳ ಅರಿವು ಮತ್ತು ಪಾಲನೆಗಳ ಮಹತಿಯನ್ನು ಎತ್ತಿ ತೋರಿಸಿದ್ದಾರೆ.

೫) ಇಷ್ಟೆಲ್ಲದರ ಜೊತೆಗೆ ದೇಶವಿದೇಶಗಳ ವೈಜ್ಞಾನಿಕ ಆರ್ಥಿಕ ವಾಣಿಜ್ಯ ಸಾಧನೆಯ ವಿಸ್ಮಯಕಾರಿ ಸುದ್ದಿಗಳ ಸಾರಕೂಡ ನವಕರ್ನಾಟಕ ಪತ್ರಿಕೆಯ ಸಂವಹನ ವ್ಯಾಪ್ತಿಯನ್ನು ವಿಸ್ತರಿಸಿದೆ.

೬) ಈ ಪತ್ರಿಕೆಯ ಬಹು ಮಹತ್ವದ ಮತ್ತು ಪ್ರಭಾವಶಾಲಿ ಭಾಗವೆಂದರೆ ಸಂಪಾದಕೀಯ ಟಿಪ್ಪಣಿಗಳು.

ಶ್ರೀ ಹಳಕಟ್ಟಿಯವರ ಸಾಮಾಜಿಕ ಕಳಕಳಿ, ರಾಜಕೀಯ ವಿವೇಚನೆ, ರಾಷ್ಟ್ರೀಯ ನಿಷ್ಠೆ, ಪ್ರಾಂತೀಯ ಪ್ರಾಂತೀಯ ಹಿತರಕ್ಷಣೆ, ಜನಕಲ್ಯಾಣ ವೃತ್ತಿಗಳಿಗೆ ಸಾಕ್ಷಿಯಾಗಿದ್ದು ಒಂದೊಂದು ವಿದ್ವತ್ಪೂರ್ಣ ಸಂಶೋಧನಾತ್ಮಕ ಅಂಶಗಳಿಂದ ತರ್ಕಬದ್ಧವಾಗಿ ಗೋಚರಿಸುತ್ತವೆ.

೭) ಈ ಪತ್ರಿಕೆಯ ಜಾಹೀರಾತು, ಅದರಲ್ಲಿ ಬರುತ್ತಿದ್ದ ನೋಟೀಸು ಪ್ರಕಟಣೆ ಪುರವಣಿಗಳು ಪ್ರತಿಯೊಂದೂ ಭಾಷೆ, ವಿಷಯಗಳ ದೃಷ್ಟಿಯಿಂದ ವಿಶಿಷ್ಟವಾಗಿದ್ದು ಅಂದಿನ ವ್ಯಾಪಾರ ವಾಣಿಜ್ಯ ಕ್ಷೇತ್ರದಲ್ಲಿ ಚಲಾವಣೆಯಲ್ಲಿದ್ದ ಕಂಪನಿ, ಕಾರ್ಖಾನೆ, ವ್ಯಕ್ತಿಗಳ ಮಾಹಿತಿ ಒದಗಿಸುತ್ತವೆ.

೮) ಸಾಹಿತ್ಯಕ್ಷೇತ್ರದ ವಿವಿಧ ಕಾರ್ಯಚಟುವಟಿಕೆ, ಜಯಕರ್ನಾಟಕ 'ಸ್ವಧರ್ಮ' 'ಆರೋಗ್ಯಚಂದ್ರಿಕೆ', 'ಸನ್ಮತಿ' ಮುಂತಾದ ಪತ್ರಿಕೆಗಳ ವಿಮರ್ಶೆ, ಸಾಹಿತ್ಯ ವಿಮರ್ಶೆ, ಶಿಲಾಶಾಸನಗಳ ಸಂಗ್ರಹ ಆಧ್ಯಾತ್ಮ ವಿವೇಚನೆ ಅನುಭಾವ ಸಾಹಿತ್ಯ, ದಾನ, ಪತ್ರಗಳು ಇತ್ಯಾದಿಗಳ ವಿವೇಚನೆ ಮೂಡಿದೆ.

'ನವಕರ್ನಾಟಕ' ಪತ್ರಿಕೆ ಕೆಲವು ಸಂಪಾದಕೀಯ ಟಿಪ್ಪಣೆ, ವಿವಿಧ ವಿಷಯ 'ವರ್ತಮಾನಸಾರ' ನೋಟೀಸು ಪುರವಣಿ ಇತ್ಯಾದಿಗಳ ಕೆಲವು ಮಾದರಿಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಪ್ರಥಮ ಸಂಪುಟದ ಮೊದಲ ಸಂಚಿಕೆಯ ಸಂಪಾದಕೀಯ ಟಿಪ್ಪಣಿಯಲ್ಲಿ ಕರ್ನಾಟಕ ಏಕೀಕರಣದ ಅಗತ್ಯ, ಅದಕ್ಕಿರುವ ಅಡ್ಡಿಆತಂಕಗಳನ್ನು ವಿವರಿಸಿದ ಸಂಪಾದಕರು ಕರ್ನಾಟಕಸ್ಥರೆಂದರೆ ಯಾರು? ಕರ್ನಾಟಕದಲ್ಲಿ ಸೇರ್ಪಡೆಯಾಗಬಹುದಾದ ಪ್ರದೇಶಗಳುಯಾವುವು? ಯಾವ ದೃಷ್ಟಿಯಿಂದ ಕರ್ನಾಟಕ ಪ್ರಾಂತವನು ಒಂದು ಆಡಳಿತೆಯ ಚೌಕಟ್ಟಿನಲ್ಲಿ ಸೇರಿಸಬೇಕು? ಮುಂತಾದ ಪ್ರಶ್ನೆಗಳನ್ನು ಎತ್ತಿಕೊಂಡ ಶ್ರೀ ಹಳಕಟ್ಟಿಯವರು ಪ್ರತಿಯೊಂದು ವಿಷಯವನ್ನು ನಿಸ್ಸಂದಿಗ್ಧವಾಗಿ ಹೇಳುವ ವಿಧಾನ ಮತ್ತು ಆಲೋಚನಾ ಸರಣಿ ಇಂದಿಗೂ ಪ್ರಸ್ತುತ ಮುಂದೆಯೂ ಪ್ರಸ್ತುತ ಅವರ ಟಿಪ್ಪಣೆ ಹೀಗಿದೆ :

"ಕರ್ನಾಟಕಸ್ಥರೆಂದರೆ ಕನ್ನಡ ನುಡಿಯುವವರೆಂದು ತಿಳಿಯುವದು ತಪ್ಪಾದದ್ದು. ಈ ಶಬ್ದವು ಸಮಾಜ ವಾಚಕವಲ್ಲ ಅಥವಾ ಧರ್ಮವಾಚಕವಲ್ಲ ಅದರಲ್ಲಿ ವ್ಯಾಪಕಾರ್ಥವಿದೆ. ಅದು ದೇಶವಾಚಕವು ಈ ದೇಶದಲ್ಲಿರುವಂಥವರು ಅವರು ಯಾವ ಭಾಷೆ ಮಾತಾಡುತ್ತಿದ್ದರೂ ಅವರು ಕರ್ನಾಟಕಸ್ಥರು. ಇದಕ್ಕಿದೆ ಏಕೀಕರಣದ ಪ್ರಶ್ನೆಯು

ರಾಜಕೀಯ ಪ್ರಶ್ನೆಯಾಗಿದೆ. ಹಿಂದುಸ್ಥಾನ ದೇಶವು ಅತ್ಯಂತ ವಿಸ್ತಾರವಾದದ್ದಿರುತ್ತದೆ. ಇಂಥ ದೇಶವನ್ನು ಒಂದೆಡೆಗೆ ಕೇಂದ್ರೀಕರಿಸಿ ಆಳುವುದು ಶಕ್ಯವೂ ಅಲ್ಲ, ಪ್ರಜೆಗಳಿಗೆ ಹಿತವೂ ಅಲ್ಲ. ಆದ್ದರಿಂದ ಇದರಲ್ಲಿ ತಕ್ಕ ಭೂಭಾಗಗಳನ್ನು ಮಾಡಿ, ಯಾವ ಯಾವ ಸ್ಥಳಗಳಲ್ಲಿ ರಾಜ್ಯದ ಕ್ರಮಗಳು ಹ್ಯಾಗೆ ಹಾಗೆ ಇದ್ದರೆ, ಪ್ರಜೆಗಳಿಗೆ ಹಿತವಾದೀತೆಂಬುದನ್ನು ವಿಚಾರಿಸಿ ಹಾಗೆ ಪ್ರಾಂತಗಳನ್ನು ರಚಿಸುವುದು ಇರುತ್ತದೆ. ವ್ಯಾಪಾರದ ಅನುಕೂಲಗಳು, ಪರಸ್ಪರ ಸಾನಿಧ್ಯ ದೇಶ ಆಚಾರಗಳ ಅಭಿನ್ನತ್ವ ಇವುಗಳನ್ನೆಲ್ಲ ಕಂಡು ಹಿಡಿದು ವಿಷಮತೆಯು ಕಡಿಮೆಯಾಗಿ ಜನರು ಒಕ್ಕಟ್ಟಾಗಿ ನಡೆಯುವ ಸಂಭವವು ಹೆಚ್ಚು, ಆ ಭಾಗಗಳನ್ನು ಒಂದುಗೂಡಿಸಿ ಪ್ರಾಂತ ರಚನೆ ಮಾಡುವುದೇ ಈ ಪ್ರಾಂತ ವಿಭಾಗದ ತತ್ವವಾಗಿರುವದು... ಇದರಿಂದಲೇ ಹಿಂದುಸ್ತಾನ ರಾಜ್ಯಕ್ಕೆ ಒಂದು ಕಟ್ಟು ಮತ್ತು ಒಲವು ಉಳಿಯುವದೆಂದು ತಿಳಿದು ಈ ಪ್ರಯತ್ನಕ್ಕೆ ತೊಡಗುವದು ಇರುತ್ತದೆ. ಈ ದೃಷ್ಟಿಯಿಂದ ಕರ್ನಾಟಕವೆಂದರೆ ವಿಶೇಷವಾಗಿ ಕನ್ನಡ ಮಾತನಾಡುವ ಕೆಲ ಜಿಲ್ಲೆಗಳು ಮಾತ್ರವಲ್ಲ...ಅದರ ವರ್ಚಸ್ಸಿಗೆ ಒಳಗಾಗಿ ಅದರ ಸುತ್ತಮುತ್ತಲೂ ವ್ಯಾಪಿಸಿರುವ ಮಹಾರಾಷ್ಟ್ರ, ತೆಲುಗು, ತಮಿಳು, ತುಳು ಭಾಗಗಳೂ ಸಹ ಬರುತ್ತವೆ. ಶ್ರೀ ಹಳಕಟ್ಟಿಯವರ ಅಭಿಪ್ರಾಯದ ನಿಖರತೆ, ವಿಷಯ ಪ್ರತಿಪಾದನೆಯ ಕ್ರಮಗಳು ಅವರ ಜನಾಂಗ ಪ್ರಜ್ಞೆಯ ಕುರುಹಾಗಿವೆ.

ಕರ್ನಾಟಕದ ಪ್ರಭಾವ, ಸೌಲಭ್ಯಗಳಿಗೆ ಮಾರುಹೋಗಿ ಕರ್ನಾಟಕಕ್ಕೆ ವಲಸೆ ಬಂದ ವಿಭಿನ್ನ ಭಾಷಿಕ ಗುಂಪುಗಳನ್ನು ಕರ್ನಾಟಕದಿಂದ ಬೇರ್ಪಡಿಸಲು ಹೇಗೆ ಸಾಧ್ಯ. ಇದನ್ನು ಚರ್ಚಿಸಿದ ಸಂಪಾದಕರು ಈ ಭಾಗಗಳನ್ನು ಕರ್ನಾಟಕದಿಂದ ಹೊರದೂಡಿದರೆ ಅವುಗಳು ಊರ್ಜಿತ ಸ್ಥಿತಿಗೆ ಎಂದಿಗೂ ಬರಲಾರವು ವಿಷಯಗಳನ್ನು ವಸ್ತುನಿಷ್ಠ ಧೋರಣೆಯಿಂದ ವಿವೇಚಿಸಿ ವಿವರಿಸುವುದು ಸಮರ್ಥಸಂವಹನ ಕಾರಣ ಗುಣ ಲಕ್ಷಣ ಇದಕ್ಕೆ ಇನ್ನೂ ಅನೇಕ ಬಗೆಯ ಉದಾಹರಣೆಗಳನ್ನು 'ಸೈಮನ್ ಕಮೀಶನ್' ರಾಯಲ್ ಕಮೀಶನ್ ಇತ್ಯಾದಿ ಕುರಿತ ಸಂಪಾದಕರ ವಿವೇಚನೆ ಕೊಡುತ್ತ ಹೋಗಬಹುದು. ಯಾವ ವಿಷಯವೇ ಇರಲಿ ಅದರಿಂದ ಕರ್ನಾಟಕಸ್ಥರಿಗೆ ಸಮಷ್ಟಿಕಲ್ಯಾಣವಾಗಿರಬೇಕು. ಕನ್ನಡಿಗರು ಸರ್ವಾಂಗೀಣ ಪ್ರಗತಿಹೊಂದಬೇಕು ಎನ್ನುವ ಕಳಕಳಿಯೇ ಶ್ರೀ ಹಳಕಟ್ಟಿಯವರ ಸಂಪಾದಕೀಯ ಟಿಪ್ಪಣಿಗಳ ತಿರುಳಾಗಿದೆ.

೪.೧ ವಿವಿಧ ವಿಷಯಗಳು ಐವತ್ತು ವರ್ಷಗಳ ಹಿಂದೆ ಆಕಾಶಯಾನಕುರಿತ ಸುದ್ದಿಯೊಂದು ಹೀಗಿದೆ.

ಹ್ಯಾಕ್ಸ್ಯಾಸ್ಟನ್ ಥಾರ್ನ್ ಎಂಬವರು ಆಕಾಶಯಾನದಿಂದ ೪೩೦೦೦ ಫೂಟು ಮೇಲಕ್ಕೆ ತಮ್ಮ ವಿಮಾನವನ್ನು ಒಯ್ದಿದ್ದರು. ಇದಕ್ಕೂ ಹೆಚ್ಚಿಗೆ ದೂರ ಯಾರೂ ಹೋಗಿರಲಿಲ್ಲ ಅಲ್ಲಿ ಅವರು ವಾಸಿಸುತ್ತ ಆಕ್ಸಿಜನ್ನದ ಕೊಳವೆಯು ಹರಿದಿದ್ದರಿಂದ ಅವರು ಉಸಿರು ಸಿಕ್ಕು ಮರಣ ಹೊಂದಿದರು.

ಆಕಾಶವಾಹನದ ಚರಿತ್ರೆಯನ್ನು ವಿರಳ ಘಟನೆಯೊಂದರ ದಾಖಲೆ ಸಂಪಾದಕರು ವಿಜ್ಞಾನ ಸಂಶೋಧನೆಯಲ್ಲಿ ತಾಳಿದ ಆಸಕ್ತಿಗೆ ಸಾಕ್ಷಿಯಾಗಿದೆ.

೪.೨ 'ಬ್ರೇನ್ ಡ್ರೇನ್' ಬಗ್ಗೆ ಇತ್ತೀಚೆಗೆ ತುಂಬ ಚರ್ಚೆನಡೆದಿದೆ. ನಮ್ಮ ನಾಡಿನ ಬುದ್ಧಿವಂತ ವಿದ್ಯಾವಂತರು ವಿಶೇಷ ಪರಿಣತರಿಗೆ ಈ ನಾಡಿನಲ್ಲಿ ಅವಕಾಶಗಳು ದೊರೆಯದಿದ್ದರೆ ಅವರು ಹೊರನಾಡಿಗೆ, ರಾಷ್ಟ್ರಗಳಿಗೆ ವಲಸೆಹೋಗುತ್ತಾರೆ. ಅದು ನಮ್ಮ ನಾಡಿಗೆ ದೊಡ್ಡಹಾನಿ ಎನ್ನುವುದನ್ನು 'ಬೆಳಗಾಂವ ಆರ್ಟ್ಸ್‌ಕಾಲೇಜ ಮತ್ತು ರ್‍ಯಾಂಗ್ಲರ್ ಪಾವಟೆಯವರು' ಟಿಪ್ಪಣಿಯಲ್ಲಿ ಶ್ರೀ ಹಳಕಟ್ಟಿ ವಿವೇಚಿಸಿದ್ದಾರೆ.

ಬೆಳಗಾಂವಿಯ ಕಾಲೇಜಿಗೆ ಮಿ॥ ಪಾವಟೆಯವರನ್ನು ಪ್ರಿನ್ಸಿಪಾಲರೆಂದು ನಿಯೋಜಿಸಿದ್ದನ್ನು ಸಮರ್ಥಿಸುತ್ತ ಪರದೇಶಕ್ಕೆ ಪ್ರವಾಸಮಾಡಿ ಒಂದು ವಿಷಯದಲ್ಲಿ ನಿಷ್ಣಾತರಾದ ಕರ್ನಾಟಕಸ್ಥರನ್ನು ಹೊರಗೆ ಬಿಡದೆ ಅವರು ಕನ್ನಡ ದೇಶದಲ್ಲಿಯೇ ಉಳಿಯುವ ವ್ಯವಸ್ಥೆ ಮಾಡುವುದು ಕನ್ನಡಿಗರ ಆದ್ಯ ಕರ್ತವ್ಯವಾಗಿದೆ. ಹೀಗೆ ಮಾಡದಿದ್ದರೆ ಅವರು ಪರಪ್ರಾಂತಗಳಿಗೆ ಹೋಗುವರು. ಇದರಿಂದ ಕರ್ನಾಟಕಕ್ಕೆ ದೊಡ್ಡ ಹಾನಿಯು ಜಸ್ಟಿಸ್ ಚಂದಾವರಕರ್, ಡಾ॥ ರಾವ್ ಜಸ್ಟಿಸ್ ಮುಡಗಾಂವಕರ್, ಪ್ರೊ. ಕಟ್ಟಿ ಡಾ. ನಾಡಗೀರ ಅವರೆಲ್ಲರೂ ಕನ್ನಡಿಗರಲ್ಲವೇ ? (೨೨ ಡಿಸೆಂಬರ್ ೧೯೨೭)

೪.೩ ೫-೧-೧೯೨೮ರ ಸಂಚಿಕೆಯ ಸುದ್ದಿಯೊಂದು ರೇಲ್ವೆ ಪಯಣದ ತಾಂತ್ರಿಕ ಪ್ರಗತಿಯನ್ನು ಸೂಚಿಸುತ್ತದೆ.

ಮುಂಬಯಿಯ ಮಹಾಲಕ್ಷ್ಮೀ ರೇಲ್ವೆ ನಿಲ್ದಾಣದಿಂದ ಅಂಧೇರಿಗೆ ಮೊಟ್ಟ ಮೊದಲಸಲ 'ವಿದ್ಯುಲ್ಲತೆಯ ಗಾಡಿ' ಆರಂಭವಾದ ಸುದ್ದಿ. ಅದರಂತೆ ನೌಕಾ ಕಂಪನಿ, ಇಂಗ್ಲಂಡ್ ವ್ಯಾಪಾರ ಮಂಡಳ, ನಮ್ಮಲ್ಲಿ ವ್ಯಾಪಾರೀ ಸಂಘಗಳಸ್ಥಾಪನೆ ಕುರಿತ ಆಸ್ಥೆ ಬಗೆಯ ಕುತೂಹಲಕಾರಿ ಸಂಗತಿಗಳು ಪುಟಪುಟದಲ್ಲಿ ತುಂಬಿವೆ. ನವಲಗುಂದ ಸಿರಸಂಗಿ ಟ್ರಸ್ಟ್ ಫಂಡಿನಿಂದ ಶಿಕ್ಷಣಕ್ಕಾಗಿ ಸ್ಕಾಲರ್‌ಶಿಪ್ ರೂಪದಲ್ಲಿ ಪಡೆದ ಹಣವನ್ನು ಆಯಾ ವ್ಯಕ್ತಿಗಳು 'ಟ್ರಸ್ಟ್ ಫಂಡಿಗೆ ಮರಳಿ ಪಾವತಿ ಮಾಡುವ ಕುರಿತು ಕಲೆಕ್ಟರ್ ಜುಪ್ ವೆಬ್ ಕೊಟ್ಟನೋಟೀಸು, ಸಿರಸಂಗಿ ಲಿಂಗರಾಜರ ತ್ಯಾಗ ಮತ್ತು ಅವರ ಪುಣ್ಯತಿಥಿ-ಕರ್ನಾಟಕಕ್ಕೆ ಪ್ರತ್ಯೇಕವಾಗಿ ಬೇಕಾದ ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯದಲ್ಲಿ ಮಾತೃಭಾಷಾ ಶಿಕ್ಷಣ ಮಾಧ್ಯಮ, ಜೇಲುಗಳ ಸುಧಾರಣೆ, ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಚಿಂತನೆ, ದಾನಪ್ರತಿಬಂಧ ಹೀಗೆ ಹಲವು ಹತ್ತಾರು ವಿಷಯಗಳನ್ನು ಓದುತ್ತ ಹೋದಂತೆ ಐವತ್ತು ವರ್ಷಗಳ ಹಿಂದಿನ ಪ್ರಪಂಚದ ಘಟನೆಗಳು, ಭಾರತದ ರಾಜಕೀಯ ಸ್ಥಿತ್ಯಂತರ ಕರ್ನಾಟಕದ ಸಾಂಪತ್ತಿಕ ಆಕರಗಳು ಒಂದೊಂದಾಗಿ ಕಣ್ಣಿಗೆ ಕಟ್ಟುತ್ತವೆ; ಮನಸ ಮುಟ್ಟುತ್ತವೆ.

ಆಕಾಶವನ್ನು ಅಂಗೈಯಲ್ಲಿ ಅಳೆದ ಹಾಗೆ ಪ್ರಸ್ತುತ ಪ್ರಬಂಧದ ಸ್ಥಿತಿ

ನವಕರ್ನಾಟಕದ ಎಲ್ಲ ಸಂಚಿಕೆಗಳ ವಿಷಯಸೂಚಿ ಮಾಡಬೇಕು ಅವುಗಳನ್ನು ವಿಷಯಕ್ಕನುಗುಣವಾಗಿ ವಿಂಗಡಿಸಿ ವರ್ಗೀಕರಿಸಬೇಕು ಆಗ ಪತ್ರಿಕೋದ್ಯಮದ ಬೃಹತ್ತಾದ 'ವೃತ್ತಿ ಪದಕೋಶ' ಅನಾವರಣಗೊಳ್ಳುತ್ತದೆ.

ಸಂಪಾದಕರ ಟಿಪ್ಪಣಿ. ಜಾಹೀರಾತು, ಇತ್ಯಾದಿ ಬರವಣಿಗೆಗಳ ಪ್ರತ್ಯೇಕ ವಿವೇಚನೆ ವಿಶ್ಲೇಷಣೆ ನಡೆಯಬೇಕು.

ಈ ದೃಷ್ಟಿಯಿಂದ ಶ್ರೀ. ಫ. ಗು. ಹಳಕಟ್ಟಿ ಅವರನ್ನು 'ವೃತ್ತಪತ್ರಿಕಾ ರಂಗದ ಭೀಷ್ಮ'ಎಂದು ಕರೆಯುವುದು ಸೂಕ್ತ. ಅವರು 'ನವಕರ್ನಾಟಕ'ದ ಮೂಲಕ ಮಾಡಿರುವ ಕರ್ನಾಟಕ ಸ್ಥಿರ, ಕರ್ನಾಟಕದ ಅಖಂಡ ಸೇವೆಯನ್ನು ಒಂದು ಸಲಸ್ಪರ್ಶಿಯಾದ ಅಧ್ಯಯನದ ಮೂಲಕ ದೃಢಪಡಿಸುವ ಕಾರ್ಯನಡೆಯಬೇಕು. ಈ ನಿಟ್ಟಿನ ಅವರ ಈ ಚಿರಸ್ಮರಣೀಯ ಕಾರ್ಯವನ್ನು ಒಂದು (Ph.D.) ಪಿಎಚ್.ಡಿ. ಪದವಿಯ ಸಂಶೋಧನೆಯ ಮುಖಾಂತರ ಸಾಬೀತುಗೊಳಿಸುವ ವಿದ್ಯಾರ್ಥಿಗಾಗಿ ವಿಷಯ ಸಾಮಗ್ರಿ ಕಾಯುತ್ತದೆ.

ಸಂವಹನ ಮಾಧ್ಯಮಗಳನ್ನು ಕುರಿತು ವಿಶೇಷ ವೈಜ್ಞಾನಿಕ ಅಧ್ಯಯನ ನಡೆಯುದಿದ್ದ ನಮ್ಮ ನಾಡಿನಲ್ಲಿ, ಪತ್ರಿಕೆ ಲಾಭದಾಯಕ ಉದ್ದಿಮೆಯಾಗಿ ರೂಪಗೊಳ್ಳದಿದ್ದ ಅಂದು ಶ್ರೀ ಹಳಕಟ್ಟಿ ವೃತ್ತ ಪತ್ರಿಕೆಯ ಸಂವಹನ ಮಾಧ್ಯಮವನ್ನು ಕೈಗೆತ್ತಿಕೊಂಡು ಅಹರ್ನಿಶಿ ಶ್ರಮಿಸಿ, ಜನಾಂಗ ಕಲ್ಯಾಣವನ್ನೇ ತಮ್ಮ ಪ್ರಾಣವೆಂದು ಭಾವಿಸಿ 'ನವಕರ್ನಾಟಕ'ದ ಮೂಲಕ ತಮ್ಮ ಪ್ರತಿಭೆ, ಬುದ್ಧಿ ಶಕ್ತಿಗಳನ್ನು ಜನತೆಗೆ ಧಾರೆಯೆರೆದ ಆ ಮಹಾನುಭಾವನಿಗೆ ಶರಣು.

ಪತ್ರಿಕೆಯ ೧೪ನೆಯ ವರ್ಷದ ಆರಂಭದಲ್ಲಿರುವ ಅವರ ಸಂಪಾದಕೀಯ ಟಿಪ್ಪಣಿಯೊಂದಿಗೆ ಈ ಪ್ರಬಂಧ ಮುಗಿಸುತ್ತೇನೆ.

"ನವಕರ್ನಾಟಕ ಪತ್ರಿಕೆಯು ಯಾವ ಪಕ್ಷಕ್ಕೂ ಸೇರದೆ ಮತ್ತು ಯಾವ ಪಕ್ಷದ ಅಭಿಮಾನವನ್ನು ವಹಿಸದೆ ಸ್ವತಂತ್ರವಾಗಿದ್ದುಕೊಂಡು ತನ್ನ ಉಚ್ಚ ವಿಚಾರಗಳನ್ನು ಪ್ರಕಟಿಸುತ್ತ ಬಂದಿದೆ. ಈ ಸ್ಥಿತಿಯಿಂದು ಪ್ರಚಲಿತ ವಿಷಯಗಳಲ್ಲಿ ಸರಿಯಾದ ಹಾಗೂ ಸತ್ಯವಾದ ಅಭಿಪ್ರಾಯಗಳನ್ನು ಕೊಡಲಿಕ್ಕೆ ಶಕ್ಯವಾಗುತ್ತದೆ. ಇದರಿಂದ ಜನತೆಯು ಸರಿಯಾದ ಪರಿಸ್ಥಿತಿಯ ವಿಚಾರಗಳನ್ನು ಅರಿತುಕೊಳ್ಳಲಿಕ್ಕೆ ಬಹಳ ಸಹಾಯವಾಗುತ್ತದೆಂದು ನಾವು ಭಾವಿಸುತ್ತೇವೆ."[೧]

೧ ನವಕರ್ನಾಟಕ ಸಂ. ೧೪, ಸಂ. ೧ : ೧೦-೧೦-೧೯೪೦

ಸನ್ನತಿಯಲ್ಲಿ ದೊರಕಿರುವ ಅಶೋಕನ ಶಿಲಾ ಶಾಸನಗಳು

ಎಂ. ವ್ಹಿ. ವಿಶ್ವೇಶ್ವರ

ಸನ್ನತಿಗ್ರಾಮ : ಗುಲ್ಬರ್ಗ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನಲ್ಲಿರುವ ಸಣ್ಣ ಹಳ್ಳಿಯಾದ ಸನ್ನತಿಗ್ರಾಮ (ಉ. ರೇಖಾಂಶ ೧೬°೪೯', ಪೂ. ಅಕ್ಷಾಂಶ ೭೬°೫೪') ಕರ್ನಾಟಕದಲ್ಲಿರುವ ಅತ್ಯಂತ ವಿಸ್ತೃತವೂ, ಕುತೂಹಲಕರವೂ ಆದ ಬೌದ್ಧ ನಿವೇಶನಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. ಕೃಷ್ಣೆಯ ಉಪನದಿಯಾದ ಭೀಮಾನದಿಯ ಎಡದಂಡೆಯ ಮೇಲಿರುವ ಈ ಗ್ರಾಮ ಯಾದಗೀರ್‌ನಿಂದ ಸು. ೫೦ ಕಿ.ಮೀ. ದೂರದಲ್ಲಿ ಹಾಗೂ ನಾಲ್ವಾರ್ ರೇಲ್ವೆ ನಿಲ್ದಾಣದಿಂದ (ಮಧ್ಯ-ದಕ್ಷಿಣ ರೈಲ್ವೆ) ಕೇವಲ ೧೯ ಕಿ.ಮೀ. ದೂರದಲ್ಲಿದೆ. ಶಾಕ್ತ ಪಂಥದ ಪ್ರಮುಖ ದೇವಿಯರಲ್ಲಿ ಒಬ್ಬಳಾದ ಚಂದ್ರಲಾಂಬೆಯ ದೇವಾಲಯವಿರುವುದರಿಂದ ಇದು ಅನೇಕ ಭಕ್ತರನ್ನು ಆಕರ್ಷಿಸುವ ಯಾತ್ರಾಸ್ಥಳವೂ ಆಗಿದೆ. ಈ ದೇವಿಯನ್ನು ಚಂಡಲಾ (ಚಂಡಾಲಾ, ಚಂದ್ರಲಾ) ಪರಮೇಶ್ವರಿ ಎಂದೂ ಕರೆಯಲಾಗುತ್ತದೆ.

ಐತಿಹಾಸಿಕ ಪ್ರಾಮುಖ್ಯತೆ ಹಾಗೂ ಪುರಾತತ್ತ್ವೀಯ ಶೋಧಗಳು :

ಸನ್ನತಿ ಕರ್ನಾಟಕದ ಬೌದ್ಧ ನಿವೇಶನಗಳಲ್ಲಿ ಅತಿ ಮುಖ್ಯವಾದ್ದು, ಆ ಕಾರಣ ಅನೇಕ ವಿದ್ವಾಂಸರ, ಪ್ರಾಚ್ಯ ವಸ್ತು ಸಂಶೋಧಕರ ಗಮನ ಸೆಳೆದಿದೆ. ಈ ನಿವೇಶನದ ಮಹತ್ವವನ್ನು ಮೊದಲ ಬಾರಿಗೆ ಎತ್ತಿ ಕಾಣಿಸಿದವರು ದಿವಂಗತ ಕಪಟರಾಳು ಕೃಷ್ಣರಾಯರು.[೨] ಮೈಸೂರು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ ಡಾ. ಎಂ. ಶೇಷಾದ್ರಿಯವರು ಈ ಸ್ಥಳದಲ್ಲಿ ಹೆಚ್ಚಿನ ಪರಿಶೋಧನೆ ನಡೆಸಿ (೧೯೬೪–೬೫ ರಲ್ಲಿ) ಇಲ್ಲಿನ ಶಿಲ್ಪ, ಶಾಸನಗಳನ್ನು ಕುರಿತಂತೆ ಸವಿವರ ಲೇಖನ ಬರೆದಿದ್ದಾರೆ.[೩] ಅನಂತರ ಕರ್ನಾಟಕ ವಿಶ್ವವಿದ್ಯಾನಿಲಯದ ಡಾ. ಪಿ. ಬಿ. ದೇಸಾಯಿಯವರು ಮತ್ತೊಮ್ಮೆ ಸನ್ನತಿಯಲ್ಲಿ ಸ್ಥಳ ಪರಿಶೋಧನೆ ಮಾಡಿ (ಫೆಬ್ರವರಿ, ೧೯೬೬ ರಲ್ಲಿ) "ಇದು ಕರ್ನಾಟಕದ ಅತ್ಯಂತ ಮಹತ್ವಪೂರ್ಣ ಹಾಗೂ ಅತಿ ದೊಡ್ಡ ಬೌದ್ಧ ನಿವೇಶನ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೪]

ಈ ಸ್ಥಳ ಪರಿಶೋಧನೆಗಳಿಂದ ಸನ್ನತಿಯಿಂದ ಕನಗಾನಹಳ್ಳಿಯವರೆಗಿನ ಸು. ೫–೬ ಚ. ಕಿ. ಮೀ. ಪ್ರದೇಶದಲ್ಲಿ ಶಾತವಾಹನ ಹಾಗೂ ಅದಕ್ಕೂ ಹಿಂದಿನ ಕಾಲದ ಸಾಂಸ್ಕೃತಿಕ ಹಾಗೂ ವಾಸ್ತುನಿರ್ಮಿತಿಗಳ ಬೃಹತ್ ಅವಶೇಷಗಳು ಬೆಳಕಿಗೆ ಬಂದಿವೆ. ಪುರಾತನ ಕಾಲದ ಹಂಚು, ಇಟ್ಟಿಗೆ, ಆಟಿಕೆ ಮುಂತಾದ ಮೃಣ್ಮೂರ್ತಿ, ಬೌದ್ಧಾಲಯ

ಗಳ ಶಿಲ್ಪಾಲಂಕೃತ ವಾಸ್ತು ಭಾಗಗಳು, ಆಂಧ್ರ ಶಾತವಾಹನ ಕಾಲದ ಹೊಳಪುಳ್ಳ ಕಪ್ಪು–ಕೆಂಪು ಮೃತ್ಪಾತ್ರೆ; ಸ್ಫಟಿಕ, ಕಾರ್ನೀಲಿಯನ್ ಮುಂತಾದ ಅರೆಪ್ರಶಸ್ತ ಶಿಲೆಯ ಮಣಿಗಳು, ಶಂಖದ ಆಭರಣಗಳು ಇವೇ ಮೊದಲಾದ ಆದಿ ಇತಿಹಾಸ ಯುಗದ ಜನವಸತಿಯ ಕುರುಹುಗಳು ಇಲ್ಲಿನ ಅನೇಕ ಸ್ಥಳಗಳಲ್ಲಿ ಕಂಡು ಬಂದಿವೆ.

ಇಲ್ಲಿ ದೊರಕಿರುವ ಪ್ರಾಚ್ಯವಸ್ತುಗಳಲ್ಲಿ* ಸ್ತೂಪಗಳಿಗೆ ಹೊದಿಸಲಾಗಿದ್ದ ಉಬ್ಬು ಶಿಲ್ಪಗಳುಳ್ಳ ನೂರಾರು ಸುಣ್ಣ ಕಲ್ಲಿನ ಫಲಕಗಳು ಮತ್ತು ಶಿಲ್ಪದೊಡನೆ ಬರೆಯಲಾದ ತುಂಡು ಶಾಸನಗಳು ಮುಖ್ಯವಾದುವು. ಈ ಫಲಕಗಳ ಮೇಲೆ ಬುದ್ಧನ ಜೀವನದ ಪ್ರಮುಖ ಘಟನೆ ಜಾತಕ ಕಥೆ, ಸಾಮಾಜಿಕ ಜನಜೀವನ ಮತ್ತು ಗೃಹಸ್ಥಜೀವನದ ಕೆಲವು ರಸಮಯ ಸನ್ನಿವೇಶಗಳ ಮನೋಜ್ಞ ಚಿತ್ರಣವನ್ನು ಕಾಣಬಹುದು, ಇದುವರೆಗೆ ಸನ್ನತಿಯಲ್ಲಿ ೪೭ ಶಾಸನಗಳು ದೊರೆತಿದ್ದು, ಅವುಗಳಲ್ಲಿ ೪೩ ಬ್ರಾಹ್ಮೀ ಲಿಪಿಯಲ್ಲಿರುವ (ದಾನದ ಉಲ್ಲೇಖವಿರುವ) ತುಂಡು ಶಾಸನಗಳೂ, ಉಳಿದವು ಬದಾಮಿ ಚಾಲುಕ್ಯ ರಾಷ್ಟ್ರಕೂಟ ಕಾಲದವೂ ಆಗಿವೆ. ಲಿಪಿ, ಭಾಷೆ, ಮತ್ತು ಶಿಲ್ಪದ ಶೈಲಿ–ವಸ್ತು ಹಾಗೂ ತಂತ್ರವನ್ನೊಳಗೊಂಡಂತೆ ಈ ಶಿಲ್ಪ ಶಾಸನಗಳು ಕ್ರಿ. ಪೂ. ೨ನೆಯ ಶತಮಾನದಿಂದ ಕ್ರಿ. ಶ. ೩ನೆಯ ಶತಮಾನದವರೆಗಿನ, ಅಮರಾವತಿಯ ಇಂತಹುದೇ ಶಿಲ್ಪಶಾಸನಗಳನ್ನು ಹೋಲುತ್ತವೆ.

ಸ್ತೂಪ ದಿಬ್ಬಗಳು : ಸನ್ನತಿಯ ವಾಸ್ತು ಅವಶೇಷಗಳಲ್ಲಿ ಕನಿಷ್ಠ ನಾಲ್ಕಾದರೂ ಸ್ತೂಪದ ದಿಬ್ಬಗಳಿರಬೇಕೆಂದು ಪ್ರಾಚ್ಯವಸ್ತು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ದಿಬ್ಬಗಳಲ್ಲಿ ಪರಸ್ಪರ ಎರಡು ಕಿ. ಮೀ. ದೂರದಲ್ಲಿರುವ ಎರಡು ದಿಬ್ಬಗಳು ಗಮನಾರ್ಹವಾದವು. ಇವುಗಳಲ್ಲಿ ಒಂದು ಚಂದ್ರಲಾ ಪರಮೇಶ್ವರಿ ದೇವಾಲಯದ ಸಮೀಪದಲ್ಲಿದ್ದು ಸಾಕಷ್ಟು ಸುಸ್ಥಿತಿಯಲ್ಲಿದೆ. ಈ ದಿಬ್ಬದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣದ ಹೈದರಾಬಾದ ವಲಯವು "ಸೊಸೈಟಿ ಫಾರ್ ಸೌತ ಏಷಿಯನ ಸ್ಟಡೀಸ್" ಸಂಸ್ಥೆಯ ಸಂಶೋಧಕರಾದ ಡಾ.ಜೇಮ್ಸ್ ಹೊವೆಲ್ಲರ ಸಹಯೋಗದೊಂದಿಗೆ ವೈಜ್ಞಾನಿಕ ರೀತ್ಯಾ ಉತ್ಖನನ ಕೈಗೊಂಡಿದೆ. ನದೀ ದಡದಲ್ಲಿದ್ದಿರಬಹುದಾದ ಸ್ತೂಪವು ಸಂಪೂರ್ಣ ನೆಲಸಮವಾಗಿದೆ. ಇದಲ್ಲದೆ ಡಾ. ಅ. ಸುಂದರ* ಅವರು ಸನ್ನತಿಯ ಕೋಟೆಯ ಬಳಿ ಉತ್ಖನನ ಕೈಗೊಂಡು ಶಾತವಾಹನ ಹಾಗೂ ತತ್ಪೂರ್ವಕಾಲದ ಜನವಸತಿ, ಅವರ ಸಮೃದ್ಧ ಸಾಂಸ್ಕೃತಿಕ ಜೀವನ ಪದ್ಧತಿ ಇವುಗಳ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲಂತಹ ಅನೇಕ ಮಾಹಿತಿಗಳನ್ನು ಒದಗಿಸಿದ್ದಾರೆ. ಸುಮಾರು ೭೦ ಹೆಕ್ಟೇರ ಪ್ರದೇಶವನ್ನು ಆಕ್ರಮಿಸಿರುವ ಕೋಟೆಯ ಗೋಡೆಯನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದ್ದು (೪೬X೨೭X೧೦ ಸೆಂ.ಮೀ.) ಈ ಗೋಡೆ ಸುಮಾರು ೪ ಮೀಟರ ಅಗಲವಾಗಿದ್ದು ಅಳಿದುಳಿದ ಭಾಗಗಳಲ್ಲಿ ಗರಿಷ್ಠ ೩ ಮೀ.ನಷ್ಟು ಎತ್ತರವಾಗಿದೆ. ಈ ಕೋಟೆಯ ಪ್ರದೇಶದಲ್ಲಿ ರಾಜಪ್ರಮುಖರ ಹಾಗೂ ಜನಸಾಮಾನ್ಯರ ಎರಡು ಪ್ರತ್ಯೇಕ ವಸತಿಯ ನೆಲೆಗಳನ್ನು ಗುರುತಿಸಲಾಗಿದೆ.

ದೇವಿಯ ಮಂದಿರ : ಸನ್ನತಿಯ ಪ್ರಸಿದ್ಧ ಚಂದ್ರಲಾಪರಮೇಶ್ವರಿ ದೇವಾಲಯದ ಆವರಣದಲ್ಲಿ ಮುಖ್ಯ ದೇವಾಲಯಕ್ಕೆ ಹೊಂದಿಕೊಂಡಂತೆ ಅದರ ಎಡಭಾಗದಲ್ಲಿ ಸ್ಥಳೀಯವಾಗಿ "ಮಹಾಕಾಳಿಯ ಗುಡಿ" ಎಂದು ಕರೆಯಲಾಗುವ ಮಧ್ಯಮ ಗಾತ್ರದ ದೇವಾಲಯವಿದೆ (ಛಾಯ. ಚಿತ್ರ ೧)[೭] ಬಹುಶಃ ಬೌದ್ಧ ಧರ್ಮದ ಪ್ರಭಾವ ಕ್ಷೀಣಿಸಿದ ಮೇಲೆ ಬಾದಾಮಿ ಚಾಲುಕ್ಯ ರಾಷ್ಟ್ರಕೂಟರ ಕಾಲದಲ್ಲಿ ಈ ಶಕ್ತಿ ದೇವಾಲಯ ನಿರ್ಮಿತವಾದಂತೆ ಕಂಡು ಬರುತ್ತದೆ. ಮುಂದೆ ಅನೇಕ ಬಾರಿ ಪುನರ್ನಿರ್ಮಾಣಗೊಂಡು, ಹೊಸ ವಾಸ್ತು ಅಂಶಗಳ ಸೇರ್ಪಡೆಯಾಗಿದ್ದರೂ ಈ ದೇವಾಲಯದ ಮೂಲ ಗರ್ಭಗೃಹದ ದ್ವಾರಬಂಧ ಮುಂತಾದ ಕೆಲವಾದರೂ ವಾಸ್ತು ಭಾಗಗಳಲ್ಲಿ ರಾಷ್ಟ್ರಕೂಟ ಶೈಲಿಯ ಕೆಲವು ಲಕ್ಷಣಗಳನ್ನು ಗುರುತಿಸಬಹುದು.

ಪೂರ್ವಾಭಿಮುಖವಾದ ಪ್ರಸ್ತುತ ದೇವಾಲಯದ ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಅಂತರಾಳ ಹಾಗೂ ಮಹಾಮಂಡಪಗಳಿವೆ. ಮಹಾಮಂಟಪವು ಆರು ಕಂಬ ಮತ್ತು ಕೆಲವು ಅರೆಗಂಬಗಳಿಂದ ಕೂಡಿದ್ದು ಮಧ್ಯದ ಅಂಕಣದ ನಾಲ್ಕು ಕಂಬಗಳು ಮಾತ್ರ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಅಲಂಕೃತವಾಗಿವೆ. ಮಹಾಮಂಡಪದ ಪರಿಧಿಯಲ್ಲಿ ಕಕ್ಷಾಸನದ ಏರ್ಪಾಡಿದ್ದು ಮೇಲಿನ ಬದು ಭಾಗವು ಬಹಳಷ್ಟು ಕೆಟ್ಟು ಹಾಳಾಗಿದೆ.

ಮೂಲ ಗರ್ಭಗೃಹವು ಊರ್ಧ್ವವಿನ್ಯಾಸದಲ್ಲಿ ಪದ್ಮಜಗತಿಯವರೆಗೆ ಮಾತ್ರ ಉಳಿದಿದ್ದರೂ, ಅಧಿಷ್ಠಾನ ಮತ್ತು ಭಿತ್ತಿಯ ಭಾಗಗಳನ್ನು ಸುಮಾರಾಗಿ ಊಹಿಸಬಹುದು. ಗರ್ಭಗೃಹದ ಉತ್ತರ, ಪಶ್ಚಿಮ ಹಾಗೂ ದಕ್ಷಿಣದ ಭಿತ್ತಿಗಳಲ್ಲಿ ಮುಂಚಾಚಿದ ಘನದ್ವಾರ ಇಲ್ಲವೇ ದೇವಕೋಷ್ಠಗಳಿದ್ದಂತೆ ತೋರುತ್ತದೆ. ಆದರೆ ಶಿಖರದ ಆಕಾರ ಮುಂತಾದ ಊರ್ಧ್ವವಿನ್ಯಾಸದ ಇತರ ಅಂಶಗಳನ್ನು ನಿರ್ದಿಷ್ಟವಾಗಿ ಊಹಿಸಲು ಸಾಧ್ಯವಾಗುವುದಿಲ್ಲ.

ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ದೇವಿ (ಚಾಮುಂಡಾ)ಯ ವಿಗ್ರಹ ಭಗ್ನವಾಗಿದ್ದು ಎರಡು ಭಾಗಗಳಲ್ಲಿದೆ (ಛಾಯಾಚಿತ್ರ ೨). ಸು. ೧.೮೦ ಮೀ. ಎತ್ತರದ ಚತುರ್ಭುಜೆಯಾದ ದೇವಿಯ ವಿಗ್ರಹವನ್ನು ನಸುಗೆಂಪಾದ ಮರಳುಗಲ್ಲಿನಲ್ಲಿ ರೂಪಿಸಲಾಗಿದೆ. ಪದ್ಮಪೀಠದ ಮೇಲೆ ಮಹಾರಾಜಲೀಲಾಸನದಲ್ಲಿ ಆಸೀನಳಾದ ದೇವಿಯ ಎರಡೂ ಬಲಗೈಗಳು ಭಗ್ನವಾಗಿವೆ. ಮೇಲಿನ ಎಡಗೈ ತ್ರಿಶೂಲವನ್ನು ಹಿಡಿದಿದ್ದು, ಅದರ ಮೇಲ್ತುದಿಯಲ್ಲಿ ಮುಂಡದ ಚಿತ್ರಣವಿದೆ. ತೊಡೆಯ ಮೇಲಿರುವ ಎಡಹಸ್ತದಲ್ಲಿ ಪಾನಪತ್ರವಿದೆ. ದೇವಿಯು ಜಟಾಬಂಧ, ಕಂಕಣಗಳು ನಾಗಗಳಿಂದ ಅಲಂಕೃತವಾಗಿದ್ದು; ಕಂಠದಲ್ಲಿ ಪತ್ರಾವಳಿ, ಕಂಠಹಾರ, ಯಜ್ಞೋಪವೀತದಂತಹ ರುಂಡಮಾಲೆ, ಎದೆಯ ಮೇಲೆ ಚೇಳಿನಂತೆ ಕಾಣುವ ಲಾಂಛನ ಇವೆ. ಶಾಕ್ತ ಪಂಥದ ದೇವಿಯರ ಪ್ರತಿಮಾಲಕ್ಷಣಗಳ ಬೆಳವಣಿಗೆಯ ದೃಷ್ಟಿಯಿಂದ ಅಪೂರ್ವವಾದ ಈ ಶಿಲ್ಪವನ್ನು

ಡಾ. ಐ. ಕೆ. ಶರ್ಮಾ[೮] ಅದರು ಸೋಳಂಬರ ಕಾಲ (ಕ್ರಿ. ಶ. ೮–೯ ನೇ ಶತಮಾನ)ದ್ದೆಂದು ಅಭಿಪ್ರಾಯಪಟ್ಟಿದ್ದಾರೆ.

ಈ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದ್ದ ಪೀಠದ ಮೇಲೆಯೇ ಅಶೋಕನ ಶಿಲಾಶಾಸನಗಳು ಬೆಳಕಿಗೆ ಬಂದಿರುವುದು.

ಶಾಸನಗಳ ಶೋಧ :

ಅಶೋಕನ ಈ ನೂತನ ಶಿಲಾಶಾಸನಗಳನ್ನು ಸಂಶೋಧಿಸಿದ ಕೀರ್ತಿ ಭಾರತೀಯ ಪುರಾತತ್ವ ಸರ್ವೇಕ್ಷಣದ ಹೈದರಾಬಾದ್ ವಲಯದ ತಾಂತ್ರಿಕ ಸಿಬ್ಬಂದಿಯವರದು. ಶಾಸನಗಳ ಶೋಧಕ್ಕೂ ಮುಂಚೆ ಆ ವಲಯದ ಮುಖ್ಯಾಧಿಕಾರಿಗಳಾದ ಶ್ರೀ ಎ. ಪಿ. ಸಾಗರ ಅವರು ಸನ್ನತಿಯ ಕೋಟೆಯ ಆವರಣದಲ್ಲಿ ನಡೆಸಿದ ಸ್ಥಳ ಪರಿಶೋಧನೆಯಲ್ಲಿ (೧೨–೧–೧೯೮೯) ಮೌರ್ಯ ಕಾಲೀನ ವಿಶೇಷ ಮೆರುಗುಳ್ಳ ಕಣಶಿಲೆಯ ವಾಸ್ತು ಭಾಗ ಒಂದನ್ನು ಕಂಡುಹಿಡಿದಿದ್ದರು.[೯] ಅಲ್ಲದೆ, ಅಲ್ಲಲ್ಲಿ ಚದುರಿ ಬಿದ್ದಿದ್ದ ಪ್ರಾಚೀನ ಕಾಲದ ಇಟ್ಟಿಗೆ (೫೪ × ೨೯ × ೯ ಸೆಂ. ಮೀ.; ೪೭ × ೨೪ × ೮ ಸೆಂ. ಮೀ.) ಅಳತೆಯ ಭಾಗಗಳ ಆಧಾರದ ಮೇಲೆ 'ರಣಮಂಡಲ' ಪ್ರದೇಶದಲ್ಲಿ ಕ್ರಿ. ಪೂ. ೩.೨ ನೆಯ ಶತಮಾನಕ್ಕೂ ಹಿಂದಿನ ವಾಸ್ತು ಚಟುವಟಿಕೆಯ ಕುರುಹುಗಳನ್ನು ಗುರುತಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮೌರ್ಯಕಾಲದ ಶಾಸನಗಳೂ ದೊರೆತಿರುವುದು ಅತ್ಯಂತ ಔಚಿತ್ಯ ಪೂರ್ಣವೇ ಆಗಿದೆ.

ದಿನಾಂಕ ೨೦–೧–೧೯೮೯ ರ ವೇಳೆಗಾಗಲೆ, ಉತ್ಖನನ ಶಿಬಿರದಲ್ಲಿದ್ದ ಸರ್ವ ಶ್ರೀ ಆರ್. ವಿ. ಶಿವಶರ್ಮ, ಅಸಿಸ್ಟಂಟ್ ಸೂಪರಿಂಟೆಂಡಿಂಗ್ ಆರ್ಕಿಯೋಲಾಜಿಷ್ಟ ಮತ್ತು ಜೆ. ವರಪ್ರಸಾದ ರಾವ್, ಟೆಕ್ನಿಕಲ್ ಅಸಿಸ್ಟಂಟ್ ಅವರು ಫಲಕದ ಮುಂಭಾಗ ದಲ್ಲಿದ್ದ ಶಾಸನ ಭಾಗದ ಕಣ್ಣೋದಿನ ಪ್ರತಿ ತಯಾರಿಸಿದ್ದು ಶಿಬಿರದಲ್ಲಿ ಸೂಕ್ತ ಸಂದರ್ಭ ಗ್ರಂಥಗಳ ಅಭಾವದಿಂದಾಗಿ ಖಚಿತ ಪಾಠವನ್ನು ಸಿದ್ಧಪಡಿಸುವುದು ಸಾಧ್ಯವಾಗಿರಲಿಲ್ಲ. ಅನಂತರ ಸನ್ನತಿಗೆ ಬಂದಿದ್ದ ಶ್ರೀ ಜಿ. ವಿ. ಎಸ್. ರಾವ್ [ಡೆಪ್ಯುಟಿ ಸೂಪರಿಂಟೆಂಡಿಂಗ್ ಆರ್ಕಿಯೋಲಾಜಿಸ್ಟ] ಅವರು ಡಾ. ಐ. ಕೆ. ಶರ್ಮ [ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣ, ನವದೆಹಲಿ] ಅವರಿಗೆ ಈ ವಿಷಯವನ್ನು ತಿಳಿಸಿದರು. ಡಾ. ಶರ್ಮ ಅವರು ವಲಯ ಮುಖ್ಯಾಧಿಕಾರಿ ಹಾಗೂ ಇನ್ನಿತರ ತಾಂತ್ರಿಕ ಸಿಬ್ಬಂದಿ ಯವರೊಂದಿಗೆ [೫–೨–೧೯೮೯ ರಂದು ಹೈದರಾಬಾದಿನಲ್ಲಿ] ಸಮಾಲೋಚಿಸಿ ಪ್ರಸ್ತುತ ಶಾಸನಗಳು ಅಶೋಕನ ಶಿಲಾಶಾಸನಗಳೇ ಎಂದು ಖಚಿತವಾಗಿ ತೀರ್ಮಾನಿಸಿದರು.

ಈ ಮಧ್ಯೆ ಚಂದ್ರಲಾ ಪರಮೇಶ್ವರಿಯ ಭಕ್ತರೂ, ಖ್ಯಾತ ಪುರಾತತ್ವವೇತ್ತರೂ ಆದ ಡಾ. ಎಸ್. ಆರ್. ರಾವ್, ಅವರು ದೇವಿಯ ದರ್ಶನಕ್ಕಾಗಿ ಸನ್ನತಿಗೆ ಬಂದಿದ್ದಾಗ (೧೯–೧–೧೯೮೯ ರಂದು) ಈ ಶಾಸನವನ್ನು ಅವಲೋಕಿಸಿ, "ಶಿಲಾಖಂಡದ ಮೇಲಿರುವ

ಹತ್ತುಸಾಲಿನ ಶಾಸನದ ಲಿಪಿಯು, ಅಶೋಕನ ಕಾಲದ ಬ್ರಾಹ್ಮೀ ಅಥವಾ ಅದಕ್ಕಿಂತ ಸ್ವಲ್ಪ ಅನಂತರದ ಆದರೆ ಖಚಿತವಾಗಿ ಬಾದಾಮಿ ಚಾಲುಕ್ಯ ಪೂರ್ವಕಾಲದ ಲಿಪಿಯನ್ನು ಹೋಲುತ್ತದೆ" ಎಂದು ಅಭಿಪ್ರಾಯಪಟ್ಟು, ಪ್ರಚಾರ ನೀಡಿದರು.[೧೨] ಆದರೆ ಆವೇಳೆಗಾಗಲೇ ಭಾ. ಪ್ರ. ಸ. ದ ತಾಂತ್ರಿಕ ಸಿಬ್ಬಂದಿಯವರು ಫಲಕದ ಹಿಂಭಾಗದಲ್ಲಿದ್ದ ೧೦ ಸಾಲಿನ ಶಾಸನವಿರುವುದನ್ನು, ತಾವು ಸಿದ್ಧಪಡಿಸಿದ್ದ ಕಣ್ಣೊತ್ತಿನಪ್ರತಿಯ ಆಧಾರದ ಮೇಲೆ ೯ ನೆಯ ಸಾಲಿನಲ್ಲಿದ್ದ "ಇಯಂ (ಧಂಮ) ಲಿಪಿ ದೇವನಾಂ ಪಿಯೇನ" ಎಂಬ ಉಲ್ಲೇಖವನ್ನು ಸ್ಪಷ್ಟವಾಗಿ ಗುರುತಿಸಿದ್ದರು. ಆದ್ದರಿಂದ ಈ ಶಾಸನಗಳನ್ನು ಸಂಶೋಧಿಸಿದ ಕೀರ್ತಿ ಭಾ.ಪ್ರ.ಸ ದ ಹೈದರಾಬಾದ್ ವಲಯದ ಸರ್ವಶ್ರೀ ಆರ್. ವಿ. ಶಿವಶರ್ಮ ಮತ್ತು ಜೆ. ವರಪ್ರಸಾದ ರಾವ್ ಅವರಿಗೆ ಪೂರ್ಣವಾಗಿ ಸಲ್ಲುತ್ತದೆ.

ಶಾಸನವಿರುವ ಪೀಠ :

ಕಂದು ಬಣ್ಣದ ಕಣಶಿಲೆ (ಗ್ರಾನೈಟ್) ಯ ಈ ಶಿಲಾಖಂಡವು ಸು. ೩೦ ಸೆಂ.ಮೀ. ದಪ್ಪವಾಗಿದ್ದು ಆಯತಾಕಾರದಲ್ಲಿದೆ (೨.೩೩ x ೧.೨೧ ಮೀ.) ಪಾರ್ಶ್ವಗಳನ್ನು ಒಟ್ಟಾಗಿ ಕತ್ತರಿಸಿ, ಮಧ್ಯದಲ್ಲಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ಅನುವಾಗುವಂತೆ ಆಯತಾಕಾರದ ರಂಧ್ರವನ್ನು ಕೊರೆದಿರುವುದರಿಂದ ಬಹುಶಃ ದೇವಾಲಯ ನಿರ್ಮಾಣದ ಸಂದರ್ಭದಲ್ಲಿ ಅಥವಾ ವಿಗ್ರಹ ಸ್ಥಾಪನೆಯ ಸಂದರ್ಭದಲ್ಲಿ ಈ ಫಲಕದ ಮೇಲೆ ಶಾಸನವಿರುವುದನ್ನು ಗಮನಿಸಿದಂತೆ ಕಾಣುವುದಿಲ್ಲ.[೧೩]

ಮೊದಲನೆ ಮುಂಭಾಗದ ಶಾಸನದಲ್ಲಿ ಒಟ್ಟು ೧೨ ಸಾಲುಗಳನ್ನು ಮಾತ್ರ ಗುರುತಿಸಲಾಗಿತ್ತು. ಮೇಲಿನ ಎಂಟು ಸಾಲು ಮತ್ತು ಕೆಳಗಿನ ನಾಲ್ಕು ಸಾಲುಗಳ ನಡುವೆ, ಎಡಭಾಗದಲ್ಲಿ ಕಿರಿದಾದ ಅಡ್ಡಗೀಟು ಕೊರೆಯಲಾಗಿದ್ದು ಎರಡೂ ಪ್ರತ್ಯೇಕ ಶಾಸನ ಭಾಗಗಳೆಂದು ಸೂಚಿಸಲಾಗಿದೆ. ಬಲತುದಿಯಲ್ಲಿರುವ ಇಂತಹುದೇ ಇನ್ನೊಂದು ಗೆರೆ ಮತ್ತೊಂದು (ಏ. ಹುಣಸೀ ೧೩ ನೆಯ ಮುಖ್ಯ ಶಿಲಾಶಾಸನ) ಶಾಸನದ ಭಾಗವಿದ್ದುದನ್ನು ಸೂಚಿಸುತ್ತದೆ. ಕೆಲಸವನ್ನು ಕಂಡರಿಸಿರುವ ರೀತಿ, ವಿಗ್ರಹವನ್ನು ಕೂರಿಸಲು ಮಾಡಿರುವ ರಂಧ್ರ ಹಾಗೂ ಪ್ರನಾಳಕ್ಕಾಗಿ ಚಕ್ಕೆ ತೆಗೆದಿರುವುದರಿಂದ ಅಕ್ಷರಗಳು ಬಹುಮಟ್ಟಿಗೆ ತ್ರುಟಿತಗೊಂಡಿವೆ. ಉಳಿದಿರುವ ಸಾಲುಗಳ ಆರಂಭಿಕ ಮತ್ತು ಕಡೆಯ ಭಾಗಗಳೆರಡೂ ನಷ್ಟವಾಗಿರುವುದರಿಂದ ಶಾಸನದ ಪೂರ್ಣಪಾಠ ದೊರೆಯುವ ಸಾಧ್ಯತೆಯಿಲ್ಲ.

ಮುಂಭಾಗದಲ್ಲಿ ಶಾಸನವನ್ನು ಕಂಡುಹಿಡಿದನಂತರ ಈ ಫಲಕದ ಮಹತ್ವವನ್ನು ಅರಿತು, ಅದನ್ನು ಸಂರಕ್ಷಿಸುವ ಸಲುವಾಗಿ ಬೇರೆಡೆಗೆ ಒಯ್ಯುವಾಗ (೧೬-೩-೧೯೮೯) ರಂದು, ಮೊದಲೇ ಸೀಳುಬಿಟ್ಟಿದ್ದ ಶಿಲಾಖಂಡವು ಮೂರು ಭಾಗಗಳಾಗಿ ಒಡೆದು ಹೋಗಿ, ಫಲಕದ ಹಿಂಭಾಗದಲ್ಲಿ ಶಾಸನದ ಮತ್ತಷ್ಟು ಸಾಲುಗಳು ಬೆಳಕಿಗೆ ಬಂದವು.

ಹಿಂಭಾಗದ ಬಲಗಡೆಯಲ್ಲಿ ಹದಿನೆಂಟು ಸಾಲುಗಳೂ ಎಡಗಡೆಯಲ್ಲಿ ಹದಿನೈದು ಸಾಲುಗಳೂ ಕಂಡುಬಂದಿವೆ. ಮುಂಭಾಗದಲ್ಲಿನಂತೆ ಅಲ್ಲದೆ ಹಿಂಭಾಗದಲ್ಲಿನ ಅಕ್ಷರಗಳೂ ಸಾಕಷ್ಟು ಸುಸ್ಥಿತಿಯಲ್ಲಿದ್ದು ಸ್ಪಷ್ಟವಾಗಿವೆ.

ಕತ್ತರಿಸಿ ತಂದಿರುವ ಈ ಫಲಕದ ಮೇಲಿರುವ ಪಂಕ್ತಿಗಳು ವಿಚಿತ್ರರೀತಿಯಲ್ಲಿ ಆರಂಭವಾಗಿ, ಕೊನೆಗೊಂಡಿರುವುದು; ಸಾಲುಗಳ ಎಡ, ಬಲ ಭಾಗಗಳಲ್ಲಿರುವ ಸರಳ ರೇಖೆಗಳು; ಅವುಗಳ ಆಧಾರದ ಮೇಲೆ ಪ್ರಸ್ತುತ ಶಿಲಾಖಂಡವು ಬೇರೊಂದು ಪೂರ್ಣ ಪ್ರಮಾಣದ ಬಂಡೆ ಅಥವಾ ವಿಸ್ತೃತವಾದ ಫಲಕದ ಭಾಗವಾಗಿತ್ತೆಂದು ಸುಲಭವಾಗಿ ಊಹಿಸಬಹುದು. ಮುಂಭಾಗದ ಸಾಲುಗಳನ್ನು ಮಾತ್ರ ಓದಿದ್ದಾಗ ಭಾವಿಸಿದ್ದಂತೆ ಈ ಫಲಕ ಬಂಡೆಯೊಂದರ ಭಾಗವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇದರಿಂದ ಎರಡೂ ಮುಖಗಳಲ್ಲಿ ಅಶೋಕನ ಶಾಸನವಿರುವ ಇಂತಹ ಆಯತಾಕಾರದ ಫಲಕವು ಇಡೀ ಭಾರತದಲ್ಲಿಯೇ ಮೊದಲಬಾರಿಗೆ ಸನ್ನತಿಯಲ್ಲಿ ಬೆಳಕಿಗೆ ಬಂದಂತಾಗಿದೆ. ಈ ಫಲಕದ ಉಳಿದ ಭಾಗ, ಅದಿದ್ದಿರಬಹುದಾದ ಮೂಲಸ್ಥಾನದ ಶೋಧ ಇನ್ನೂ ಆಗಬೇಕಾಗಿದೆ.[೧೨]

ಬಹುಮಟ್ಟಿಗೆ ಹಾಳಾಗಿದ್ದರೂ ಶಿಲಾಖಂಡದ ಮೇಲಿನ ಉಳಿದುಳಿದ ಪಂಕ್ತಿಗಳಿಂದ ಶಾಸನದ ಪಾಠವನ್ನು ಗುರುತಿಸಿ, ಈಗಾಗಲೇ ದೊರಕಿ, ಪ್ರಕಟವಾಗಿರುವ ಅಂತಹುದೇ ಶಾಸನ ಪಾಠಗಳೊಡನೆ ಹೋಲಿಸಿ, ಪ್ರಸ್ತುತ ಶಾಸನಗಳ ಸಮರ್ಪಕವೆನ್ನಬಹುದಾದ ಪಾಠವನ್ನು ತಯಾರಿಸಲಾಗಿದೆ. ಮುಂಭಾಗದ ಒಂಭತ್ತನೆಯ ಪಂಕ್ತಿಯಲ್ಲಿ "ಇಯಂಧಂಮ ಲಿಪಿದೇವಾನಂ ಪಿಯೆನ" ಎಂಬ ಸ್ಪಷ್ಟ ಉಲ್ಲೇಖ ವಿರುವುದರಿಂದ ಇವು ಅಶೋಕನ ಶಾಸನಗಳೆನ್ನುವುದು ಸಿದ್ಧವಾಗುತ್ತದೆ.

ಶಾಸನ ಪಾಠಗಳು[೧೩]

ಈಗಾಗಲೇ ಸಂಶೋಧಿತವಾಗಿ ಪ್ರಕಟವಾಗಿರುವ ಅಶೋಕನ ಶಿಲಾ ಶಾಸನಗಳೊಡನೆ ಹೋಲಿಸಿ ತಯಾರಿಸಲಾದ ಕೆಳ ಕಂಡ ಪಾಠಗಳಂತೆ ಫಲಕದ ಮುಂಭಾಗದಲ್ಲಿ ಬರೆಯಲಾಗಿರುವ ಹನ್ನೆರಡು ಸಾಲುಗಳು ಅಶೋಕನ ಹನ್ನೆರಡು ಮತ್ತು ಹದಿನಾಲ್ಕನೆಯ ಮುಖ್ಯ ಶಿಲಾ ಶಾಸನಗಳ ಭಾಗಗಳೆಂದೂ, ಹಿಂಭಾಗದ ಬಲಗಡೆಯಲ್ಲಿ ಪ್ರಮುಖವಾಗಿ ಬರೆಯಲಾಗಿರುವ ಹದಿನೆಂಟು ಸಾಲಿನ ಶಾಸನವನ್ನು ಎರಡನೆಯ ಪ್ರತ್ಯೇಕ ಶಿಲಾ ಶಾಸನವೆಂದೂ, ಎಡಗಡೆಯ ಹದಿನೈದು ಸಾಲಿನ ಶಾಸನವನ್ನು ಮೊದಲನೆಯ ಪ್ರತ್ಯೇಕ ಶಿಲಾಶಾಸನವೆಂದೂ ಗುರುತಿಸಲಾಗಿದೆ. ಉಳಿದ ಕೆಲವು ಬಿಡಿ ಅಕ್ಷರಗಳನ್ನು ಇಂತಹುದೇ ಶಾಸನದ ಭಾಗದೆಂದು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗಿಲ್ಲ

೧. ಫಲಕದ ಮುಂಭಾಗದ ಶಾಸನದ ಪಾಠ [ಚಿತ್ರ ೧ ಛಾಯಾಚಿತ್ರ ೩]

ಅ. ಹನ್ನೆರಡನೆಯ ಮುಖ್ಯ ಶಿಲಾಶಾಸನದ ಭಾಗ

೧ ......ಪಾ......ಲನ...
೨ ......ಅ ಕಾ...... ನಾತೆ......
೩ ... ತಂ ಅಂತ ಪಾ ಸಾಥಂ ಚ ಥ [...] ಲಪಾಸ...
೪ ...... ಶ [ಗ] ಲಹತಿ ಸವೆ ಅ ತ ಪಾ ಸಾ ಧ ತಿ ತ ಮು ಗ..
೫ ...ತಿ ಅತ ಪಾ ಸಾಥಂ ನೆ ಸಮವಾಯು ಪಸ.. ಮ..
೬ ಸವ ಪಾ ಸಂ ಧಂ ಬಹು ಸುತ ಚ ಕಯಾಣಾ ನಾಗಮು...ಸು ಪಗಿ ಸ ವ ಃ..
೭ ವ ಮು ನ ತಿ ಅಥ ಕಿತಿ ಸ ಲ ವ [ಧಸ]...ಕ
೮ ಮಹಾಪತ ವಚ ರಾಜಿ ಮಿಕಾ ಅನೆ ಧನಿ

ಆ. ಹದಿನಾಲ್ಕನೆಯ ಮುಖ್ಯ ಶಿಲಾಶಾಸನದ ಭಾಗ

೯ ಇ ಯಂ ಧಂ ಮ ಲಿ ಪಿ ದೇವಾನಂ ಪಿ ಯೆ ಣ.... ಪಸ.
೧೦ ಸೊ ಹಿ ಸ ವ ತಿ ಸ ವೆ ಫ ತಿ (ತೆ)...
೧೧ ತಿಸ ತಸ [ಅಥ]ಸ ಮಾ ಧು ಲಿ ಯ ಯ..ಜ್ಞಾ....ತಥ...
೧೨ [ಯೂ] ಕಾ ಲ ನಂ ವ ಅಲೋಚಯಿತು ಲಿಪಿಕರಾಪ.....ಧ ವ ತ.

ಮೇಲಿನ ಪಾಠದಿಂದ ಎರಡು ಮುಖ್ಯಭಾಗಗಳನ್ನು ಗುರುತಿಸಬಹುದು. ಪ್ರಸ್ತುತ ಶಾಸನದ ಸಾಲುಗಳು ಗಿರ್ನಾರ್, ಕಲ್ಸಿ ಮತ್ತು ನೆರೆಯ ಆಂಧ್ರ ಪ್ರದೇಶದಲ್ಲಿರುವ ಎರ್ರಗುಡಿಯಲ್ಲಿ ದೊರೆತಿರುವ ಅಶೋಕನ ಹನ್ನೆರಡು ಮತ್ತು ಹದಿನಾಲ್ಕನೆಯ ಮುಖ್ಯ ಶಿಲಾ ಶಾಸನಗಳೊಂದಿಗೆ ಹೆಚ್ಚಿನ ಸಾಮ್ಯಹೊಂದಿವೆ. ಈ ಶಾಸನಗಳ ಪ್ರತಿ ಪದ, ಅಕ್ಷರವನ್ನು ಪ್ರಕಟಿತ ಪಾಠಗಳೊಂದಿಗೆ ಹೋಲಿಸಿ ತಯಾರಿಸಿರುವ ಪುನಾರಚಿತ ಪಾಠವನ್ನು ಭಾಷಾಂತರ ಸಹಿತ ಅನುಬಂಧ [ಅ ಮತ್ತು ಆ] ದಲ್ಲಿ ಕೊಡಲಾಗಿದೆ.

೨ ಫಲಕದ ಹಿಂಭಾಗದ ಶಾಸನಗಳ ಪಾಠ
(ಚಿತ್ರ ೨ ಮತ್ತು ಛಾಯಾ ಚಿತ್ರ ೪)

ಅ. ಮೊದಲನೆಯ ಪ್ರತ್ಯೇಕ ಶಿಲಾ ಶಾಸನ[೧೪]

೧ ....ತ ವಿ ಯ
೨ .....ಅಂ ನ ನೊ
೩ ....ಧೀ ದೆ ವಾ ನಂ
೪ ......ಕು [ಮ] ಪಿ

೫ ...... ಧಿಃ

೬ ..... ತ

೭ ...... ಜಕರಂ ತಂ

೮ ... ಅಥಾ...

೯ .... ಲೊ...

೧೦ .... ರಸ....

೧೧ ..... ಚಗಲ

೧೨ . .... ಖಾ ಕ ರಂ....... ಕ

೧೩ ...... ಯೆ ಪ ಅಥಾ ... .ಪವಗನಿ... ಖಾ ನೆ [ಕುಳಿ] ನಿ ಅ ತಿ ಕಾ ನೆ ಸತಿ

೧೪ ......ಸ ಅ ಪಾ ನ ಸ.. ಪ ಯ ತು ಅ ತು ಹಾ [ಪ ಳಿ]

ನಿ ಸತಿತಂಪಿ ಹಾವಾಕ

೧೫ ..... ಸ ಧೀ ತಿ...

ಪ್ರಸ್ತುತ ಫಲಕದಲ್ಲಿರುವ ಇತರ ಶಾಸನಗಳಿಗಿಂತ ಈ ಶಾಸನವೇ ಬಹುಮಟ್ಟಿಗೆ ಹಾಳಾಗಿರುವುದು. ಉಳಿದಿರುವ ಅಕ್ಷರಗಳು ಅತ್ಯಲ್ಪವಾದ್ದರಿಂದ ಸಮಗ್ರ ಪಾಠವನ್ನು ಊಹಿಸುವುದು ಬಹಳ ಕಷ್ಟ. ಈ ಶಾಸನದ ಇತರ ಭಾಗಗಳು ಫಲಕದ ಮೇಲೆ ಮತ್ತು ಪಾರ್ಶ್ವದಲ್ಲಿ ಬಹುಶಃ ಎಡಗಡೆಗೆ – ಇದ್ದಿರಬೇಕಿದ್ದು ಫಲಕವನ್ನು ಪೀಠವಾಗಿ ಪರಿವರ್ತಿಸುವಾಗ ತೀವ್ರ ಹಾನಿಗೀಡಾಗಿದೆ. ಮುಖ್ಯವಾಗಿ ವಿಗ್ರಹದ ಶೂಲವನ್ನು ಕೂರಿಸಲು ಮಾಡಿರುವ ಕುಳಿಯಿಂದ ಕೆಲವು ನಿರ್ಣಾಯಕ ಪ್ರಮುಖ ಪದಗಳು ಚಕ್ಕೆ ಎದ್ದು ಹೋಗಿರುವುದರಿಂದ ಮುಖ್ಯ ಸುಳಿವು ನೀಡಬಲ್ಲ ಅಂಶಗಳು ದೊರಕದಾಗಿವೆ. ಹಾಗಿದ್ದರೂ ಕಳಿಂಗ ಪ್ರದೇಶ (ಮುಖ್ಯವಾಗಿ ಜಾಗಾಡ)ದಲ್ಲಿ ಬೆಳಕಿಗೆ ಬಂದಿರುವ ಪ್ರತ್ಯೇಕ ಶಿಲಾಶಾಸನಗಳೊಡನೆ ಹೋಲಿಸಿ ನೋಡಿದಾಗ ಸನ್ನತಿಯ ಈ ಶಾಸನದ ಉಳಿದುಳಿದ ಭಾಗಗಳ ಅಕ್ಷರ. ಪದ. ವಿಶೇಷಣಗಳು ಜಾಗಾಡದ ಮೊದಲನೆಯ ಪ್ರತ್ಯೇಕ ಶಿಲಾಶಾಸನದ ಭಾಗಗಳೊಂದಿಗೆ ಸಾಮ್ಯಹೊಂದಿರುವುದು ಕಂಡುಬಂದಿತು. ಹಾಗಾಗಿ ಪ್ರಸ್ತುತ ಶಾಸನವನ್ನು ಅರ್ಥೈಸಲು ಅನುಕೂಲವಾಗುವಂತೆ ಜಾಗಾಡದ ಮೊದಲನೆಯ ಪ್ರತ್ಯೇಕ ಶಿಲಾಶಾಸನದ ಪೂರ್ಣ ಪಾಠವನ್ನು ಸನ್ನತಿಯ ಶಾಸನದಲ್ಲಿ ಉಳಿದಿರುವ ಭಾಗ ಮತ್ತು ಭಾಷಾಂತರವನ್ನು ಅನುಬಂಧ(೩)ದಲ್ಲಿ ನೀಡಲಾಗಿದೆ.

೫. ಎರಡನೆಯ ಪ್ರತ್ಯೇಕ ಶಿಲಾಶಾಸನಗಳು

೧.......ಅನುವಿಗ(ಗಿ)......

೨.....ಸೆವ್ರುಚ ಸುಖಿಮೆಪ ಚ ಲಭವ್ರ..

೩......ಯೆನಚ ಹೆ ವ ಂ ಪಾ ಪು ನೆ ಪು ರಾ ಜಾ ನೆ ಖ ಮು...

೪ ಯೆ ಖಮಿತವೆ ಮಮಂ ನಿಮಿತಂ (ಚ) ಧಂಮಂ ಚರೆವು ಹಿದ (ಲೋಕಂ)
೫ ಚ ಪರಲೋಕಂ ಚ ಅರಾಧಯೆವು (ಚ) ಏತಾಯೆ ಚ ಅಥಾಯುಹಕಂ ತುಫೇ
೬ ಅನುಸಾಸಾಮಿ ಅನನೆ ದಕಂ ತುಫೆನಿ ಅನುಸಾಸಿತ ಛಂದಂ ಚ ದಿತು
೭ ಯಾಹಿ ಮಮ ಧಿತಿ ಪಟಿನಾ ಚ ಅಚಲಾ ಸಾತಿ ಹೆವಂ ಕಮಕಂಮು
ಚರಿತವಿಯೆ
೮ ಅಸ್ವಾಸಿತವಿಯೊಚ ತೆ ಯೆ ನ ಚ ತೆ ಹೆವಂ ಪಾಪುನೆವು ಅಥಾ ಪಿತಾಹೆವಂ
೯ ರಾಜಾ ಯಂಥಾಚ ಅತಾನಂ ಅನುಕಂಪತಿ ಹೆವಂ ಅಫೆನಿಯ
೧೦ ಚ ಕಪಜ ಹೆವಂ ಮಯಾ ನೆಹಕಂ ತುಫೇಸಿ ಅನುಸಾಸಿತು ಛಂದಂಚ
೧೧ ತು ದೇಸಾವು ತಿಕೆ ಏತಸಿ ಅಥಸಿ ಹೋಹಾಮಿ ಅಲಾಹಿ ತುಫೆ ಅಸ್ವಾಸನಾಯೆ
೧೨ ಹಿತ ಸುಖಾಯಂ ತೆಸಾಂ ಹಿದಲೋಕಿತು ಪಾರಲೋಕಿಕಾಯೆ ಏತಂಚ ಹೆವಂ
೧೩ ಕರಂತಂ ಸ್ವಗಂಚ ಅರೊಧ ಸಾತ ಮಮ ಆನಸಿಯಂ ಏಯಾತಂಏತಾ
೧೪ .....ಯ ಇಯಂ ಲಿಪಿ ಹಿದ ಲಿಖಿತಾ ಅಥಾ ಮಹಾಮಾತಾ ಸಾಸ್ವತಂ
೧೫...... ಯುಜಿವು ಅಸ್ವಾಸನಾಯ ಧಂಮ್ಮ ಚರನಾಯ ಚ ಅಂತ
೧೬..... ಚ ಲಿಪಿ ಅನು ಚತ ಮಾಧಿ ಸೋತ(ವಿ)ಯಾ ತಿಸಿ ಅಂತರಾಪಿ
೧೭......ಹಿ ಖನಸ ಖನಂ (ಕುಳಿ) ತಪಿಯಾ ಹೆವಂ.. ..
೧೮......ಫತ ಸಂಪುಟಿ (ಕುಳಿ)......

ಸನ್ನತಿಯ ಫಲಕದ ಮೇಲಿರುವ ಶಾಸನಗಳಲ್ಲೆಲ್ಲ ಹೆಚ್ಚು ಸುಸ್ಥಿತಿಯಲ್ಲಿರುವುದು ಈ ಭಾಗವೇ. ಮೇಲ್ಭಾಗದ ಬಹುಶಃ ಮೊದಲ ಮೂರು ಮತ್ತು ನಾಲ್ಕನೆಯ ಸಾಲಿನ ಆರಂಭ ಭಾಗಗಳೆಲ್ಲ ತ್ರುಟಿತವಾಗಿವೆ. ಈಗ ಉಳಿದಿರುವ ಭಾಗಗಳು ಕಳಿಂಗದೇಶದ ಜಾಗಾಡ (ಗಂಜಾಂಜಿಲ್ಲೆ, ಒರಿಸ್ಸಾರಾಜ್ಯ) ಮತ್ತು ಧೌಲಿ (ಪುರಿ ಜಿಲ್ಲೆ, ಒರಿಸ್ಸಾ)ಗಳಲ್ಲಿ ದೊರೆತಿರುವ ಶಿಲಾಶಾಸನಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಈ ಪ್ರತ್ಯೇಕ ಶಿಲಾ ಶಾಸನವನ್ನು ಡಿ. ಸಿ. ಸರ್ಕಾರ ಅವರು ಹದಿನೈದನೆಯ ಮುಖ್ಯ ಶಿಲಾಶಾಸನ ಎಂದು ಕರೆದಿದ್ದಾರೆ.[೧೮] ಅವುಗಳ ಆಧಾರದ ಮೇಲೆ ಪುನಾರಚಿತ ಪಾಠ ಮತ್ತು ಭಾಷಾಂತರವನ್ನು ಅನುಬಂಧ (ಈ)ದಲ್ಲಿ ಕೊಡಲಾಗಿದೆ.

ಲಿಪಿ ಮತ್ತು ಭಾಷೆ: ಫಲಕದ ಮುಂಭಾಗದಲ್ಲಿರುವ ಅಕ್ಷರ ಮತ್ತು ಸಾಲುಗಳು ಸ್ವಲ್ಪ ಅಸ್ತವ್ಯಸ್ತ ರೀತಿಯಲ್ಲಿ ಬರೆಯಲಾಗಿದೆ. ಆದರೆ ಹಿಂಭಾಗದಲ್ಲಿ ಅಕ್ಷರ ಸಾಲುಗಳು ಒಂದೇ ಸರಳರೇಖೆಯಲ್ಲಿ ಸಾಗುತ್ತಿದ್ದು ನೀಟಾಗಿವೆ. ಅಕ್ಷರಗಳನ್ನು ನಿಗದಿತ ಆಳತೆಯ ಪರಿಮಿತಿಯಲ್ಲಿ ಆಳವಾಗಿ ಕೊರೆಯಲಾಗಿದ್ದರೂ, ಬಹುಶಃ ಅನಂತರ ಫಲಕವನ್ನು ವಿಶೇಷ ರೀತಿಯಲ್ಲಿ ನಯಗೊಳಿಸಿರುವುದರಿಂದ ಕೆಲವು ಕಡೆ ಅಕ್ಷರಗಳು ಸವೆದಂತೆ ಕಾಣುತ್ತವೆ. ಪ್ರಸ್ತುತ ಫಲಕವನ್ನು ಪೀಠವಾಗಿ ಪರಿವರ್ತಿಸಿದ ನಂತರವೂ ಪೂಜೆ, ಅಭಿಷೇಕ ಮುಂತಾದವುಗಳಿಂದಾಗಿಯೂ ಈ ಸವೆತ ಉಂಟಾಗಿರಬಹುದು.

ಈ ಎಲ್ಲ ಶಾಸನ ಭಾಗಗಳೂ ಅಶೋಕನ ಕಾಲದ ಕ್ರಿ. ಪೂ. ೩ನೆಯ ಶತಮಾನದ ಬ್ರಾಹ್ಮೀಲಿಪಿಯಲ್ಲಿಯೇ ಬರೆಯಲಾಗಿದೆ. ಲಿಪಿಕಾರನ ಕೈಬರೆಹದ ಪರಿಣತಿಯ ಪರಿಣಾಮದ ಹೊರತಾಗಿ ಅಕ್ಷರಗಳ ರೂಪದಲ್ಲಿ ಬೇರಾವ ವಿಶೇಷ ಲಕ್ಷಣಗಳೂ ಕಾಣುವದಿಲ್ಲ. ಒಟ್ಟಿನಲ್ಲಿ ಕರ್ನಾಟಕ–ಆಂಧ್ರ ಪ್ರದೇಶಗಳಲ್ಲಿ ಈಗಾಗಲೇ ದೊರೆತಿರುವ ಶಾಸನಗಳ ಲಿಪಿಯನ್ನೇ ಇವು ಹೋಲುತ್ತದೆ ಎನ್ನಬಹುದು.

ಲಿಪಿಸಾಮ್ಯವಿರುವಂತೆಯೇ ಪ್ರಸ್ತುತ ಶಾಸನಗಳ ಭಾಷೆಯೂ ಮೇಲೆ ಹೇಳಿದ ಶಾಸನಗಳಲ್ಲಿ ಕಾಣದೊರೆಯುವ ಗ್ರಾಂಥಿಕವಲ್ಲದ ಆರಂಭಿಕ ಕಾಲದ ಮಾಗಧಿ ಪ್ರಾಕೃತವೇ ಆಗಿದೆ. ಶಾಸನಗಳ ಪೂರ್ಣಪಾಠ ದೊರೆಯದಿರುವದರಿಂದ ವ್ಯಾಕರಣ ಮತ್ತಿತರ ಅಂಶಗಳ ವಿಶೇಷ ಅಧ್ಯಯನ ಸಾಧ್ಯವಾಗದು.

ಹೊಸದಾಗಿ ದೊರೆತಿರುವ ಶಾಸನಗಳ ಪ್ರಾಮುಖ್ಯತೆ:

ಸನ್ನತಿಯಲ್ಲಿ ದೊರಕಿರುವ ಈ ಹೊಸ ಶಾಸನಗಳಿಂದ ಇಂದಿನ ಕರ್ನಾಟಕ ಪ್ರದೇಶದಲ್ಲಿ ಮೊದಲ ಬಾರಿಗೆ ಅಶೋಕನ ಮುಖ್ಯ ಹಾಗೂ ಪ್ರತ್ಯೇಕ ಶಿಲಾಶಾಸನಗಳು ಬೆಳಕಿಗೆ ಬಂದಂತಾಗಿವೆ. ಲೇಖನದ ಪ್ರಸ್ತುತ ಭಾಗದಲ್ಲಿ ಈ ಶಾಸನಗಳ ಪ್ರಾಮುಖ್ಯತೆ ವಿವಿಧ ಅಂಶಗಳನ್ನು ಚರ್ಚಿಸಲಾಗಿದೆ.

ಇದುವರೆಗೆ ಕರ್ನಾಟಕದಲ್ಲಿ ಅಶೋಕನ ಹತ್ತು ಲಘು ಶಾಸನಗಳು ಸಂಶೋಧಿತವಾಗಿವೆ. ಭೌಗೋಳಿಕವಾಗಿ ಈ ಹತ್ತೂ ಶಾಸನಗಳು ಹರಡಿರುವ ರೀತಿ ಗಮನಾರ್ಹವಾದದ್ದು (ನೋಡಿನಕ್ಷೆ ೧) ಚಿತ್ರದುರ್ಗ ಜಿಲ್ಲೆಯಲ್ಲಿ ಮೂರು (ಜಟ್ಟಿಂಗ ರಾಮೇಶ್ವರ, ಬ್ರಹ್ಮಗಿರಿ ಹಾಗೂ ಸಿದ್ಧಾಪುರಗಳಲ್ಲಿ) ಬಳ್ಳಾರಿ ಜಿಲ್ಲೆಯಲ್ಲಿ ನಾಲ್ಕು [ನಿಟ್ಟೂರು ಹಾಗೂ ಉದೇಗೊಳ್ಳಂ ಎರಡೂ ಸ್ಥಳಗಳಲ್ಲಿ ಎರಡೆರಡು] ಮತ್ತು ರಾಯಚೂರು ಜಿಲ್ಲೆಯಲ್ಲಿ ಮೂರು (ಗವಿಮಠ, ಪಾಲ್ಕಿಗುಂಡು ಹಾಗೂ ಮಾಸ್ಕಿಗಳಲ್ಲಿ)[೧೯] ಈಗಾಗಲೇ ನಿರ್ದಿಷ್ಟವಾಗಿ ತಿಳಿದಿರುವಂತೆ ಅಶೋಕನು ಇಂತಹ ಲಘು ಶಾಸನಗಳನ್ನು ಬರೆಸಿದುದು ತನ್ನ ಸಾಮ್ರಾಜ್ಯದಾಚೆಯ ಗಡಿ ಪ್ರಾಂತಗಳಲ್ಲಿನ ಜನರಲ್ಲಿ ಧರ್ಮದ ಅಭಿವೃದ್ಧಿಯನ್ನು ಸಾಧಿಸಲು (ಅಂತಾ ಚಮೇ ಜಾನೆಯುಃ)

ದಕ್ಷಿಣ ಭಾರತದ ಸಂದರ್ಭದಲ್ಲಿ ಎರ್ರಗುಡಿ [ಕರ್ನೂಲು ಜಿಲ್ಲೆ, ಆಂಧ್ರ ಪ್ರದೇಶಯಲ್ಲಿ) ಮಾತ್ರವೇ ಒಂದರಿಂದ ಹದಿನಾಲ್ಕರವರೆಗಿನ ಎಲ್ಲ ಮುಖ್ಯ ಹಾಗೂ ಲಘು ಶಿಲಾ ಶಾಸನಗಳೂ ಒಂದೇ ಕಡೆ ದೊರೆತಿರುವುದು. ಹಾಗಿದ್ದರೂ "ಮುಖ್ಯ ಹಾಗೂ ಲಘುಶಾಸನಗಳ ನಡುವೆ ಗಮನಾರ್ಹ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಬಹುಶಃ ಈ ಎರಡೂ ವಿಭಿನ್ನ ರೀತಿಯ ಶಾಸನಗಳನ್ನು ಬೇರೆ ಬೇರೆ ಸಂದರ್ಭ ಮತ್ತು ಕಾಲಗಳಲ್ಲಿ ಕೆತ್ತಲಾಗಿರುವುದು ಈ ವ್ಯತ್ಯಾಸಗಳಿಗೆ ಮುಖ್ಯ ಕಾರಣವಾಗಿರಬೇಕು.[೨೦] ಬ್ರಹ್ಮಗಿರಿ

ಗುಂಟಿನ ಲಘು ಶಾಸನಗಳು ಅಶೋಕನ ಹೆಸರನ್ನು, ಆತ ತನ್ನ ಸಾಮ್ರಾಜ್ಯದ ದಕ್ಷಿಣ ಪ್ರಾಂತದ ಉಪರಾಜಧಾನಿಯಾಗಿದ್ದಿರಬಹುದಾದ ಸುವರ್ಣಗಿರಿಯಲ್ಲಿ ಕೆಲಕಾಲ ವಾಸಿಸುತ್ತಿದ್ದ ಬಗೆಗೂ ತಿಳಿಸುತ್ತವೆ. ಈ ಶಾಸನಗಳ ಪ್ರಕಾರ ಅಶೋಕ ತಾನು ಧಾರ್ಮಿಕ ಪ್ರವಾಸದಲ್ಲಿದ್ದಾಗ, ಧರ್ಮಪ್ರಸಾರ, ಪ್ರಜೆಗಳ ಹಿತ ಇವುಗಳ ಬಗೆಗೆ ನೀಡಿದ ನಿಷ್ಠುರ ಆದೇಶಗಳು ಆರ್ಯಪುತ್ರ (ಬಹುಶಃ ಪ್ರಾದೇಶಿಕ ರಾಜ್ಯಪಾಲರಾಗಿ ನಿಯುಕ್ತರಾಗಿದ್ದ ಸಾಮ್ರಾಟನ ಮಕ್ಕಳಲ್ಲಿ ಒಬ್ಬ) ಹಾಗೂ ಸುವರ್ಣಗಿರಿಯ ಮಹಾಮಾತ್ರ [ಆಡಳಿತಾಧಿಕಾರಿಗಳು]ರಿಗೆ ಉದ್ದೇಶಿಸಿದವು. ದಕ್ಷಿಣದಲ್ಲಿ ಈ ಆದೇಶಗಳು ಸುವರ್ಣ ಗಿರಿಯಿಂದ ಇಸಿಲದಲ್ಲಿದ್ದ ಮಹಾಮಾತ್ರರಿಗೆ ನಿರೂಪಿಸಲಾದಂತಹವು (ಸುವಂನ ಗಿರೀತೆ ಅಯಪುತಸ ಮಹಾಮಾತಾಣಾಂ ಚ ವಚನೇನ ಇಸಿಲಸಿ ಮಹಾಮಾತಾ ಆರೋಗಿಯಂ ವತವಿಯಾ. ಹೇವಂ ಚ ವತವಿಯಾ) ಇದರಿಂದ ಸುವರ್ಣಗಿರಿ ಮೌರ್ಯ ಸಾಮ್ರಾಜ್ಯದ ಮುಖ್ಯ ಆಡಳಿತ ಕೇಂದ್ರಗಳಲ್ಲಿ ಒಂದಾಗಿತ್ತೆಂದು ಸ್ಪಷ್ಟವಾಗುತ್ತದೆ. ಆದರೆ ಶಾಸನೋಕ್ತ ಸುವರ್ಣಗಿರಿಯನ್ನು ನಿರ್ದಿಷ್ಟವಾಗಿ ಮತ್ತು ಖಚಿತವಾಗಿ ಗುರುತಿಸುವುದರಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ[೨೧]

ಪ್ರಸ್ತುತ ಸನ್ನತಿಯಲ್ಲಿ ದೊರಕಿರುವ ಹನ್ನೆರಡು ಮತ್ತು ಹದಿನಾಲ್ಕನೆಯ ಮುಖ್ಯ ಶಿಲಾಶಾಸನಗಳ ಆಧಾರದ ಮೇಲೆ ಭೀಮಾ ನದಿಯ ದಡದಲ್ಲಿರುವ ಗುಲ್ಬರ್ಗ ಜಿಲ್ಲೆಯ ಪ್ರದೇಶಗಳು ಅಶೋಕನ ಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದೂ, ಈ ಭಾಗದ ಆಡಳಿತಾಧಿಕಾರಿಯಾಗಿ ಮಹಾಮಾತ್ರನೊಬ್ಬನು ನಿಯುಕ್ತನಾಗಿದ್ದನೆಂದೂ ಹೇಳಬಹುದು. ಹಾಗೆಯೇ ಬಹುಶಃ ಎರ್ರಗುಡಿ, ಸುವರ್ಣಗಿರಿಗಳು ಸಾಮ್ರಾಜ್ಯದ ದಕ್ಷಿಣ ಭಾಗದ ಆಡಳಿತವನ್ನು ನೋಡಿಕೊಳ್ಳಲು ನಿಯುಕ್ತನಾಗಿದ್ದ "ಆರ್ಯಪುತ್ರ"ನ ನೆಲೆವೀಡುಗಳಾಗಿದ್ದಿರಬೇಕು. ಅಲ್ಲದೆ, ದಾಕ್ಷಿಣಾತ್ಯದಲ್ಲಿರುವ ಮೊದಲೆರಡು ಲಘು ಶಿಲಾಶಾಸನಗಳು ಮಾತ್ರ ದೊರಕಿರುವ ರಾಜುಲ ಮಂದಗಿರಿಯು ಎರ್ರಗುಡಿಯಿಂದ ಕೇವಲ ೩೦ ಕಿ.ಮೀ. ಉತ್ತರಕ್ಕಿರುವುದು ಬಹುಶಃ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. "ರಾಜುಲ ಮಂದಗಿರಿ" ಎಂಬ ಸ್ಥಳನಾಮವೂ ಈ ಹಿನ್ನೆಲೆಯಲ್ಲಿ ಔಚಿತ್ಯಪೂರ್ಣವಾಗಿದ್ದು ಗಮನಾರ್ಹ ವೆನಿಸುತ್ತದೆ. ಬಹುಶಃ ವಿಶೇಷ ಸಂದರ್ಭಗಳಲ್ಲಿ, ಅಂದರೆ ಸಾಮ್ರಾಟನು ಸಾಮ್ರಾಜ್ಯದ ದಕ್ಷಿಣ ಪ್ರಾಂತಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ, ಈ ಬೆಟ್ಟದ ಸ್ಥಳೀಯ ದೊರೆ, ಆಡಳಿತಾಧಿಕಾರಿಗಳ ಸಭೆ ಸೇರುತ್ತಿದ್ದಿರಬೇಕು. ಬ್ರಹ್ಮಗಿರಿ ಸಿದ್ಧಾಪುರಗಳಲ್ಲಿನ ಲಘು ಶಿಲಾಶಾಸನಗಳ ಪ್ರಕಾರ ಅಶೋಕನು ಪ್ರವಾಸದಲ್ಲಿದ್ದಾಗ ಆಗಲೇ ೨೫೬ ರಾತ್ರಿಗಳನ್ನು ಕಳೆದಿದ್ದ (ಇಯಂ ಚ ಸಾವಣೇ ಸಾವಿತೇ ವ್ಯೂಥೇನ ೨೦೦ ೫೦ ೬).

ಈ ವಿವರಗಳ ಹಿನ್ನೆಲೆಯಲ್ಲಿ ಅಶೋಕ ಚಕ್ರವರ್ತಿಯು ದಕ್ಷಿಣ ಪ್ರಾಂತಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ, ಅಲ್ಲಿ ಆಡಳಿತವನ್ನು ಸುವ್ಯವಸ್ಥಿತಗೊಳಿಸುವ ಬಗೆಗೆ ಹಾಗೂ

ಧರ್ಮದ ಪ್ರಸಾರಕ್ಕಾಗಿ ಹೊಸ ಹೊಸ ಶಾಸನಗಳನ್ನು ಬರೆಸುವುದರ ಬಗೆಗೆ (ಲೇಖಾ ಪೇಶಾಮಿ ಚೇವ ಲಿಕ್ಯಂ- ಲೇಖಿಯಿಷ್ಯಾಮಿ ಚೈವ ನಿತ್ಯಮ್) ಸ್ಥಳೀಯ ದೊರೆ. ಆಡಳಿತಾಧಿಕಾರಿಗಳ ಒಂದು ಸಭೆಯನ್ನು ರಾಜುಲಮಂದಗಿರಿಯಲ್ಲಿ ಕರೆದಿರಬಹುದೆಂದು ಊಹಿಸಿದರೆ ಬಹುಶಃ ತಪ್ಪಾಗಲಾರದು. ದಕ್ಷಿಣ ಭಾರತದಲ್ಲಿ ಶಾಸಕ (ಮುಖ್ಯ ಹಾಗೂ ಲಘು)ಗಳನ್ನು ಬರೆಸಲು ಆಯ್ಕೆ ಮಾಡಿರುವ ಸ್ಥಳಗಳ (ನೋಡಿ ನಕ್ಷೆ-೧) ಸೂಕ್ಷ್ಮ ಪರಿಶೀಲನೆಯಿಂದ ಈ ಪ್ರದೇಶಗಳು ಮೊದಲಿಗೆ ಸಾಮ್ರಾಜ್ಯದ ಹೊರಗೆ ಸ್ಥಳೀಯ ಸ್ವತಂತ್ರ ಅರಸರ ಅಧೀನದಲ್ಲಿ ಇದ್ದವೆಂದೂ, ಆಗ ಲಘು ಶಿಲಾಶಾಸನಗಳನ್ನು ಬರೆಸಲಾಯಿತೆಂದೂ, ಕೆಲಕಾಲದ ಅನಂತರ ಇವು ಮುಖ್ಯವಾಗಿ ಗುಲ್ಬರ್ಗಾ ಜಿಲ್ಲೆಯ ಪರಿಸರ ಸಾಮ್ರಾಜ್ಯದ ಭಾಗವಾಯಿತೆಂದೂ ಆಗ ಇಲ್ಲಿನ ಮುಖ್ಯ ಶಿಲಾಶಾಸನಗಳನ್ನು ಬರೆಸಲಾಯಿತೆಂದೂ ಹೇಳಬಹುದು. ಸನ್ನತಿಯಲ್ಲಿ ದೊರೆತಿರುವ ಪ್ರತ್ಯೇಕ ಶಿಲಾಶಾಸನಗಳಿಂದ ಈ ಅಭಿಪ್ರಾಯ ಮತ್ತಷ್ಟು ಬಲಗೊಳ್ಳುತ್ತದೆ.

ಫಲಕದ ಹಿಂಭಾಗದಲ್ಲಿ ಎದ್ದುಕಾಣುವಂತೆ ಬರೆಯಲಾಗಿರುವ ಹದಿನೆಂಟು ಸಾಲಿನ ಶಾಸನವು ಒರಿಸ್ಸಾದ ಗಂಜಾಂ ಜಿಲ್ಲೆಯ ಜಾಗಾಡದಲ್ಲಿ ದೊರೆತಿರುವ ಎರಡನೆಯ ಪ್ರತ್ಯೇಕ ಶಿಲಾಶಾಸನದ ಇನ್ನೊಂದು ಭಿನ್ನರೀತಿಯ ಪಾಠವು ಅದೇ ರಾಜ್ಯದ ಪುರಿ ಜಿಲ್ಲೆಯ ಧೌಲಿಯಲ್ಲಿಯೂ ದೊರಕಿವೆ. ಉಳಿದ ಮುಖ್ಯ ಶಿಲಾಶಾಸನ [ಒಂದರಿಂದ ಹದಿನಾಲ್ಕರ ವರೆಗಿನ) ಗಳಿಗಿಂತ ಬೇರೆಯಾದುದರಿಂದ ಡಾ. ಡಿ. ಸಿ ಸರ್ಕಾರ್ ಅವರು ಕಲಿಂಗದ ಈ ಶಾಸನವನ್ನು ಹದಿನೈದನೆಯ ಮುಖ್ಯ ಶಿಲಾಶಾಸನ ಎಂದು ಗುರುತಿಸಿದ್ದಾರೆ.೨೨

ಎರಡನೆಯ ಪ್ರತ್ಯೇಕ ಶಿಲಾಶಾಸನ [S.R.E. II] ಎಂದು ಕರೆಯಲಾಗುತ್ತಿದ್ದು ರೂ ಧೌಲಿಯ ಬಂಡೆಯ ಮೇಲೆ ಮೊದಲಿಗೆ ಈ ಶಾಸನವನ್ನೇ ಬರೆಯಲಾದುದು. ಆದರೆ ಸನ್ನತಿಯಲ್ಲಿ ದೊರಕಿರುವ ಎರಡನೆಯ ಪ್ರತ್ಯೇಕ ಶಿಲಾಶಾಸನದ ಪಾಠದಲ್ಲಿ ಕೆಲವು ಪಾಠಾಂತರಗಳಿರುವುದು ಗಮನಾರ್ಹ. ಮುಖ್ಯವಾಗಿ ಹದಿನಾಲ್ಕನೆಯ ಸಾಲಿನಲ್ಲಿ ಮಹಾಮಾತ್ರರ ಉಲ್ಲೇಖವಿರುವುದಾದರೂ 'ದೇವಾನಾಂಪ್ರಿಯ', ಪ್ರಿಯದರ್ಶಿ ರಾಜಾ' ಮುಂತಾದ ಉಲ್ಲೇಖಗಳಿಲ್ಲ. ಇದಕ್ಕೆ ಬದಲಾಗಿ ಜಾಗಾಡದಲ್ಲಿ ದೊರೆತಿರುವ ಇಂತಹುದೇ ಶಾಸನದಲ್ಲಿ 'ದೇವಾನಾಂಪ್ರಿಯ' ಎಂಬುದರ ಜೊತೆಗೆ ಸ್ಥಳೀಯ ಆಡಳಿತಾಧಿಕಾರಿ (ಮಹಾಮಾತ್ರ)ಯು 'ಸಮಾಪಾ' ಎಂಬ ಸ್ಥಳದಲ್ಲಿ ನೆಲೆಗೊಂಡಿದ್ದ ಬಗೆಗೂ ಉಲ್ಲೇಖವಿದೆ.

ಭಾರತದಾದ್ಯಂತ ಸಾಮಾನ್ಯವಾಗಿ ಕಂಡುಬರುವ ಮುಖ್ಯ ಶಿಲಾ ಶಾಸನಗಳು ಗುಂಪಿನಂತೆ ಅಲ್ಲದೆ ಕಳಿಂಗ ಪ್ರಾಂತದಲ್ಲಿ ಮುಖ್ಯವಾಗಿ ಧೌಲಿ, ಜಾಗಾಡಗಳಲ್ಲಿ ಮುಖ್ಯ ಶಿಲಾ ಶಾಸನ XI XII ಮತ್ತು XIII ರ ಬದಲಾಗಿ ವಿಶೇಷ ರೀತಿಯ ಪ್ರತ್ಯೇಕ ಶಿಲಾ

ಶಾಸನಗಳು ಬರೆಯಲಾಗಿವೆ. ಆದರೆ ಸನ್ನತಿಯ ಫಲಕದ [ಮುಂಭಾಗದಲ್ಲಿ]ದೊರಕಿರುವ ಸಾಲುಗಳು ಹನ್ನೆರಡು ಮತ್ತು ಹದಿನಾಲ್ಕನೆಯ ಮುಖ್ಯ ಶಿಲಾ ಶಾಸನಗಳ ಪಾಠವಾಗಿದ್ದು. ಉಳಿದ ಅಕ್ಷರ ಸಾಲುಗಳನ್ನು ಖಚಿತವಾಗಿ ಗುರುತಿಸುವುದು ಸಾಧ್ಯವಾಗಿಲ್ಲ.

ಈಗಾಗಲೇ ಪರಿಚಿತವಾಗಿರುವಂತೆ ದಕ್ಷಿಣ ಭಾರತದ(ಆಂಧ್ರ-ಕರ್ನಾಟಕದ) ಲಘು ಶಿಲಾಶಾಸನಗಳು ಮೌರ್ಯಸಾಮ್ರಾಜ್ಯದ ಗಡಿಯಾಚೆ, ಸ್ವತಂತ್ರ ದೊರೆಗಳ ಆಳ್ವಿಕೆಯಲ್ಲಿದ್ದ ಜನರಲ್ಲಿ ಧರ್ಮ ಸಂವರ್ಧನೆಗಾಗಿ ಬರೆಸಿರುವಂತಹವು. ಆದರೆ ಮುಖ್ಯ ಶಿಲಾ ಶಾಸನಗಳು ಸಾಮ್ರಾಜ್ಯದೊಳಗೆ ಧರ್ಮಾಭಿವೃದ್ಧಿ ಮತ್ತು ಪ್ರಜಾಹಿತಕ್ಕಾಗಿ ಸಾಮ್ರಾಟನು ರೂಪಿಸಿದ ಕೆಲವು ವಿಶೇಷ ಕಾರ್ಯಕ್ರಮ, ಯೋಜನೆಗಳನ್ನು ಪ್ರಚುರಪಡಿಸುವ ಉದ್ದೇಶದಿಂದ ಬರೆದಂತಹವು. ಇದೇ ರೀತಿ ಅಪರೂಪವಾಗಿ ದೊರೆತಿರುವ ಪ್ರತ್ಯೇಕ ಶಿಲಾಶಾಸನಗಳೂ ಸ್ಪಷ್ಟ ಹಾಗೂ ವಿಶೇಷ ಉದ್ದೇಶ ಹೊಂದಿರುವಂತಹವು.

ತನ್ನ ರಾಜ್ಯಾಭಿಷೇಕವಾದ ಎಂಟನೆಯ ವರ್ಷದಲ್ಲಿ ಪ್ರಿಯದರ್ಶಿ ರಾಜನು ಕಲಿಂಗ ದೇಶವನ್ನು ಗೆದ್ದುಕೊಂಡನು. (ಅಷ್ಟವರ್ಷಾಭಿಷಿಕ್ತಸ ದೇವಾನಾಂ ಪ್ರಿಯಸ್ಯ ಪ್ರಿಯದರ್ಶಿನೋ ರಾಜ್ಞ । ಕಲಿಂಗಾ ವಿಜಿತಾ ।) ಕಲಿಂಗ ರಾಜ್ಯದಲ್ಲಿ ನಡೆದ ಭೀಕರ ಕದನದ ಪರಿಣಾಮವಾಗಿ ಅಶೋಕನ ಮನಃ ಪರಿವರ್ತನೆ ಆದುದರಿಂದ ಆ ರಾಜ್ಯದಲ್ಲಿ ಸಾಮ್ರಾಟನ ಆಳ್ವಿಕೆ ತೊಡಗಿದ ಹೊಸದರಲ್ಲಿ ಅಲ್ಲಿನ ಜನತೆಯ ಮನದಲ್ಲಿ ಹೊಸ ಆಡಳಿತವನ್ನು ಕುರಿತಾದ ಭರವಸೆ, ಸಾಮ್ರಾಟ ಹಾಗೂ ಧರ್ಮವನ್ನು ಕುರಿತು ಶ್ರದ್ಧೆ, ಗೌರವಗಳನ್ನು ಮೂಡಿಸುವ ಉದ್ದೇಶದಿಂದ ವಿಶೇಷ ರೀತಿಯ ಪ್ರತ್ಯೇಕ ಶಿಲಾಶಾಸನಗಳನ್ನು ಬರೆಯಿಸಿರುವುದು ಔಚಿತ್ಯಪೂರ್ಣವಾಗಿಯೇ ಇದೆ. ನೂತನವಾಗಿ ಗೆದ್ದು, ಸಾಮ್ರಾಜ್ಯದ ಭಾಗವಾಗಿಸಿಕೊಂಡ ಪ್ರದೇಶಗಳನ್ನು ಬಹುಶಃ ತೋಸಾಲಿ, ಸುವರ್ಣಗಿರಿಗಳಲ್ಲಿ ನೇಮಿಸಿದ್ದ ಸ್ಥಳೀಯ ಆಡಳಿತಾಧಿಕಾರಿಗಳ ಅಧೀನ ಮಾಡಿದನಂತರ, ಅಂದರೆ ಕ್ರಿ.ಪೂ. ೨೬೨-೨೬೧ರ ಸುಮಾರಿಗೆ, ಅಶೋಕ ಈ ಪ್ರತ್ಯೇಕ ಶಿಲಾಶಾಸನಗಳನ್ನು ಬರೆಸಿರಬೇಕು. ಈ ಹಿನ್ನೆಲೆಯಲ್ಲಿ ಸನ್ನತಿಯಲ್ಲಿ ದೊರೆತಿರುವ ಪ್ರತ್ಯೇಕ ಶಿಲಾಶಾಸನಗಳು ಮಾತ್ರವು ಮಹತ್ವಪೂರ್ಣ ಎನಿಸುತ್ತವೆ.

ಬ್ರಹ್ಮಗಿರಿಯಲ್ಲಾಗಲೀ, ಕರ್ನಾಟಕ ಆಂಧ್ರದ ಇತರ ಪ್ರದೇಶಗಳಲ್ಲಾಗಲೀ ಇಂತಹ ಪ್ರತ್ಯೇಕ ಶಿಲಾಶಾಸನ ಇದುವರೆಗೆ ಲಭ್ಯವಾಗಿಲ್ಲ. ಆದುದರಿಂದ ಅಶೋಕನು ದಕ್ಷಿಣ ಭಾರತದ ಪ್ರಸ್ತುತ ಭಾಗವನ್ನು, ಅಂದರೆ ಕೃಷ್ಣಾ-ಭೀಮಾ ದೋ ಆಬ್ ಅನ್ನು ಗೆದ್ದುಕೊಂಡು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ ಹೊಸದರಲ್ಲಿ ಸನ್ನತಿಯ ಪ್ರತ್ಯೇಕ ಶಿಲಾಶಾಸನಗಳನ್ನು ಬರೆಸಿರಬೇಕೆಂದು ಸಮರ್ಥವಾಗಿ ಊಹಿಸಬಹುದು. ಆದುದರಿಂದಲೇ ಹೊಸ ಮಹಾಮಾತ್ರರ ನೇಮಕ ಮುಖ್ಯ ಹಾಗೂ ಇತರ ಶಿಲಾಶಾಸನಗಳನ್ನು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರೆಸುವುದೂ ಅವಶ್ಯಕ ಎನಿಸಿರಬೇಕು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಶಾಸನಗಳು ಸ್ಥಳೀಯವಾಗಿ 'ರಣಮಂಡಲ' ಎಂದು ಕರೆಯಲಾಗುವ ಪ್ರಾಚೀನ ಕೋಟೆ ಮತ್ತು ನಗರ ನಿವೇಶನವಿರುವ ಪ್ರದೇಶಕ್ಕೆ ಅನತಿ ದೂರದಲ್ಲಿ ದೊರೆತಿರುವುದು ಗಮನಾರ್ಹ ಅಂಶವಾಗುತ್ತದೆ. ಕರ್ನಾಟಕದ ಈ ಭಾಗವನ್ನು ಗೆಲ್ಲಲು ಮೌರ್ಯಸೇನೆ ಸ್ಥಳೀಯ ಅರಸರ ಪಡೆಗಳ ಜೊತೆ ಸಂಘರ್ಷಿಸಿದುದು ಈ 'ರಣಮಂಡಲ' ಪ್ರದೇಶದಲ್ಲಿಯೋ ಅಥವಾ ಬೇರೆಡೆಯಲ್ಲಿಯೋ? ಎನ್ನುವುದನ್ನು ಇನ್ನಷ್ಟು ಪುರಾತತ್ತ್ವೀಯ ಶೋಧನೆಗಳಿಂದ ಸ್ಪಷ್ಟಪಡಿಸಿಕೊಳ್ಳಬೇಕಾದ ಅವಶ್ಯಕತೆಯಿದೆ.

ಸನ್ನತಿಯ ಶಾಸನಗಳ ವಿಶಿಷ್ಟತೆ:

ಸನ್ನತಿಯಲ್ಲಿ ದೊರಕಿರುವ ಶಾಸನ ಫಲಕದ ಆಕಾರ, ಗಾತ್ರವೂ ವಿಶೇಷವಾದುದೇ. ಇದುವರೆಗೆ ಬೆಳಕಿಗೆ ಬಂದಿರುವ ಅಶೋಕನ ಶಿಲಾಶಾಸನಗಳನ್ನು ಬರೆಯಲಾಗಿರುವುದು ಶಿಲಾನಿರ್ಮಿತ ಗುಹೆ, ದೊಡ್ಡಗಾತ್ರದ ಸ್ವಾಭಾವಿಕ ಬಂಡೆ, ಅಥವಾ ಪ್ರಮುಖ ಬೌದ್ಧ ಸ್ತೂಪ, ವಿಹಾರ ಮುಂತಾದ ಕಟ್ಟಡ ಸಂಕೀರ್ಣಗಳಿರುವ ಸ್ಥಳದಲ್ಲಿ ಸ್ಥಾಪಿತವಾಗಿರುವ ವಿಶೇಷ ರೀತಿಯ ಸ್ತಂಭಗಳ ಮೇಲೆ ಇಂತಹ ವಿಶೇಷ ಸ್ತಂಭ ಶಾಸನಗಳನ್ನು ಅಶೋಕ ತನ್ನ ಇಪ್ಪತ್ತೇಳನೆಯ ರಾಜ್ಯಾಡಳಿತ ವರ್ಷ (ಅಂದರೆ ಕ್ರಿ. ಪೂ. ೨೪೪–೨೪೩) ರಲ್ಲಿ ಸ್ಥಾಪಿಸಿದ, (ಸಡುವೀಸತಿ ವಸ ಅಭಿಷಿತೇನ ಮಮ ಇಯಂ ಧಂಮಲಿಪಿ ಲಿಖಾಪಿತಾ.) ಸಾಮಾನ್ಯವಾಗಿ ಇಂತಹ ಸ್ತಂಭಶಾಸನಗಳು ಎತ್ತರದ ದುಂಡಾದ ಸಿಲಿಂಡರಿನಾಕಾರದ ಶಿಲಾಸ್ತಂಭದ ಮೇಲೆ ಬರೆಯಲಾಗಿವೆ. ದಕ್ಷಿಣ ಭಾರತದ ಸಂದರ್ಭದಲ್ಲಿ ಗುಹಾಶಾಸನವನ್ನು ಹೊರತುಪಡಿಸಿ ಅಮರಾವತಿ (ಗುಂಟೂರ ಜಿಲ್ಲೆ, ಆಂಧ್ರ ಪ್ರದೇಶ) ಯ ಮಹಾಸ್ತೂಪದ ಬಳಿ ಸ್ಥಾಪಿತವಾದ ಏಕೈಕ ಸ್ತಂಭ ಶಾಸನವನ್ನೂ ಒಳಗೊಂಡಂತೆ; ಎಲ್ಲ ರೀತಿಯ ಶಿಲಾಶಾಸನಗಳೂ ಬೆಳಕಿಗೆ ಬಂದಿವೆ.

ಪ್ರಸ್ತುತ ಸನ್ನತಿಯ ಫಲಕವು ಆಯತಾಕಾರದಲ್ಲಿದ್ದು, ಶಾಸನದ ಸಾಲುಗಳು ಮೇಲಿನಿಂದ ಕೆಳಕ್ಕೆ ಬರುವಂತೆ ಬರೆಯಲಾಗಿವೆ. ಎರಡೂ ಮುಖಗಳಲ್ಲಿ ಶಾಸನವಿರುವ ಈ ಫಲಕ ಬಹುಶಃ ಮೂರು ಮೀ. ಗಿಂತ ಹೆಚ್ಚು ಎತ್ತರದ ಸು. ಒಂದೂವರೆ ಮೀ. ಅಗಲವಾದ, ಸು. ಮೂವತ್ತು ಸೆಂ.ಮೀ. ದಪ್ಪವಾದ ಆಯತಾಕಾರದ ಸ್ತಂಭದ ಮಧ್ಯ ಭಾಗವಾಗಿದ್ದಿರಬೇಕು. ಉಳಿದೆಡೆಯಲ್ಲಿರುವಂತೆ ಬಹುಶಃ ಈ ಮೂಲಸ್ತಂಭವನ್ನು ಜನ ನಿಬಿಡ ಪ್ರದೇಶದಲ್ಲಿ ಸ್ತೂಪ, ವಿಹಾರ ಮುಂತಾದ ಮುಖ್ಯ ಕಟ್ಟಡ ಸಂಕೀರ್ಣ ಒಂದರಲ್ಲಿ ಜನರು ಸುಲಭವಾಗಿ ಓದಿ ತಿಳಿಯಲು ಅನುಕೂಲವಾಗುವಂತೆ ಸ್ಥಾಪಿಸಿದ್ದಿರಬೇಕು. ಇದುವರೆಗೆ ಅಶೋಕನ ಶಾಸನವಿರುವ ಇಂತಹ ಆಯತಾಕಾರದ ಶಿಲಾಫಲಕ ಅಥವಾ ಸ್ತಂಭ ಎಲ್ಲಿಯೂ ದೊರೆತಿರಲಿಲ್ಲ.[೨೧] ರಾಜಸ್ಥಾನದ ಬೈರಾತ್ (ಜೈಪುರ ಜಿಲ್ಲೆ ಬಭ್ರು ವಿನ ಸಮೀಪ)ನಲ್ಲಿ ಸಂಶೋಧಿತವಾಗಿರುವ ಫಲಕವೊಂದರ ಮೇಲೆ ಅಶೋಕನ ಶಾಸನವಿರುವುದಾದರೂ ಅದು ಧಾರ್ಮಿಕ ಮಹತ್ವದ ಲಘು ಶಿಲಾಶಾಸನಗಳ ಗುಂಪಿಗೆ ಸೇರಿದ್ದಲ್ಲದೆ ಮುಖ್ಯ ಅಥವಾ ಪ್ರತ್ಯೇಕ ಶಿಲಾಶಾಸನಗಳ ಗುಂಪಿಗೆ ಸೇರುವುದಿಲ್ಲ.[೨೪]

ದಕ್ಷಿಣ ಭಾರತದ ಇತಿಹಾಸದ ದೃಷ್ಟಿಯಿಂದಲೂ ಸನ್ನತಿಯಲ್ಲಿ ದೊರೆತಿರುವ ಈ ಶಾಸನಗಳು ಮಹತ್ವವಾದವು. ಈ ಹಿಂದೆಯೇ ದೊರಕಿರುವ ಲಘು ಶಿಲಾಶಾಸನಗಳ ಹಿನ್ನೆಲೆಯಲ್ಲಿ ಕರ್ನಾಟಕದ ಉತ್ತರ ಜಿಲ್ಲೆಗಳು ಮೌರ್ಯಸಾಮ್ರಾಜ್ಯದ ಗಡಿಯಾಚೆ ಇದ್ದುವೆಂದು ಭಾವಿಸಲಾಗಿತ್ತು. ಆದರೆ ಈಗ ದೊರಕಿರುವ ಹೊಸ ಶಾಸನಗಳು ಮುಖ್ಯ ಹಾಗೂ ಪ್ರತ್ಯೇಕ ಶಿಲಾಶಾಸನಗಳಾದುದರಿಂದ ಕರ್ನಾಟಕ–ಆಂಧ್ರ ಪ್ರದೇಶಗಳ ಕೆಲ ವಾದರೂ ಭಾಗ ಮೌರ್ಯ ಸಾಮ್ರಾಜ್ಯದ ದಕ್ಷಿಣ ಭಾಗವಾಗಿತ್ತೆಂದು ಸ್ಪಷ್ಟವಾಗಿ ತಿಳಿಸಿ ಕೊಡುತ್ತವೆ.

ಮಹತ್ವದ ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಸನ್ನತಿ ಗ್ರಾಮ, ಮುಖ್ಯವಾಗಿ ಚಂದ್ರಲಾಪರಮೇಶ್ವರಿ ದೇವಾಲಯ ಸಂಕೀರ್ಣವಿರುವ ದಿಬ್ಬ ಹಾಗೂ ಕೋಟೆಯ ಪ್ರದೇಶ ('ರಣಮಂಡಲ')ಗಳನ್ನು ಕೂಲಂಕುಷ ಪ್ರಾಚ್ಯ ಸಂಶೋಧನೆಗೆ ಒಳ ಪಡಿಸಿದರೆ ಪ್ರಾಯಶಃ ಮೌರ್ಯಕಾಲೀನ ದಕ್ಷಿಣ ಭಾರತದ ಇತಿಹಾಸದ ಪುನಾರಚನೆಗೆ ಸಂಬಂಧಿಸಿದಂತೆ ಮೌಲಿಕ ಮಾಹಿತಿಗಳು ದೊರಕುವ ಸಾಧ್ಯತೆಯಿದೆ ಎನ್ನಬಹುದು.

ಅನುಬಂಧ ೨೫

ಅ. ಹನ್ನೆರಡನೆಯ ಮುಖ್ಯ ಶಿಲಾಶಾಸನ

೧ ಪಾಠಾಂತರಗಳು

ಸಾಲು ೧ ಸನ್ನತಿ : ... ... (ಸಂಪೂರ್ಣವಾಗಿ ಕ್ರುಟಿತ) ... ..

ಎರ್ರಗುಡಿ : ದೆವಾನಂ ಪಿಯೆ ಪಿಯದಸಿ ಲಾಜಾ ಸವ–ಪಾಸ(ಂ)ದಾನಿ ಪವಜಿತಾನಿ

ಗಿರ್ನಾರ : ದೆವಾನಂ ಪಿಯೆ ಪಿಯದ್ (ದ)ಸಿ ರಾಜಾ ಸವ–ಪಾಸಂಡಾನಿ ಚ (ಪ)(ವ)–ವಜಿತಾನೀ

ಕಲ್ಸಿ : (ಡ)ಏವಾನಂ ಪಿಯೆ (ಪ) ಇಯದಕ್ಷ(ಇ) ವಾಜಾಕ್ಷಾವ–ಪಾಕ್ಷಂ (ಡಾನ್) ಇ ಪವ್ (ಅ) ಜಿತಾ (ನ್) ಇ

ಸಾಲು ೨ ಸನ್ನತಿ : .... (ಸಂಪೂರ್ಣವಾಗಿ ಕ್ರುಟಿತ) ... .

ಎರ್ರಗುಡಿ : (ಗಿಹಥಾನಿ ವ ಪೂಜಯತಿ ದಾನೇ) ನ ವಿವಿಧಾಯ ಚ ಪ್ (ವಾಜ)ಯ ನೊ ಚು ತಥಾ ದಾನಂ ವ

ಗಿರ್ನಾರ್ : ಚ ಘರಸ್ತಾನಿ ಚ ಪೂಜಯತಿ ದ್ (ರಾ) ನೆ ನ ವಿವಾ ಧಾಯಂ (ಚ) ಪೂಜಾಯ ಪೂಜಯುತಿ ನೆ ನ ತು ತ ಥಾ ದಾನಂ ವ

ಕಲ್ಸಿ : ಗಹಥಾನಿ ವಾ ಪುಜೆತಿ ದಾನೇನ ಏವಿಧ್ (ಅಯೆ) ಚ ಪುಜ್ (ಅ) ಯೆ ನೆ (ನೊ) ಚ (ಚು) ತಥಾ ದಾನೆ ವಾ

ಸಾಲು ೩ ; ಸನ್ನತಿ : .... (ಸಂಪೂರ್ಣವಾಗಿ ಕ್ರಟಿತ) ....

ಎರ್ರಗುಡಿ : [ಪೂಜಾ] ವ ದೇವಾನಂಪಿಯೆ ಮಂನ [ತಿ] ಅ[ಥ] [ಕಿತಿ ಸಾಲವಢಿ] ಸಿ [ಇಯಾ] ಸಮ ಪಾಸಂಡಾನಂ

ಗಿರ್ನಾರ್ : ಪೂ[ಜಾ] ವದ್ [ಐ] ವಾನಂ ಪಿಯೊ ಯಥಾ ಕಿತಿ ಸಾರ ವಢೀ ಅಸ ಸ [ವ.ಪಾ] ಸಾರ್ [ಅ] ವ

ಕಲ್ಸಿ : ಪೂಜಾ ವಾ ದೆವಾನ [ಂ] ಪಿಯೆ ಮ್ [ಅ] ನತಿ ಅಥಾ ಕ್[ಇ] ತ ಶ್ [ಆ] ಲ-ವ್ [ಅ] ಢಿ ಸಿಯಾತೆಶ್]ಅ] ವಪಾಶದಾನ ಶಾಲಾ-ವ

ಸಾಲಂ ೪ : ಸನ್ನತಿ : .... [ಸಂಪೂರ್ಣವಾಗಿ ಪ್ರಕಟಿತ] ....

ಎರ್ರಗುಡಿ : ಢಿ ಚು ಬಹು-ವಿಧ್ [ಅ] ತಸ ಚು [ಇ] ಯಂ ಮ್ [ಊ] ಲ [ಎ] ಗು ವಚತ್ [ತಿ] ಕಿತಿ ಅತ- ಪಾಸಂ [ಡ] - [ಪೂಜಾ] ವ ಪಲ ಪಾಸಂಡ ಗಲಹಾ

ಗಿರ್ನಾರ್ : ಢೀ ತು ಬಹವಿಧಾ ತಸ ತು ಇದಂ ಮುಲಂ ಯ ವಚೀ-ಗುತಿ ಕಿಂತಿ ಅತ್ಪ ಪಾಸಂಡಾ ಪೂಜಾ ವ ಪರಪಾಸಂಡ ಗರಹಾ

ಕಲ್ಸಿ : ಢೀ ನಾ ಬಹುವಿಧಾ ತಶ ಚು ಇನಂ ಮು ಅ .... ವ [ಚ] - ಗುತಿ ಕಿತಿ ತ್ [ಇ] ಅತ - ಪಶಡ [ವ್] ಅಪೂಜಾ ವ ಪಲ-ಪಾಶಂಡ-ಗಲಹಾ

ಸಾಲು ೫ : ಸನ್ನತಿ : .... ಪಾ-ಲನ

ಎರ್ರಗುಡಿ : [ವಾನೊ] ಸಿಯಾ ಅಪಕಲನಸಿ ಲ [ಹು] ಕಾ [ವ]- [ಸಿಯಾ] ತ [ಸಿ] ತ [ಸಿಷ] ಕಲ ನ[ಸಿ] [ಪೂ] ಜಿ [ತವಿಯಾ] ವ ಚು ಪಲ-ಪಾಸಂಡ್ [ಅ] ತೆನ (ತೆ) ನ

ಗಿರ್ನಾರ್ : ವ ನೊ ಭವೆ ಅಪ್ರಕರಣಂ ಹಿ ಲಹುಕಾ ವ ಅಸ .... .. ತಂಹಿ ತಂಹಿ ಪ್ರಕರಣೆ ಪೂಜೆತ್ಯಾ ತು ಪ ವ ಪರಪಾಸಂಡಾ ತೆನ ತನ

ಕಲ್ಸಿ : ವ ನೊ (ಶ) ಯ ಅಪ್ (ಅ) ಕ್ (ಅ) ಲ್ (ಅ) ನ ಶ್ ಇ ಲಹ ಕಾ ವಾ ಸಿಯಾ ತ ಗಿ ತ ಶಿ ಷ ಕ ಲ ನ್ ಅ ಶ್ ಇ ಮೂಜೆತ ವ್ ಇ ಯ ಚು ಪ ಅ ಲ-ಪಾ ಶ್ ಡಾ ತೆನ ತೆನ

ಸಾಲು ೬ ಸನ್ನತಿ : ಅಕಾ . . . . ನಾಹೆ . . .

ಎರ್ರಗುಡಿ : ಅಕಾಲೆನ ಹೇಮಂ ಕಲಂತಂ ಅತ ಪಾಸಂಡ (O) ವಢ ಯ ಯ ತಿ ಪಲ ಪಾ ಸಂ ಡಸ ಪಿಚ ಉಪಶತಿ ತಿ ತದಾಂನಥ್ ಅ ಕಲ ಂತ

ಗಿರ್ನಾರ : ಪ್ರಕರಣೇನ ಪಂ ಕ ಕರುಂ ಆತ್ಪ ಪಾಸಂಡವ್ ಚ ವಢ ಯತಿ ಪಾರ ಪಾಸಂಡಸ ಚ ಉಪಕರೊತಿ ತದ್ ಅಂಜಥಾ ಕರೊತೊ

ಕಲ್ಸಿ : ಅಕಾಲಿಸ ಹೆವ ಕಲತ ಅತ ಪಾಶವಡ ಬಢಂ ವಡಿಯತಿ ಪಲಪಾಶಡ ಪಿ ವಾ ಉಪಕಲೆತಿ ತದಾ ಅನಥ ಕಲತ

ಸಾಲು ೭ ; ಸನ್ನತಿ : ತಂ ಅಂತಪಾಸಾಢಂ ಚ ಛ [ನತಿ] ಪಾಸ . . . ಶಗಲಹತಿ?

ಎರ್ರಗುಡಿ : ಅ [ತ] ಪಾಸಂಡಂ ಚ ಛನತಿ ಪಲ ಪಾಸಂ [ಡಸ] ಪಿ ಚ ಅಪಕತಿ ತಿ ಎ ಹಿ ಕೆಚಿ ಅತ ಪಾಸಂಡಂ ಪೂಜಯತಿ ಪ ಲ ಪಾಸಂಡಂ ವ್ [ಅ] ಗಲಹತಿ

ಗಿರ್ನಾರ್ : ಆತ್ಪ ಪಾಸಡಂ ಚ ಛಣತಿ ಪರ ಪಾಸಂಡಸ ಚ ಪಿ ಅಪಕ ರೋತಿ ಯೊಹಿ ಕೊಚಿ ಆತ್ಪ ಪಾಸಂಡಂ ಪೂಜಯೆತಿ ಪರಪಾಸಂಡಂ ವ್ ಆ ಗರಹತಿ

ಕಲ್ಸಿ : ಅತ ಪಾಶಡ ಚ ಛನತಿ ಪಲ ಪಾಶಡ ಪಿ ವಾ ಅಪಕ ಲೆತಿ ಯೆ ಹ್ ಇ ಕೆಚ ಅ ತ ಪಾಶಡ ಪುನಾತಿ ಪಲ ಪಾಶಡ ವಾಗ ಲ ಹತಿ

ಸಾಲು ೮ ಸನ್ನತಿ : ಸವೆ ಅತ ಪಸಥ .... (ಉತ್ತಮು ... ಗ ಅತ ಪಸಥ ಸೆ ಸವು

ಎರ್ರಗುಡಿ : ಸವೆ ಅತ- ಪಾಸಂಡ- ಭ (ತಿಯಾಪ ಕಿ(ತಿಅ) ತ-ಪಾಸಂ [ಡ]ಂ ದಿ[ಪಯಿ] ಮಃ [ತಿ] ಸೆ ಚ ಮನ ತಥಾ ಕಲಂತಂ ಬಾಢತತಿ ಉಪಹಂತಿ ಅತ-ಪಾಸಂಡಂ ಸೆ ಸವು

ಗಿರ್ನಾರ್ : ಸವಂ ಆತ್ಪ-ಪಾಸಂಡ-ಭತಿಯಾ ಕಿಂತಿ ಆತ್ಪ-ಪಾಸಂಡಂ ದೀಪಯೆಮು ಇತಿ ಸೊ ಚ್ ಪುನ್ ತಥಾ ಕರಾತೊ ಆತ್ಪ- ಪಾಸಂಡ[ಂ] ಬಾಢತರಂ ಉಪಹನಾತಿ ತ ಸವಾ

ಕಲ್ಸಿ : ಷ ವೆ ಅತ-ಪಾಷಂ[ಡ]-ಭತಿಯಾ ವಾಕಿತಿ ಅತ-ಪಾಷಂಡ [ಡ್] ಇಪಯೆಮು ಷೆ ಚಪುನಾ ತಥಾ ಕಲಂತಂ ಬಾಢತತಿ ಉಪ್[ಅ] ಹಂತಿ ಅತ ಪಾಷಂಡಪಿ ಷವು

ಸಾಲು ೯ ಸನ್ನತಿ : ಪಾಯೆ [ಪ] ಸ [ದು] .... ಸವ ಪಾಸಂಡ

ಎರ್ರಗುಡಿ : ಪಾಯೆ [ವ] ಸಾಧು [ಕಿ] ಅಂಸಂ-ಅನಾಸ [ಧಂಮಂ ಸುನೆವು]ಚ ಸುಸೂಸೆಯುಃ ಚಿ ಹೆವಂ ಹಿ ದೆ[ವಾ]ನಂ ಪಿಯೆ[ಸ ಇ] ಛಾ ಕಿತಿ ಸವ-ಪಾಸಂಡ

ಗಿರ್ನಾರ್ ವಾಯೊ ಎವ ಸಾಧು ಕಿಂತಿ [ಅ] ಜ ಮಂಜನಸ ಧಂಮಂ ಸ್ರುಣಾರು ಚ ಸುಸುಂಸೆರ ಚ ಎವಂ ಹಿದ್[ಎ]ವಾನಂ ಪಿಯಸ ಇಚ್ಛಾ ಕಿಂತಿ ಸವ-ಪಾಸಂಡ

ಕಲ್ಸಿ : ವಾಯೆ ವೃ ಷಾಧು ಕಿತಿ ಅಂನ ವಂನಷಾ ಧಂಮಂಘನೆ (ಯ್) ಉ ಚಾ ಷುಷುಷೆ ಯಾ ಚಾತಿ ಹೆವಂ ಹಿ ದೆವಾನಂಪಿಯೆಷಾ ಇ ಛಾ ಕಿಂತಿ ಸವ-ಪಾಷಂಡ

ಸಾಲು ೧೦ ಸನ್ನತಿ :

ಎರ್ರಗುಡಿ : ಬಹು-ಸುತ ಕಿಯಾ ನಾಗವಂ .... ಸವಗಿನವತ...ಚಸಘತಿ

ಎರ್ರಗುಡಿ : ಬಹು-ಸುತಾ ಚ ಕಯಾನಾಗವಾ ಚ ಹುವೆಯು [ಉತಿ]ಎ [ಚ] ತತ ತತ [ಪಾಸಂನಾ] ತೆ ಹಿ ವತವಿ[ಎ] ದೆವಾನಂ ಪಿ ಯೆ ನೊ ತಥ್ [ಅ] ದಾನಂ ವ್[ಅ] [ಪೂ] ಜಾ ವ್ [ಅ] ಮಂನತಿ

ಗಿರ್ನಾರ್ : ಬಹು-ಸ್ರುತಾ ಚ ಅಸು ಕಲ್ (ಅ) ಣಾಗವಾಚ[ಅ] ಸುಯೆ ಚ ತತ್ರತತ ಪ್ರಸಂನಾ ತೆಹಿ ವತವ್ಯಂ ದೆವಾನಂ ಪಿಯೊ ನೊ ತಥಾ ದಾನಂ ವ ಪೂಜಾಂ ವ ಮಂಜತೆ

ಕಲ್ಸಿ : ಬಹು-ಘತಾ ಚಾ ಕಯಾನಾಗಾ ಚ ಹುವೆಯು ತಿ ಎ [ಚ] ತತ ತ್[ಅ] ತ್[ಪ್] [ಅ] ಷ ಅಲ ನತೆ [ಹಿ ವ] ತವಿಯೆ ದೆವಾನಂ ಪಿಯೆನೊ ತಥಾ ದಾನಂ ವಾ ಪೂಜಾ ವಾ ಮಂನತ್[ಇ]

ಸಾಲು ೧೧

ಸನ್ನತಿ : ಅಥ ಕಿತಿ .... ಧ — ಕ .... ಮಹಾ [ಮಾತಾ]

ಎರ್ರಗುಡಿ : ಅಥ ಅತಿ ಸಾಲ-ವಢಿ ಸಿ[ಯಾ] ಸವ-ಪಾಸ[ಂ]ಡಾನಂ ತಿ [ಬ] ಹುಕಾ ಚ ಎತಾಯೆ ಅ(ಠಾ)ಯೆ ವಿಯಾಪಟ ಧಂಮ [ಮ]ಹಾ ಮಾತಾ ಇಥಿ ಧಿಯ[ಖ]ಮಹಾಮ್ [ಅ]ತಾ

ಗಿರ್ನಾರ್ ; ಯಥಾ ಕಿಂತಿ ಸಾರ-ವಢಿ ಅಸ ಸರ್ವ-ಪಾಷಡಾನಂ ಬಹುಕಾ ಚ ಎತಾಯ ಅಥಾ ವ್ಯಾಪತಾ ಧಂಮ-ಮಹಾ ಮಾತಾ ಚ ಇಥೀಯಖ-ಮಹಾಮಾತಾ ಚ

ಕಲ್ಸಿ : ಅಥಾ ಕಿತಿ ಷ್[ಅ]ಲಾ-ವ್[ಅ]ಢಿಶಿ ಯಾಷವ-ಪಾಷಂಡಾ-ತಿಂ ಬಹುಕಾ ಚ್ [ಅ] ಎತಾಯಾಠಾ ಯೆ ವಿಯಾಪಟಾ ಧ[ಂ]ಮ ಮಹಾಮಾತ ಇಧಿಧಿಯಖ ಮಹಾಮಾತಾ

ಸಾಲು ೧೨ : ಸನ್ನತಿ : ವಚ [ರಾಜ] ಮಿಕ.... ನೆ ಧಿನಿ....

ಎರ್ರಗುಡಿ : ವಚ-ಭೂಮಿಕೊ [ಕಾ] ಚ ಅಂನೆ ಟಿ ನಿಕಾಯಾ ಇಯಂ [ಚು ಎ] ತಸ ಫಲೆ [ಅತ-ಪಾಸಂಡ-ವಢಿ]ಚ ಹೊತಿ ಧಂಮಸ ಚ ದ್[ಈ] ಪನಾ ತಿ.

ಗಿರ್ನಾರ್ : ವಚ-ಭೂಮಿಕಾ ಚ ಅಞೇ ಚ ನಿಕಾಯಾ ಅಯಂ ಏತಸ ಫಲ ಯ ಆತ್ಪ-ಪಾಸಂಡ-ವಢೀ ಚ ಹೊತಿ ಧಂಮಸ ಚ ದೀ[ಅ]ನಾ.

ಕಲ್ಸಿ : ವಚ-ಭೂಮಿಕ್ಯಾ ಅನೆ ವಾ[ಸಿ] ಕ್ಯ [ಅ[ಯಾ ಇಯಂ ಎತಿಸಾ ಫತಿ ಯಂ ಅತ-ಪಾಷಂಡ-ವಧಿ ಚಾ ಹೊತಿ ಧಂಮಷ ಚಾ ದೀಪನಾ.

೨ ಸಂಸ್ಕೃತ ಪಾಠ:

೧ ದೇವಾನಾನ ಪ್ರಿಯಃ ಪ್ರಿಯದರ್ಶೀ ರಾಜಾ ಸರ್ವಾನ್ ಪಾಷಂಡಾನ್ ಪ್ರವ್ರಜಿತಾನ್ ಗೃಹಸ್ಥಾಂಶ್ಚ ಪೂಜಯತಿ ದಾನೇನ ವಿವಿಧಯಾಚ ಪೂಜಯಾ.

೨ ನತು ತಥಾ ದಾನಂ ವಾ ಪೂಜಾಂ ವಾ ದೇವಾನಾಂ ಪ್ರಿಯೋ ಮನ್ಯತೇ ಯಥಾ. ಕಿಮಿತಿ ? ಸಾರವೃದ್ಧಿಃ ಸ್ಯಾದಿತಿ ಸರ್ವ ಪಾಷಂಡಾನಾಂ.

೩ ಸಾರವೃದ್ಧಿರ್ನಾ (ಮ) ಬಹುವಿಧಾ

೪ ತಸ್ಯ ತ್ವಿದಂ ಮೂಲಂ ಯದ್ ವಚೋ ಗುಪ್ತಿ. ಕಿಮಿತಿ ? ತ[ಥಾ] ಆತ್ಮಪಾಷಂಡೇ ಪೂಜಾ ವಾ ಪರಷಂಡಗರ್ಹಾ ಚ ನ ಸ್ಯಾ ತ್. ಅಪ್ರಕರಣೇ ಲಘುತಾ ವಾಸ್ಯಾತ್.

೫ ತಸ್ಮಿಂ ಸ್ತನ್ಮಿನ್ಃ ಪ್ರಕರಣೆ ಪೂಜಯಿತವ್ಯಾಸ್ತು ಪರಪಾಷಂಡಾಸ್ತೇನ ತೇನಾಕಾರೇಣ. ಏವಂ ಪರ್ವನ್ ಆತ್ಮಪಾಷಂಡಾನ್ ಬಾಢಂ ವರ್ಧಯತಿ. ಪರಪಾಷಂಡಾನಪಿ ವಾ ಉಪಕ ರೋತಿ. ತದನ್ಯ ಥಾ ಪರ್ವನ್ ಆತ್ಮ ಪಾಷಂಡಾಂಶ್ಚ ಛಿನತ್ತಿ. ಪರಪಾಷಂಡಾನಪಿ ವ್ಯಾಪಕ ರೋತಿ.

೬ ಯೋ ಹಿ ಕಶ್ಚಿತ್ ಆತ್ಮಪಾಷಂಡಾನ್ ಪೂಜಯತಿ. ಪರಪಾಷಂಡಾನ್ ವಾಗರ್ಹಯತಿ ಸರ್ವಂ ಆತ್ಮಪಾಷಂಡ ಭಕ್ತ್ಯಾ ವಾ. ಕಿಮಿತಿ ? ಆತ್ಮಪಾಷಂಡಾನ್ ದೀಪಯೇಮ? ನ ಚ ಪುನಸ್ತ ಥಾ ಕುರ್ವನ್ ಬಾಢ ತರ ಮುಪಹನ್ತ್ಯಾತ್ಮ ಪಾಷಂಡೇ.

೭ ಸಮವಾಯ ಏವ ಸಾಧ್ಯ, ಕಿಮಿತಿ ? ಅನ್ಯಮನಸೋ ಧರ್ಮಂ ಶೃಯಿಯುಶ್ಚ ಶುಶ್ರೂಷೇ ರಂ ಶ್ಚೇತಿ.

೮ ಏವಂ ಹಿ ದೇವಾನಾಂ ಪ್ರಿಯಸ್ಯೇಚ್ಛಾ. ಕಿಮಿತಿ ? ಸರ್ವ ಪಾಷಂಡಾ ಬಹುಶೃತಾಶ್ಚ ಕಲ್ಯಾಣಾಗಮಾಶ್ಚ ಭವೇಯುರಿತಿ. ಯೇ ಚ ತತ್ರ ತತ್ರ ಪ್ರಸನ್ನಾಸ್ತೈರ್ವಕ್ತವ್ಯಂ– "ದೇವಾನಾಂ ಪ್ರಿಯೋ ನ ತಥಾ ದಾನಂ ವಾ ಪೂಜಾಂ ವಾಮನ್ಯತೇ, ಯಥಾ ಕಿಮಿತಿ ? ಸಾರವೃದ್ಧಿಃ ಸ್ಯಾತ್ ಸರ್ವಪಾಷಂಡಾನಾಮಿ" ಇತಿ.

೯ ಬಹುಕಾಶ್ಚ ಏತಸ್ಮಾ ಅರ್ಥಾಯ ವ್ಯಾಪೃತಾಃ- ಧರ್ಮ ಮಹಾಮಾತ್ರಾಃ ಸ್ತ್ರ್ಯಧ್ಯಕ್ಷೆ ಮಹಾಮಾತ್ರಾಃ ವ್ರಜಭೂಮಿಕಾಃ ಅನ್ಯೇ ವಾನಿಕಾಯಾಃ ಇದಂ ಚೈತೇ ಷಾಂ ಫಲಂ ಯದಾತ್ಮಪಾಷಂಡ ವೃದ್ಧಿಶ್ಚ ಭವತೆ ಧರ್ಮಸ್ಯ ಚ ದೀಪನಾ

ಕನ್ನಡ ಭಾಷಾಂತರ:

೧ ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿರಾಜನು ಎಲ್ಲ ಅನ್ಯಧರ್ಮೀಯರನ್ನು ಪರಿವ್ರಾಜಕರನ್ನು ಗೃಹಸ್ಥರನ್ನು ವಿಧವಿಧವಾದ ದಾನ ಮತ್ತು ಪೂಜೆಗಳಿಂದ ಸಮನಾಗಿ ಗೌರವಿಸುತ್ತಾನೆ.

೨ ಆದರೂ, ಅವೇ ದಾನ ಮತ್ತು ಪೂಜೆಗಳನ್ನು ದೇವತೆಗಳಿಗೆ ಪ್ರಿಯನಾದವನು ತನಗಾಗಿ ಒಪ್ಪುವುದಿಲ್ಲ. ಏಕೆ? ಎಲ್ಲ ಧರ್ಮಾನುಯಾಯಿಗಳಲ್ಲೂ ಅವರವರ ಧರ್ಮದ ಗೌರವವರ್ಧನೆ ಆಗಲಿ ಎಂದು.

೩ ಸಾರವೃದ್ಧಿ ಎನ್ನುವುದು ಅನೇಕ ವಿಧಗಳಲ್ಲಿ ಆಗುತ್ತದೆ.

೪ ಅದರ ಮೂಲವಿರುವುದು ವಾಕ್ಸಂಯಮ (ವಚೋಗುಪ್ತಿ) ದಲ್ಲಿ ಹಾಗೆಂದರೇನು ತನ್ನ ಧರ್ಮದಲ್ಲಿ ಅತ್ಯಭಿಮಾನವಾಗಲಿ, ಪರಧರ್ಮದಲ್ಲಿ ಅನಾದರವಾಗಲಿ, ಸಂದರ್ಭಕ್ಕೆ ಅನುಚಿತವೆನಿಸುವ ಸಣ್ಣ ಮಾತಾಗಲಿ ಕೂಡದು.

೫ ಅಂತಹ ಸಂದರ್ಭಗಳಲ್ಲಿ ಪರಧರ್ಮಿಯರನ್ನು ಅವರವರ ರೀತಿಯಲ್ಲಿಯೆ ಗೌರವಿಸತಕ್ಕದ್ದು. ಹೀಗೆ ಮಾಡುವುದರಿಂದ ಅವನು ತನ್ನ ಧರ್ಮವನ್ನೂ ಬಲಪಡಿಸುತ್ತಾನೆ. ಪರಧರ್ಮೀಯರಿಗೂ ಉಪಕಾರ ಮಾಡುತ್ತಾನೆ. ಹೀಗೆ ಮಾಡದೆ ಅನ್ಯಥಾ ನಡೆದುಕೊಂಡರೆ ತನ್ನ ಧರ್ಮವನ್ನು ಹಾಳು ಮಾಡುತ್ತಾನೆ, ಪರಧರ್ಮಿಯರಿಗೂ ಅಪಕಾರ ಮಾಡುತ್ತಾನೆ.

೬ ಯಾವನು ತನ್ನ ಧರ್ಮವನ್ನು ಹೆಚ್ಚಾಗಿ ಆದರಿಸುತ್ತಾನೋ ಅವನು ಹಾಗೆ ಮಾಡುವುದು ಪರಧರ್ಮವನ್ನು ಹಳಿಯುವುದಕ್ಕೋ? ಇಲ್ಲವೆ ತನ್ನ ಧರ್ಮದಲ್ಲಿ ಅತ್ಯಾದರವನ್ನು ತೋರಿಸುವುದಕ್ಕೋ? ಇಲ್ಲವೆ ತನ್ನ ಧರ್ಮವನ್ನು ಬೆಳಗಲೆಂದೋ? ಆದರೆ ಹೀಗೆ ಮಾಡುವುದರಿಂದ ಅಂಥವನು ನಿಜಕ್ಕೂ ತನ್ನ ಧರ್ಮಕ್ಕೆ ವಿಶೇಷ ಹಾನಿ ಉಂಟು ಮಾಡುತ್ತಾನೆ.

೭ ಆ ಕಾರಣ ಸಮನ್ವಯವೇ ಸಾಧ್ಯವಾದ್ದು ಏಕೆ? ಆಗ ಬೇರೆ ಅಭಿಪ್ರಾಯವುಳ್ಳವರೂ ಧರ್ಮೋಪದೇಶವನ್ನು ಕೇಳುವದು ಗೌರವದಿಂದ ನಡೆದುಕೊಳ್ಳುವದು.

೮ ಇದೇ ದೇವತೆಗಳಿಗೆ ಪ್ರಿಯನಾದವನ ಇಚ್ಛೆ ಏಕೆ? ಎಲ್ಲ ಅನ್ಯಧರ್ಮಿಯರೂ, ಬಹುಶ್ರುತರೂ, ಎಲ್ಲರ ಕಲ್ಯಾಣವನ್ನು ಬಯಸುವವರೂ ಆಗಲೆಂದು: ಯಾರು ಯಾರು ಯಾವ ಯಾವುದರಿಂದ ಪ್ರಸನ್ನರಾದರೂ ಅವರೆಲ್ಲರೂ ಹೀಗೆ ಹೇಳುವಂತಾಗಬೇಕು, ದೇವತೆಗಳಿಗೆ ಪ್ರಿಯನಾದವನು ತನ್ನ ರೀತಿಯಲ್ಲಿಯೇ ದಾನ, ಪೂಜೆಗಳನ್ನು ಮಾನ್ಯ ಮಾಡುವುದಿಲ್ಲ. ಏಕೆಂದರೆ ಎಲ್ಲ ಅನ್ಯ ಧರ್ಮಾನುಯಾಯಿಗಳಲ್ಲೂ ಅವರವರ ಧರ್ಮದ ಸಾರವೃದ್ಧಿ ಆಗಬೇಕೆಂದು.

೯ ಈ ಉದ್ದೇಶಕ್ಕಾಗಿಯೇ ಧರ್ಮಮಹಾಮಾತ್ರರು, ಮಹಿಳಾಧ್ಯಕ್ಷ, ಮಹಾಮಾತ್ರರು, ಗೋಸಂವರ್ಧನೆಯ ಅಧಿಕಾರಿಗಳು ಮತ್ತಿತರ ಅಧಿಕಾರಿಗಳು

ನಿಯುಕ್ತರಾಗಿದ್ದಾರೆ. ಈ ಎಲ್ಲ ಕಾರ್ಯಗಳ ಫಲವಾಗಿ ಎಲ್ಲ ಅನ್ಯ ಧರ್ಮಗಳ ಅಭಿವೃದ್ಧಿಯಾಗುವುದು ಮತ್ತು [ಬೌದ್ಧ] ಧರ್ಮದ ಕೀರ್ತಿಯೂ ಬೆಳಗುವುದು.

ಆ: ಹದಿನಾಲ್ಕನೆಯ ಮುಖ್ಯ ಶಿಲಾಶಾಸನ :

ಪಾಠಾಂತರಗಳು :

ಮೊದಲನೆಯ ಸಾಲು

೧. ಸನ್ನತಿ : (ಇ)ಯಂ ಧಂಮಲಿಪಿ ದೆ ವಾನಂ (ಪಿ) ಯಣ...ವಸ

೨. ಎರ್ರಗುಡಿ: ಇಯಂ ಧ(ಂ)ಮಲಿಪಿ ದೇವಾನಂ ಪ್ರಿಯೆನ ಪಿಯದಸಿ(ನಾ) ಲಾಜಿನಾ

೩. ಗಿರ್ನಾರ್ : ಅಯಂ ಧಮ್ಮಲಿಪಿ ದೇವಾನಂ ಪ್ರಿಯೇಣ ಪ್ರಿಯದಸಿನಾ ರ(ರಾ)ಜಾ

೪. ಕಲ್ಸಿ : ಇಯಂ ಧಮಲಿಪಿ ದೇವ್(ಆನಾಂಪ್) ಇ ಪ(ನ್) ಅ ಪಿಯದಸಿನಾ ಲಾಜಿನಾ

ಎರಡನೆಯ ಸಾಲು :

೧. ಸನ್ನತಿ........(ಸಂಪೂರ್ಣವಾಗಿ ಪ್ರಟಿತ)

೨: ಎರ್ರಗುಡಿ : ಲಿ (ಖಾ)ಪಿತಾ ಅಥಿಯೆವ ಸಂ ಖಿ ತೆನ ಅಥಿಮಝಿಮೆನ ಅಥಿ ವಿಥಾ (ಟ) ನಾ

೩. ಗಿರ್ನಾರ್ : ಲ [ಲೇ] ಖಾಪಿತಾ ಅಸ್ತಿ ಏವ ಸಂಖಿತ್[ಪ[ನ ಅಸ್ತಿ ಮಝಮೆನ ಅಸ್ತಿ ವಿಸ್ತತೇನ

೪. ಕಲ್ಸಿ ; ಲಿಖಾಪಿತಾ ಅಥಿಮೆನಾ ಸಂಖಿತೇನಾ (ಅಥಿ) ಮಝಿಮೆನಾ ಅಥಿ ವಿಥಟೇನ

ಮೂರನೆಯ ಸಾಲು

೧. ಸನ್ನತಿ : ನೊ ಹಿ ಸಮತಿಸ ತೀ ಘಾ ವ ....

೨. ಎರ್ರಗುಡಿ : ನೊ ಹಿ ಸವತಾ ಸ (ವೆ) ಫ (ಟ) ಟೇ ಚ

೩. ಗಿರ್ನಾರ್ : ನ ಚ ಸರ್ವಂ [ಸ] ರ್ ವತ ಘಟಿತಂ

೪. ಕಲ್ಸಿ : ನೊ ಹಿ ಸಬತಾ ಸವೆ (ಘ) ಟಿತೆ

ನಾಲ್ಕನೆಯ ಸಾಲು

೧. ಸನ್ನತಿ ... (ಸಂಪೂರ್ಣವಾಗಿ ತ್ರುಟಿತ)

೨. ಎರ್ರಗುಡಿ : ಮಹಾಲಕೆ ಹಿ ಜಿತೆ ಬಹುಚ ಲಿಖಿತೆ ಲಿಖಾಪ ಯಿಸಮಿ ಚೆವ ನಿಕಾಯಂ

೩. ಗಿರ್ನಾರ್ : ಮಹಾಲಕೆ ಹಿ ಜಿತಂ ಬಹುಚಲಿಖಿತಂ ಲಿಖಾಪ ಯಿಸಂ ಚೆ ವ

೪. ಕಲ್ಸಿ : ಮಹಾಲತೆ ಹಿ ವಿಜಿತೆ ಬಹು ಚಲಿಖಿತೆ ಲೆಖಾಪೆಶಾಮಿ
ಚಿವ ನಿಕಾಯಂ

ಐದನೆಯ ಸಾಲು :

೧. ಸನ್ನತಿ : . . . . ತಸ ತಸ [ಅಥ] ಸ ಮಾಧುಲಿಯಾಯೆ [ಯೆನ] ಜನ ತಥ....

೨. ಎರ್ರಗುಡಿ : ಅಥಿ ಚ ಹೇತ [ಪು] ನ [ಪು] ನಲ [ಪಿತೆ ತಸ ತಸ] ಅಠಸ ಮಾಧುಲಿ ಯಾಯೆ ಪ ನ [ಜ] ತೆ [ನೆ] ತಥಾ ಪಟಿಪಜೆಯಾ

೩. ಗಿರ್ನಾರ್ : ಅಸ್ತಿ ಚ ಏತಕಂ ಪುನ ಪುನ್ ವುತಂ ತಸ ಅಥಸ ಮಾಧುರ ತಾಯ ಕಿಂತಿ ಜನೊ ತಥಾ ಪಟಿಪಜೇಡ

೪. ಕಲ್ಸಿ : ಅಥಿ ಚಾಹೆತ ಪುನಾ ಪುನ ನ್ ಲ [ಪಿ] ತ್ [ತೆ] ತ ಪ ತ ಪಾ ಆಧಪಾ ಮಧುಲಿಯಾಯೆ ಯೆನ ಜನೆ ತಥಾ ಪಟಿಪಜೆಯೂ

ಆರನೆಯ ಸಾಲು :

೧. ಸನ್ನತಿ :....ಯಾ ಕಾಲನಂ ವ ಆಲೋಚಯತು ಲಿಪಿಕ [ಸ] ಪ [ರ[ಧ–ನು... ರ ಧ ನು

೨. ಎರ್ರಗುಡಿ : [ಸೆ] ಸಿ ಯ ಅತಕಿ ಚ್ಚಿ ಅಸಮತಿ ಲಿಖಿತೆ ದೇಶಂ ವಾ ಸಂ ಖಾ ಸಂಖಾಯಕಾಯಾ ಕಾಲನಂ ವ ಆಲೋಚಯಿತು ಲಿಪಿಕ ಲ ಆ ಪಾ ಲಾ ಧೆ ನ ವಾತಿ

೩. ಗಿರ್ನಾರ್ : ಪತ್ರ ಏಕದಾ ಅಸಮಾ ತ್ [ತಂ] ಲಿಖಿತ]ಂ] ಅಸದೆಸಂ ವ ಸಚ್ಛಾಯ [ಕಾ] ರಣಂ ವ [ಅ] ಲೊ ಚೆ ತ್ವಾ ಲಿಪಿಕ ರಾ ಪ ರ ಧೇನ ವ

೪. ಕಲ್ಸಿ : ಷೆ ಪಿಯಾ ಅತ್ ಕ್ [ಕಿ] ಚ್ಚಿ ಅಸಮತಿ ಲಿಖಿತೆ ದಿಪಾ ವ ಷಂಖಾಯ ಪಾಲನಂ ವಾ ಆಲೋಚಯಿತು ಲಿ[ಪ್]ಇಕಲಪಲಾಧೆನವಾ॥.

II ಸಂಸ್ಕೃತ ಪಾಠ.

ಇಯಂ ಧರ್ಮಲಿಪಿಃ ದೇವಾನಾಂ ಪ್ರಿಯೇಣ ಪ್ರಿಯದರ್ಶಿನಾ ರಾಜ್ಞಾ ಲೇಖಿತಾ, ಅಸ್ತ್ಯೇವ ಸಂಕ್ಷಿಪ್ತೇನ, ಅಸ್ತಿ ಮಧ್ಯಮೇನ, ಅಸ್ತಿ ವಿಸ್ತೃತೇನ. ನಹಿ ಸರ್ವತ್ರ ಸರ್ವಂ ಘಟಿತಂ. ಮಹಾಲೋಕೋಽಪಿ ವಿಜಿತೋ, ಬಹು ಚ ಲಿಖಿತಂ, ಲೇಖಯಿಷ್ಯಾಮಿ ಚೈವನಿತ್ಯಂ. ಅಸ್ತಿ ಚಾತ್ರ ಪುನಃ ಪುನರ್ಲಿಖಿತಂ ತಸ್ಯ ತಸ್ಯಾರ್ಥಸ್ಯ ಮಾಧುರ್ಯಾಯ ಯೇನ ಜನಸ್ತಥಾ ಪ್ರತಿಪದ್ಯೇತ. ತತ್ ಸ್ಯಾದತ್ರ ಕಿಂಚಿದಸ ಮಾಪ್ತಂ ಲಿಖಿತಮಸದೃಶಂ ವಾ ಸಂಶಯ ಕಾರಣಂ ವಾ ಆಲೋಚಯತು ಲಿಪಿಕರಾಪ ರಾಧೇನ ವಾ.

III ಕನ್ನಡ ಭಾಷಾಂತರ :

ಈ ಧಮ್ಮಲಿಪಿಯು ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿರಾಜನಿಂದ ಬರೆಯಿಸಲಾಗಿದೆ. ಕೆಲವೆಡೆಗಳಲ್ಲಿ ಸಂಕ್ಷೇಪವಾಗಿ ಕೆಲವೆಡೆ ಮಧ್ಯಮಾಕಾರದಲ್ಲಿ. ಇನ್ನು ಕೆಲವೆಡೆ ವಿಸ್ತಾರವಾಗಿ ಎಲ್ಲವೂ ಎಲ್ಲ ಸ್ಥಳಗಳಲ್ಲಿಯೂ ಸಮರ್ಪಕವೆನಿಸದು. ವಿಸ್ತಾರವಾದ ರಾಜ್ಯವನ್ನು ಗೆದ್ದದ್ದಾಯಿತು. ಬಹಳಷ್ಟು ಲಿಪಿಗಳನ್ನು ಬರೆಯಿಸಿದ್ದಾಯಿತು. ಹೀಗೆಯೇ ನಿತ್ಯವೂ ಬರೆಯಿಸುತ್ತಲೇ ಇರುವೆನು. ಕೆಲವೆಡೆಗಳಲ್ಲಿ ಮತ್ತೆ ಮತ್ತೆ ಬರೆಯಿಸಿದ್ದನ್ನೇ ಬರೆಯಿಸಿದ್ದೂ ಉಂಟು. ಆ ಬರಹ ಸ್ವಾರಸ್ಯವಾದದ್ದೆಂದು ಕಂಡದ್ದರಿಂದ ಮತ್ತು ಜನರಿಗೂ ಹಾಗೆ ಕಾಣಲಿ ಎಂದು ಕೆಲವೆಡೆಗಳಲ್ಲಿ ಬರಹ ಅಪೂರ್ಣವಾಗಿರಬಹುದು, ಅಸಮರ್ಪಕವಾಗಿರಬಹುದು, ಸಂಶಯಕ್ಕೆ ಎಡೆಯುಳ್ಳದ್ದಾಗಿರಬಹುದು, ಲಿಪಿಕಾರನ ತಪ್ಪಿನಿಂದಲೂ ಅದು ಆಗಿರಬಹುದು ಎಂಬುದನ್ನು ಆಲೋಚಿಸಬಹುದು.

೩. ಮೊದಲನೆಯ ಪ್ರತ್ಯೇಕ ಶಿಲಾಶಾಸನ

I ಮೂಲ ಪಾಠ (ಸನ್ನತಿಯಲ್ಲಿ ದೊರಕಿರುವ ಪಾಠವು ಅತ್ಯಲ್ಪವಾದುದರಿಂದ ಪಾಠಾಂತರಗಳನ್ನು ಸೂಚಿಸದೆ, ಕಲಿಂಗ ಪ್ರದೇಶದಲ್ಲಿ ದೊರಕಿರುವ ಪಾಠವನ್ನು ಮಾತ್ರ ಕೊಡಲಾಗಿದ್ದು ಸನ್ನತಿಯಲ್ಲಿ ಉಳಿದಿರುವ ಭಾಗಗಳನ್ನು ದಪ್ಪಕ್ಷರದಲ್ಲಿ (ಪ್ರಸ್ತುತಪಾಠದಲ್ಲಿ ಕೆಳಗೆ ಅಡ್ಡಗೀಟು ಹಾಕಿರುವುದು) ಕೊಡಲಾಗಿದೆ.

೧ ದೇವಾನಂ ಪಿಯಸ ವಚನೇನ ತೋಸಾಲಿಯಂ ಮಹಾಮಾತ ನಗಲ ವಿಯೋಹಾಲಕಾ

೨ ವತವಿಯ (,) ಅಂ ಕಿಛಿ ದಖಾಮಿ ಹಕಂ ತಂ ಇ ಛಾಮಿ (,) ಕಿಂತಿ (?) ಕಂಮನ ಪಟಿವೆದಯೆಹಂ

೩ ದುವಾಲತೆ ಚ ಆಲಭೆಹಂ (;) ಎಸ ಚ ಮೆ ಮೊಖ್ಯಮತ ದುವಾಲ ಎತಸಿ ಅಠಸಿ ಅಂ ತುಫೇಸು

೪ ಅನುಸಥಿ (:) ತುಫೇ ಹಿ ಬಹೂಸು ಪಾನ ಸಹಸೆಸು ಆಯತಾ (,) ಪನಯಂಗ ಛೇಮ ಸುಮುನಿ ಸಾನಂ (,) ಸವೆ

೫ ಮುನಿಸೆ ಪಜಾ ಮಮಾ (,) ಅಥಾ ಪಜಾಯೆ ಇಛಾಮಿಹಕಂ (,) ಕಿಂತಿ (?) ಸವೆನ ಹಿತಸುಖೇನ ಹಿದಲೊಕಿಕ (–)

೬ ಪಾಲಲೊಕಿಕಾಯೆದ ಯೂಜೆವೂತಿ (,) ತಥಾ (ಸವೆಸು) ಮುನಿಸೆಸು ಪಿ ಇಛಾಮಿ ಹಕಂ (,) ನೊ ಚ ಪಾಪುನಾಥ ಆವಾಗ [–]

೭ ಮಕೆ ಇಯಂ ಅಠೆ ಕೆ ಛ ವ ಎಕಪುಲಿಸೆ ಪಾಪುನಾತಿ ಎತಂ [:] ಸೆ ಪಿ ದೆಸಂ ನೊ ಸವಂ [.] ದೆಖತ ಹಿ ತುಫೆ ಎತಂ [:]

೮ ಸುವಿಹಿತಾ ಪಿ ನಿತಿ [.] ಇಯಂ ಎಕಪುಲಿಸೆ ಪಿ ಅಥಿ ಯೆ ಬಂಧನಂ ವಾ ಪಲಿಕಿ ಲೆಸಂ ವಾ ಪಾಪುನಾತಿ [,] ತತಹೊತಿ

೯ ಅಕಸ್ಮಾ ತೆನ ಬಂಧನಾಂತಿಕ [:] ಅಂನೆ ಚ ಬಹುಜನೆ ದವಿಯೆ ದುಖೀಯತಿ[,] ತತ ಇಛತ ವಿಯೆ

೧೦ ತುಫೆ ಹಿ [,] ಕಿಂತಿ ? ಮಯಂ ಪಟಿಪಾದಯೆಮಾತಿ [,] ಇಮೇಹಿ ಚು ಜಾತೇಹಿ ನೊ ಸಂಪಟಿ ಪಜತಿ ಇಸಾಯ ಅಸು ಲೊಪೆನ

೧೧ ನಿ ಥೂಲಿಯೆನ ತೂಲನಾಯ ಅನಾವೂತಿಯ ಆಲಸಿಯೆನ ಕಿಲಮಥೆನ [,] ಸೆ ಇಛಿತವಿಯೆ [,] ಕಿಂತಿ [?] ಎತೆ

೧೨ ಜಾತಾ ನೊ ಹುವೇವು ಮಮಾತಿ , ಎತಸ ಚ ಸವಸ ಮೂಲೆ ಅನಾಸುಲೊಪೆ ಅತೂಲನಾ ಚ [,] ನಿತಿಯಂ ಏ ಕಿಲಂತೆ ಸಿಯಾ

೧೩ ನ ತೆ ಉಗಛೆ [,] ಸಂಚಲಿತವಿಯೆ ತು ಪಟಿತವಿಯೆ ಏತವಿಯೆ ವಾ [,]ಹೆವಂಮೇವ ಏ ದಖಿಯೇ ತುಫಾಕ ತೇನ ವತಪಿಯೆ [:]

೧೪ ಅಂನಂ ಸಿ ದೆಖಿತ [?] ಹೆವಂ ಚ ದೇವಾನಂಪಿಯಸ ಅನುಸಥಿ [,] ಸೆ ಮಹಾ ಫಲೆ ಏ ತಸ ಸಂಪಟಿಪಾದ

೧೫ ಮಹಾ ಅಪಾಯೆ ಅಸಂಪಟಿಪತಿ [,] ವಿಪಟಿಪಾದಯಿಂನೆ ಹಿ ಎತಂ ನಥಿ ಸ್ವಗಸ ಅಲಧಿ ನೊ ಲಾಜಾಲಧಿ [,]

೧೬ ದು ಆಹತೆ ಹಿ ಇಮಸ ಕಂಮಸ ಮೆ ಕುತೆ ಮನೆ ಅತಿಲೆಕೆ [,] ಸಂಪಟಿ ಜಮಿಂನೆ ಚು ವಿತಂ ಸ್ವಗಂ

೧೭ ಆಲಾಧಯಿಸ ಥ ತ (ಹ ಲಾ ಜೊ) ಅನನಿಯಂ ಎಹಥ [,] ಇಯಂಚ ಲಿಪೀ ತಿಸನಖತೆನ ಸೊತ್ರವಿಯ

೧೮ ಅಂತಲಾ ಪಿ ಚ ತಿಸೆ ಖನಸಿ ಖನಸಿ ಏಕೆನ ಪಿ ಸೊತವಿಯ[,]ಹೆವಂ ಚ ಕಲಂತಂ

೧೯ ತುಫೆ ಚ ಘ ಥ ಸಂಪಟಿಪಾದಯಿತವೆ [,] ಏತಾಯೆ ಅಥಾಯೆ ಇಯಂ ಲಿಪಿ ಲಿಖಿತ ಹಿದ ಎನ

೨೦ ನಗಲವಿಯೊಹಾಲಕಾ ಸಸ್ವತಂ ಸಮಯಂ ಯುಜೆವೂ ತಿ [,] ನಗಲಜ ನಸ ಅಕಸ್ಮಾ ಪಲಿಬೊಧೇವ

೨೧ ಅಕಸ್ಮಾ ಪಲಿಕಿತಿಸೆ ವ ನೊ ಸಿಯಾತಿ[,] ಎತಾಯೆ ಚ ಅಠಾಯೆ ಹಕಂ ಧಂ ಮತೆ ಪಂಚಸು ಪಂಚಸು ವಸೆ –

೨೨ ಸು ನಿಖಾಮಯಿಸಾಮಿ ಏ ಅಖಖಸೆ ಅಚಂಡೆ ಸಖಿನಾಲಂಭೆ ಹೊಸತಿ [.] ಎತಂ ಅಠಂ ಜಾನಿತು ... ... ತಥಾ

೨೩ ಕಲಂತಿ ಅಥ ಮಮ ಅನುಸಥೀ ತಿ [,] ಉಜೆನಿತೆ ಪಿ ಚು ಕುಮಾತಿ ಏತಾಯೆ ವ ಅಠಾಯೆ ನಿಖಾಮಯಿಸ ...

೨೪ ಹೆದಿಸಂ ಮೇವ ವಗಂ ನೊ ಚ ಅತಿಕಾಮಯಿಸ ತಿ ತಿನಿ ವಸಾ ನಿ [,] ಹೆವಮೇವ ತಖಸಿಲಾತೆ ಪಿ [,] ಅದಾ ಅ ... ...

೨೫ ತೆ ಮಹಾಮಾತಾ ನಿಖಮಿಸಂತಿ ಅನುಸಂಯಾನಂ ತದಾ ಅಹಾಪಯಿತು ಅತನ ಕಮಂ ಎತಂಪಿ ಜಾನಿಸಂತಿ

೨೬ ತಂ ಪಿ ತಥಾ ಕಲಂತಿ ಅಥ ಲಾಜಿನೆ ಅನುಸಥೀ ತಿ [,]

II ಸಂಸ್ಕೃತ ಪಾಠ :

೧ ದೇವಾನಾಂ ಪ್ರಿಯಸ್ಯ ವಚನೇನ ತೋಸಾಲಿಯೆ ಮಹಾ ಮಾತ್ರಾ ನಗರ ವ್ಯವಹಾರಕಾಶ್ಚ ವಕ್ತವ್ಯಾಃ.

೨ ಯತ್ಕಿಂಚಿತ್ಪಶ್ಯಾ ಮ್ಯಹಂ ತದಿಚ್ಛಾಮಿ, ಕಿಮಿತಿ ? ಕರ್ಮಣಾ ಪ್ರತಿವೇದಯೇಹಂ, ದ್ವಾರತ ಶ್ಚಾರ ಭೇಽಹಂ; ಏತಚ್ಚ ಮೇ ಮುಖ್ಯತಮಂ ದ್ವಾರ ಮಸ್ಮಿನ್ನರ್ಥೇ ಯದ್ಯು ಷ್ಮಾಸ್ವನು ಶಿಷ್ಟಿಃ; ಯೂಯಂಹಿ ಬಹುಷು ಪ್ರಾಣ ಸಹಸ್ರೇಷ್ವಾಯತ್ತಾಃ ಪ್ರಣಯಂ ಗಚ್ಛೇಮ ಸುಮನುಷ್ಯಾಣಾಂ. ಸರ್ವೇ ಮನುಷ್ಯಾಃ ಮಮ ಪ್ರಜಾಃ ಯಥಾ ಪ್ರಜಾಯೈ ಇಚ್ಛಾಮ್ಯಹಂ, ಕಿಮಿತಿ ? ಸರ್ವೇಣ ಹಿತಸುಖೇನ ಐಹಲೌಕಿಕೇನ ಪಾರಲೌಕಿಕೇನಚ ಯುಜ್ಯೇರನ್ನಿತಿ, ಅಥಾ ಸರ್ವೇಷು ಮನುಷ್ಯೇ ಷ್ವಪೀಚ್ಛಾಮ್ಯಹಂ. ನಚ ಪ್ರಾಪ್ನುಥ ಯಾವದ್ಗಮ ಕೋಽಯ ಮರ್ಥ. ಕಶ್ಚಿದಪ್ಯೇಕಃ ಪುರುಷೋ ಪ್ರಾಪ್ನೋತ್ಯೇತತ್; ಸೋಽಪಿ ದೇಶಂ ನಸರ್ವಂ.

೩ ಪಶ್ಯತಹಿ ಯೂಯಮಿದಂ–ಸುವಿಹಿತಾಪಿ ನೀತಿರಿಯಂ, ಏಕಪುರುಷೋಽ ಪ್ಯಸ್ತಿ ಯೋ ಬಂಧನಂ ವಾ ಪರಿಕ್ಲೇಶಂ ವಾಪ್ರಾಪ್ನೋತಿ, ತದ್ಧ ವತ್ಯಕಸ್ಮಾತ್ತೇನ ಬಂಧನಾಂತಿಕಂ; ಅನ್ಯಚ್ಚ ಬಹುಜನೋ ದವೀಯೋ ದುಃಖೀಯತಿ.

೪ ತತ ಏಷ್ಟವ್ಯಂ ಯುಷ್ಮಾಭಿಃ, ಕಿಮಿತಿ ? ಮಧ್ಯಂ ಪ್ರತಿಪಾದಯೇ ಮೇತಿ ಏಭಿಸ್ತು ಜಾತೈರ್ನ ಸಂಪ್ರತಿ ಪದ್ಯತೇ ಈರ್ಷ್ಯಯಾ, ಅಶ್ರಮೇಣ, ನೈಷ್ಠುರ್ಯೇಣ, ತ್ವರಯಾ, ಅನಾವೃತ್ತ್ಯಾ, ಆಲಸ್ಯೇನ, ಕ್ಲಮೇನ. ತದೇಷ್ಟವ್ಯಂ, ಕಿಮಿತಿ ? ಏತಾನಿ ಜಾತಾನಿ ನಭವೇ ಯುರ್ಮಮ ಮೇತಿ.

೫ ಏತಸ್ಯ ಸರ್ವಸ್ಯ ಮೂಲಂ ಅನಾಶ್ರುಪಮಾ ಅತ್ವರಾಚ. ನೀತ್ಯಾಯೇ ಕ್ಲಮಂತೇ ಸ್ತೈರ್ನ ತೇ ಉದ್ಗಚ್ಛಂತಿ ಸಂಚರಿತವ್ಯಂತು ವ್ರಜಿತವ್ಯ ಮೇತವ್ಯಂವಾ.

೬ ಏವ ಮೇವ ಯೋ ದೃಷ್ಟ್ವಾ ಯುಷ್ಮಾಕಂ ತೇನ ವಕ್ತವ್ಯಂ "ಆಜ್ಞಾಂ ನ ಪಶ್ಯಥ? ಏವಂ ಚೈವಂ ಚ ದೇವಾನಾಂ ಪ್ರಿಯಸ್ಯಾನುಶಿಷ್ಟಿಃ, ತಸ್ಮಾಹಾಫಲಮೇತಸ್ಯ ಸಂಪ್ರತಿಪಾದನಂ ಮಹಾಪಾಯಶಾ ಚಾಸಂಪ್ರತಿಪತ್ತಿಃ. ವಿಪ್ರತಿ ಪದ್ಯ ಮಾನೈರ್ಹಿ ಏತನ್ನಾಸ್ತಿ ಸ್ವರ್ಗಸ್ಯಾರಾದ್ಧಿರ್ನ ರಾಜಾರಾದ್ಧಿಃ". ದ್ವಿಫಲೋ ಹ್ಯಸ್ಯ ಕರ್ಮಣಃ ಮಯಾ ಕೃತೋ ಮನಸೋಽತಿರೇಕಃ. ಸಂಪ್ರತಿ ಪದ್ಯ ಮಾನಾಸ್ತ್ವೇತತ್ ಸ್ವರ್ಗ ಮಾರಾಧಯಿಷ್ಯಥ ತಥಾ ರಾಜ್ಞಾ ಆನೃಣ್ಯಮೇಷ್ಯಥ.

೭ ಇಯಂಚ ಲಿಪಿಸ್ತಿಷ್ಯ ನಕ್ಷತ್ರೇಣ ಶ್ರೋತವ್ಯಾ ಅಂತರಾಪಿ ಚತಿಷ್ಯೇ ಕ್ಷಣೇ ಕ್ಷಣೇ ಏಕೇನಾಪಿ ಶ್ರೋತವ್ಯಾ. ಏವಂ ಚ ಕುರ್ವಂತೋ ಯೂಯಂ ಚೇಷ್ಟಧ್ವಂ ಸಂಪ್ರತಿಪಾದಯಿತುಂ.

೮ ಏತಸ್ಮಾ ಅರ್ಥಾಯೇಯಂ ಲಿಪಿರ್ಲಿಖಿತಾ–ಇಹ ತೇನ ನಗರ ವ್ಯವಹಾರಕಾಃ ಶಾಶ್ವತಂ ಸಮಯಂ ಯುಂಜ್ಯೈರನ್ನಿತಿ, ನಗರಜನಸ್ಯಾ ಕಸ್ಮಾತ್ ಪರಿಬಾಧೋ ವಾ ಅಕಸ್ಮಾತ್ ಪರಿಕ್ಲೇಶೋ ವಾನಸ್ಯಾದಿತಿ.

೯ ಏಕಸ್ಮೆ ಚಾತ್ಥರ್ಾ ಯಾಪಂ ಧರ್ಮಾತಃ ಪಞ್ಚಸು ಪಞ್ಚಸು ವರ್ಷೇಸು (ವರ್ಗಂ) ನಿಷ್ಕ್ರಾಮಯಿಷ್ಯಾಮಿಯಃ ಅಕರ್ತಳಃ ಅಚಂಡಃ ಶ್ಲಕ್ಷ್ಣಾರಂಭೋ ಭವಿಷ್ಯತಿ.

೧೦ ಏತಮರ್ಥಂ ಜಾನಂತಃ ತಥಾ ಕುರ್ವಂತಿ ಯಥಾ ಮಮಾನು ಶಿಷ್ಟಿಃ.

೧೧ ಉಜ್ಜಯಿನಿ ತೋಽಪಿ ಕುಮಾರ ಏತಸ್ಮಾ ಏವ ಅರ್ಥಾಯ ನಿಷ್ಕ್ರಾಮಯಿಷ್ಯತಿ ಈ ದೃಶಮೇವ ವರ್ಗಂ ನ ಚಾತಿಕ್ರಮಿಷ್ಯತಿ ತ್ರೀಣಿ ವರ್ಷಾಣಿ. ಏವಮೇವ, ತಕ್ಷಶಿಲಾತೋಽಪಿ. ಯದಾಚತೇ ಮಹಾಮಾತ್ರಾ ನಿಷ್ಕಮಿಷ್ಯಂತ್ಯನು ಸಂಯಾನಂ ತದಾ ಅಹಾಪಯಂತ ಆತ್ಮನಃ ಕರ್ಮ ಏತದಪಿ ಜ್ಞಾಸ್ಯಂತಿ ತದಪಿ ತಥಾ ಪರ್ವಂತಿ ಯಥಾ ರಾಜ್ಞೋನು ಶಿಷ್ಟಿಃ.

III ಕನ್ನಡ ಭಾಷ್ಯಾಂತರ :

೧ ದೇವತೆಗಳಿಗೆ ಪ್ರಿಯನಾದವನ ಆಜ್ಞಾನುಸಾರ ತೊಸಾಲಿಯಲ್ಲಿರುವ ಮಹಾಮಾತ್ರರಿಗೆ ಮತ್ತು ನಗರ ವ್ಯವಹಾರಕರಿಗೆ ಹೀಗೆ ತಿಳಿಸಲಾಗಿದೆ (ತಿಳಿಸಬೇಕು).

೨ "ನನಗೆ ಯಾವುದಾದರೂ ಮುಖ್ಯವೆಂದು ತೋರಿದಾಗ ಅದು ಹಾಗೆ ನಡೆಯಬೇಕೆಂದು ಬಯಸುತ್ತೇನೆ. ಅದು ಹೇಗೆ? ಅದನ್ನು ಕೃತಿಯಲ್ಲಿ ಪ್ರತಿಪಾದಿಸಬೇಕೆಂದು ಮತ್ತು ಯುಕ್ತರಾದವರ ದ್ವಾರ ಆರಂಭಿಸಬೇಕೆಂದು. ಇದು ನನ್ನ ಮುಖ್ಯವಾದ ಅಭಿಪ್ರಾಯ ಮತ್ತು ನಿಮ್ಮಗಳಿಗೆ ಅದರಂತೆ ತಿಳಿಯಪಡಿಸುವುದೇ ಸರಿಯಾದ ಆರಂಭ. ಸಾವಿರಾರು ಜೀವಿಗಳು ನಿಮ್ಮ ಅಧಿಕಾರಕ್ಕೆ ಒಳಪಟ್ಟಿದ್ದಾರೆ. ನಾವು ಸಜ್ಜನರಿಗೆಲ್ಲ ಪ್ರಿಯರಾಗಬೇಕು. ಎಲ್ಲ ಮಾನವರು ನನ್ನ ಮಕ್ಕಳು ನನ್ನ ಮಕ್ಕಳಿಗಾಗಿ ನಾನು ಬಯಸುವುದೇನನ್ನು? ಎಲ್ಲರಿಗೂ ಇಹದಲ್ಲಿಯೂ, ಪರದಲ್ಲಿಯೂ ಹಿತ, ಸುಖಗಳು ಲಭ್ಯವಾಗಬೇಕೆಂದು ನನ್ನ ಮಕ್ಕಳಂತೆಯೇ ಎಲ್ಲ ಮನುಷ್ಯರಿಗೂ ಆಗಲೆಂದೂ ಬಯಸುತ್ತೇನೆ. ಈ ಉದ್ದೇಶ ಎಲ್ಲಿಯವರೆಗೆ ಸಾಧಿತವಾದೀತೋ ತಿಳಿಯದು. ಇದು ಎಲ್ಲಿಯೋ ಒಬ್ಬನಲ್ಲಿ ಸಫಲವಾಗಬಹುದು, ಆದರೆ ಅವನೊಬ್ಬನೇ ಸರ್ವಸ್ವನಲ್ಲ.

೩ ಇದನ್ನು ನೀವು ಮನಗಾಣಬೇಕು "ಈ ನೀತಿಯು ಸುವಿಹಿತವಾದ್ದರೂ ಇದರಿಂದ. ಒಬ್ಬಾನೊಬ್ಬನು ಬಂಧನಕ್ಕೂ, ಕ್ಲೇಶಕ್ಕೂ ಈಡಾಗಬಹುದು. ಒಂದು ವೇಳೆ ಆಕಸ್ಮಾತ್ತಾಗಿ ಅವನ ಬಂಧನಕ್ಕೆ, ಕೊನೆಯಾದರೂ ಬೇರೆಯವರು ಹಾಗೆಯೇ ಕಷ್ಟದಲ್ಲಿರಬಹುದು.

೪. ಆದುದರಿಂದ ನೀವು ಅನುಸರಿಸಬೇಕಾದ ಮಾರ್ಗ ಯಾವುದು? ಮಧ್ಯಮ ಮಾರ್ಗವೇ ಎಂದು ನಾವು ಪ್ರತಿಪಾದಿಸುತ್ತೇವೆ. ಈರ್ಷ್ಯೆ, ಶ್ರಮಕ್ಕೆ ಹಿಂಜರಿಯುವುದು, ಕಠೋರತೆ, ಆತುರ, ಆಲಸ್ಯ, ಸತತ ಪ್ರಯತ್ನ ಮಾಡದಿರುವುದು, ಅಲ್ಪ ಶ್ರಮದಿಂದಲೇ ದಣಿಯುವುದು ಇಂತಹ ದೋಷಗಳು ಜನ್ಮತಃ ಸಹಜವಾದವರಿಗೆ ಈ ಮಾರ್ಗ ಹೇಳಿದ್ದಲ್ಲ, ಹಾಗಾದರೆ ಇಷ್ಟವಾದದ್ದೇನು? "ಈ ದೋಷಗಳು ನನ್ನಲ್ಲಿ ಹುಟ್ಟಬಾರದು" ಎನ್ನುವುದು.

೫ ಇದೆಲ್ಲದರ ಮೂಲದಲ್ಲಿರುವುದು ಶ್ರಮಕ್ಕೆ ಹಿಂಜರಿಯದ ದುಡಿಮೆ ಮತ್ತು ಆತುರ ಪಡದಿರುವುದು. ಸರಿಯಾದ ಮಾರ್ಗದಲ್ಲಿ ನಡೆಯುವುದಕ್ಕೆ ಬೇಸರ ಪಡುವವರು (ಎಂದಿಗೂ) ಉನ್ನತಿಯನ್ನು ಪಡೆಯಲಾರರು. ಚಟುವಟಿಕೆಯಿಂದಿರುವುದು, ಮುನ್ನೋಡಿ ನಡೆಯುತ್ತಿರುವುದು ಇದೇ ಸರಿಯಾದ ದಾರಿ.

೬ ನಿಮ್ಮೊಳಗೆ ಇದನ್ನು ಮನಗಾಣಿಸಿಕೊಂಡವರು ಉಳಿದವರಿಗೆ ಹೀಗೆ ಹೇಳಬೇಕು. "ನಿಮಗೆ ರಾಜನ (ಆಜ್ಞೆ ತಿಳಿದಿಲ್ಲ? ದೇವತೆಗಳಿಗೆ ಪ್ರಿಯನಾದವನ ಶಾಸನ ಇರುವುದು ಹೀಗೆ ಹೀಗೆ. ಇದನ್ನು ಅರಿತಿರುವುದು ಮಹಾಫಲವನ್ನು ನೀಡಬಲ್ಲುದು, ಅರಿಯದೆ ಇರುವುದು ಮಹಾ ಅಪಾಯಕಾರಿಯಾಗಬಲ್ಲುದು ವಿಪರೀತವಾಗಿ ತಿಳಿದುಕೊಂಡವರಿಗೆ ಸ್ವರ್ಗವೂ ಸಿದ್ಧಿಸದು. ರಾಜಾನುಗ್ರಹವೂ ಸಿದ್ಧಿಸದು." ಉತ್ಸಾಹದಿಂದ ಈ ಕಾರ್ಯವನ್ನು ನೆರವೇರಿಸುವವರಿಗೆ ನಾನು ಎರಡು ವಿಧದ ಫಲಗಳನ್ನು [ಇಂದು] ಸ್ವರ್ಗವೂ ಲಭಿಸುತ್ತದೆ. ರಾಜನ ಋಣವೂ ಸಂದಾಯವಾಗುತ್ತದೆ.

೭ ಈ ಶಾಸನವನ್ನು ತಿಷ್ಯ ನಕ್ಷತ್ರದ ದಿನಗಳಲ್ಲಿ ಎಲ್ಲರೂ ಕೇಳಲೇಬೇಕು, ಬೇರೆ ದಿನಗಳಲ್ಲಿಯೂ, ಪ್ರತಿಕ್ಷಣವೂ ಒಬ್ಬರಾದರೂ ಕೇಳಬೇಕು. ಇದನ್ನು ನಿಮ್ಮ ಕೃತಿಯಲ್ಲಿ ಅನುಸರಿಸುತ್ತಲೂ, ಪ್ರಕಾಶ ಪಡಿಸುತ್ತಲೂ ಇರಬೇಕು.

೮ ಈ ಲಿಪಿಯನ್ನು ಇಲ್ಲಿ ಬರೆಯಿಸಿರುವುದರ ಉದ್ದೇಶ ಇದು—ಈ ನಗರದ ಆಡಳಿತ ನಡೆಯಿಸುವವರು ಈ ನಿಯಮಗಳನ್ನು ಸದಾಕಾಲವೂ ಪಾಲಿಸುತ್ತಿರಲಿ' ಎಂದು ಮತ್ತು 'ನಗರವಾಸಿಗಳಿಗೆ ಯಾವುದರಿಂದಲೂ ಬಾಧೆಯಾಗಲೀ ಯಾವುದೇ ವಿಧದ ಕ್ಲೇಶವಾಗಲೀ ಆಗದಿರಲಿ' ಎಂದು.

೯ ಇದೇ ಉದ್ದೇಶದಿಂದಲೇ ಪ್ರತಿ ಐದು ವರ್ಷಗಳಿಗೆ ಒಮ್ಮೆ ಯಾರು ಯಾರು ಕರ್ಕಶರಲ್ಲವೊ, ಕ್ರೂರರಲ್ಲವೊ, ಕಾರ್ಯಾಚರಣೆಯಲ್ಲಿ ಮಾರ್ದವವುಳ್ಳವರೊ ಅಂತಹ ಅಧಿಕಾರ ವರ್ಗದವರನ್ನು ಕಳುಹಿಸುತ್ತೇನೆ.

೧೦ ಈ ಉದ್ದೇಶವನ್ನು ಮನಗಂಡವರಾಗಿ ಅವರೂ ನನ್ನ ಅನುಶಾಸನಗಳಂತೆ ನಡೆದುಕೊಳ್ಳುವರು.

೧೧ ಇದೇ ಉದ್ದೇಶ ಸಾಧನೆಗಾಗಿ ನನ್ನ ಕುಮಾರನು ಉಜ್ಜಯಿನಿಯಿಂದ ಪ್ರತಿ ಮೂರು ವರ್ಷಗಳನ್ನು ಮೀರದಂತೆ ತಪ್ಪದೆ ಅಧಿಕಾರ ವರ್ಗವನ್ನು ಕಳುಹಿಸುವನು. ಇದೇ ರೀತಿಯಾಗಿ ತಕ್ಷಶಿಲೆಯಿಂದಲೂ ಪ್ರತಿ ಮೂರು ವರ್ಷಗಳಲ್ಲಿಯೂ ತಪ್ಪದೆ ನಡೆಯುವುದು. ಯಾವ ಕಾಲದಲ್ಲಿ ಈ ಮಹಾಮಾತ್ರರು ಸಂಚಾರಾರ್ಥವಾಗಿ ಹೀಗೆ ಹೊರಡುತ್ತಾರೊ ಆವಾಗಲೇ ಅವರು ತಮ್ಮ ಇತರ ಕಾರ್ಯಗಳ ಜೊತೆಗೆ ಇದನ್ನು ತಿಳಿಯುವರು ಮತ್ತು ರಾಜನ ಅನುಶಾಸನದಂತೆ ಕಾರ್ಯಾಚರಣೆ ನಡೆಸುವರು.

ಈ : ಎರಡನೆಯ ಪ್ರತ್ಯೇಕ ಶಿಲಾ ಶಾಸನ

೧ ಪಾಠಾಂತರಗಳು :

ಸಾಲು ೧ a ಧೌಲಿ : ದೇವಾನಂ ಪಿಯಸ ವಚನೇನ ತೋಸಾಲಿಯಂ ಮಹಾಮಾತಾಚ
b ಜಾಗಾಡ : ದೇವಾನಂ ಪಿಯೆ ಹೇವಂ ಆ[ಹಾ] ಸಮಾಪಾಯಂ...
ಮಹಾಮತಾ
c ಸನ್ನತಿ : .... [ಸಂಪೂರ್ಣ ತ್ರುಟಿತ] . .

ಸಾಲು ೨ a ...... ವತವಿಯ ಅಂ ಕಿಚ್ಛಿ ದಖಾಮ್[ಇ] ಹ್ [ಅಕಂತಂ ಇ] ...
b ಲ್ [ಅ] ಚ. ವಚನಿಕ್ [ಅ] ವತವಿಯಾ ಅಂ ಕಿಚ್ಛಿ ದಖ್ (ಆ) ಮಿ
ಹಕಂ ತಂ ಇ[ಚಾ[ಮಿ
c ...[ಸಂಪೂರ್ಣ ತ್ರುಟಿತ]....

ಸಾಲು ೩ a ....ದುವಾಲತೆ ಚ ಆಲಭೆಹಂ ಎಸ
b ಹಕಂ ಕ್ (ಇಂ) ತಿ ಕಂ ಕಮನ ಪಟಿಪಾತಯೆಹಂ ದುವಾ (ಲ) ತೆ ಚ
ಆಲಭೆಹಂ ಎಸ
c .... [ಸಂಪೂರ್ಣ ತ್ರುಟಿತ[...

ಸಾಲು ೪ a ಚಾ ಮೆ ಮೊಖ್ಯ-ಮಂತ ದುವಾಲಾ ಎತಃ ಅಠಸಿ ಅಂತುಫೆ ಸ್ (ಉ)
b ಚ ಮೆ ಮೊಖಿಯ-ಮತ್ (ಅ) ದುವಾಲ್ (ಅ) ಎತಸ ಅ (ಥಾ) ಸ
ಅ (ಂ) ತ್ (ಉಫ್) ಎಸು ಅನು ಸ (ಥಿ)
c .... ಸಂಪೂರ್ಣ ತ್ರುಟಿತ ...

ಸಾಲು ೫ a ...ಮೇವಂ ಅಥ್ (ಅ) ಪಜಾಯೆ ಹಕಂ ಕಿ (ಂ) ತಿ
b ಸವ-ಮುನಿಸಾ ಮೆ ಪಜಾ ಅಥ ಪಜಾಯು [ಎ] ಇಚ್ಛಾಮಿ ಅಂತಿಮೆ
c ... (ಸಂಪೂರ್ಣ ಪ್ರುಟಿತ)...

ಸಾಲು ೬ a ಸವೆನ ಹಿ (ತ) ಸುಖೇನ ... ಹಿದಲೋಕಿಕ-ಪಾಲಲೋಕಿ ಣಾಯೆಯು
ಜೆವೊತಿ
b ಸವೆನಾ ಹಿತ ಸು (ಖ್) ಎಸ್ ಯು (ಜೆ) ವೂ ಲೆ ಹಿದ ಲೊಗಿಕ-
ಪಾಲ ಲೋಕಿ (ಕ್) ಎ (ಣ)
c ... (ಸಂಪೂರ್ಣ ತ್ರುಟಿತ) ...

ಸಾಲ ೭ a ಹ್ (ಎವ್) ಅಂ ...... ಸಿಯಾ ಅಂತಾನಂ ಅವಿಜಿತಾನಂ
b ಹೆವಂಮೆವ ಮೆ ಇಚ್ಛಾ ಸವ-ಮುನಿಸೆಸು ಸಿಯಾ ಅಂತಾನಂ (ಅ)
ವಿಜಿತಾನಂ
c ... (ಸಂಪೂರ್ಣ ಪ್ರುಟಿತ)...

ಸಾಲು ೮ a ಕಿ ಛ (ಂದೆ) ಸು ಲಾಜಾ (ಅಫೆಸು) .... ಮ್ (ಅ) ವ ಇಛಾ ಮಮ
ಅಂತೆಸು

b ಕಿಂ – ಛಾಂದೆಸು ಲಾಜಾ ಅಫೆಸೂಟಿ ಎತಾಕಾ (ವಾ) ಮಂ ಇಛಾ (ಅ) ಂತೆಸು

c … (ಸಂಪೂರ್ಣ ತ್ರುಟಿತ)

ಸಾಲು ೯ a ಇ ಕ್ ಆ (ಪ್) ಉನೆವು ತೆ ಇತಿ ದೆವಾನಂ (ಪ್) (ಇಯ) …(ಅನು) (ವ್) (ಇ) ಗಿನ ಮ ವಾಯ

b .. ಪಾಪ್ರನೆಯು … ಲಾಜಾ ಹೆವಂ ಇಛ್ (ಅ) ತಿ ಅನು (ವ್) ಇ (ಗ್) ಇನ ಹ್ಯೆ (ಯಾ)

c … ಅನುವಿಗ……

ಸಾಲು ೧೦ a ಹುವೆವೂ . . ತಿ ಅಸ್ವಸೆವು ಚ ಸುಖಿಂಮೆವ…ಲಹೆಯ್ (ವು) ಮಮಾತೆ

b ಮಮಿಯಾಯೆ(ಅ)ಸ್ವಸೆಯು ಚ ಮೆ ಸುಖಿಂ (ವ್) ಎವ ಚ ಲಹೆಯ (ಊ) ಮಮತೆ

c …. ಸೆವುಚ ಸುಖಿವೆಂವ ಚ ಲಭವು

ಸಾಲು ೧೧ a ನೊ ದುಖಿ (೦) ಹ್ (ವ) ವ (೦) … ಜನ್ (ಎ) ವೂ ಇತಿ ಖಮಿಸತಿ ನೆ

b (ನ್) ಒ ಖ (೦) ಹೆವಂ ಚ ಪಾಪ್ರನೆಯು ಖ ವ್ ಇ (ಸ) ತಿ ನೆ

c .. ಯೆನ ಚ ಹೆವಂ ಪಾಪ್ರನೆವು ರಾಜಾನೆ ಖಿಮ (ಮಿ)

ಸಾಲು ೧೨ a ದೆವಾನಂ ಪಿಯೆ (ಅಫ್) ವೆ ಅಕಾಡಿ ಎ ಛ ಕಿಸೆ ಖಮಿತವೆ ಮಮಂ ನಿಮಿತಂ (ವ)

b ಲಾಜಾ … ಎ ಸ್ (ಅ) ಕಿಯೆ ಖಮಿತವೆ ಮಮಂ ನಿಮಿತಂ

c …. ವೆ ಖಮಿತವೆ ಮಮಂ ನಿಮಿತಂ

ಸಾಲು ೧೩ ೧ ಚ ಧಂಮಂ ಚಲಿವೂ ಹಿದ ಲೋಕ ಪಲಲೊಕ ೦ ಚ

೨ ಚ ಧಂಮು ೦ ಚತಿಯಾ ಊ ತಿ ಹಿದಲೊಗ್ಯ ಅಂ ಚ ಪಲಲೊಗಂ ಚ

೩ ಚ ಧಂಮಂ ಚರೆವು ಹಿದ ಲೊಕಂ ಚ ಪರಲೊಕಂ ಚ

ಸಾಲು ೧೪ ೧ ಆಲಾಧಯೆವೂ ಎತಸಿ ಅಠಸಿ ಹಕ ೦ ಅನುಸಾಸಾಮಿ ತು ಫೆ

೨ ಅಲಾಧಯೆವೂ ಎತಯೆ ಚ ಅಥಯೆ ಹಕಂ ತುಫೆಸಿ ಅನುಸಾಸಾಮಿ

೩ ಆರಾಧಯೆವು ಚ ಎತಾಯ ಚ ಅಥಯೆ ಹಕಂ ತುಫೆ ಅನುಸಾಸಾಮಿಂ

ಸಾಲು ೧೫ ೧ ಅನ ನ್ ಎ (ವ) ತಕೆನ ಹಕಂ ಅನುಸಾಸಿತು ಛಂದಂ ಚ .ವೆದಿತು

೨ ಅನ ನೆ ಎತ ಕೆನ ಹುಕಂ ತುಫೆನಿ ಅ ನು ಸಾಸಿತು ಛಂ ದ ಂಚ ವೆದಿ ತ್ ಉ

೩ ಅನನೊ ಹಕಂ ತುಫೆನಿ ಅನುಪಾಸಿತ ಛಂದಾ ಚ ವೆ ದಿತು

ಸಾಲು ೧೬ ೧ ಆ ಹಿ ಧಿ ತ್ ಇ ಪಟಿಂಜಾ ಚ ಮಮಾ ಅ ಜಲಾ ಎ ಹೆವಂಕಟು
೨ ಆ ಮಮ ಧಿತಿ ಪಟಿಂ ಜಾ ಚ .... ಅಚಲಾ ಚ ಹೆವಾ ಕ ಟು
೩ ಯಾಹಿ ಮಮ ಧಿತಿ ಪಟಿನಾ ಚ ಅಚಲಾ ಸಾತಿ ಹೆವಂ ಕಟು
ಸಾಲು ೧೭ ೧ ಕಂ ವೆ ಚಲ್ ಇ ತ್ ಅ ವ್ ಇ ಯೆ ಅಕ್ಷ್ ಆಸ ..
ಇ ಚ ತನಿ ಎನ
೨ ಕ್ ಅಂ ಮೆ ಚ ಲಿತವಿಯೆ ಅಸ್ವಾಸ ನ್ ಇಯಾ ಚ್ ಅ ತೆ
ಎನ್ (ಅ) ತೆ
೩ ಕಂಮ ಚರಿತವಿಯೆ ಆಸ್ವಾಸಯಿತವಿಯಾ ಚ ಸಯಿನ ಚುತೆ
ಸಾಲ ೧೮ ೧ ಪಾಪುನೆವೂ ಇತಿ ಅಥ ಪಿತಾ ತಥಾ ದೇವಾನಂ ಪಿಯ್ ಎ ಅಥಾತ
ಅಥಾ ಚ
೨ ಪಾಪುನೆಯು ಅ ಥ್ ಅ ಪಿತಾ ಹ್ ಎವಂ ನ್ ಎ ಲ ಜಾ ತಿ ಅಥ
೩ ಹೆವಂ ಪಾಪುನವು ಅಥಾ ಪಿತಾ ಹೆವಂ ರಾಜಾ ಯಥಾ ಚ
ಸಾಲು ೧೯ ೧ ಅತಾನಂ ಹೆವಂ ದೇವಾನಂ ಪಿಯೆ ಅ ನು ಕಂ ಪತಿ ಆಫ್ . ಅಥಾ ಚ
ಪಜಾ
೨ ಅ ತಾನಂ ಅನುಕಂಪತಿ ಹೆವೆಂ ಅ ಫ್ (ಸಿ) (ಅನುಕ ಂಪ ತಿ ತ
ಥಾ ಪಜಾ
೩ ಅತಾನಂ ಅನುಕಂಪತಿ ಹೆವಂ ಅಫೇನಿಯು ಚಕ ಪಜಾ
ಸಾಲು ೨೦ ೧ ಹೆವಂ (ಮಯ್) (ಎ)ಪಾನಂಪಿಯಸ ಸೆ ಹಕಂ ಅನುಸಾಸಿತು(ಛ)ಂದ(ಂ)
೨ ಹೆವಂ ಮಯ್ ಎ ಲಾ ಹ್ ಇನೆ ತುಫೆನಿ ಹಕಂ ಅನುಸಾಸಿತ ಛ್
ಅಂದಂ
೩ ಹೆವಂ ಮಯಾ ಸೆಹಕಂ ತುಫೆನಿ ಅನುಸಾಸಿತು ಛಂದಂ
೨೧ ೧] ಚ್ [ಅ] ವೆದಿತು [ತು] ಪಾಕ್ (ಅ) ... ದೆಸಾಫುಟಿಕೆ
೨] [ಚವ್] ಎ [ದಿ[ತ [ಆಮ] ಮ ಧಿತಿ ಪಟಿ [೧] ನಾ ಚಾ ಆಚಲ [ಸಕ]
ಲ ದೆಸಾ– ಆಯ್ [ಉತ್[ಇಕೆ
೩[ಚತು ದೆಸಾವತುಕೆ ಎತಸಿ ಅಥಸಿ
೨೨ ೧] ಹೊಸಾಮಿ ಎತಾಯೆ ಅಥಾಯೆ ಪಟಿ ಜ ಲಾ ಹಿ ತುಫ್ [ಎ]
ಅಸ್ವಾಸನಾಯೆಹಿತ
೨] ಹೊಸಾಮಿ ಎತ್ (ಅ) ಸಿ (ಅ) ಥಸ್ [ಇ] [ಅ] ಲಂ [ಹ್] ಇ ತು ಫೆ
ಅಸ್ವಾಸ [ನಾ]ಯೆಹೀ(ತ)
೩] ಹೊಹಾಮಿ ಅಲಂಹಿ ತುಫೆ ಆಸ್ವಾಸನಾಯೆಂ (ಹಿ) ತ
೨೩ ೧[ಸುಖಾಯೆ ಚ [ತೆಸೆ] ಹಿದಲೊಕಿಕ–ಪಾಲಲೊ [ಕಿ] ಕಾಯೆ...ಹೆವಂಚ
೨] ಸುಖಾಯೆ [ಚ ತೆ] ಸ (೦) ಹಿದಲೋಗಿ (ಕ) ಪ್ [ಅ] ಅ ಲೋಕಿ [ಕ್]
ಆ (ಯ್) ಎ ಹೆವಂಚ

೩] ಸುಖಾಯೆ ಚ ತೆಸಂ ಹಿದಲೊಕಕ (೦) ಪಾರಲೊಕಿಕಾಯೆ ಏತಂ ಫಿ ಹೆವಂ

೨೪ ೧) ಕಲಂತಂ ತುಫೆ ಸ್ವಗಂ... ಆಲಾಧ (ಯಿ) ಸ ಥ ಮಮಚ್ (ಅ) ಆನನಿಯಂ

೨) ತಲಂತಂ...ಸ್ವಗ (೦ಚ ಆ) ಲಾಧಯಿಸ (ಥ) ಮಮಚ ಆನ(ನ್) ಎಯಂ

೩) ಕರಂತಂ ಸ್ವಗಂ ಚ ಅರೊಧೆಸಥ ಮಮ ಚ ಅನಾನಿಯಂ

೨೫ ೧) ಏಹಧ ಏಕಾಯ ಚ ಅಥಾಯೆ ಅಯಂ ಲಿಪಿ ಲಿಖಿತಾ ಹಿದ ಏ (ನ)

೨) ಎಸ್ (ಅ) ಥ ಏತಾಯೆ ಚ ಅ (ಥ) ಆಯೆ ಇ (ವ)ೀ ಲಿಪೀ ಲಿ (ಖ್) ಇತ ಹಿದ ಏ (ನ)

೩] ಎಹ ಥಂ ಏತ...ಯಾ...ಇಯಂ ಲಿಪಿ ಹಿದ ಲಿಖಿತ ಅಥ

೨೬ ೧] [ಮ]ಹಾಮಾತ ಸ್ವಸತ [೦] ಸಮ ಯುಜಿಸಂತಿ ಅಸ್ [ವಾ] ಸ್[ಅ] ನಾಯೆ ಧಂಮ

೨] ಮಹ್ [ಅ] ಮಾತಾ ಸಾಸ್ವತಂ ಸಮಂಯುಜೆಯು ಅಸ್ವಾಸನಾಯೆ ಚ ಧಂಮ

೩] ಮಹಾಮಾತ ಸಾಸ್ವತಂ....ಯುಪ್ರಜೆವು ಅಸ್ವಾಸನಿಯಾ ಧಂ...

೨೭ ೧] ಚಲ [ನಾ]ಯೆ ಚ ತೆ ಸ್ [ಅ] ಅಂತಾನಂ ಇಯಂ ಚ ಲಿಪಿ [ಅನು] ಚಾತುಂಮಾಸಂ

೨] ಚಲ [ನಾ]ಯೆ [ಚ]...ಅಂತಾ[ನ]ಂ ಇಯಂ ಚ ಲಿಪೀ ಅ[ನು]ಚ್ [ಅ] ತುಂ [ಮ್] ಆಸಂ

೩] ಚರನಾಯ ಚ ಅಂತಾ....ಚ ಲಿಪಿ ಅನೆ ಚಾತು ಮಾಮಿ

೨೮ ೧] ತಿಸೆನ ನಖತೆನ ಸೊತಮಿಯಾ ಕಾಮಂ ಚು.. [ಖ] ಣಸ್ [ಇ] ಖಿನ...

೨] ಸ (ಖತ)ವಿಯಾ..ತಿಸೇನ ಅಂತ [ಲಾ] ಪಿ...ಚ...ಸೊತಮಿಯಾ

೩] ಸೊತಯಿ....ಸೆಹಿ....

೨೯ ೧] ಅಂತಲಾ ತಿಸೆನ ಏಕೆನ [ಪ್] ಇ [ಸೊ]ತಮಿಯ ಹೆವಂ ಕಲ[೦[ತಂ

೨] ..ಖಿನೆ ಸಂತಂ ಏಕೆ [ನ] ಪಿ [ಸೊತ]ವ್ [ಇ] ಯಾ ಹೆ ವ [೦] ಚ [ರೆ] ಲಂ [ತ]ಂ

೩] ಅಂತಲಾ ಪಿ....ಹಿ....ಸರೆನ [....ಕುಳಿ..]ತಮಿಯಾಹೆವಂ

೩೦ ೧] ತ್ [ಉಫೆ] ಚ ಫ ಥ ಸಂಪಟಿಪಾದಯಿತವೆ

೨] ...ಚ ಫೆ ಥ ಸಂಪಟಿಪಾತಯಿತ್ [ಅವ್] ಎ

೩] ....ಘಟ ಸಂಪಾಟಿ ....[ಕುಳಿ]....

II ಸಂಸ್ಕೃತ ಪಾಠ :

೧ ದೇವಾನಾಂ ಪ್ರಿಯಃ ಏವಮಾಹ. ಸಮಾಪಾಯಾಂ ಮಹಾಮಾತ್ರಾ ರಾಜವಚನೇನ ವಕ್ತವ್ಯಾಃ ಯತ್ಕಿಂಚಿತ್ಪಶ್ಯಾಮ್ಯಹಂ ತದಿಚ್ಛಾಮ್ಯಹಂ, ಕಿಮಿತಿ ? ಕರ್ಮಣಾ

ಪ್ರತಿಪಾದಯೇಹಂ, ದ್ವಾರತಶ್ಚಾರಭೇಹಮ್; ಏತಚ್ಚ ಮೇ ಮುಖ್ಯಮತಂ ದ್ವಾರಮೇತ ಸ್ಯಾರ್ಥಸ್ಯ ಯದ್ಯುಷ್ಮಾಸ್ವನು ಶಿಷ್ಟಿಃ

೨ ಸರ್ವೇ ಮನುಷ್ಯಾಃ ಮಮ ಪ್ರಜಾಃ ಯಥಾ ಪ್ರಜಾಯೈ ಇಚ್ಛಾಮಿ. ಕಿಮಿತಿ ? ಮೆ ಸರ್ವೇಣ ಹಿತಸುಖೇನ ಯುಜ್ಯೇರನ್ [ಯಥಾ ಪ್ರಜಾಯೇ ಇಚ್ಛಾಮಿ ಕಿಮಿತಿ ಮೇ ಸರ್ವೇಣ ಹಿತಸುಖೇನ ಯುಜ್ಯೇರನ್] ಇತಿ ಇಹಲೌಕಿಕ ಪಾರಲೌಕಿಕೇನ, ಏವಮೇವ ಮೆ ಇಚ್ಛಾ ಸರ್ವಮನುಷ್ಯೇಷು.

೩ ಸ್ಯಾದಂತಾನಾಮ ವಿಜಿತಾನಾಂ ಕಿಂ ಛಂದೋಽಸಾ ರಾಜಾಽಸ್ಮಾಸ್ವಿತಿ. ಏತಾವತೀ ಮೇ ಇಚ್ಛಾ ಅಂತೇಷು–(ಏವಂ) ಪ್ರಾಪ್ನುಯುಃ ರಾಜಾ ಏವಮಿಚ್ಛತಿ "ಅನುದ್ವಿಗ್ನಾ ಭವೇಯುರ್ಮಯಿ ಆಶ್ವಸುಶ್ಚ. ಮೇ ಸುಖಮೇವ ಚ ಲಭೇರನ್ ಮಮ ತೇ ನ ದುಃಖಮ". ಏವಂ ಚ ಪ್ರಾಪ್ನುಯುಃ "ಕ್ಷಮಿಷ್ಯತೇ ನೋ ರಾಜಾ ಯಚ್ಛಕ್ಯಂ ಷಮಿತುಮ". ಮಮ, ನಿಮಿತ್ತಂ ಚ ಧರ್ಮಂ ಚರೇಯುರೀತಿ, ಇಹಲೋಕಂ ಪರಲೋಕಂ ಚಾಽಽರಾಧೇಯುಃ

೪ ಏತಸ್ಮೈಚಾರ್ಥಾಯ ಅಹಂ ಯುಷ್ಮಾನನುಶಾಸ್ಮಿ. ಅನೃಣ್ಯಮೇತೇನ ಅಹಮ್ ಯುಷ್ಮಾನನುಶಾಸ್ತು ಛಂದಂ ಚ ವೇದಯಿತುಂ ಯಾ ಮಮ ಧೃತಿಃ ಪ್ರತಿಜ್ಞಾ ಚಾಚಲಾ, ತದೇವಂ ಕರ್ತುಂ ಕರ್ಮ ಚರಿತವ್ಯಮಾಶ್ವಾಸನೀಯಶ್ಚ ತೇ ಯೇನ ತೇ ಪ್ರಾಪ್ನುಯುಃ –" ಯಥಾ ಪಿತೈವಂ ನೋ ರಾಜೇತಿ. ಯಥಾತ್ಮಾನ ಮನುಕಂಪತ ಏವಮಸ್ಮಾಸ್ವನುಕಂಪತೇ ಯಥಾ ಪ್ರಜಾ ಏವಂ ವಯಂ ರಾಜ್ಞಃ."

೫ ಯುಷ್ಮಾನ್ ಅಹಮನುಶಾಸ್ತುಂ ಛಂದು ಚ ವೇದಯಿತುಂ ಯಾಮಮ ಧೃತಿಃ ಪ್ರತಿಜ್ಞಾಚಾಪಲಾ. ಸಕಲ ದೇಶಾಯುತ್ತೋ ಭವಿಷ್ಯಾಮ್ಯೇತಸ್ಮಿನ್ನರ್ಥೇ. ಅಲಂ ಹಿ ಯೂಯಮಾಶ್ವಾಸನಾಯ ಹಿತಸು ಖಾಯ ಚ ತೇಷಾಮೈಹ ಲೌಕಿಕಪಾರ ಲೌಕಿಕಾಯ. ಏವಂ ಚ ಕುರ್ವಂತಃ ಸ್ವರ್ಗಂ ಚಾರಾಧಯಿಷ್ಯಥ ಮಮ ಚಾನೃಣ್ಯ ಮೇಷ್ಯಥ.

೬ ಏತಸ್ಮೈ ಚಾರ್ಥಾಯೇಯಂ ಲಿಪಿರ್ಲಿಖಿತಾ ಇಹ ಏತಾನ್ಮಹಾಮಾತ್ರಾಃ ಶಾಶ್ವತಂ ಸಮಯಂ ಯುಜ್ಯೇರನ್ನಾಶ್ವಾಸನಾಯ ಚ ಧರ್ಮಚರಣಾಯ ಚಾಂತಾನಾಮ್ ಇಯಂ ಚಲಿಪಿರನು ಚಾತುರ್ಮಾಸಂ ಶ್ರೋತವ್ಯಾ, ತಿಷ್ಯೇಣಾಂತರಾಪಿಚ ಶ್ರೋತವ್ಯಾಕ್ಷಣೇ ಶಾಂತಮೇಕೇನಾಪಿ ಶ್ರೋತವ್ಯಾ ಏವಂ ಚ ಕುರ್ವಂತ ಶ್ಛೇಷ್ಟಧ್ವೇ ಸಂಪ್ರತಿಪಾದಯಿತುಮ್.

III ಕನ್ನಡ ಭಾಷಾಂತರ :

೧ ದೇವತೆಗಳಿಗೆ ಪ್ರಿಯನಾದವನು ಹೀಗೆ ಹೇಳುತ್ತಾನೆ : "ರಾಜನ ಆಜ್ಞಾನುಸಾರವಾಗಿ ಸಮಾಪಾದಲ್ಲಿರುವ ಮಹಾಮಾತ್ರರು ಇದನ್ನು ತಿಳಿದಿರಬೇಕು–" ನನಗೆ ಯಾವುದಾದರೂ ಮುಖ್ಯವೆಂದು ತೋರಿದಾಗ ಅದು ಹಾಗೆ ನಡೆಯಬೇಕೆಂದು

ಬಯಸುತ್ತೇನೆ. ಅದು ಹೇಗೆ ? ಅದನ್ನು ಕೃತಿಯಲ್ಲಿ ಪ್ರತಿಪಾದಿಸಬೇಕೆಂದು ಮತ್ತು ಯುಕ್ತರಾದವರ ದ್ವಾರಾ ಆರಂಭಿಸಬೇಕೆಂದು. ಇದು ನನ್ನ ಮುಖ್ಯವಾದ ಅಭಿಪ್ರಾಯ ಮತ್ತು ನಿಮ್ಮಗಳಿಗೆ ಅದರಂತೆ ತಿಳಿಯಪಡಿಸುವುದೇ ಸರಿಯಾದ ಆರಂಭ.

೨ ಎಲ್ಲ ಮಾನವರು ನನ್ನ ಮಕ್ಕಳು. ನನ್ನ ಮಕ್ಕಳಿಗಾಗಿ ನಾನು ಬಯಸುವು ದೇನನ್ನು ? ಅವರಿಗೆ ಎಲ್ಲ ವಿಧದ ಹಿತಸುಖಗಳೂ ಲಭ್ಯವಾಗಬೇಕೆಂದು ಇಹ ದಲ್ಲಿಯೂ, ಪರದಲ್ಲಿಯೂ ಎಲ್ಲ ಮನುಷ್ಯರಿಗಾಗಿ ನಾನು ಬಯಸುವುದೂ ಅದನ್ನೇ.

೩ ನಾನು ಗೆಲ್ಲದೆ ಇರುವ ಗಡಿ ಪ್ರದೇಶಗಳ ಜನರು "ತಮ್ಮನ್ನು ಕುರಿತು ಈ ರಾಜನ ಇಚ್ಛೆಯೇನು ? ಎಂದುಕೊಳ್ಳುತ್ತಿರಬಹುದು. ಗಡಿಯಲ್ಲಿರುವ ಜನಗಳನ್ನು ಕುರಿತು ನನ್ನ ಇಚ್ಛೆ ಇಷ್ಟೇ. ರಾಜನ ಇಚ್ಛೆ ಇಷ್ಟೇ ಎಂಬುದು ಅವರಿಗೆ ತಿಳಿದಿರಲಿ–" ಅವರು ನನ್ನ ವಿಷಯದಲ್ಲಿ ಭಯಗ್ರಸ್ತರಾಗಿರುವುದು ಬೇಡ, ನನ್ನಲ್ಲಿ ವಿಶ್ವಾಸವುಳ್ಳವರಾಗಲಿ ನನ್ನಿಂದ ಅವರಿಗೆ ಸುಖವೇ ಲಭಿಸಬಹುದು. ದುಃಖವೆಂದಿಗೂ ಅಲ್ಲ." ಮತ್ತೂ ಅವರಿಗೆ ತಿಳಿದಿರಲಿ" ಯಾವ ಯಾವ ಸಂದರ್ಭದಲ್ಲಿ ಕ್ಷಮೆಯು ಶಕ್ಯವೊ ಆಗೆಲ್ಲ ರಾಜನು ನಮ್ಮನ್ನು ಕ್ಷಮಿಸುವನು,' ಎಂದು. "ನನ್ನ ನಿಮಿತ್ತವಾಗಿ ಅವರು ಧರ್ಮಮಾರ್ಗದಲ್ಲಿ ನಡೆಯುತ್ತಿರಬೇಕು. ಇಹಲೋಕದಲ್ಲೂ ಪರಲೋಕದಲ್ಲೂ ಸಮೃದ್ಧಿಯನ್ನು ಪಡೆಯಲಿ" ಎಂದು.

೪ ಈ ಉದ್ದೇಶಕ್ಕಾಗಿಯೇ ನಿಮಗೆ ನನ್ನ ಅನುಶಾಸನ ಇದು. ಇದರಿಂದ ನನ್ನ ಋಣವೂ ತೀರಲಿ. ನಿಮ್ಮನ್ನು ಅನುಶಾಸಿಸುವುದರಲ್ಲೂ, ನಿಮ್ಮ ಇಚ್ಛೆಯನ್ನು ತಿಳಿಯಬೇಕೆಂಬುದರಲ್ಲೂ ನನ್ನ ಸತತ ಪ್ರಯತ್ನ ಹಾಗೂ ಪ್ರತಿಜ್ಞೆ ಅಚಲವಾದುವು. ಯಾವ ಜನಗಳಲ್ಲಿ ಆಶ್ವಾಸನೆ ಉಂಟು ಮಾಡುವುದಿದೆಯೋ ಅವರನ್ನು ಕುರಿತ ಕಾರ್ಯಾಚರಣೆ ಇಂತಿರಬೇಕು. ಅದರಿಂದ ಅವರು ಮನಗಾಣಬೇಕು, ಏನೆಂದು?–" ನಮ್ಮ ರಾಜ ನಮಗೆ ತಂದೆಯಂತೆಯೆ ತನ್ನವರಲ್ಲಿರುವ ಸಹಾನುಭೂತಿಯೆ ಅವನಿಗೆ ನಮ್ಮಲ್ಲಿಯೂ ಇದೆ. ಈ ರಾಜನಿಗೆ ನನ್ನ ಮಕ್ಕಳು ಹೇಗೋ ಹಾಗೆಯೇ ನಾವೂ ಎಂದು.

೫ ನಿಮ್ಮನ್ನು ಅನುಶಾಸಿಸುವುದರಲ್ಲಿಯೂ, ನಿಮ್ಮ ಇಚ್ಛೆಯನ್ನು ತಿಳಿಯ ಬೇಕೆಂಬುದರಲ್ಲೂ ನನ್ನ ಸತತ ಪ್ರಯತ್ನ ಮತ್ತು ಪ್ರತಿಜ್ಞೆ ಅಚಲವಾದುವು. ಈ ಉದ್ದೇಶ ದಿಂದಲೇ ಎಲ್ಲ ದೇಶಾಧಿಕಾರಿಗಳಿಗೂ ಭರವಸೆ ನೀಡುತ್ತೇನೆ. ಆ ಜನಗಳಲ್ಲೆಲ್ಲ ವಿಶ್ವಾಸವನ್ನೂ, ಅವರ ಹಿತಸುಖಗಳನ್ನೂ ಸಾಧಿಸುವುದಕ್ಕೆ ನೀವು ಸಮರ್ಥರು, ಇಹದಲ್ಲಿ ಮತ್ತು ಪರದಲ್ಲಿ ಕೂಡ ಹಾಗೆ ಮಾಡುವುದರಿಂದ ನಿಮಗೆ ಸ್ವರ್ಗವೂ ಸಿದ್ಧಿಸುತ್ತದೆ, ನನ್ನ ಋಣದ ತೀರ್ವೆಯೂ ಆಗುತ್ತದೆ.

೬ ಈ ಉದ್ದೇಶದಿಂದ ಈ ಲಿಪಿಯನ್ನು ಇಲ್ಲಿ ಬರೆಯಿಸಲಾಗಿದೆ. ಗಡಿನಾಡಿನ ವರಲ್ಲಿ ಭರವಸೆಯುನ್ನುಂಟು ಮಾಡಲು ಮತ್ತು ಅವರನ್ನು ಧರ್ಮಮಾರ್ಗದಲ್ಲಿ ನಡೆಯಿಸಲು ಇಲ್ಲಿಯ ಮಹಾಮಾತ್ರರು ಇದನ್ನು ಶಾಶ್ವತವಾದ ನಿಯಮವೆಂದು

ತಿಳಿದಿರಲಿ, ಈ ಲಿಪಿಯನ್ನು ಪ್ರತಿ ನಾಲ್ಕು ತಿಂಗಳಲ್ಲೂ ಎಲ್ಲರೂ ಕೇಳಬೇಕು. ಲಕ್ಷ್ಯಗೊಟ್ಟು ಶಾಂತಚಿತ್ತದಿಂದ ಒಬ್ಬನೇ ಆದರೂ ಕೇಳಬೇಕು. ಹೀಗೆ ಮಾಡುತ್ತಿರುವಾಗಲೇ ಅದನ್ನು ಆಚರಣೆಯಲ್ಲಿ ಪ್ರಕಟಿಸಲು ಮನಗಾಣಿಸುವಂತೆ ನಡೆಯುತ್ತಿರಬೇಕು.

ಅಡಿಟಿಪ್ಪಣಿ

೧ ಈ ಲೇಖನವನ್ನು ಸಿದ್ಧಪಡಿಸಲು ಕೆಳಕಾಣಿಸಿದ ಮೂರು ಲೇಖನಗಳನ್ನು ಆಧಾರವಾಗಿರಿಸಿಕೊಳ್ಳಲಾಗಿದೆ,

ಅ) ಐ. ಕೆ. ಶರ್ಮ, ಆರ್.ವೆಂಕಟ ಶಿವ ಶರ್ಮ ಮತ್ತು ಜೆ. ವರಪ್ರಸಾದ ರಾವ್ "ರಾಕ್ ಎಡಿಕ್ಟ್ಸ್ ಆಫ್ ಅಶೋಕ ಫ್ರಂ ಸನ್ನತಿ. ಚಿತಾಪುರ್ ತಾಲೂಕ. ಗುಲಬುರ್ಗ ಡಿಸ್ಟ್ರಿಕ್ಟ್ (ಕರ್ನಾಟಕ)" ಇಂಡಿಯನ್ ಮ್ಯೂಸಿಯಂ ಬುಲೆಟಿನ್. (ಕಲಕತ್ತಾ ೧೯೮೯) ಸಂಪುಟ. ೨೨ ಪುಟ ೭–೧೫

ಆ) ಐ. ಕೆ. ಶರ್ಮ. ಜೆ. ವರಪ್ರಸಾದರಾವ್ ಮತ್ತು ಜಿ. ವಿ. ಶ್ರೀನಿವಾಸರಾವ್, "ಮೋರ್ ಅಶೋಕನ ಎಡಿಕ್ಟ್ಸ್ ಫ್ರಂ ಸನ್ನತಿ (ಕರ್ನಾಟಕ)"ದೇವೇಂದ್ರ ಹಂಡಾ ಮತ್ತು ಅಶ್ವಿನಿ ಆಗರವಾಲ (ಸಂ), ರತ್ನಚಂದ್ರಿಕಾ : ಪ್ಯಾನೋರಮಾ ಆಫ್ ಓರಿಯಂಟಲ್ ಸ್ಟಡೀಸ್ (ಶ್ರೀ ಅರ್. ಸಿ. ಅಗರವಾಲ ಫೆಸ್ಟ್‌ಸ್ಕ್ರಿಪ್ಟ್)" ನವದೆಹಲಿ. ೧೯೮೯), ಪು. ೪೦೩–೪೧೭ ಮತ್ತು

ಇ) ಡಾ. ಇಂಗುವ ಕಾರ್ತಿಕೇಯ ಶರ್ಮ. ಪೂಲಿ ವೆಂಕಟ ಶ್ರೀನಿವಾಸರಾವು. ರಾವುಪ್ರೋಲು ವೆಂಕಟ ಶಿವಶರ್ಮ ಮತ್ತು ಜನುಮುಲ ವರಪ್ರಸಾದರಾವು. "ಸನ್ನತಿ ಲೋ ಲಂಭಿಚಿನ ಅಶೋಕುನಿ ಶಾಸನ ಮುಲು" ಭಾರತಿ (ಜನವರಿ, ೧೯೯೦). ಪು. ೧೨–೨೪

ಇವುಗಳಲ್ಲಿನ ನಕ್ಷೆ ಮತ್ತು ಶಾಸನ ಪಾಠಗಳನ್ನು ಉಪಯೋಗಿಸಿಕೊಂಡು ಪ್ರಸ್ತುತ ಲೇಖನವನ್ನು ಬರೆಯಲು ಅನುಮತಿ, ಮಾರ್ಗದರ್ಶನ ನೀಡಿ ಸಹಕರಿಸಿದ ಡಾ. ಇಂಗುವ ಕಾರ್ತಿಕೇಯ ಶರ್ಮ (ನಿರ್ದೇಶಕರು, ಪಿ ಅಂಡ್ ಎಂ), ಭಾರತೀಯ ಪುರಾತತ್ತ್ವ ಸರ್ವೇಕ್ಷಣ. ನವದೆಹಲಿ), ಅವರಿಗೆ ಲೇಖಕ ವಿಶೇಷತಃ ಕೃತಜ್ಞ. ಇಲ್ಲಿ ಬಳಸಿರುವ ಛಾಯಾಚಿತ್ರಗಳು 'ಭಾರತೀಯ ಪುರಾತತ್ತ್ವ ಸರ್ವೇಕ್ಷಣ'ದ ಕೃಪೆ.

೨ ಅ) ಭೀಮಾ ಶಂಕರ ದೇಶಪಾಂಡೆ "ಶ್ರೀ ಚಂದ್ರಲಾಂಬಾ ಸನ್ನತಿ ದರ್ಶನ". (ಮರಾಠಿ ೧೯೭೬).

ಆ) ಅಣ್ಣಿಗೇರಿ, ಎ. ಎಂ, "ಸನ್ನತಿ" (ಬೆಂಗಳೂರು. ಐ.ಬಿ.ಎಚ್. ಗ್ರಂಥಮಾಲೆ. ೧೯೭೮), ಪು. ೪೫

೩ ನಾಗರಾಜರಾವ್, ಎಂ. ಎಸ್. "ಬ್ರಾಹ್ಮೀ ಇನ್ಸ್‌ಕ್ರಿಪ್ಷನ್ಸ್ ಆ್ಯಂಡ ದೇಯರ್ ಬೇರಿಂಗ್‌ಆನ್ ದಿ ಗ್ರೇಟ್ ಸ್ತೂಪ ಆಫ್ ಸನ್ನತಿ". ಫ್ರೆಡ್ರಿಕ್ ಅಷರ್ ಮತ್ತು ಗಾಯಿ, ಜಿ. ಎಸ್. (ಸಂ). "ಇಂಡಿಯನ್ ಎಪಿಗ್ರಫಿ : ಇಟ್ಸ್ ಬೇರಿಂಗ್ ಆನ್ ದಿ ಹಿಸ್ಟರಿ ಆಫ್ ಆರ್ಟ್ಸ್" (ನವದೆಹಲಿ ೧೯೮೩), ಪು. ೪೧, ಅಡಿಟಿಪ್ಪಣಿ–೧.

೪ ಕೃಷ್ಣರಾವ್ ಕಪಟರಾಳು, "ಶ್ರೀ ಚಂದ್ರಲಾ ಪರಮೇಶ್ವರಿ". ಮೊದಲಿಗೆ "ಹೈದ್ರಾಬಾದ್ ಇಂದು" ಮಾಸ ಪತ್ರಿಕೆಯ ಸಂ. ೪ ಸಂಚಿಕೆ ೯ (ಸಪ್ಟೆಂಬರ್. ೧೯೫೪) ರಲ್ಲಿ ಪ್ರಕಟವಾದ ಈ ಲೇಖನವನ್ನು ಕುರುಡಿ ಹನುಮಂತಾಚಾರ್ಯರು ಸಂಪಾದಿಸಿರುವ 'ಕರ್ನಾಟಕ ಸಂಸ್ಕೃತಿಯ ಸಂಶೋಧನೆ' (ಉಷಾಸಾಹಿತ್ಯ ಮಾಲೆ, ಮೈಸೂರು. ೧೯೭೦), ಪು. ೨೫೭–೨೬೧ರಲ್ಲಿ ಸೇರಿಸಲಾಗಿದೆ.

೫ ಅ) ಶೇಷಾದ್ರಿ, ಎಂ. "ಬುದ್ಧಿಸ್ಟ್ ಮಾನ್ಯುಮೆಂಟ್ಸ್ ಆಫ್ ಸನ್ನತಿ", 'ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ' (ಬೆಂಗಳೂರು, ೧೯೬೫) ಸಂಪುಟ LVI, ಸಂಚಿಕೆ ೧-೪, ಪು. ೩೫-೩೭.

ಆ) ಶೇಷಾದ್ರಿ, ಎಂ, "ಬುದ್ಧಿಸ್ಟ್ ಮಾನ್ಯುಮೆಂಟ್ಸ್ ಇನ್ ಮೈಸೂರ್," 'ಆರ್ಟಿಬಸ್ ಆಸಿಯೆ' (ಸ್ವಿಟ್ಸರ್ ಲ್ಯಾಂಡ್, ೧೯೭೨), ಸಂಪುಟ XXXIV ಸಂಚಿಕೆ ೨/೩. ಪು. ೧೬೯-೧೭೦.

೬ ದೇಸಾಯಿ, ಪಿ.ಬಿ. "ಎನ್ಯೂ ಬುದ್ಧಿಸ್ಟ್ ಸೆಂಟರ್". 'ದಿ ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ ಸೋಶಿಯಲ್ ಸೈನ್ಸಸ್ (ಧಾರವಾಡ, ೧೯೬೮), ಸಂ. ೪ ಪು. ೩-೮

೭ ನೂರಕ್ಕೂ ಹೆಚ್ಚಿನ ಇಂತಹ ಶಿಲ್ಪಗಳನ್ನು ಗುಲಬುರ್ಗದ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಇವುಗಳಲ್ಲಿ ಸ್ತೂಪದ ಅವಶೇಷಗಳಿರುವ ನಿವೇಶನದಿಂದ ಸಂಗ್ರಹಿಸಿದ್ದೆನ್ನಲಾದ ೫೨ ಶಾಸನ ಶಿಲ್ಪಗಳೂ ಸೇರಿವೆ. (ನೋಡಿ : ಗಾಯಿ, ಜಿ.ಎಸ್. (ಸಂ) ಆನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಫಿ : ೧೯೬೬-೬೭ (ಮೈಸೂರು, ೧೯೭೧ ಮತ್ತು ಅದೇ ೧೯೬೮-೬೯ (ಮೈಸೂರು, ೧೯೭೨) ಈ ಶಾಸನಗಳಲ್ಲಿ ಕೆಲವನ್ನು ಡಾ. ಎಂ. ಶೇಷಾದ್ರಿ (ಅಡಿ ಟಿಪ್ಪಣಿ ೫) ಮತ್ತು ಡಾ. ಎಂ. ಎಸ್. ನಾಗರಾಜರಾವ್ ಅಡಿ ಟಿಪ್ಪಣಿ ೩) ಅವರು ಪ್ರಕಟಿಸಿದ್ದಾರೆ.

೮ ಸುಂದರ, ಎ. "ಎಕ್ಸವೇಶನ್ ಅಟ್ : ಸನ್ನತಿ : ೧೯೮೬-೮೭" ಪುರಾತತ್ವ ಸಂ. ೧೭ (ನವದೆಹಲಿ, ೧೯೮೮), ಪು. ೨೧-೨೪

೯ ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಒಂದು ಸಮಿತಿಯು ಅಸ್ತಿತ್ವದಲ್ಲಿದ್ದು, ಜೀರ್ಣೋದ್ಧಾರ ಕಾರ್ಯ ಈಗಾಗಲೇ ಆರಂಭವಾಗಿದೆ. ಮೊದಲ ಹಂತದ ಕೆಲಸವಾಗಿ, ಶಿಥಿಲವಾಗಿ ಅಲ್ಲಲ್ಲಿ ಚೆದುರಿ ಬಿದ್ದಿದ್ದ ಕಂಬ ಮುಂತಾದ ಅಲಂಕೃತ ಮೂಲ ವಾಸ್ತು ಭಾಗಗಳನ್ನು ಸುರಕ್ಷಿತ ಸ್ಥಳದಲ್ಲಿ ಸಂಗ್ರಹಿಸಲಾಗಿದೆ. ಈ ವಾಸ್ತು ಭಾಗಗಳಲ್ಲಿ ಸ್ತೂಪಕ್ಕೆ ಹೊದಿಸಲಾಗಿದ್ದ ಸುಣ್ಣ ಕಲ್ಲಿನ ಅಲಂಕೃತ ಫಲಕಗಳೂ, ಕಣಶಿಲೆಯ ಭಾಗಗಳೂ ಸೇರಿವೆ. ಪ್ರಸ್ತುತ ಜೀರ್ಣೋದ್ಧಾರ ಕಾರ್ಯ ನಡೆಯುವ ಸಂದರ್ಭದಲ್ಲಿಯೇ ಪೀಠ ಮತ್ತು ಅದರ ಮೇಲಿನ ಶಾಸನಗಳು ಬೆಳಕಿಗೆ ಬಂದದ್ದು.

೧೦ ಸನ್ನತಿಯ ಸಮೀಪವಿರುವ ಶಿರಿವಾಳ ಮುಂತಾದ ಸ್ಥಳಗಳಲ್ಲಿ ರಾಷ್ಟ್ರಕೂಟರ ಕಾಲ ಹಾಗೂ ಶೈಲಿಯ ದೇವಾಲಯ, ಶಿಲ್ಪಗಳು ದೊರಕಿದ್ದು, ಸನ್ನತಿಯಲ್ಲಿಯೇ ಬಾದಾಮಿ ಚಾಲುಕ್ಯ-ರಾಷ್ಟ್ರಕೂಟದ ಕಾಲದ ವಸ್ತು ಭಾಗ, ಶಾಸನಗಳಿರುವುದರಿಂದ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಸನ್ನತಿ ಪ್ರದೇಶವು ನೊಳಂಬ ರಾಜ್ಯದ ಪರಿಮಿತಿಯಿಂದ ಸಾಕಷ್ಟು ದೂರದಲ್ಲಿರುವುದರಿಂದ ಪ್ರಸ್ತುತ ಶಿಲ್ಪವು ಚಾಲುಕ್ಯ ಶೈಲಿಯ ಮುಂದುವರಿಕೆಯನ್ನು ಸೂಚಿಸುವ ರಾಷ್ಟ್ರಕೂಟರ ಕಾಲದ್ದೆಂದು ಹೇಳುವುದು ಹೆಚ್ಚು ಸಮಂಜಸವೆನಿಸುತ್ತದೆ. ಬಹುಶಃ ಇದೇ ಕಾಲ, ಶೈಲಿಗೆ ಸೇರಿದ ಇಂತಹುದೇ ಇನ್ನೊಂದು ಶಿಲ್ಪವೂ ಗರ್ಭಗೃಹದ ಮುಂದಿನ ಮಂಟಪದ ಬಲಭಾಗದಲ್ಲಿರುವ (ಈಗ ಸ್ಥಳಾಂತರಿಸಲಾಗಿದೆ. ಗೂಡಿನಲ್ಲಿದೆ ಸು. ೬೫ ಸೆ.ಮೀ. ಎತ್ತರದ ಈ ಶಿಲ್ಪದಲ್ಲಿ ದೇವಿಯನ್ನು ಕಾಲುಗಳನ್ನು ಮುಂದೆಮಡಚಿಕೊಂಡ. ಕುಳಿತಿರುವಂತೆ ರೂಪಿಸಲಾಗಿದೆ. ಚತುರ್ಭುಜೆಯಾದ ದೇವಿಯು ಬಲಗೈಯಲ್ಲಿ ಡಮರು, ಖಡ್ಗಗಳನ್ನು ಹಿಡಿದಿದ್ದರೆ, ಮೇಲಿನ ಎಡಗೈ (ಭಗ್ನ)ಯಲ್ಲಿ ಬಹುಶಃ ಸರ್ಪವನ್ನು ಕೆಳ ಎಡಗೈಯಲ್ಲಿ ಕಪಾಲ (ಪಾನ ಪಾತ್ರ)ವನ್ನೂ ಹಿಡಿದಿದ್ದಾಳೆ. ಎಡ ಮುಂಭಾಗದಲ್ಲಿ ಹಾವಿನ ಅಲಂಕಾರವಿರುವ ಜಟೆಯು ಗಂಟು ಇಳಿಬಿದ್ದಿದೆ. ಚಕ್ರ ದಂತಹ ದುಂಡನೆಯ ಕರ್ಣಾಭರಣ ಏಕಾವಳಿ, ಮುಂತಾದ ಅಲಂಕರಣಗಳಿವೆ. ಪೀಠದ ಮೇಲೆ ಆನೆ ಪ್ರೇತಗಳಿದ್ದು ಕಾಲುಗಳ ಬಳಿಯೂ ಒಂದೊಂದು ರುಂಡದ ಚಿತ್ರಣವಿದೆ.

೧೧ ಸನ್ನತಿ ಉತ್ಖನನ ಪ್ರಾಚ್ಯವಸ್ತು ಸಂಖ್ಯೆ SAN-2. 367 ದಿನಾಂಕ ೧೪-೧-೧೯೮೮

೧೨ ದಿ. ಫೆಬ್ರುವರಿ ೧, ೧೯೮೯ರ ಇಂಡಿಯನ್ ಎಕ್ಸಪ್ರೆಸ್‌ನಲ್ಲಿ ಪ್ರಕಟವಾಗಿರುವ ಯು‌ಎನ್ ಐ.ವರದಿ

೧೩ ಅಣ್ಣಿಗೇರಿ ಅವರ 'ಸನ್ನತಿ' ಪುಸ್ತಿಕೆಯಲ್ಲಿ ಉಲ್ಲೇಖಿಸಿರುವ ಶೇಷದಾಸ ಹೋಳಿ ಶಹಾಪೂರ ಅವರು (ಮಾರ್ಕಂಡೇಯ ಪುರಾಣವನ್ನು ಆಧರಿಸಿ) ರಚಿಸಿರುವ 'ಶ್ರೀ ಚಂದಲಾ ಚರಿತಾ ವೃತ. (೧೯೬೩ ರಲ್ಲಿ ಪ್ರಕಟಿತ) ಎಂಬ ಸ್ಥಳ ಪುರಾಣದಲ್ಲಿ ಕೆಲವು ಕುತೂಹಲಕರವಾದ ವಿವರಣೆಗಳಿವೆ. ಈ ಗ್ರಂಥದಲ್ಲಿ ಚಂದ್ರಲಾಂಬೆಯ ಸ್ವಯಂವರ ಪ್ರಸಂಗದಲ್ಲಿ ಬರುವ ಒಂದೇ ಬಾಣ ಹೊಡೆದು ಸ್ತಂಭ ಒಂದನ್ನು ಭಂಜಿಸುವ ಉಲ್ಲೇಖ ಐತಿಹಾಸಿಕ ಸತ್ಯದ ಆಧಾರ ಹೊಂದಿದ್ದರೆ, ಈ ಶಾಸನ ಫಲಕ ದೇವಿಯ ಪೀಠವಾದುದರ ಹಿನ್ನೆಲೆ ಅರ್ಥಪೂರ್ಣವಾಗುತ್ತದೆ. ಇದರಿಂದ ಈ ಪರಿವರ್ತನೆ ಶಾಕ್ತಪಂಥದ ಬೆಳವಣಿಗೆಯ ಸಂದರ್ಭದಲ್ಲಿ ಧಾರ್ಮಿಕ ಅಸಹನೆಯ ಪರಿಣಾಮವಾಗಿ ನಡೆದ ಉದ್ದೇಶಪೂರ್ಣ ಘಟನೆ ಎಂದು (ಅರ್ಥೈ)ಸಬಹುದಾದ ಸಾಧ್ಯತೆ ಇದೆ. ಇದರ ಬಗೆಗೆ ಹೆಚ್ಚಿನ ಸಂಶೋಧನೆ ಅವಶ್ಯಕವೆನಿಸುತ್ತದೆ.

೧೪ ಪ್ರಸ್ತುತ ಫಲಕದಂತೆಯೇ ಬಹುಶ ಮೂಲಸ್ತಂಭದ ಉಳಿದ ಭಾಗಗಳನ್ನೂ ಚಂದ್ರಲಾ ಪರಮೇಶ್ವರಿ ದೇವಾಲಯದ ನಿರ್ಮಾಣದಲ್ಲಿ ಉಪಯೋಗಿಸಿದ್ದಿರಬಹುದಾದ ಸಾಧ್ಯತೆಗಳೂ ಇಲ್ಲದಿಲ್ಲ. ಕಣಶಿಲೆ ಮತ್ತು ಸುಣ್ಣ ಕಲ್ಲಿನ ಫಲಕಗಳು ಸನ್ನತಿಯಲ್ಲಿ ಇತರ ವಾಸ್ತು ನಿರ್ಮಾಣ ಕಾರ್ಯಗಳಿಗೆ ಸೂಕ್ತ ಸಾಮಾಗ್ರಿಗಳಾಗಿ ಒದಗಿರುವುದಕ್ಕೆ ಸಾಕಷ್ಟು ಕುರುಹುಗಳಿವೆ. ಅಲ್ಲದೆ ದೇವಾಲಯದ ಆವರಣ ಹಾಗೂ ಪರಿಸರದಲ್ಲಿ ಸಹಜಸ್ಥಿತಿಯಲ್ಲಿರುವ ಇಲ್ಲವೆ ಹಾಸುಗಲ್ಲಾಗಿ ಉಪಯೋಗಿಸಿರುವ ಗಿರುವ ಕಣ ಶಿಲೆಯ ಅನೇಕ ಕಲ್ಲುಗಳಿವೆ. ಈ ಪ್ರದೇಸದಲ್ಲಿ ಹೆಚ್ಚಿನ ಹಾಗೂ ಸೂಕ್ಷ್ಮ ರೀತಿಯ ಸ್ಥಳ ಪರಿಶೋಧನೆಯಿಂದ ಈ ಫಲಕದ ಭಾಗವ ಮತ್ತು ಅದರ ಮೂಲ ಸ್ಥಾನದ ಬಗೆಗೆ ಹೆಚ್ಚಿನ ಉಳಿದ ಮಾಹಿತಿ ದೊರಕಬಹುದು. ಮತ್ತು ನೋಡಿ : ಅಡಿಟಿಪ್ಪಣೆ ೬ ಮತ್ತು ೯.

೧೫ ಈ ಶಾಸನದ ಪಾಠಗಳನ್ನು ಮೊದಲ ಬಾರಿಗೆ ಪರಿಕ್ಷರಿಸಿ ವಿದ್ವಜ್ಜನಗರ ಗಮನಕ್ಕೆ ತಂದವರು ಡಾ. ಐ. ಕೆ. ಶರ್ಮ ಮತ್ತು ಅವರ ಸಹೋದ್ಯೋಗಿಗಳು (ಅಡಿಟಿಪ್ಪಣೆ ೧) ಭಾರತೀಯ ಪುರಾತತ್ವ ಸರ್ವೇಕ್ಷಣದ ಶಾಸನ ಇಲಾಖೆ (ಮೈಸೂರು) ಯವರು ಇವುಗಳ ವಿಶೇಷ ಪರಿಶೀಲನೆಗಾಗಿ ಕಾಗದ ಪ್ರತಿ(ಎಸ್ಟಾಂಪೇಜ್)ಗಳನ್ನು ತೆಗೆದುಕೊಂಡು ಹೋಗಿದ್ದಾದರೂ ದಿನಾಂಕ (ದಿ. ೩-೨-೧೯೮೯) ಆ ಇಲಾಖೆಯ ಅಧಿಕೃತ ವರದಿ ಇನ್ನೂ ಪ್ರಕಟವಾಗಿಲ್ಲ.

೧೬ ಹುಲ್ಷ್, ಇ. (ಸಂ) ಕಾರ್ಪಸ್ ಇನ್ಸ್ಕ್ರಿಷ್ಟನಂ ಇಂಡಿಕಾರಂ ಸಂ. ೧
ಇನ್ಸ್ಕ್ರಿಪ್ಶನ್ಸ್ ಆಫ್ ಅಶೋಕ (ಕಲ್ಕತ್ತಾ, ೧೯೨೫) ಧಾಲಿ ಪು. ೯೨-೯೬ ಔಗಾಡ ಪು. ೧೧೧-೧೧೫

೧೭ ಅದೇ ಧಾಲಿ, ಪು. ೯೭-೧೦೦: ಔಗಾಡ, ಪು. ೧೧೫-೧೧೮

೧೮ ಸರ್ಕಾರ್. ಡಿ. ಸಿ. ಸೆಲೆಕ್ಟ್ ಇನ್ಸ್ಕ್ರಿಪ್ಶನ್ಸ್ ಬೇರಿಂಗ್ ಆನ್ ಇಂಡಿಯನ್ ಹಿಸ್ಟರಿ ಅಂಡ್ ಸಿವಿಲಿಜೇಷನ್, ಸಂ. ೧ (ಕಲ್ಕತಾ, ೧೯೬೫) ಪು. ೪೪ ಅಡಿಟಿಪ್ಪಣೆ ೧

೧೯ ಸಹಜವಾಗಿಯೆ ಈ ಎಲ್ಲ ಸ್ಥಳಗಳು ಮೌರ್ಯರ ಕಾಲದಲ್ಲಿ ಜನಸಾಂದ್ರತೆಯಿಂದ ಕೂಡಿದ್ದು, ರಾಜಕೀಯ ಧಾರ್ಮಿಕ ಇಲ್ಲವೇ ಆರ್ಥಿಕ ಮಹತ್ವವುಳ್ಳ ಕೇಂದ್ರಗಳಾಗಿದ್ದಿರಬೇಕು. ಬ್ರಹ್ಮಗಿರಿ, ಮಾಸ್ಕಿಗಳನ್ನು ಹೊರತುಪಡಿಸಿ ಉಳಿದ ಸ್ಥಳಗಳಲ್ಲಿ ವಿಶೇಷ ರೀತಿಯ ಸ್ಥಳ ಪರಿಶೋಧನೆ ಉತ್ಖನನಾದಿಗಳು ನಡೆದಿಲ್ಲ. ಆದ್ದರಿಂದ ಈ ಸ್ಥಳಗಳ ಹಿರಿಮೆ, ಅಶೋಕ ತನ್ನ ಶಾಸನಗಳನ್ನು ಅಲ್ಲಿ ಬರೆಸಿರುವುದರ ಔಚಿತ್ಯ ಇವುಗಳ ಬಗೆಗಿನ ಹೆಚ್ಚಿನ ಮಾಹಿತಿ ದೊರಕದಾಗಿದೆ. ಈ ಸ್ಥಳಗಳೂ, ಅತ್ಯಂತ ಪ್ರಾಚೀನ ಗಣಿಗಳಿರುವ ಪ್ರದೇಶಗಳೂ ಆಗಿರುವುದು ಒಂದು ಗಮನಾರ್ಹವಾದ ಅಂಶ.

೨೦ ಸರ್ಕಾರ್, ಡಿ. ಸಿ. "ಅಶೋಕನ ಸ್ಟಡೀಸ್" (ಇಂಡಿಯನ್ ಮ್ಯೂಸಿಯಂ, ಕಲ್ಕತ್ತಾ, ೧೯೭೯) ಪು. ೪.

೨೧ ಕರ್ನಾಟಕಾಂಧ್ರ ಪ್ರದೇಶಗಳಲ್ಲಿ ಇದುವರೆಗೆ ದೊರಕಿರುವ ಶಾಸನಗಳಲ್ಲಿ ಕೇವಲ ಎರಡು ಸ್ಥಳ ನಾಮಗಳು–ಇಸಿಲಾ (ಋಷಿಲಾ), ಸುವಣಗಿರಿ (ಸುವರ್ಣಗಿರಿ) ಉಲ್ಲೇಖಿತವಾಗಿವೆ. ಇವೆರಡರಲ್ಲಿಯೂ ಮಹಾಮಾತ್ರರು ನಿಯುಕ್ತರಾಗಿದ್ದರು. ಇಸಿಲಾವನ್ನು ಬ್ರಹ್ಮಗಿರಿ–ಸಿದ್ದಾಪುರ ಪ್ರದೇಶ (ಚಿತ್ರದುರ್ಗ ಜಿಲ್ಲೆ) ಎಂದು ಗುರುತಿಸಲಾಗಿದೆ. ಆದರೆ ಸುವರ್ಣಗಿರಿಯನ್ನು ಇದುವರೆಗೆ ನಿರ್ಣಾಯಕವಾಗಿ ಗುರುತಿಸಲಾಗಿಲ್ಲ. ಫ್ಲೀಟರು ರಾಜಗೀರದ ಬಳಿಯಲ್ಲಿರುವ ಸೋನಾಗಿರಿ (ಪಾಟ್ನಾ ಜಿಲ್ಲೆ, ಬಿಹಾರ್)ಯೇ ಸುವರ್ಣಗಿರಿ ಎಂದು ಊಹಿಸಿದ್ದರೆ, ಬ್ಯೂಹ್ಲರ್ ಅವರ ಅಭಿಪ್ರಾಯದಂತೆ ಇದು ಪಶ್ಚಿಮ ಘಟ್ಟಗಳ ಬಳಿಯಲ್ಲಿರಬೇಕು. ರಾಯಚೌಧುರಿಯವರು ಮಹಾರಾಷ್ಟ್ರದ ಸೋನ್ಗಿರ್ ಪಟ್ಟಣ (ಧೌಲಿಯ ತಾಲೂಕು, ಪಶ್ಚಿಮಖಾನ್ ದೇಶಜಿಲ್ಲೆ)ವೇ ಸುವರ್ಣಗಿರಿ ಎನ್ನುತ್ತಾರೆ. ಎಚ್. ಕೃಷ್ಣಶಾಸ್ತ್ರಿಯವರ ಪ್ರಕಾರ ಈ ಸ್ಥಳ ಮಾಸ್ಕಿ (ರಾಯಚೂರ ಜಿಲ್ಲೆ)ಯ ಪರಿಸರದಲ್ಲಿದ್ದರೆ, ಹುಲ್ಷ್ ಅವರು ಇನ್ನೂ ಮುಂದೆ ಹೋಗಿ ಮಾಸ್ಕಿಯ ದಕ್ಷಿಣಕ್ಕೆ ಇಂದಿನ ಕನಕಗಿರಿಯೇ ಸುವರ್ಣಗಿರಿ ಎಂದಿದ್ದಾರೆ. ಆದರೆ ಸಿ. ಆರ್. ಕೃಷ್ಣಮಾಚಾರ್ಯರು ಆಂಧ್ರ ಪ್ರದೇಶದ ಎರ್ರಗುಡಿಯಲ್ಲಿ ಈ ದೊರೆಯ ಅಶೋಕನ ಮುಖ್ಯ ಹಾಗೂ ಲಘು ಶಿಲಾ–ಶಾಸನಗಳು ದೊರೆತಿರುವ ಹಿನ್ನೆಲೆಯಲ್ಲಿ ಆ ಸ್ಥಳದ ಸಮೀಪವಿರುವ ಜೊನ್ನಗಿರಿಯನ್ನೇ ಸುವರ್ಣ ಗಿರಿ ಎಂದು ಗುರುತಿಸಿದ್ದಾರೆ (ಎಪಿಗ್ರಾಫಿಯಾ ಇಂಡಿಕಾ ೩ ಪು. ೨೩೪). ಇತ್ತೀಚೆಗೆ ಡಾ. ಜಯ ರಾಮ ಶರ್ಮ ಅವರು ಸುವರ್ಣಗಿರಿ ಶ್ರೀಲಂಕೆ ಇರಬಹುದೆನ್ನುವ ಊಹೆಯನ್ನು ಮುಂದಿಟ್ಟಿದ್ದಾರೆ. ಒಟ್ಟಿನಲ್ಲಿ ಕೃಷ್ಣಶಾಸ್ತ್ರಿ ಹುಲ್ಷ್ ಮುಂತಾದ ವಿದ್ವಾಂಸರು ಸುವರ್ಣಗಿರಿಯನ್ನು ಇಂದಿನ ಕರ್ನಾಟಕ ಪ್ರದೇಶದಲ್ಲಿ ಗುರುತಿಸುವ ಪ್ರಯತ್ನ ನಡೆಸಿದ್ದರೂ, ಈಚಿನ ಹಲವಾರು ವಿದ್ವಾಂಸರು ಎರ್ರಗುಡಿಯ ಬಳಿಯಲ್ಲಿರುವ ಜೊನ್ನಗಿರಿಯೇ ಸುವರ್ಣಗಿರಿ ಎನ್ನುವ ವಾದವನ್ನೇ ಹೆಚ್ಚಾಗಿ ಸಮರ್ಥಿಸುತ್ತಿದ್ದಾರೆ. ನೋಡಿ ಡಿ. ಸಿ. ಸರ್ಕಾರ್, (೧೯೭೯) ಪು. ೫೫–೫೭

೨೨ ಸರ್ಕಾರ್, ಡಿ. ಸಿ. (೧೯೭೫) ಪು. ೪೦ ಅಡಿಟಿಪ್ಪಣಿ ೧

೨೩ ಶಿಲಾಸ್ತಂಭಗಳ ಜೊತೆಗೆ ಅಶೋಕ ಇಂತಹ ಶಿಲಾ ಫಲಕಗಳನ್ನು ಸ್ಥಾಪಿಸುತ್ತಿದ್ದನೆಂಬುದಕ್ಕೆ ಆತನ ಶಾಸನಗಳಲ್ಲಿಯೇ ಉಲ್ಲೇಖವಿದೆ. ಉದಾಹರಣೆಗೆ ದೆಹಲಿ-ತೋಪ್ರಾದಲ್ಲಿನ ಏಳನೆಯ ಸ್ತಂಭ ಶಿಲಾ ಶಾಸನದ ೨೦–೨೨ನೆಯ ಸಾಲಿನಲ್ಲಿ ಬರುವ ಕೆಳಗಿನ ಉಲ್ಲೇಖವನ್ನು ಗಮನಿಸಬಹುದು "ಏತತ್ ದೇವಾನಾಂಪ್ರಿಯ : ಆಗ" ಇಯಂ ಧಮ್ಮಲಿಪಿ : ಯತ್ರ ಸಂತಿ ಶಿಲಾಸ್ತಂಭಾಃ ವಾ ಶಿಲಾ-ಫಲಕಾನಿ ವಾ ತತ್ರ ಕರ್ತವ್ಯಾ, ಯೇನ ಏಷಾ ಚಿರ–ಸ್ಥಿತಿಕಾಸ್ಯಾತ್" (ಸರ್ಕಾರ್, ಡಿ. ಸಿ. (೧೯೭೫) ಪು. ೬೪–೬೫)

೨೪ ೧೮೪೦ ರಲ್ಲಿ ಬೈರಾತ್ (ರಾಜಸ್ಥಾನ, ಜೈಪುರ ಜಿಲ್ಲೆ, ಭಾಭ್ರೂ ಬಳಿ)ಯಲ್ಲಿ ಸಂಶೋಧಿಸಲಾದ ಈ ಎಂಟು ಸಾಲಿನ ಶಾಸನವನ್ನು ಸು. ಒಂದೂವರೆ ಅಡಿ ದಪ್ಪ, ಎರಡು ಅಡಿ ಚೌಕಾಕಾರದ ಬೂದು ಬಣ್ಣದ ಕಣ ಶಿಲೆಯ ಫಲಕದ ಮೇಲೆ ಬರೆಯಲಾಗಿದೆ. ಬಿಡಿಯಾಗಿ ದೊರೆತ ಈ ಶಾಸನ ಫಲಕವನ್ನು ಸಂರಕ್ಷಿಸುವ ಸಲುವಾಗಿ ಕಲ್ಕತ್ತಾದ ಏಷಿಯಾಟಿಕ್ ಸೊಸೈಟಿಯಲ್ಲಿಡಲಾಗಿದೆ. ಬೈರಾತ್‌ನಲ್ಲಿಯೇ ದೊರಕಿರುವ ಇನ್ನೊಂದು ಬಂಡೆಯ ಮೇಲಿರುವ ಶಾಸನದಿಂದ ಇದು ಬೇರೆಯಾದುದೆಂದು ಸೂಚಿಸುವುದಕ್ಕಾಗಿ ಈ ಶಾಸನದನ್ನು ಹುಲ್ಷ್ (೧೯೨೫, ಪು. ೧೭೨) ಅವರು 'ಕಲ್ಕತಾ–ಬೈರಾತ್ ಶಾಸನ' ಎಂದೂ ಡಿ. ಸಿ. ಸರ್ಕಾರ್ (೧೯೭೫, ಪು. ೬೪) ಅವರು 'ಬೈರಾತ್ ಶಿಲಾ–ಫಲಕ ಶಾಸನ' ಎಂದೂ ಗುರುತಿಸಿದ್ದಾರೆ.

೨೫ ಅನುಬಂಧದ ಮೊದಲ ಭಾಗವಾದ 'ಪಾಠಾಂತರಗಳ'ನ್ನು ಮುಖ್ಯವಾಗಿ ಹುಲ್ಟ್ (೧೯೨೫. ಪು. ೧೮೩ ಅವರ ಪಾಠದಂತೆಯೂ ಎರಡನೆಯ 'ಸಂಸ್ಕೃತ ಪಾಠ'ವನ್ನು ಡಿ. ಸಿ. ಸರ್ಕಾರ್ ೧೯೬೫, ಪು. ೩೨. ೩೮–೩೯ ಮತ್ತು ೪೦–೪೭) ಮತ್ತು ಜಿ. ಶ್ರೀನಿವಾಸಮೂರ್ತಿ ಮತು ಮತ್ತು ಎ. ಎನ್. ಕೃಷ್ಣ ಅಯ್ಯಂಗಾರ್ ಅವರ "ಎಡಿಕ್ಟ್ಸ್ ಆಫ್ ಅಶೋಕ ಪ್ರಿಯದರ್ಶಿನ್, (ಮದ್ರಾಸ್, ದಿ ಅಡ್ಯಾರ್ ಲೈಬ್ರರ್, ೧೯೫೧, ಪು. ೩೩ ಗ್ರಂಥವನ್ನು ಆಧರಿಸಿಯೂ ನೀಡ ಲಾಗಿದೆ ಕನ್ನಡ ಭಾಷಾಂತರವನ್ನು ಪರಿಕ್ಷರಿಸುವಲ್ಲಿ ಶ್ರೀ ಪಿ.ವಿ. ಜೋಶಿ, (ನಿವೃತ್ತ ಉಪಕಾರ್ಯ ದರ್ಶಿ, ರೆವಿನ್ಯೂ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು) ಅವರಿಂದ ಬಹುಮಟ್ಟಿಗೆ ಉಪಕೃತ. ಅವರಿಗೆ ಗೌರವಪೂರ್ವಕ ಕತಜ್ಞತೆಗಳು

ಕನ್ನಡ ಕವಿಗಳು ಕಂಡ ಜೋಗ

● ಶಾಲಿನಿ ರಘುನಾಥ

ಜಗತ್ತಿನಲ್ಲಿ ಜೋಗಜಲಪಾತಕ್ಕಿಂತ ಎತ್ತರವಾದ ಜಲಪಾತಗಳು ಕೆಲವಿವೆ. ಅದರಂತೆ ಅಗಲವಾಗಿ ಹರಿಯುವ, ಅಂದರೆ ಗಾತ್ರದಲ್ಲಿ ಇದಕ್ಕಿಂತ ವಿಶಾಲವಾದ ಜಲಪಾತಗಳೂ ಇವೆ. ಆದರೆ ಸೌಂದರ್ಯಪೂರ್ಣ ಔನ್ನತ್ಯದಲ್ಲಿ ಇದನ್ನು ಮೀರುವ ಜಲಪಾತ ಬೇರೊಂದಿಲ್ಲ.[೧] ಭಿನ್ನ ಋತುಗಳಲ್ಲಿ–ಮೈಕೊರೆಯುವ ಚಳಿಯಲ್ಲಿ, ನೆತ್ತಿಸುಡುವ ಬಿಸಿಲಿನಲ್ಲಿ, ಧಾರಾಕಾರವಾಗಿ ಸುರಿಯುವ ಮಳೆಯಲ್ಲಿ–ದಿನದ ಬೇರೆ-ಬೇರೆ ಅವಧಿಗಳಲ್ಲಿ–ನಸುಕು, ಬೆಳಗು, ಮಧ್ಯಾಹ್ನ, ಅಪರಾಹ್ನ, ಸಾಯಂಕಾಲ, ಬೈಗು, ಇರುಳು, ನಟ್ಟಿರುಳುಗಳಲ್ಲಿ – ಹುಣ್ಣಿಮೆಯ ಬೆಳದಿಂಗಳಿನಲ್ಲಿ, ಅಮಾವಾಸ್ಯೆಯ ಗಾಢ ಕತ್ತಲೆಯಲ್ಲಿ – ಜಲಪಾತವನ್ನು ವೀಕ್ಷಿಸಿದವರಿಗೆ ಅದರ 'ನವನವೋನ್ಮೇಷಶಾಲಿನತ್ವ' ಅರಿವಾದೀತು. ಸುತ್ತೆಲ್ಲ ಸಹ್ಯಾದ್ರಿಯ ಶ್ರೇಣಿಗಳು, ನಿತ್ಯ ಹರಿದ್ವರ್ಣದ ಕಾಡು, ಮಧ್ಯೆ ಶಾಂತವಾಗಿ ಹರಿಯುವ ಶರಾವತಿ, ಜಲಪಾತದ ನೆತ್ತಿಯ ಬಂಡೆಯ ಬಳಿ ಬರುತ್ತಲೇ ಸಂಪೂರ್ಣ ತಟಸ್ಥಳಾದಂತೆನಿಸಿ, ಒಮ್ಮೆಲೇ ತನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, ಪ್ರಪಾತಕ್ಕೆ ಹಾರುವ ರೌದ್ರರಮ್ಯದೃಶ್ಯ! ಇದು 'ಮೂಕಂ ಕರೋತಿ ವಾಚಾಲಂ' ಬಗೆಯದಲ್ಲ: ಮಾತನಾಡುತ್ತಿರುವವನೂ ಮೂಕವಿಸ್ಮಿತನಾಗಿ, ಸ್ತಂಭೀಭೂತನಾಗಿ ನೋಡುವ ಅವಸ್ಥೆಯದು. ಗುಂಡಿಗಿಳಿದು ಕತ್ತೆತ್ತಿ ಮೇಲೆ ನೋಡಿದರಂತೂ ಜಲಪಾತ ಆಕಾಶಕ್ಕೆ ಅಂಟಿಕೊಂಡಿರುವಂತೆ, ನಾವು ಪಾತಾಳದಲ್ಲಿ ನಿಂತಂತೆ, ವಿಚಿತ್ರ ಅನುಭವ. ಅಪರೂಪಕ್ಕೆ [ದೇಶ-ವಿದೇಶಗಳ ಗಣ್ಯರು ಭೇಟಿಯಿತ್ತಾಗ] ಸಂಜೆಗತ್ತಲೆಯಲ್ಲಿ ಜಲಪಾತದಲ್ಲಿ ನಡೆಸುವ ಉತ್ಸವಾಗ್ನಿ [Bonfire] ವಿಶಿಷ್ಟ ಸೌಂದರ್ಯಾನುಭವವನ್ನು ತಂದುಕೊಡುವಂತಹುದು, ದೇಶ-ವಿದೇಶದ ಪ್ರವಾಸಿಗರನ್ನು ಬಹುವಾಗಿ ಆಕರ್ಷಿಸಿರುವ, ತನ್ನ ಚೇತೋಹಾರಿದೃಶ್ಯದಿಂದ ಕಲಾವಿದರಿಗೆ ಸ್ಫೂರ್ತಿಯನ್ನು ನೀಡಿರುವ ಸುಂದರ ತಾಣವಿದು. ಅನೇಕರು ತಮ್ಮ ಕುಂಚದಲ್ಲಿ, ಕ್ಯಾಮರಾದಲ್ಲಿ ಈ ಅದ್ಭುತ ದೃಶ್ಯವನ್ನು ಸೆರೆಹಿಡಿಯುವ ಪ್ರಯತ್ನ ಮಾಡಿದ್ದಾರೆ. ಕವಿಗಳು ತಮ್ಮ ಭಾವನೆಗಳಿಗೆ ಮಾತಿನ ಕವಚ ತೊಡಿಸುವ ಸಾಹಸ ಮಾಡಿದ್ದಾರೆ. ಸೃಷ್ಟಿಯ ಈ ಲೀಲೆಯನ್ನು ಕಂಡು ತಮ್ಮ ಜನ್ಮ ಸಾರ್ಥಕವಾಯಿತೆಂದು ಭಾವಿಸಿದವರೆಷ್ಟೋ ಜನ. ಇತ್ತೀಚಿನ ವರ್ಷಗಳಲ್ಲಿ ಶರಾವತಿ ಜಲವಿದ್ಯುತ್ ಯೋಜನೆಯಿಂದಾಗಿ ಮತ್ತು ಕಡಿಮೆ ಮಳೆಯಿಂದಾಗಿ 'ಜೋಗದ ವೈಭವ' ಗತಕಾಲಕ್ಕೆ ತಿರುಗುತ್ತಲಿದೆ. ಮಳೆಯಿಂದ ತುಂಬಿದಾಗಷ್ಟೇ ಚೈತನ್ಯಮಯಿಯಾಗುವ, ಬೇಸಿಗೆಯಲ್ಲಿ ಬತ್ತಿ ಹೋಗುವ ದುರವಸ್ಥೆ ಕೆಲವು ವರ್ಷಗಳಿಂದ ಉಂಟಾಗುತ್ತಿದೆ.

ಜೋಗ ಜಲಪಾತ, ಪ್ರಸಿದ್ಧಿಗೆ ಬಂದದ್ದೇ ೧೯ನೆಯ ಶತಮಾನದಲ್ಲಿ. ಗೇರು ಸೊಪ್ಪೆಗೆ ಇದು ಕೇವಲ ೩೦ ಕಿಮೀ ದೂರದಲ್ಲಿದ್ದುದರಿಂದ ಬ್ರಿಟಿಷರಿಗೆ ಪರಿಚಿತವಾಗಿದ್ದ ಗೇರುಸೊಪ್ಪೆಯ ಹೆಸರಿನೊಂದಿಗೇ ಈ ಜಲಪಾತವನ್ನು ಮೊದಲು ಗುರುತಿಸಲಾಯಿತು. ನಮಗೆ ಇದರ ಪ್ರಥಮ ಉಲ್ಲೇಖ ದೊರೆಯುವುದು, ಹೊನ್ನಾವರದಲ್ಲಿ ೧೮೪೫ರಲ್ಲಿ ನಿಲ್ಲಿಸಿರುವ ಜೋಗವುರ ಕಂಬದಲ್ಲಿ. ಅಲ್ಲಿ ಇದನ್ನು 'ಗೇರುಸೊಪ್ಪೆಯ ಜಲಪಾತ'ವೆಂದೇ ಕರೆಯಲಾಗಿದೆ.[೨] ಭಾರತೀಯ ನೌಕಾತಂಡದ ಟೈಲರ್ ಮತ್ತು ವಿಲಿಯಮ್ಸ್ ಎಂಬ ಬ್ರಿಟಿಷ್ ಅಧಿಕಾರಿಗಳು ೧೮೫೬ರಲ್ಲಿ ಜಲಪಾತದ ಆಳವನ್ನು ಕಂಡುಹಿಡಿದ ಸಾಹಸವೂ ರೋಮಾಂಚಕಾರಿಯಾದದ್ದು.[೩] ೧೯೧೮ರಲ್ಲಿ ಈ ಜಲಪಾತವನ್ನು ವೀಕ್ಷಿಸಿದ ಸರ್ ಎಂ ವಿಶ್ವೇಶ್ವರಯ್ಯನವರ ಬಾಯಿಯಿಂದ ಬಂದದ್ದು 'ಇಲ್ಲಿ ಎಷ್ಟೊಂದು ಶಕ್ತಿ ವ್ಯರ್ಥ ವಾಗುತ್ತಿದೆ !' ಎಂಬ ಮಾತು. ತತ್ಪರಿಣಾಮವಾಗಿ ೧೯೪೮ರಲ್ಲಿ ಮಹಾತ್ಮಾ ಗಾಂಧಿ ೧೯೬೪ರಲ್ಲಿ ಶರಾವತಿ ವಿದ್ಯುದಾಗಾರಗಳು ನಿರ್ಮಾಣವಾದವು. ಪ್ರಪಂಚದಲ್ಲಿಯೇ ಅತಿ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಇಲ್ಲಿ ತಯಾರಾಗುತ್ತಿದೆ ಎನ್ನಲಾಗುತ್ತದೆ. ದೇಶ ವಿದೇಶ ಗಳ ಅತ್ಯಾಧುನಿಕ ತಂತ್ರ ಜ್ಞಾನ ಇದಕ್ಕಾಗಿ ಬಳಸಲಾಗಿದೆ.

'ರವಿಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ಉಕ್ತಿ ಇದೆ. ಕಾವ್ಯದಲ್ಲಿ ವಾಸ್ತವತೆ ಗಿಂತ ಕಲ್ಪಕತೆಗೆ ಹೆಚ್ಚಿನ ಅವಕಾಶವಿದೆಯೆಂದು ಇದರ ಅರ್ಥ. ಆದರೆ ಒಂದೇ ವಸ್ತು ಭಿನ್ನ ಕಾಲದ, ಭಿನ್ನ ಪ್ರದೇಶದ, ಭಿನ್ನ ಮನೋಧರ್ಮದ ಕವಿಗಳಲ್ಲಿ ವಿಭಿನ್ನ ಪ್ರತಿಕ್ರಿಯೆ ಗಳನ್ನು ಹುಟ್ಟಿಸಬಹುದಾಗಿದೆ. ಆಧುನಿಕ ಕನ್ನಡ ಕಾವ್ಯದ ಬೇರೆ-ಬೇರೆ ಮಜಲುಗಳಲ್ಲಿ ಸೃಷ್ಟಿಯಾದ ಕವನಗಳು ಈ ಮಾತಿಗೆ ನಿದರ್ಶನವಾಗಿವೆ. ಆದರೆ ನವೋದಯ, ನವ್ಯ ಮುಂತಾದ ಪ್ರವೃತ್ತಿಗಳನ್ನು ಕಾಲದ ಹಿನ್ನೆಲೆಗಿಂತ ಒಟ್ಟು ಮನೋಧರ್ಮದ ಹಿನ್ನೆಲೆ ಯಲ್ಲಿ ಅಧ್ಯಯನ ಮಾಡುವುದೊಳಿತು. ಏಕೆಂದರೆ ನವ್ಯ, ಬಂಡಾಯ ಧೋರಣೆಗಳು ಬೇರೆ-ಬೇರೆ ಕಾಲದ ಸಾಹಿತ್ಯದಲ್ಲೂ ಅಲ್ಲಲ್ಲಿ ಕಂಡು ಬಂದವೇ (ಪ್ರಮಾಣ ಹೆಚ್ಚು- ಕಡಿಮೆ ಇರಬಹುದು) ಆಗಿವೆ. ಪ್ರಸ್ತುತ ಲೇಖನದಲ್ಲಿ ಜಗತ್ಪ್ರಸಿದ್ಧ ಜೋಗ ಜಲಪಾತ ವನ್ನು ಕೇಂದ್ರ ವಸ್ತುವನ್ನಾಗಿಟ್ಟುಕೊಂಡು ಆಧುನಿಕ ಕನ್ನಡ ಕವಿಗಳು ಪ್ರತಿಕ್ರಿಯಿಸಿರುವ ರೀತಿಯನ್ನು ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.[೪]

'ಜೋಗ ಜಲಪಾತ'ದಂತಹ ನಿಸರ್ಗಸೃಷ್ಟಿಯ ಅದ್ಭುತವನ್ನು ಕಂಡಾಗ ಸಾಮಾನ್ಯನ ಮನದಲ್ಲಿಯೇ ಭಾವ ತರಂಗಗಳು ಪುಟಿದೇಳುತ್ತವೆ. ಇನ್ನು ಕವಿಹೃದಯ ವಾದರಂತೂ ಕೇಳಬೇಕೇ ? ಜೋಗ ಸಂದರ್ಶಕರ ಪುಸ್ತಕಗಳಲ್ಲಿ ಸಾಕಷ್ಟು ಆಶುಕವಿತೆ ಗಳು ದೊರೆಯುವವಾದರೂ ನಮಗೆ ಅಧಿಕೃತವಾಗಿ, ಪ್ರಕಟಣೆಯಲ್ಲಿ ಈಗ ದೊರೆ ಯುವ ಮೊದಲ ಕವನ ಡಿ. ವಿ. ಗುಂಡಪ್ಪನವರದ್ದು.[೫] 'ಜೋಗದ ಜಲಪಾತ' ಎಂಬ ಹೆಸರಿನ ಈ ಕವನ ೧೯೨೯ರಲ್ಲೇ ಪ್ರಕಟವಾಗಿದ್ದು, ಹಳಗನ್ನಡ ಶೈಲಿಯಲ್ಲಿ, ಕಂದ- ವೃತ್ತಗಳಲ್ಲಿ ರಚಿತವಾಗಿದೆ. '[illegible]

ಕವಿಯ ರಮ್ಯ ದೃಷ್ಟಿಯಲ್ಲಿ ನೂರಾರು ಕಲ್ಪನೆಗಳನ್ನು ಹೆಣೆಯುತ್ತದೆ. ಇದೇನು 'ಪ್ರಕೃತಿ ಪರದೈವಕ್ಕೆ ನೀಡುತ್ತಿರುವ ಅರ್ಘ್ಯವೋ ಅಥವಾ ಭೂಮಿಯ ಸಂತಾಪವನ್ನು ಪರಿಹರಿಸಲು ವನದೇವಿ ಸಿಂಪಡಿಸುತ್ತಿರುವ ಸೇಚನವೋ' ತಿಳಿಯದು. ನೀರಿನ ಪ್ರವಾಹ, 'ಕ್ಷೀರಾಸೇಚನ ಧಾರೆಯಂತೆ, ಮುತ್ತಿನ ಮಳೆಯಂತೆ ಸುರಿಯುತ್ತಿದೆ. ಅದರ ಚೆಲುವನ್ನು ಯಾರು ಬಣ್ಣಿಸಲು ಸಾಧ್ಯ?' ಎಂಬ ಭಾವ. ಮುಂದೆ 'ಮತ್ತೇಭವಿಕ್ರೀಡಿತ'ದಲ್ಲಿ ಜಲಪಾತದ ಕ್ರೀಢಾ ವಿಲಾಸವನ್ನು ನಾನಾ ರೀತಿಯಲ್ಲಿ ಪ್ರಶ್ನಿಸುತ್ತಾ, ಬಣ್ಣಿಸಲಾಗಿದೆ.

ಅತಿಲಾವಣ್ಯದಿಂ ಸಾರುವುದೇಂ ಮರುಳೆ ನೀನೌದ್ಧತ್ಯದಿಂ ಪಾರ್ವುದೇಂ ।
ಲತೆಯಂತಾಡಿ ವಿಲಾಸದಿಂ ಸರಿವುದೇಂ ಶೈಲಾಗ್ರದಿಂಬೀಳ್ವುದೇಂ ॥
ಕ್ಷಿತಿಯಿಂದೇಳುತೆ ನಾಟ್ಯದಿಂ ನಲಿವುದೇಂ ಪಾತಾಳಮಂ ಸಾರ್ವವೋಲ್ ।
ಖತಿಗೊಂಡೋಡುವುದೇಂ ಶರಾವತಿಯಿದೇಂ ನಿನ್ನಿಷ್ಟಮಂ ಕಾಣ್ಬರಾರ್ ॥

ಕವಿ ಈ ಕವನವನ್ನು ಬರೆದದ್ದು, ಕಾರ್ತೀಕ ಬಹುಳ ಅಮಾವಾಸ್ಯೆಯಂದು. ಮೈಸೂರು ಬಂಗಲೆಯಲ್ಲಿ ಗಾಢ ಕತ್ತಲೆಯಲ್ಲಿ ಹಾಲಿನಂತೆ ಕೆಳಗೆ ಸುರಿಯುತ್ತಿರುವ ಜಲಪಾತವನ್ನು ನೋಡುತ್ತ ಈ ರಮ್ಯ ಕವಿಗನಿಸಿದ್ದು, ಜಲಪಾತಕನ್ಯೆ ಹಗಲಿನಲ್ಲಿ ಸೂರ್ಯನನ್ನು ಒಲಿಸಿಕೊಳ್ಳಲು ನವರತ್ನಚ್ಛವಿಯಿಂದ ಪ್ರಯತ್ನಿಸಿದ್ದಲ್ಲದೇ ರಾತ್ರಿ ಈಗ ಧವಳಾಂಶುವಾಗಿ ಚಂದ್ರನನ್ನು ಅರಸುತ್ತ ಮೊರೆಯುತ್ತಿದೆ ! ಒಮ್ಮೆ ಸೃಷ್ಟಿಯ ನಗುವಾಗಿ, ಮತ್ತೊಮ್ಮೆ ಭೂತಾಯಿಯ ಕಣ್ಣೀರಧಾರೆಯಾಗಿ, ಹೀಗೆ ನೂರಾರು ಭಾವನೆಗಳನ್ನು ಬಡಿದೆಬ್ಬಿಸುವ ಜಲಪಾತ, ನೋಡುವವರಿಗೆ 'ನವನವವಾಗಿ' ತೋರುತ್ತ 'ಅಗ್ಗದ ಸರೌದ್ರ ಸಮ್ಮೋಹನ' ಶಕ್ತಿಯಾಗಿದೆ.

ರಸಋಷಿ ಕುವೆಂಪುರವರ ದೃಷ್ಟಿಯಲ್ಲಿ ಇದು ರುದ್ರಭಯಂಕರ ಸೌಂದರ್ಯದಿಂದ ಕೂಡಿದ ಭೀಷ್ಮ ಜಲಪಾತ![೮] ಆದರೆ ಮುಂದೆ ಕವಿಯ ಸಖಿಯೂ ಆಗಿ ಮಾರ್ಪಟ್ಟದ್ದರಲ್ಲಿ ಜಲಪಾತವನ್ನು ಕುರಿತ ಕುವೆಂಪುರವರ ದೃಷ್ಟಿ-ಸೃಷ್ಟಿಗಳನ್ನು ಕಾಣುತ್ತೇವೆ. ಬೆಟ್ಟ ಕಾಡುಗಳ ಮಧ್ಯೆ ನಿರ್ಜನತೆ, ನೀರವತೆಯ ಮಧ್ಯೆ ಘೂರ್ಣಿಸುತ್ತ ಆಳವಾದ ಪ್ರಪಾತಕ್ಕೆ ಮುಗ್ಗರಿಸಿ ಬೀಳುತ್ತಿರುವ ಶರಾವತಿ, ಕವಿಗೆ ಆತ್ಮಹತ್ಯೆಗಾಗಿ ಪ್ರಯತ್ನಿಸಿರುವ ಹೆಣ್ಣಿನಂತೆ ಕಂಡು ಬಂದಿದ್ದಾಳೆ. ದಾಟು ಗುಂಡಿಯ ಬಳಿ ಪ್ರಶಾಂತವಾಗಿ ಹರಿಯುವ ನದಿ, ಕವಿಯ ದೃಷ್ಟಿಯಲ್ಲಿ ಶಾಂತಿಯ ಸೆಟನೆ. ತಡಸಲನ್ನು ಕಂಡಾಕ್ಷಣ, ಆವರೆಗೆ ಸಮಪ್ರಮಾಣದಲ್ಲಿದ್ದ ಭಾವ ಆವೇಶವಾಗಿ ಉಕ್ಕಿಹರಿಯುತ್ತದೆ.

...."ಅಯ್ಯೊ, ಎದೆ ಹಿಗ್ಗುತಿದೆ
ಜೀವಸಿಡಿದೊಡೆಯುತಿದೆ ! ನೋಡಲ್ಲಿ ! ನೋಡಲ್ಲಿ
ಕ್ರಾಂತಿ ! ತಾಂಡವಲೀಲೆ ! ವಿಲಯ ! ವಿಪ್ಲವ ಹುಚ್ಚು !
ಸೌಂದರ್ಯಮಾಯೆ ! ಜೋಗದ ಭೀಷ್ಮ ಜಲಪಾತ !
ಪಾತಾಳ ! ಪಾತಾಳ ! ಏನಾತ್ಮಹತ್ಯೆ !" ಎಂದು ಉದ್ಗರಿಸುತ್ತಾರೆ.

"ಹಾರದಿರು, ಹಾರದಿರು, ಓ ಶರಾವತಿ ನಿಲ್ಲು" ಎಂದು ಕೂಗಿಕೊಳ್ಳುತ್ತಾರೆ. ಜಲಪಾತದ ಸುತ್ತಮುತ್ತಲ ಪ್ರಕೃತಿಯನ್ನು ನೋಡಿದರೆ ಎಲ್ಲವೂ ಶಾಂತ, ತಟಸ್ಥ. ತನಗೇಕೆ ಇಂಥ ಉದ್ವಿಗ್ನತೆ? ಯುಗ-ಯುಗಗಳಿಂದ ಈ ದೃಶ್ಯವನ್ನು ನೋಡುತ್ತಿದ್ದರೂ ಬೆಟ್ಟ-ಕಾಡು. ಮುಗಿಲುಗಳು ತಲ್ಲಣಿಸುತ್ತಿಲ್ಲ, ಭೂಮಿತಾಯಿ ನೊಂದಿಲ್ಲ. ಬ್ರಹ್ಮ ತನ್ನ ಸೃಷ್ಟಿಗಾಗಿ ತಾನೇ ಹೆಮ್ಮೆಪಡುತ್ತ ಕನಸಿನ ಮೋಹದಲ್ಲಿ ಸಿಲುಕಿದ್ದಾನೆ. ಇದನ್ನು ಸೌಂದರ್ಯವೆಂದು ಕರೆಯೋಣವೇ? ಬಲು ಭಯಂಕರವಾಗಿ ತೋರುತ್ತಿದೆ. ರೌದ್ರವೆನ್ನೋಣವೇ ? ಕಣ್ಣುಗಳಿಗೆ ಮಳೆಬಿಲ್ಲಿನ ಇಂಪುತನ ಕಾಣುತ್ತಿದೆ. ಪರಿಚಯ ಹೆಚ್ಚಿದಂತೆ, ಸ್ನೇಹಿತನಾಗಿ ಸೌಂದರ್ಯವನ್ನು ಬಿಚ್ಚಿ ತೋರಿಸುತ್ತದೆನ್ನುವುದು. ಮತ್ತೆ ಮತ್ತೆ ಜಲಪಾತವನ್ನು ಸಂದರ್ಶಿಸಿದ ಕವಿಯ ಅನುಭವಕ್ಕೆ ಸಂದ ಮಾತು. ಅಂತೆಯೇ ಮುಂದೆ, ಸರಳರಗಳೆಯ ಮುಕ್ತ ಛಂದಸ್ಸಿನಲ್ಲಿ ಕವಿ ತನ್ನೆಲ್ಲ ಭಾವನೆಗಳನ್ನು ಮುಕ್ತವಾಗಿ ಹರಿಬಿಡತೊಡಗುತ್ತಾರೆ.

"ಹಾಲು ಹೊಳೆಗರೆವಂತೆ, ಹುಚ್ಚುಹೊಳೆಕವಲೊಡೆದು
ಬಿಳಿಮಂಜು ಹರಿವಂತೆ ಹತ್ತಿತೊಳೆಯಿಳಿವಂತೆ
ಬಿಳಿಯಮಲ್ಲಿಗೆ ಮೊಗ್ಗುಗಳ ಗಿರಿಯ ನಿರ್ಝರಣೆ"

ಯಂತೆ ಎಡೆಬಿಡದೆ ಧುಮುಧುಮುಕಿ ಹರಿವ ಶರಾವತಿ ಪ್ರಕೃತಿ ಮೌನದ ಮಧ್ಯೆ ಓಂಕಾರವನ್ನು ಕೂಗಿ ಉಸುರುತ್ತಿದೆ. ಇಲ್ಲಿಯೂ ಕೂಡ ಕವಿಯ ತಾತ್ವಿಕ ದೃಷ್ಟಿಗೆ ಕ್ರಾಂತಿಯಿಂದಲೆ ಶಾಂತಿ" ಹೊರಹೊಮ್ಮಿದಂತೆ ತೋರುತ್ತದೆ. ಪತಿಯೊಂದಿಗೆ ಯಾವುದೋ ಕ್ಷುದ್ರ ವಿಷಯಕ್ಕೆ ಜಗಳವಾಡಿ, ಕೋಪದ ಕ್ಷಣದಲ್ಲಿ ಆತ್ಮಹತ್ಯೆಗೆ ವಿಫಲ ಪ್ರಯತ್ನ ಮಾಡಿ, ಗುಟ್ಟು ಬಯಲಾದೀತೆಂದು ನಾಚಿಕೆ, ಭಯಗಳಿಂದ ಬೆದರಿ. ಬಂಡೆಯಡಿಗಳಿಂದ ಅವಗುತ್ತ ಕಣಿವೆಯಲ್ಲಿ ಮೈಗರೆದು ಹಿಂತಿರುಗಿ ನೋಡು-ನೋಡುತ್ತ ಇನಿಯನ ಬಳಿ ಮತ್ತೋಡುತ್ತಿರುವ ಹೆಣ್ಣಿನಂತೆ ಕವಿ ಕಲ್ಪನೆಯಲ್ಲಿ ಗೋಚರಿಸುತ್ತಾಳೆ. ಆಕೆಯನ್ನು ಸಂತೈಸುತ್ತ, ಉಪದೇಶಿಸುತ್ತಾರೆ. ಬಾಳಿನಲ್ಲಿ ಏಳು-ಬೀಳುಗಳು ಸಹಜ. ಆದರೆ 'ನಮಗೇಳುಬೀಳುವುದು ಗುರಿಯಲ್ಲ. ಎದ್ದರೂ ಬಿದ್ದರೂ ನನ್ನಿಯೆಡೆಗೆ ಬಿಡದೆ ಮೇಲೇರುವುದೆ ಗಮ್ಯ' ಎನ್ನುತ್ತಾರೆ. ಶರಾವತಿಗೆ ಪ್ರೋತ್ಸಾಹ ನೀಡಿ. ನನ್ನಿಯನ್ನರಸುತ್ತ ಹಿಂಜರಿಯದೆಯೇ ನುಗ್ಗಿ, ನಿನ್ನ ಮನದನ್ನನನು ನೀ ಸೇರು ಎಂದು ಹುರಿದುಂಬಿಸುತ್ತಾರೆ. ಅಷ್ಟೇ ಅಲ್ಲ, 'ನನ್ನಿಯೆಂಬುದು ಕೊರಳಿನಲ್ಲಿ ಮುಡಿವ ಕೋಮಲ ಮಾಲೆಯಲ್ಲ, ಎದೆಗಿರಿದುಕೊಳ್ಳಲೇ ಬೇಕಾಗಿರುವ ಹೊನ್ನಿನಕತ್ತಿ' ಎಂಬುದನ್ನೂ ಉಪದೇಶಿಸುತ್ತಾರೆ. ಯುಗ-ಯುಗಗಳಲ್ಲಿಯೂ ಶರಾವತಿ ಧುಮುಕುತ್ತಲೇ ಇರಬೇಕು. ಜನರೆದೆಯ ಕನ್ನಡಿಗೆ ಬಿಂಬವಾಗಿರಬೇಕು ಎಂಬುದು ಕವಿಯ ಆಶಯ.

ವ್ಯಕ್ತಿಯ ಮನಸ್ಸಿನಲ್ಲಿರುವ ಕಿರಿತನವಳಿಯುವಾಗಿ ಹಿರಿತನ ಮೂಡಿದರೆ. ಅದಕ್ಕಿಂತ ದೊಡ್ಡ ಪ್ರಭಾವ ಬೇರೊಂದಿಲ್ಲ. ದೊಡ್ಡದಿರುವುದು ಕಿರಿದರೆದೆಯಲ್ಲಿ ದೊಡ್ಡತನ ಮೊಳೆದೋರುವಂತೆ ಮಾಡುವಲ್ಲಿ. ಈ ದೃಷ್ಟಿಯಿಂದ ಕವಿಗೆ ಶರಾವತಿ ಆದರ್ಶ, ಸತ್ಯ-ಸೌಂದರ್ಯಧಾಮದೆಡೆಗೆ ಕೊಂಡೊಯ್ಯಬಲ್ಲ ಸಾಮರ್ಥ್ಯವಿದ್ದವಳು.

ಹೀಗೆ ಸರಳರಗಳೆಯ ಮಹಾಛಂದಸ್ಸಿನಲ್ಲಿ 'ಭವ್ಯವಸ್ತುವೊಂದು ಬೀರುತ್ತಿರುವ ದಿವ್ಯಸಂದೇಶ' ರಸರೂಪಿಯ 'ಜೋಗ' ಕವನದಲ್ಲಿದೆ. ಭಾವತೀವ್ರತೆ, ಆದರ್ಶಮಯತೆ, ಆಧ್ಯಾತ್ಮಿಕತೆ ಮುಂತಾದ ಅಂಶಗಳ ಸುಂದರಮಿಶ್ರಣ ಈ ಪದ್ಯದಲ್ಲಿದೆ.

ವರಕವಿ ಬೇಂದ್ರೆಯವರ ದೃಷ್ಟಿಯಲ್ಲಿ ಜೋಗಜಲಪಾತ ಪ್ರಕೃತಿಯ ಅದ್ಭುತ ಸೃಷ್ಟಿಗಳಲ್ಲಿ ಒಂದು[೭]. ತದಸಲನ್ನು ಕಾಣುತ್ತಲೇ ಸುತ್ತಲಿನ ಪ್ರಕೃತಿಯ ಅರಿವೇ ಇಲ್ಲದಷ್ಟು ಭಾವಾವೇಶಕ್ಕೆ ಒಳಗಾಗುತ್ತಾರೆ.ಅವರ ಪ್ರತಿಭೆ ಧುತ್ತೆಂದು ಎದುರಿಗೆ ನಿಂತು, ಎದೆಯಲ್ಲಿ. ದಡ-ದಡಗುಟ್ಟಿಸುತ್ತಿರುವ ಜಲಪಾತವನ್ನು ಬಡ-ಬಡ ವರ್ಣಿಸ ತೊಡಗುತ್ತವೆ. ಆಶ್ಚರ್ಯ, ಆನಂದ, ಭಯ, ರೋಮಾಂಚನ ಹೀಗೆ ಅನೇಕ ಭಾವಗಳ ಮಿಶ್ರ ಪ್ರತಿಕ್ರಿಯೆ, 'ತಡಸಲು ತಡಸಲು ಆಗೋ ಅಲ್ಲಿ! ಎಂಬ ಭಾವಾಭಿನಯದಲ್ಲಿ ಮೂರ್ತಗೊಂಡಿದೆ. ಕವನದುದ್ದಕ್ಕೂ ಒಂದು ರೀತಿಯ ನಾಟಕೀಯತೆ ಇಣುಕಿ ಹಾಕಿದೆ. ಮೇಲ್ನೋಟಕ್ಕೆ ಅತ್ಯಂತ ಸರಳವಾದ ಪದ್ಯವೆನ್ನಿಸಿದರೂ ವೈಯಕ್ತಿಕ ಅನುಭವವನ್ನು ಸಾಮಾನ್ಯೀಕರಿಸಿ ಸುಲಭ ಶಬ್ದಗಳಲ್ಲಿ ಕಾವ್ಯಾತ್ಮಕವಾಗಿ ಹಿಡಿದಿಡುವುದು ನಿಜಕ್ಕೂ ಪ್ರಯಾಸಕರ. ಅಂಬಿಕಾತನಯದತ್ತರಂತಹ ಶಬ್ದಗಾರುಡಿಗ ಮಾತ್ರ ಇಂಥ ಮಾಟ ಮಾಡಬಲ್ಲ. ಶರಾವತಿ ತುಂಬಿ ಹರಿಯುವಾಗ ಬೀಳುವ ನೀರಿನ ರಭಸಕ್ಕೆ ಸುತ್ತ-ಮುತ್ತಲಿನ ಪ್ರಕೃತಿಯೆಲ್ಲ ನಡುಗಿದಂತೆ ಭಾಸವಾಗುತ್ತದೆ. ಕೆಳಗೆ ಬಿದ್ದ ನೀರು ಉಗಿಯಾಗಿ ಮತ್ತೆ ಕಣಿವೆಯೇರುತ್ತದೆ. ಮೇಲೆ ಬರುತ್ತಲೇ ತಂಪು ತಗಲಿ ಕೆಳಗುರುಳುತ್ತದೆ. ಸೂರ್ಯನ ಬಿಸಿಲಿಗೆ ಹೊಳೆಯುವ ಜಲಪಾತದ ಮೇಲೆ ಕಾಮನ ಬಿಲ್ಲುಗಳು ಮೂಡಿ ಕಂಗೊಳಿಸುತ್ತವೆ. ಸೃಷ್ಟಿಯ ಇಂಥ ವ್ಯಾಪಾರಗಳ ಸೂಕ್ಷ್ಮ ನಿರೀಕ್ಷಣೆ ಬೇಂದ್ರೆಯವರ ಕವನದಲ್ಲಿ ಸಾಂದ್ರವಾಗಿ ಮೂಡಿಬಂದಿದೆ. ಕವಿಗೆ ಜಲಪಾತದ ತುಂಬೆಲ್ಲಮುತ್ತಿನಸರಗಳು, ಗಾಜಿನಕಂಬಗಳು ತೋರಿಬರುತ್ತವೆ. ನೆಲ-ಮುಗಿಲಿನ ನಡುವಿನ ಈ ಅದ್ಭುತ, ಮೊದಲ 'ಶಬ್ದ' ಮಾತ್ರದಿಂದಲೇ ನಮ್ಮಲ್ಲಿ ಭಯವನ್ನು ಹುಟ್ಟಿಸುತ್ತದೆ. ಅದರ ರುದ್ರ ರಮಣೀಯ ದೃಶ್ಯವಂತೂ ಹೆದರಿ ಸ್ತಂಭೀಭೂತರಾಗುವಂತೆ ಮಾಡುತ್ತದೆ. ಕಮಾನ ಜಲಪಾತಕೆ ತೆಪ್ಪವನ್ನು ದಿಗಂತದತ್ತ ಓಡುತ್ತದೆ. ಹೀಗೆ ಬೇರೆ ಬೇರೆ ಹಂತಗಳಲ್ಲಿ ಜಲಪಾತ ನೀಡುವ ಅನುಭವ ಅನಿರ್ವಚನೀಯ. ಇಂಥ ಭಾವನೆಗಳನ್ನೆಲ್ಲ ಸರಳ ಶಬ್ದಗಳಲ್ಲಿ ಹಿಡಿದಿಟ್ಟ ಬೇಂದ್ರೆ ಪದ್ಯವೂ ಒಂದು ಅದ್ಭುತ ಸೃಷ್ಟಿಯೇ ಆಗಿದೆ.

'ಜೋಗದಯೋಗ' ವನ್ನು ರಚಿಸಿರುವ ಡಿ. ಎಸ್. ಕರ್ಕಿಯವರು ಜೋಗ ಜಲಪಾತದಲ್ಲಿ ಶಿವನ ಲೀಲೆಯನ್ನು ಕಾಣುತ್ತಾರೆ.[೮] ಪರಶಿವನ ಜಡೆಯಗಂಗೆಯೇ ಮಲೆನಾಡಿನ ಬೆಟ್ಟಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಕೆಳಗಿಳಿದು ಬಂದ ಕಲ್ಪನೆ ಸುಂದರವಾಗಿದೆ. ಮುಚ್ಚಿಟ್ಟು ಶರಾವತಿ ಇಲ್ಲಿ ಕುಣಿದಿದ್ದಾಳೆ. ಅದನ್ನೇ ಕವಿ, 'ಚಿತ್ರ ನೆತ್ತಿಗೇರಿದ ಶರಾವತಿಯ ನಿತ್ಯನೃತ್ಯ ಇಲ್ಲಿ ನಡೆಯುತ್ತಿದೆ' ಎಂದಿದ್ದಾರೆ. ಹೀಗೆ ಅನ್ನಿಸಿದ್ದರೂ ಪ್ರಕೃತಿ ಎಲ್ಲವೂ ಈ ಕವಿಗೆ ಶಿವಮಯ. 'ರಾಜ'-'ರಾಣಿ' ಯರನ್ನು

ಒಂದೇ ನೋಟದಿಂದ ನೋಡಿದರೆ ಅರ್ಧ ನಾರೀ ನಟನ ನಾಟ್ಯಚಿತ್ರ ಮನದಲ್ಲಿ ಮೂಡುತ್ತದೆ. ನೀಲದಿಂದ ಪಾತಾಳಕಿಳಿವ ಶತಕೋಟಿ ಬಾಣದಾಟವಾಗಿ 'ಬಾಣ' ಕಾಣಿಸಿಕೊಳ್ಳುತ್ತದೆ. ಅದು 'ಗಿರಿಜೆಗೆಂದು ಹಲಬಿಲ್ಲ ತೀಡಿ ಶರವರ್ಷ ಕರೆದ ನೋಟ' ಆಕಾಶದೊಡಲಿಂದ ಓಂಕಾರ ಹೊಮ್ಮಿದಂತೆ ಅಬ್ಬರದ ಘರ್ಜನೆ. ಈ ನಾಲ್ಕು ತಡಸಲುಗಳು ಕವಿಗೆ ವೀರ, ಕೋಪ, ಶೃಂಗಾರ, ಶಾಂತಗಳ ಪ್ರತಿನಿಧಿಗಳಾಗಿ ತೋರುತ್ತವೆ. ಜಲಪಾತದ ಬೊಬ್ಬಿರಿದಾಟ, ಅಬ್ಬರ-ಕುಣಿತಗಳು ಯಕ್ಷಗಾನದ ದಕ್ಷ ಕಲಾವಿದರನ್ನು ನೆನಪಿಸಿಕೊಡುತ್ತವೆ. ಅಂತೆಯೇ ಈ 'ದಕ್ಷಾಧ್ವರಲೀಲೆ'ಯನ್ನು ಶತ-ಶತಮಾನಗಳಿಂದಲೂ ಸುತ್ತಲಿನ ಪ್ರಕೃತಿ ಮೂಕಸಾಕ್ಷಿಯಾಗಿ ನೋಡುತ್ತ ಬಂದಿದೆ. ಹೀಗೆ ಜೋಗದಲ್ಲಿ 'ಜೋಗಿ'ಯನ್ನು ಕಂಡಕಣ್ಣು ಕವಿಯದು. ಜೋಗದಲ್ಲಿ ಅದ್ಭುತವು ಸೌಂದರ್ಯದೊಂದಿಗೆ ನಾಟ್ಯಗೈದಿದ್ದರೆ, ಭಾವಜೀವಿಯಾದ ಈ ಕವಿಯ ಭಾಷೆಯೂ ಅನುಭವಕ್ಕೆ ತಕ್ಕ ಅಭಿವ್ಯಕ್ತಿಗೈವಲ್ಲಿ ನಾಟ್ಯರೂಪವನ್ನು ತಾಳಿದೆ. ಉದಾಹರಣೆಗೆ—

> ನಕ್ಕುನಲಿವ ನೀರುಕ್ಕಿ ಬೀಳುವುದು
> ನಾಲ್ಕು ಸೀಳಿನಲ್ಲಿ
> ಎಸಳುಗೊಂಡು ಹೊಸ ಬೆಡಗ ಬೀರಿಹರಿ
> ಯುವುದು ಕೊಳ್ಳದಲ್ಲಿ

ಎಂಬ ಸಾಲುಗಳಲ್ಲಿ ನೀರು ಬೀಳುವುದು ಮತ್ತು ಕೊಳ್ಳದಲ್ಲಿ ಹರಿಯುವುದು ಭಾವಾಭಿನಯವಾಗಿ ಭಾಷೆಯಲ್ಲಿ ಮೂಡಿಬಂದಿದೆ.

ಕಾವ್ಯಾನಂದರಿಗೆ 'ಜಲಪಾತ' ದರ್ಶನದಿಂದ ದೊರೆತದರ್ಶನ ಸಿದ್ಧಿ ವಿಶಿಷ್ಟವಾದುದು.[೯] ಯಾವ ಕಡಲಿನಿಂದಲೋ, ಯಾವ ಸರೋವರದಿಂದಲೋ ಮೋಡವಾಗಿ ತಂಪು ಪಡೆದು, ಭಾರವಾಗಿ ಗಾಳಿಯ ಸಹಾಯದಿಂದ ಬಂದು ತನ್ನ ಮನಶ್ಶೈಲಕ್ಕೆ ಎರಗಿ, ಬಾಳಿನಲ್ಲಿ ನಾಲ್ಕು ಮುಖವಾಗಿ ಹಾಡಿ ಹರಿಯುತ್ತಾ ಇದೆ ಎಂದು ಭಾವಿಸುವ ಕವಿ ಯಾರಿಂದ ಈ ನೀರು ಬಂದುದೆಂದು ವಿಂಗಡಿಸಲು ಸಾಧ್ಯವೇ, ಬೇರೆ-ಬೇರೆಯಾಗಿ ತೋರಿಸಲು ಸಾಧ್ಯವೇ, ನೀರು ಎಲ್ಲಿಯದೇ ಆದರೂ ಅದು ಕ್ರಮಿಸುವ ಪಥ ತನ್ನದೇ ಆಗಿರುವಾಗ ಅದನ್ನು ಎರವಲು, ಎನ್ನಲು ಸಾಧ್ಯವೇ? ಎಂದೆಲ್ಲ ಚಿಂತನೆಗೈಯ್ಯುತ್ತಾರೆ. ಅಂದರೆ ನಾವು ಜೀವನ ಮಾರ್ಗವನ್ನು ಕಂಡುಕೊಳ್ಳುವಾಗ ತತ್ವಗಳು, ಆದರ್ಶಗಳು, ಸಿದ್ಧಾಂತಗಳು ಮುಂತಾದವನ್ನು ಯಾವು ಯಾವುದೋ ಗ್ರಂಥಗಳಿಂದ, ವಿದ್ವಾಂಸರಿಂದ ಪಡೆದಿರಬಹುದು. ಎಲ್ಲೆಲ್ಲಿಂದಲೋ ಯಾರ್ಯಾರಿಂದಲೋ ಸಲಹೆ ಉಪದೇಶಗಳನ್ನು ಪಡೆದಿರಬಹುದು ಆದರೆ ಯಾವುದನ್ನೂ ಯಥಾವತ್ತಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಬರುವುದಿಲ್ಲ. ಅವೆಲ್ಲವುಗಳ ಆಧಾರದ ಮೇಲೆ ನಮ್ಮ ಪಥವನ್ನು ನಾವು ರೂಪಿಸಿಕೊಳ್ಳಬೇಕಾಗುತ್ತದೆ.

ಪ್ರತಿಯೊಂದು ತಡಸಲನ್ನು ನೋಡಿದಾಗಲೂ ಕವಿಯಲ್ಲಿ ಕೆಲವೊಂದು ತತ್ತ್ವ ವಿಚಾರಗಳು ಹೊಳೆಯುತ್ತವೆ. 'ಅಬ್ಬರ'ವು ನಿತ್ಯವೂ ಕೋಪದಿಂದ ಗರ್ಜಿಸಿ, ಎದುರಾದುದನ್ನು ಕೊಚ್ಚಿ, ಹುಚ್ಚುಹೊನಲಾಗಿ ಧುಮ್ಮಿಕ್ಕಿ ಹಾರುತ್ತದೆ; ಧೀಂಕಿಡುತ್ತ ಓಡುತ್ತದೆ. ತನಗಿರುವ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅನುಭವಿಸುತ್ತಿದೆ. ಯಾವುದೇ ಕಟ್ಟು-ಪಾಡು ಅದಕ್ಕಿಲ್ಲ. ಎದುರಿನ ಕಂಟಕಗಳನ್ನು ತೊಡೆದು ದಾರಿಯನ್ನು ಕೊರೆಯುವ ಕಾರ್ಯ ತನ್ನದೆನ್ನುತ್ತದೆ. 'ನಿಸರ್ಗದ ಭೇರಿ, ಕಾನನದ ತುತೂರಿ' ಎಂದು ಕರೆದುಕೊಳ್ಳುತ್ತದೆ. ತಾನು ಗೈವ ನಾಶದಲ್ಲಿಯೇ ಮುಂದಿನ ವಿಕಾಸವಿದೆ ಎಂಬುದನ್ನು ತಿಳಿಸುವ ಅದು 'ಬರಿಜರಿಯದಲೆ ನನ್ನ ವಶಪಡಿಸಿಕೊಳ್ಳಿ,' 'ಮಾಡಿ ನೋಡಿರಿ ನನ್ನ ಶಕ್ತಿ ಫಲಕಾರಿ' ಎಂದು ಆಹ್ವಾನ ನೀಡುತ್ತದೆ. ಬಾಣತಡಸಲನ್ನು ನೋಡುತ್ತಲೇ ಶಬ್ದಗಳು ಕುಣಿಕುಣಿದು ಕೆಳಗುರುಳತೊಡಗುತ್ತವೆ. ಸಂಪ್ರದಾಯ, ಪರಂಪರೆ, ಅಂಧಶ್ರದ್ಧೆ, ಬುದ್ಧಿದಾಸ್ಯ, ಸನಾತನತ್ವ, ಕುರುಡು ಧರ್ಮ: ಗ್ರಂಥ-ಪಂಥ ಮುಂತಾದವುಗಳೆಲ್ಲ ಆಧುನಿಕ ವಿಚಾರಧಾರೆಯ ನಿಕಷಕ್ಕೆ ಒಳಗಾಗಿ ಪುಟಗೊಂಡು ಬಾಳು ಮುನ್ನಡೆಯುವಂತಾಗಬೇಕೆಂಬುದು ಕವಿಯ ಅಭಿಮತ. ಇಂಥ ದರ್ಶನದ ಬೆಳಕಿನಲ್ಲಿ ಜೀವನವನ್ನು ಬೆಳಗಿಸಿಕೊಳ್ಳಬೇಕೆಂಬ ಆದರ್ಶವನ್ನು ತೋರಿಸುವವರು ರಾಜ ರಾಣಿಯರು. ಸಂಸಾರ ದೊಡ್ಡ ಸಂತೆಯ ಗದ್ದಲವಾಗಿದ್ದರೂ ಯಾರಿಗೆ ಕೇಳಲಿ ಬಿಡಲಿ ನಮ್ಮ ಬಾಳಿನ ವೀಣೆಯನ್ನು ಬಾರಿಸಲೇಬೇಕು ನೋವು-ಸಾವು-ಹೋರಾಟಗಳು ಇರುವುವಾದರೂ.

'ಬಾಳಹೂದೋಟದಲಿ ಜತೆಯಾಗಿ ಪುಟಿಯುತಿಹ
ಜೋಡು ಕಾರಂಜಿಯೊಲು ನರ್ತಿಸೋಣ
ಏಳು ಲೋಕಗಳನ್ನೆ ತೋಳಿನಲಿ ತಬ್ಬಿರುವ
ಪ್ರೇಮವೊಂದನೆ ನಾವು ಕೀರ್ತಿಸೋಣ' ಎಂದು ಕವಿ ಬಯಸುತ್ತಾರೆ.

ಹೀಗೆ, ಬಾಳಿನ ತಿರುಳನ್ನು ಗ್ರಹಿಸಿ ನಮ್ಮ ಜೀವನ ಮಾರ್ಗವನ್ನು ನಾವೇ ರೂಪಿಸಿಕೊಂಡು ಅದನ್ನು ಕ್ರಮಿಸುವಲ್ಲಿ ಎಂತಹ ಎಡರು-ತೊಡರುಗಳು ಬಂದರೂ ಧೈರ್ಯದಿಂದ ಎದುರಿಸಿ, ಜೀವನದಲ್ಲಿ ಸುಖವನ್ನು ಕಾಣಬೇಕೆಂದು 'ಜೋಗಜಲಪಾತ' ಸಂದೇಶ ನೀಡುತ್ತಿರುವುದಾಗಿ ಕವಿಯ ಅನ್ನಿಸಿಕೆ.

ನಡುಹಗಲಿನಲ್ಲಿ, ಜೋಗಜಲಪಾತವನ್ನು ಕಂಡ ಕವಿ ಶಿವರುದ್ರಪ್ಪನವರಿಗೆ ಸುತ್ತಣ ಜಡಪ್ರಕೃತಿಯ ಮಧ್ಯೆ ಚೈತನ್ಯದ ಚಿಲುಮೆ ಉಕ್ಕಿ ಹರಿಯುತ್ತಿರುವಂತೆ ಅನ್ನಿಸಿದೆ.[೧೧] ಬೆಟ್ಟ-ಕಾಡ ಕಂದರಗಳ ಮೇಲೆ ಬಾನ ನೆರಳು ಬಿರು-ಬಿಸಿಲಿನ ಹಚ್ಚಡವನ್ನು ಹೊದೆಸಿರುವುದರಿಂದ, ಅವು ಆಕಳಿಸುತ್ತ ಒರಗಿವೆ. ಬಿಸಿಲಿನ ಬೇಗೆಗೆ ಹಕ್ಕಿಗಳು ಮರದಮೇಲೆ ಸುಮ್ಮನೆ ಕುಳಿತಿವೆ. ಆಕಾಶದಲ್ಲಿ ಕಾಣಿಸಿಕೊಳ್ಳುವ ತುಂಡು ಮೋಡವೂ ತೂಕಡಿಸುತ್ತಿದೆ. ಹೀಗೆ ಸುತ್ತಲಿನ ಪ್ರಕೃತಿ ಬೇಸಿಗೆಯ ಬಿರುಬಿಸಿಲಿಗೆ ಜಡವಾದಂತೆ ಕವಿಗೆ ಅನ್ನಿಸುತ್ತದೆ. ಆದರೆ ಜೋಗ ಜಲಪಾತ ಮಾತ್ರ ಭೋರ್ಗರೆ

ಯುತ್ತ ಹಾಡಿದೆ. ತಳದೊಳಗಿನ ನೂರಾರು ಕಲ್ಲುಬಂಡೆಗಳು ತುಂತುರ ಹನಿಗಳು ಜಲಪಾತದ ಚೈತನ್ಯದಾಟದ ಜಡಪ್ರೇಕ್ಷಕರಾಗಿವೆ. ಸುತ್ತಮುತ್ತಲಿನ ಪರಿಸರ ಜಡವಾಗಿದ್ದರೂ ನಮ್ಮಲ್ಲಿ ಅದಮ್ಯ ಆಕಾಂಕ್ಷೆ ಇದ್ದರೆ. ಸಾಮರ್ಥ್ಯವಿದ್ದರೆ. ಎಂತಹ ಕಠಿಣ ಪ್ರಸಂಗವಿರಲಿ, ಅವನ್ನೆಲ್ಲ ಮೀರಿ ಚೈತನ್ಯಶೀಲರಾಗಿರಲು ಸಾಧ್ಯ ಎಂಬುದನ್ನು ಜಲಪಾತ ನಡುಹಗಲಿನ ಉರಿಬಿಸಿಲಿನಲ್ಲಿ ಕವಿಗೆ ತೋರಿಸಿಕೊಡುತ್ತದೆ.

ಜೋಗವನ್ನು ಕುರಿತಿರುವ ಮೂಗೂರು ಮಲ್ಲಪ್ಪನವರ 'ಜೋಗದ ಜೋಕು' ಲಾವಣಿ ತುಂಬ ಜನಪ್ರಿಯವಾದುದು[11]

ಮಾನವನಾಗಿ ಹುಟ್ಟಿದ ಮ್ಯಾಲೆ ಏನೇನ್ ಕಂಡಿ
ಸಾಯೋತನಕ ಸಂಸಾರದೊಳಗ ಗಂಡಾಗುಂಡಿ

ಎಂದು ತಾತ್ವಿಕವಾಗಿ ಪ್ರಾರಂಭಿಸುತ್ತಲೇ 'ಇರೋದರೊಳಗೆ ನೋಡು ಒಮ್ಮೆ ಜೋಗಾಗುಂಡಿ' ಎಂಬ ಸಲಹೆಯೂ ಇದೆ. ಈ ಲಾವಣಿ ಜೋಗವನ್ನು ಕೇಂದ್ರವಾಗಿಟ್ಟುಕೊಂಡು ಜೋಗದ ಪರಿಸರ–ಸೌಲಭ್ಯಗಳೆಲ್ಲವನ್ನೂ ಪರಿಚಯಿಸುತ್ತದೆ. ಇದನ್ನು ಒಂದು ರೀತಿಯ ಪ್ರವಾಸ ಕಥನವೆನ್ನಬಹುದು. ಸುತ್ತಮುತ್ತಲಿನ ದಟ್ಟವಾದ ಕಾಡಿನ ಚೆಲುವು, 'ಭೂಮಿತಾಯಿ ಮುಡಿದು ನಿಂತಾಳೆ ಬಾಸಿಂಗ ಜೋಡು' ಎನ್ನುವಂತಿದೆ. ಪಶ್ಚಿಮ ಘಟ್ಟದ ದಾರಿಗಳು,

'ಅಂಕುಡೊಂಕು ವಂಕಿಮುರಿ ರಸ್ತೆದಾರಿ
ಹತ್ತಿ ಇಳಿದು ಸುತ್ತಿದ್ಹಂಗೆ ಹಾವಿನಮರಿ

ಯಂತೆ ಕಂಡಿವೆ. ಈ ಕವನ ಬರೆಯುವ ಕಾಲಕ್ಕೆ ಶರಾವತಿಗೆ 'ಸೀತೆಕಟ್ಟು' ಕಟ್ಟುತ್ತಿದ್ದರೆಂದು ಕಾಣುತ್ತದೆ. ಜನ ಬಹಳ ಕಷ್ಟಪಟ್ಟು ದುಡಿಯುತ್ತಿದ್ದರೆನ್ನುತ್ತಾನೆ. ಹೊಳೆಯ ಅಕ್ಕ ಪಕ್ಕದಲ್ಲಿ ಒಳ್ಳೆಯ ಪಿಕ್‌ನಿಕ್ ಸ್ಥಳಗಳಿರುವುದನ್ನೂ ಕವಿ ಗುರುತಿಸಿದ್ದಾನೆ.

ಬುತ್ತಿ ಉಣ್ಣುತಿದ್ದರುಣ್ಣು ಇಲ್ಲಿ ಸೊಂಪಾಗಿದೆ
ಸೊಂಪು ಇಂಪು ಸೇರಿ ಮನಸು ಕಂಪಾಗ್ತದೆ
ಕಂಪಿನಿಂದ ಜೀವನಕ್ಕೊಂದು ತಂಪಾಗ್ತದೆ
ತಂಪಿನೊಳಗೆ ಮತ್ತೊಂದೇನೋ ಕಾಣಿಸ್ತದೆ.

ಎಂಬ ಮಾತುಗಳಲ್ಲಿ ಶರಾವತಿಯಲ್ಲಿ ಅಂತಹ ದರ್ಶನಾನುಭವ ಸಾಮರ್ಥ್ಯವಿರುವುದನ್ನು ಕಂಡುಕೊಳ್ಳಲಾಗಿದೆ. ಜೊತೆಗೆ ಅದಕ್ಕಿರುವ ಇನ್ನೊಂದು ಸಾಮರ್ಥ್ಯ ವಿದ್ಯುತ್ತಿನದು.

ನೀರಕೆಡವಿ ರಾಟೆ ತಿರುವಿ ಮಿಂಚಿನಶಕ್ತಿ
ನಾಡಿಗೆಲ್ಲ ಕೊಡ್ತಾರಂತೆ ದೀಪದತಂತಿ

ನೀರಿನಿಂದ ವಿದ್ಯುತ್ತಿನ ಉತ್ಪಾದನೆಯನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸಲು ಸಾಧ್ಯವೆಂದು ತಿಳಿದಾಗ ಹೆಮ್ಮೆ, ಆಶ್ಚರ್ಯಗಳೆರಡೂ ಉಂಟಾಗುತ್ತವೆ.

ಬುತ್ತಿಊಟದಿಂದ ಗೆಳೆಯನ ಹೊಟ್ಟೆತುಂಬಿಸಿಕೊಂಡು ಪಬದಬೆಯ ಹತ್ತಿರ ಕರೆದುಕೊಂಡು ಹೋಗುವಲ್ಲಿ ವಾಸ್ತವಿಕತೆಯೊಂದಿಗೆ ತಾತ್ವಿಕ ಅಂಶವೂ ಸೇರಿಕೊಂಡಿದೆ. ಸೌಂದರ್ಯ, ಕಲಾಪ್ರಜ್ಞೆ ಮುಂತಾದವುಗಳ ಪ್ರಸ್ತಾಪ ಹೊಟ್ಟೆತುಂಬಿದ ಮೇಲಿನದು. ಅಂದರೆ ಮಾನವನ ಮೂಲಭೂತ ಆವಶ್ಯಕತೆಗಳು ತೀರಿದ ನಂತರ, ಅವನ ಮನಸು ಸೌಂದರ್ಯದ ಕಡೆಗೆ ಹರಿಯಬಲ್ಲುದು. ಜೋಗದ ಗುಂಡಿಯನ್ನು ತೋರಿಸಿ,

ನೋಡುಗೆಳೆಯ ಜೋಕೆ ಮಾತ್ರ ಪಾತಾಳಗುಂಡಿ
ಹಿಂದಕೆ ಸರಿದು ನಿಲ್ಲು ತುಸು ಕೈ ತಪ್ಪಿಗೊಂಡಿ

ಎಂದು ಎಚ್ಚರಿಕೆ ನೀಡುತ್ತಾನೆ. ತ್ರೇತಾಯುಗದಲ್ಲಿ ರಾಮ ಇಲ್ಲಿಗೆ ಬಂದಿದ್ದನಂತೆ, ಮೈಸೂರಿನ ಅರಸರು, ಕೆಳದಿಯ ಶಿವಪ್ಪ ನಾಯಕ ಇವರೆಲ್ಲ ಬಂದಿದ್ದ ವಿಚಾರ ಲಾವಣಿಯಲ್ಲಿದೆ. ಶರಾವತಿ, ಜೋಗದಲ್ಲಿ ರಾಜಾ, ರೋರರ್, ರಾಕೆಟ್ ಲೇಡಿ ಎಂದು ನಾಲ್ಕು ಮುಖಗಳಾಗಿ ಕಾಣಿಸಿಕೊಳ್ಳುತ್ತಾಳೆ. ಕವಿ ಇದನ್ನು ನಮ್ಮಲ್ಲಿ ಹುಟ್ಟಿಕೊಂಡ ಮತಗಳಿಗೆ ಹೋಲಿಸುತ್ತಾನೆ.

ಒಂದು ಎರಡು ಮೂರು ನಾಲ್ಕು ಆದಾವ ಮತ
ಹಿಂದಿನಿಂದ ಹರಿದು ಬಂದದ್ದೊಂದೇ ಮತ
ಗುಂಡಿಬಿದ್ದು ಹಾಳಾಗಲಿಕ್ಕೆ ಸಾವಿರಮತ
ಮುಂದೆ ಹೋಗಿ ಸೇರುವಲ್ಲಿಗೊಂದೇ ಮತ

ಎಷ್ಟು ನೇರವಾಗಿ ಹಾಗೂ ಸರಳವಾದ ಭಾಷೆಯಲ್ಲಿ ಕವಿ ಗೂಢವಾದ ತತ್ವವನ್ನು ಜಲಪಾತ ತಿಳಿಸಿಕೊಡುತ್ತದೆನ್ನುತ್ತಾನೆ! ತನ್ನ ತ್ಯಾಗದಿಂದ ಇತರರು ಸುಖಪಡಲಿ ಎಂಬುದು ಶರಾವತಿ ತಾಯಿಯ ಹಾರೈಕೆ. 'ನಮ್ಮದೆಂದ್ರೆ ಹೆಮ್ಮೆ ಅಲ್ವೆ ಜೋಗಾಗುಂಡಿ' ಎಂದು ಉಬ್ಬಿ ಹೇಳುವ ಕವಿ,

ಷಹಜಾನ ತಾಜಮಹಲು ಕೋಹಿನೂರಮಣಿ
ಸಾವಿರಿದ್ರು ಸಲ್ಲವಿದಕೆ ಚೆಲುವಿನಕಣಿ

ಎಂದು ಕೊಂಡಾಡುತ್ತಾನೆ. ಇದರ ವೈಭವವನ್ನು ಕೇಳುವ ಇತರರಿಗೆ ಅಸೂಯೆ ಹುಟ್ಟಿದರೆ ಅದಕ್ಕೆ ಯಾರು ಹೊಣೆ? ಈ ಕನ್ನಡ ನಾಡಿನ 'ಭಾಗೀರಥಿ'ಯನ್ನು ಜಲಪಾತ ರೂಪದಲ್ಲಿ ನೋಡುವುದಕ್ಕೆ ಪುಣ್ಯ ಮಾಡಿರಬೇಕು. ಎಂಬ ಭಾವನೆ ಕವಿಯದು.

ಹೀಗೆ ಈ ಲಾವಣಿ ಜಲಪಾತದ ಹಿರಿಮೆಯನ್ನು ಸಾಮಾನ್ಯರ ಭಾಷೆಯಲ್ಲಿ ಹಿಡಿದಿಡುತ್ತ ಇಂದಿಗೂ ಜನಪ್ರಿಯವೆನ್ನಿಸಿಕೊಂಡಿದೆ. ಕನ್ನಡಿಗರ ವಾಸ್ತವ ಮತ್ತು ಸೌಂದರ್ಯ ಪ್ರಜ್ಞೆಗಳನ್ನೂ ಆಧ್ಯಾತ್ಮಿಕತೆಯನ್ನೂ ಮೈಗೂಡಿಸಿಕೊಂಡು ವ್ಯಕ್ತಪಡಿಸಿರುವುದು ಇದರ ಮುಖ್ಯ ವೈಶಿಷ್ಟ್ಯವಾಗಿದೆ.

ಅಕ್ಬರ ಅಲಿಯವರು ಶರಾವತಿ. 'ಜೋಗ' ದಲ್ಲಿ ಒಂದೆಡೆ ರಾಜಠೀವಿಯಲ್ಲಿ, 'ಬಾಣ'ದ ಭರದಲ್ಲಿ, ಮತ್ತೊಂದೆಡೆ 'ರಾಣಿ'ಯ ನಯದಲ್ಲಿ, ಮಗದೊಂದೆಡೆ 'ಅಬ್ಬರ' ಗೊಳಿಸುತ್ತ ರಸರುಚಿರಗಳನ್ನು ಸೂಸುತ್ತ ಕುಣಿಯುತ್ತಿರುವುದನ್ನು ಕಂಡಿದ್ದಾರೆ.[೧೩] ಜಲ ಪ್ರವಾಹ ಅವರಿಗೆ ದೇವಕರುಣೆಯೇ ಉಕ್ಕಿ ಕೆಳಕ್ಕೆ ಹರಿದ ಹಾಗೆ ಭಾಸವಾಗಿದೆ. ಅದರ ಮೋಹಕ ಸೌಂದರ್ಯ ಮೋಹಿನಿಯ ಅವತಾರದಂತೆನಿಸಿದೆ. ಅದರ ರಭಸ, ಭಾವ ಮಿಂಚುಹೊಳೆದ ಹಾಗೆ ತೀಕ್ಷ್ಣವೆನ್ನಿಸಿದೆ ಜಲಪಾತದ ಸೌಂದರ್ಯದ ಎದುರು ಕವಿ ಹೃದಯವೂ ಕುಣಿದು ನರ್ತಿಸಿದೆ. ಸೋಗೆನವಿಲು ಆಡಿದಂತೆ, ಮಳೆಯಬಿಲ್ಲು ಮೂಡಿದಂತೆ, ಮಾಯೆ ಮಾಟಮಾಡಿದಂತೆ ಅದರ ಕುಣಿತ ಮೋಹಕ ಮತ್ತು ವಿಸ್ಮಯಕಾರಿ. ಕಾಮಧೇನುವಿನ ಕೆಚ್ಚಲಿನಿಂದ ಹಾಲುಕ್ಕಿ ಬರುವಂತೆ ನಾಲ್ಕುಧಾರೆಗಳಾಗಿ ಸತತವಾಗಿ, ಸುಂದರವಾಗಿ, ಉಕ್ಕಿ ಬಂದು ಸುರಿಯುತ್ತಿದ್ದಾಳೆ. ಇಂತಹ ಚೆಲುವು ಅನನ್ಯವಾದುದೆಂದೇ ಕವಿಯ ಭಾವನೆ. ವಿಶ್ವಮಾನ್ಯ ಈ ಅದ್ಭುತ ದೃಶ್ಯವನ್ನು ಬಾಳಿನಲ್ಲಿ ಕಂಡವನೇ ಕೃತಾರ್ಥನೆಂಬ ಅನ್ನಿಸಿಕೆ.

ಎಸ್. ಜಿ. ಬಾಲುರಾಜುರವರು ಶರಾವತಿಯ 'ಜೋಗ ಜಲಪಾತ' ದಲ್ಲಿ ಸ್ವರಾವತಿಯ ಸಹನೆಯ ಕೊನೆಯ ರೌದ್ರಭೇರಿಯನ್ನು ಕೇಳಿದ್ದಾರೆ.[೧೪] ಶರಾವತಿಯ ಆ ಘೀಳು ಧ್ವನಿ ಅವರಿಗೆ ಭೈರವೀಶರಾಗದಂತೆ ಕಂಡಿದೆ, ಅವರ ಕವನದ ಧಾಟಿ ಜೋಗ ಜಲಪಾತದ ಕುಣಿತ, ಮೊರೆತಗಳನ್ನೆಲ್ಲ ಅನುಕರಿಸಿದೆ.

ಗೆಳೆಯ ಬನ್ನಿ ನೋಡ ಬನ್ನಿ
ಜೋ ऽ ऽ ೯ ऽ ऽ ಗದ ಜಲವಾ
ನಿರತಧಾರೆ ರಭಸ ನೀರೆ
ದೋ ऽ ೯ ऽ ऽ ಗದ ಸರವಾ

ಎಂದು ಮೊದಲು ಆಮಂತ್ರಿಸುತ್ತಾರೆ. ರುದ್ರರಮ್ಯತೆಯಿಂದ ಕೂಡಿದ ಅದರ ಭೋರ್ಗರೆತ, ಘೀಂಕಾರ ಕವಿಯನ್ನು ನಡುಗಿಸಿದೆ. ಶಬ್ದ–ಲಯಗಳ ಮೂಲಕವೇ ಭಾವಾಭಿನಯ ನಡೆದಿದೆ.

ಧುಮುಕಿ ಧುಮುಕಿ ಹೊಮ್ಮಿಸುರಿವ
ತಡಸಲ ವೈಖರಿ !
ತುಳುಕಿ ತುಳುಕಿ ಮುಮ್ಮಿ ಮೊರೆವ
ದಬ ದಬೆ ಠೇಂಕರಿ.

ಹರೆಯುದ ಉಕ್ಕು-ಸೊಕ್ಕುಗಳನ್ನು ಕವಿ ಜಲಪಾತದಲ್ಲಿಯೂ ಕಾಣುತ್ತಾನೆ. ಅದು ಧಾರೆ-ಧಾರೆಯಾಗಿ ಉಕ್ಕಿ ಹರಿಯುತ್ತಿದೆ; ಥಾಳ-ಥಾಳವಾಗಿ ಸೊಕ್ಕಿ ಮೊರೆಯುತ್ತಿದೆ. ಕೊನೆಯ ಪದ್ಯದಲ್ಲಿ ಕವಿ, ಜೋಗದ ರುದ್ರಗಾನವನ್ನು ಶಬ್ದರೂಪದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದಂತಿದೆ.

ಶರಾವತಿಯ ಘೀಳುಧ್ವನಿಯ
ಭೈರವೀಶ ರಾ ಽ ಎ ಽ ಽ ಗಾ ಽ ಎ ಽ ಽ
ಸ್ವರಾವತಿಯ ಸಹನೆಕೊನೆಯ
ರೌದ್ರಭೇರಿ ಜೊ ಽ ೯ ಽ ಽ ಗಾ ಽ ಎ ಽ ಽ !

ಹೀಗೆ ಈ ಕವನದ ಪ್ರಯೋಗ ವೈಖರಿ ವಿಶಿಷ್ಟವೆನ್ನಿಸುವಂತಹುದು.

ಈ ಮೇಲೆ ವರ್ಣಿಸಿರುವ ಜೋಗ ಜಲಪಾತವನ್ನು ಕುರಿತ ಕವನಗಳನ್ನು ಗಮನಿಸಿದರೆ, ಆ ಕವಿಗಳೆಲ್ಲ ರಮ್ಯಸಂಪ್ರದಾಯಕ್ಕೆ ಸೇರಿದವರಂತೆ ತೋರಿಬರುತ್ತಾರೆ. ಭಾವಾವೇಶ, ಪರಂಪರಾಗತ ನಿಸರ್ಗ ವರ್ಣನೆ, ತಾತ್ವಿಕ ದೃಷ್ಟಿ, ಆದರ್ಶ, ಆಧ್ಯಾತ್ಮಿಕತೆ ಮುಂತಾದವು ಅವುಗಳಲ್ಲಿ ಕಂಡುಬರುವ ಮುಖ್ಯ ಅಂಶಗಳು. ಕಲ್ಪನಾ ವಿಲಾಸ ಮಾತ್ರ ಕವಿಯಿಂದ ಕವಿಗೆ ಭಿನ್ನವಾಗಿ ಜಲಪಾತದಂತೆ ಅದ್ಭುತ ಲಾಸ್ಯವನ್ನಾಡಿದೆ. ಜೋಗವನ್ನು ಕುರಿತು ಇನ್ನೂ ಕೆಲವು ಕವನಗಳು ರಚಿತವಾಗಿದ್ದು ಅವು ಮೇಲಿನವುಗಳಿಗಿಂತ ತುಸು ಭಿನ್ನವೆನ್ನಿಸುತ್ತವೆ. ಅವುಗಳಲ್ಲಿ ಕೆಲವನ್ನೀಗ ಅವಲೋಕಿಸಬಹುದು.

ಸು. ರಂ. ಎಕ್ಕುಂಡಿಯವರ 'ಜೋಗದ ಜಲಪಾತ' ದಲ್ಲಿ ಉಳಿದ ಕವನಗಳಿಗಿಂತ ಭಿನ್ನಧ್ವನಿಯನ್ನು ಗೋಕಾಕರು ಗುರುತಿಸಿದ್ದಾರೆ.[೧೪] 'ನವ್ಯಧ್ವನಿ' ಸಂಗ್ರಹದ ಮುನ್ನುಡಿಯಲ್ಲಿ ಅವರು ಈ ಕವನವನ್ನು ಕುರಿತು, 'ಶರಾವತಿ ಅಧಃಪತನದಲ್ಲಿ ಮೇನಕೆಯಂತೆ ತೋರುತ್ತಾಳೆ. ಆದರೆ ಈ ಅಧಃಪತನದಲ್ಲಿಯೇ ವಿದ್ಯುತ್ತಿನ ಉಗಮವಿದೆ. ಪರಂಪರೆಯ ಒಂದು ಪ್ರತೀಕವನ್ನು ಇಲ್ಲಿ ನವ್ಯವಾಗಿ ಉಪಯೋಗಿಸಲಾಗಿದೆ. ಎಂದಿದ್ದಾರೆ. ಕಾರ್ಯ-ಕಾರಣ ಸಂಬಂಧದಂತೆ ಶರಾವತಿಯ ಹುಟ್ಟಿನಲ್ಲಿಯೂ ಒಂದು ಉದ್ದೇಶ ಇದೆ ಎಂದು ಭಾವಿಸುವ ಕವಿ, ನೆಲದ ಹಾರೈಕೆ, ಮೇಘದ ಆಸೆ, ನೆಲಕದವ ತಟ್ಟಿ, ಊಟೆಯಾಗಿ ಹೊರ ಬಂತು ಎನ್ನುತ್ತಾರೆ. ಅದೇ ಮುಂದೆ ನದಿಯಾಗಿ ಹರಿದು ಸುತ್ತ-ಮುತ್ತಲ ಪ್ರಕೃತಿಯನ್ನು ಜೀವಿಗಳನ್ನು ಜಲಚರಗಳನ್ನು ಪೋಷಿಸುತ್ತ, ಉಪಕಾರಿಯಾಗುತ್ತ ಸಾಗಿ ಬಂತು. ಆದರೆ ಅದರ ಸಾರ್ಥಕತೆಗೆ ಇನ್ನೂ ಹೆಚ್ಚಿನ ತ್ಯಾಗದ ಅವಶ್ಯಕತೆ ಇತ್ತು. 'ಚಿರತೆಯೊಡಲ ಬೆಂಕಿಗಾಗಿ ಚಿಗರಿಮರಿಗಟ್ಟದಲ್ಲಿ ಧುಮುಕಿದಳು ಶರಾವತಿ' ಎಂದು ಕವಿ ಹೇಳುವಾಗ, 'ಒಂದರ ಅಳಿವು ಇನ್ನೊಂದರ ಉಳಿವು' ಎಂಬ ಅಭಿಪ್ರಾಯವಿದೆ. ಈ ಮಾತನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು ಕವಿ, ಶರಾವತಿಯನ್ನು ಮೇನಕೆಗೆ ಹೋಲಿಸುತ್ತಾರೆ. ಮೇನಕೆ ಜಾರಿದರೂ ಕೌಶಿಕನನ್ನು ಎಚ್ಚರ ಗೊಳಿಸುವಲ್ಲಿ, ತನ್ನ ಗುರಿಯನ್ನು ಸಾಧಿಸುವಲ್ಲಿ, ಸಫಲಳಾಗುತ್ತಾಳೆ.

ಬೀದಿಯು ಬದಿಗಿರುವ ಕಂಬ ನರಳಿತಿವಳಧಾವತಿ
ಅಧಃ ಪತನದಲ್ಲಿ ಕೂಡ ಬೆಳಗಬಹುದು ಜೀವನ
ನದಿಯು ಗರ್ಭದಲ್ಲಿ ಕೂಡ ಸುಡುವಗ್ನಿ ಪಾವನ

ಕವಿಯು ದೃಷ್ಟಿಯಲ್ಲಿ ಶರಾವತಿ ಪತಿತಪಾವನೆ. ಪಾವನವಾದ ಅಗ್ನಿಯನ್ನು ತನ್ನ ಉದರದಲ್ಲಿಟ್ಟುಕೊಂಡವಳು. ತನ್ನ ಪತನವಾದರೂ ಇತರರ ಬಾಳನ್ನು ಬೆಳಗಲು ಸಹಾಯಕವಾದವಳು. ಎಕ್ಕುಂಡಿಯವರ ಈ ಕವನ, ಮೇಲಿನ ಕವಿಗಳ ಕವನಕ್ಕಿಂತ ಭಿನ್ನವೆನ್ನಿಸುವುದು ಮುಖ್ಯವಾಗಿ ಅದರ ಬಾಹ್ಯ ರೂಪದಲ್ಲಿ, ಕವನ ತಂತ್ರ-ಭಾಷೆಗಳಲ್ಲಿ. ಕಾವ್ಯ ಧೋರಣೆಯಲ್ಲಿಯೂ ಕೆಲವಮಟ್ಟಿನ ಬದಲಾವಣೆ ಇದೆ. ರಮ್ಯ ಸಂಪ್ರದಾಯದ ಕೆಲವು ಅಂಶಗಳು ಇವರ ಕವನಗಳಲ್ಲಿ ಮುಂದುವರೆದು ಬಂದಿದ್ದರೂ ಅವು ಸಾಧಿಸುವ ಗುರಿಯೇ ಬೇರೆಯಾಗಿದೆ. ಡಿ.ವಿ.ಜಿ., ಕುವೆಂಪು ಕವನಗಳಲ್ಲಿ ವರ್ಣಿತವಾದ ಶರಾವತಿಯ ಸುತ್ತುಮುತ್ತಲಿನ ನಿಸರ್ಗ, ಎಕ್ಕುಂಡಿಯವರ ಕವನದಲ್ಲಿಯೂ ವರ್ಣಿತವಾಗಿದೆ. ಆದರೆ ಅವರ ಉದ್ದೇಶವೇ ಬೇರೆ, ಈ ಕವಿಯ ಉದ್ದೇಶವೇ ಬೇರೆ. ಅಲ್ಲಿ ಸೌಂದರ್ಯ ಪ್ರಜ್ಞೆ, ನಿಸರ್ಗಪ್ರೇಮ ಮುಖ್ಯವಾಗಿ ಕಂಡುಬಂದರೆ, ಇಲ್ಲಿ ಶರಾವತಿಯ ಹುಟ್ಟು ಮತ್ತು ಅದರ ಜೀವನ ಸಾರ್ಥಕ್ಯದ ಒಳನೋಟಗಳಿವೆ. ಈ ಕವನದಲ್ಲಿ ಬಳಕೆಯಾದ ಚಿರತೆ-ಚಿಗರೆಗಳ ಪ್ರತಿಮೆಯಾಗಲೀ ಮೇನಕೆಯ ಪ್ರತಿಮೆಯಾಗಲೀ ಕವನದ ಒಡಲಿನಲ್ಲಿ ಹಾಸುಹೊಕ್ಕಾಗಿ ಬಂದಿಲ್ಲ. ಆದರೂ ಕವನದ ಒಟ್ಟೂ ಅರ್ಥಕ್ಕೆ ಪೋಷಕವಾಗಿ ಬರುವುದರಿಂದ ಖಂಡಪ್ರತಿಮೆಗಳಿಂದಲೇ ಅಖಂಡವಾದ ಒಂದು ಅರ್ಥವನ್ನು ಗ್ರಹಿಸಬೇಕಾಗುತ್ತದೆ.

ಜಿ. ಪಿ. ರಾಜರತ್ನಂರವರ 'ರತ್ನನ ಪದಗಳು' ಕನ್ನಡಕ್ಕೆ ಅನನ್ಯವಾದ ಕೊಡುಗೆ. ಭಾಷಾ ಬಳಕೆಯಲ್ಲಲ್ಲದೇ ವಸ್ತುವಿನ ದೃಷ್ಟಿಯಿಂದಲೂ ಅವು ವೈಶಿಷ್ಟ್ಯ ಪೂರ್ಣವೆನ್ನಿಸುತ್ತವೆ. ಅಂತೆಯೇ ನವೋದಯ ಸಂಪ್ರದಾಯದ ಕವಿಗಳಂತಿಲ್ಲದೇ 'ಜೋಗಿನ ಜಲಪಾತ' ಅವರಿಗೆ ತೋರಿಸಿದ್ದು ಬೇರೆ ರೀತಿಯ ದರ್ಶನವನ್ನು. "ಜಲಪಾತವನ್ನು ನೋಡಿದಾಕ್ಷಣ ಕವಿಗೆ ತಟ್ಟನೆ, ಬಡವನ ಬದುಕು ಎದ್ದುಬಂದಂತೆ ಕಾಣಿಸುತ್ತದೆ. ಜೊತೆಗೆ ನಷ್ಟಕ್ಕೆ ಸಿಕ್ಕು ನರಳುವವರಿಗೇ ಮಾತ್ರ ಮೇಲಿಂದ ಮೇಲೆ ಕಷ್ಟಗಳು ಬಂದುರುಳುತ್ತವೆ. ಜೋಗತಡಸಲಿನ ನಾಲ್ಕು ಸೀಳುಗಳಲ್ಲಿ ಒಂದಾದ ರಾಜ, ಕವಿಗೆ ದರ್ಪದ ರಾಜನಾಗಿ, ಶೋಷಕ ಪ್ರತಿನಿಧಿಯಾಗಿ ಕಾಣಿಸಿಕೊಂಡಿದ್ದಾನೆ. 'ಒದ್ಕೊಂಡ್ ಬಂದಿ ಬಡದ್ ಇಕ್ಕೋದ್ನ ಮಾಡ್ತೈತೆ ರಾಜಸ್ಪಷ್ಟ' ರೋರರ್‌ನ ಗಡಚಿಕ್ಕುವ ಸದ್ದು, 'ದುಡ್ಉಳ್ಳೋರು ದುಂಡ್ ಇಲ್ಲೋರ್ನ ಗದರಿಸ್ ಓಡ್ಸೋಅಂಗೆ' ನೆನಪು ತರುತ್ತದೆ. ವೇಗದಲ್ಲಿ ಕೆಳಗುರುಳಿ ಬರುವ ರಾಕೆಟ್, 'ಬಡವ್ನ ಮುಕ್ಕೊ ಸಾವಿರಸಂಕ್ಟ ಜಾಗಾಸಾಲ್ದೆ ಒಳಗೆ ಉರ್ ಬರೋವಂಗ್ ಎದ್ ಬತ್ತೈತೆ ರಾಕೀಟ್ ಉಳ್ಳಿ ಕೆಳಗೆ'. ಕೊನೆಯದಾಗಿ ಶ್ರೀಮಂತಿಕೆಯ ಪ್ರತೀಕದ ರಾಣಿ, ಕವಿಯ ಕಣ್ಣಿಗೆ ಸುಂದರವಾಗಿ ಕಾಣುತ್ತಿದ್ದರೂ ಆ ಸೌಂದರ್ಯ, ನಯ-ನಾಜೂಕುಗಳ ಹಿಂದೆ ಮತ್ತೇನೋ ಅಡಗಿದೆ ಎಂಬ ಅನ್ನಿಸಿಕೆ.

ಜಾರ್‍ತಲೇಡಿ ತೇಲ್ತ ಬಂದ್ರ
ಮೈ ಝುಂ ಝುಂ ಅಂತೈತೆ !
ಬಡವನ್ ತಿನ್ನೊ ಸಿರಿವಂತವ್ಕ
ಬಳಕ್ತ ಬಂದಂಗ್ ಐತೆ !

ಸೂರ್ಯಪ್ರಕಾಶ ಹಾಗೂ ತುಂತುರು ಹನಿಗಳಿಂದ ಜಲಪಾತದ ಮೇಲೆ ಕಾಣಿಸಿಕೊಳ್ಳುವ ಹಲವಾರು ಕಾಮನ ಬಿಲ್ಲುಗಳು ಕವಿಗೆ,

ಬಡವನ ಬಾಯ್ಗೆ ಬೀಗಾನ್ ಇಕ್ಕ
ಬಣ್ಣ ಮೇಲೆ ಬಳ್ಪಂಗೆ ತೋರುತ್ತವೆ.

ಈ ರೀತಿ ಹೆಜ್ಜೆ-ಹೆಜ್ಜೆಗೆ ಬಡವನ ಶೋಷಣೆಯಾಗುತ್ತಿದ್ದರೂ ಸುತ್ತಮುತ್ತಲಿನವರು ತಣ್ಣಗೇ ನೋಡುತ್ತಿರುತ್ತಾರೆ. ಅವರ ನಿಷ್ಕ್ರಿಯತೆ ಕವಿಯಲ್ಲಿ ಅಸಹನೆಯನ್ನುಂಟು ಮಾಡುತ್ತದೆ.

ಬಡವನ ಬದುಕು ಎದ್ದು ಬಂದಂಗೆ
ಜೋಗ ಕಾಣ್ತದ್ರ ಕಣ್ಗೆ
ಸುತ್ತಿನ ಕಾಡೂ ಕಾಮನ ಬಿಲ್ಲೂ
ನೆಗತಿರ್‍ತಾವೆ ತಣ್ಗೆ

ಪ್ರತಿಯೊಬ್ಬರೂ ತಮ್ಮ ತಮ್ಮ ಸುಖದ ಚಿಂತೆ ಮಾಡುತ್ತಾರೆಯೇ ಹೊರತು, ಬಡವರ ಕಷ್ಟದ ಬಗ್ಗೆ ಕಾಳಜಿ ಇಲ್ಲ. ಭೋಗ ಅನುಭವಿಸುತ್ತಿರುವವರು ಸುಖಿಸುತ್ತಲೇ ಇರುವುದು. ಅವರ ಭೋಗಕ್ಕಾಗಿ ಬಡವರು ಕಷ್ಟಪಡುತ್ತಲೇ ಇರುವುದು-ತಪ್ಪುವ ದೆಂದಿಗೆ ? ಎಂಬ ಮೂಲಭೂತ ಸಮಸ್ಯೆಯನ್ನು ಕವಿ ನಮ್ಮ ಮುಂದಿಡುತ್ತಾರೆ. ಈ ದೃಷ್ಟಿಯಿಂದ ಆವೇಶ--ರೋಷಗಳು ಇಲ್ಲದೇ ಪರಿಣಾಮಕಾರಿಯಾದ ರೀತಿಯಲ್ಲಿ ನವುರಾದ ವ್ಯಂಗ್ಯ-ವಿಡಂಬನೆಗಳೊಂದಿಗೆ ಬಡವನ ಶೋಷಣೆಯ ಚಿತ್ರ ನೀಡಿರುವಲ್ಲಿ ಕವಿಯ ವೈಶಿಷ್ಟ್ಯ ಅಡಗಿದೆ. ೧೯೩೪ರಷ್ಟು ಹಿಂದೆಯೇ ರಾಜರತ್ನಂ ಈ ಕವನವನ್ನು ಬರೆದಿದ್ದಾರೆನ್ನುವುದೂ ಅಷ್ಟೇ ಮುಖ್ಯವಾದ ಸಂಗತಿ.

ರಾಜರತ್ನಂರವರಿಗಿಂತ ತುಸು ಭಿನ್ನರೀತಿಯ ರಚನೆ, ಪಿ. ಜಿ. ಭಟ್ಟರ 'ದಬದಬೆ'ಯದು[೧೩], 'ಅವರ ಕವನಗಳಲ್ಲಿ ಭಾವಾವೇಶ ಇರುತ್ತದಾದರೂ ವಿಡಂಬನೆ, ಚಾತುರ್ಯ ಮುಂತಾದವೂ ಅಲ್ಲಲ್ಲಿ ಗೋಚರಿಸುತ್ತವೆ. ವ್ಯಂಗದ ದೃಷ್ಟಿಯಿಂದ ಇವರು ರಾಜರತ್ನಂಗೆ ಉಳಿದವರಿಗಿಂತ ಹತ್ತಿರವಾಗುತ್ತಾರೆ. ಜಲಪಾತ ನೋಡುತ್ತಲೇ ರಾಜರತ್ನಂಗೆ ಬಡವನ ಬದುಕು ಎದುರಾದರೆ, ಪಿ. ಜಿ. ಭಟ್ಟರಿಗೆ ಅಂದಿನ ಕುರುಕ್ಷೇತ್ರ ಯುದ್ಧ ಮರಳಿ ಪ್ರಾರಂಭವಾದಂತೆನ್ನಿಸುತ್ತದೆ. ಧುಮುಧುಮು ಧುಮುಕುವ ಜಲಪಾತದ ಘರ್ಜನೆ ಅಲ್ಲಿ ಮೊಳಗಿದ ಪಾಂಚಜನ್ಯವೆನ್ನಿಸುತ್ತದೆ. ಜಲಪಾತದ ತುಂಬೆಲ್ಲ ಆಗಾಗ ಕಾಣಿಸಿಕೊಳ್ಳುವ ಕಾಮನಬಿಲ್ಲುಗಳೇ ಯುದ್ಧದಲ್ಲಿ ಬಳಸಲಾದ

ಬಿಲ್ಲುಗಳು. ನೀರಿನ ಸುಳಿಯಲ್ಲಿ ಕಾಣಿಸಿಕೊಳ್ಳುವ ಚಕ್ರವೇ ವಿಷ್ಣುಚಕ್ರ. ಕೆಳಗೆ ಬಿದ್ದ ನೀರು ಆವಿಯಾಗಿ ಮತ್ತೆ ಮೇಲೇರಿ ಧೂಮವನ್ನೆಬ್ಬಿಸಿದರೆ ಅದು ಅರಿಗಣಕ್ಕೆರಗಿದ ಧೂಮಕೇತು. ನೊರೆ-ನೊರೆಯಾಗಿ ಬೀಳುತ್ತಿರುವ ನೀರು ಕೊಳ್ಳದ ಬುರುಡೆಗೆ ಸುರಿದ ಕಳ್ಳು........ ಹೀಗೆ ಜಲಪಾತವನ್ನು ನೋಡುತ್ತಲೇ ಇದ್ದರೆ ಯುದ್ಧದ ನೂರಾರು ವಿವರಗಳು ದಕ್ಕುತ್ತವೆ. 'ನಾಕವೆ ನಿಲುಕಿದೆ ಜೀವಸಿಗೆ' ಎಂದಾಗ ಇಂಥಲ್ಲಿ ದ್ವಂದ್ವಾರ್ಥ ಇರುವುದನ್ನು ಗಮನಿಸಬೇಕು, ಯುದ್ಧದಿಂದ ದೊರೆಯುವ ಸ್ವರ್ಗ- ವೀರನಿಗೆ. ಜಲಪಾತದರ್ಶನದಿಂದ ದೊರೆಯುವ ನಾಕದ ಆನಂದ-ಪ್ರೇಕ್ಷಕನಿಗೆ. (ಯುದ್ಧದ) ಬಿರುಗಾಳಿ ಎದ್ದರಂತೂ ಜಲಪಾತ (ಕತ್ತಿಗಳ) ಒರೆಬಿಚ್ಚುತ್ತದೆ. ನೀರಿನ ಬಾಣಗಳನ್ನು ಎಚ್ಚುತ್ತದೆ; ಅಬ್ಬರವನ್ನು ಹೆಚ್ಚು ಮಾಡುತ್ತದೆ ಎಂಬ ವರ್ಣನೆ ಅತ್ಯಂತ ವಾಸ್ತವವೂ ಅಷ್ಟೇ ಕಲ್ಪನಾ ಭರಿತವೂ ಆಗಿದೆ. ಆದರೆ ಈ ಸಂಗ್ರಾಮ ಏತಕ್ಕಾಗಿ ? ಕಲ್ಪನಾ ಲಹರಿಯೊಂದಿಗೆ ಚಿಂತನಾಂಶವೂ ಇಲ್ಲಿ ಸೇರಿಕೊಳ್ಳುತ್ತವೆ.

ಎಡಬಲಗಳ ಪರೆ
ರಕ್ಕೆಯ ಸಿಕ್ಕಿಸಿ
ಬರಗಾಲವ ಬೆನ್ನಟ್ಟಲಿಕೇ ?
ಇಲ್ಲವೆ ಬಡವರ
ಎಲುಬಿನ ಮುಕುಟವ
ಧರಿಸಿದ ತಲೆಗಳ ಮೆಟ್ಟಲಿಕೆ ?
ಕಾಲನ ಜೋಡಿಯೊಳೋಡಲಿಕೇ ?
ಕಾಳಿಯೊಡನೆ ಕುಣಿದಾಡಲಿಕೇ ?

ಜಿ. ಪಿ. ರಾಜರತ್ನಂ ಶೋಷಣೆಯ ವಿರುದ್ಧದ ಧ್ವನಿಯನ್ನು ಶಾಂತವಾಗಿ ಕಾಳಜಿ ಪೂರ್ವಕವಾಗಿ ಕಾವ್ಯದಲ್ಲಿ ಹಿಡಿದಿಟ್ಟಿದ್ದರೆ, ವಿ. ಜಿ. ಭಟ್ಟರು ವೀರಾವೇಶದಿಂದ ಯುದ್ಧದ ಕತ್ತಿಯನ್ನೇ ಹಿರಿದಿದ್ದಾರೆ. ಈ ಯುದ್ಧ, ಪರಿಸ್ಥಿತಿಯ ವಿರುದ್ಧದ (ಬರಗಾಲ) ಹೋರಾಟವಾಗಿರಬಹುದು, ಅಥವಾ ಶ್ರೀಮಂತರ ಅಟ್ಟಹಾಸದ ವಿರುದ್ಧವಾಗಿರಬಹುದು. ಜಲಪಾತದ ವೇಗದ ಓಟ. ಕಾಲನ ಜೋಡಿ ಸ್ಪರ್ಧೆ ಗಿಳಿದಿದ್ದರ ಪರಿಣಾಮವಾಗಿರಬಹುದು. ಅದರ ರುದ್ರ ಭಯಂಕರ ಕುಣಿದಾಟ, ಕಾಳಿಯೊಡನೆ ಹುರುಡುಕಟ್ಟಿದ್ದಾಗಿರಬಹುದು, ಒಟ್ಟಿನಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಜಗತ್ತಿನಲ್ಲಿ ಯುದ್ಧ ನಿರಂತರ ನಡೆಯುತ್ತಲೇ ಇರುತ್ತದೆ ಎಂಬ ವಿಚಾರ ವಿ. ಜಿ. ಭಟ್ಟರ 'ದಬದಬೆ'ಯಲ್ಲಿದೆ. ಕವನದ ನಡಿಗೆಯೂ ದಬದಬೆಯ ಧುಮು-ಧುಮು ಶಬ್ದವನ್ನೂ ಯುದ್ಧದ ಭಾವಾವೇಶವನ್ನೂ ಅನುಕರಿಸುತ್ತಿರುವುದು ಗಮನಾರ್ಹ.

ಬಹುಮುಖ ವ್ಯಕ್ತಿತ್ವದ ದಿನಕರ ದೇಸಾಯಿಯವರ 'ಉತ್ತರ ಕನ್ನಡ ಜಿಲ್ಲೆ' ಎಂಬ ಕವನದಲ್ಲಿ ಜೋಗ ಜಲಪಾತದ ಪ್ರಸ್ತಾಪವಿದೆ. ಸಮಾಜ ಸೇವಾ ದುರಂಧರರಾದ

ಆವರು `ಕಲೆಗಾಗಿಕಲೆ" ಎಂಬ ತತ್ವದವರಲ್ಲ. ಜಿಲ್ಲೆಯ ಬಡತನ, ಸಂಕಷ್ಟಗಳು ಅವರನ್ನು ನಿಜವಾಗಿಯೂ ಚಿಂತೆಗೀಡು ಮಾಡಿದ್ದವು. ಸೌಂದರ್ಯ–ಸಂಪತ್ತುಗಳ ಮೂಲವನ್ನು ಪಡೆದಿರುವ ತಮ್ಮ ಜಿಲ್ಲೆ. ಸರಕಾರದ, ಆಳರಸರ ಅವಜ್ಞೆಗೆ ಗುರಿಯಾಗಿದೆ ಎಂಬ ಖೇದಭಾವ ಅವರದ್ದಾಗಿತ್ತು. 'ಉತ್ತರ ಕನ್ನಡ ಜಿಲ್ಲೆ' ಕವನ ಅಂಥ ಕೊರಗಿನ ಹಿನ್ನೆಲೆಯಲ್ಲಿ ವ್ಯಂಗ್ಯದ ಧಾಟಿಯಲ್ಲಿ ರಚಿತವಾಗಿದೆ.[೧೭]

ಜೋಗ ಜಲಪಾತದ ನರ್ತನ, ನಿಜಕ್ಕೂ ನಯನ ಮನೋಹರ. ಅದರಂತೆ ಕಾರವಾರದ ಕಡಲು ತೀರದ ನೋಟ–ಸುರಲೋಕವೇ ಭೂಮಿಗಿಳಿದು ಬಂದಂಥ ಅನುಭವ. ಇವನ್ನೆಲ್ಲ ನೋಡಿ ಹಿಗ್ಗಿದ ಮುಖ್ಯಮಂತ್ರಿ,

ಹೊಡೆಸಿದನು ಜಯಭೇರಿ
ಸೌಂದರ್ಯವನೆ ತಿಂದು ಬಾಳಿರೆಂದು !

ಎಂದು ಮೂಲಾಜಿಲ್ಲದೇ ಹೇಳುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 'ಜೋಗ ಜಲಪಾತವೇ ಕುಣಿವ ಸುಗ್ಗಿ. ಎನ್ನುವ ಸಾಲಿನ ಹಿಂದೆ, ಬೆಳೆಯ ಸುಗ್ಗಿ ಇಲ್ಲದೆ ಕಂಗಾಲಾದ ಜನತೆಯನ್ನು ಕುರಿತ ಕಳಕಳಿಯು ಸುಂದರ ವ್ಯಂಗ್ಯ ರೂಪವನ್ನು ತಾಳಿದೆ. ಅವರ ಇಂಥ ವಿಡಂಬನೆಯ ಹಿಂದೆ ಬರಿಯ ಸಿಟ್ಟು ಆವೇಶ ಕಾರ್ಯಪ್ರವೃತ್ತವಾಗದೇ. ಸಮಾಜ ಆರೋಗ್ಯದ ಹಂಬಲವಿರುವುದನ್ನು ಗಮನಿಸಬಹುದು.

ಕೆ. ಚಿದಾನಂದರ, 'ಎಂಜಿನಿಯರಿಂಗ್ ಕವಿತೆ'ಗಳಲ್ಲಿ 'ಜಲಪಾತ' ವಿದ್ಯುತ್ತಿನ ಒಂದು ಸಂಕೇತವಾಗಿ ಮೂಡಿಬಂದಿದೆ.[೧೮] ವಿದ್ವತ್ತು, ವಿದ್ಯುತ್ತುಗಳ ಕುರಿತ ಚರ್ಚೆ ಆ ಕವನದ ಮುಖ್ಯ ಅಂಶ.

ನೀರಿಳಿವ ಮೇಲ್ನೆಲ ಕೀಳ್ನೆಲ
ಇವುಗಳಂತರ ಹೆಚ್ಚಿದಂತೆಲ್ಲ
ಹೆಚ್ಚೆಚ್ಚು ವಿದ್ಯುತ್ಫಲ

ಎಂಬ ಭೌತ ತತ್ವವನ್ನು ಪ್ರತಿಪಾದಿಸುತ್ತ. ತಿಳಿಯಬೇಕು ಎಂಬ ಹಂಬಲ ಮತ್ತು ತಿಳಿದಿಹೆನು ಎಂದು ಅರಿದಿಹುದು ಇವುಗಳ ಅಂತರ ಹೆಚ್ಚಿದಂತೆಲ್ಲ ಹೆಚ್ಚು ವಿದ್ವತ್ತು ದೊರೆಯುವುದು ಎಂದಿದ್ದಾರೆ. ವೈಜ್ಞಾನಿಕ ತತ್ವ ಮತ್ತು ತಾತ್ವಿಕತೆಯ ಅಂಶಗಳನ್ನು ಮೇಳವಿಸಿಕೊಳ್ಳುವ, ಒಂದು ಅರ್ಥದಲ್ಲಿ ಸಮೀಕರಿಸುವ ಪ್ರಯತ್ನ ಈ ಕವನದ್ದು. ಈ ದೃಷ್ಟಿಯಿಂದ ಹೊಸ ದೃಷ್ಟಿಕೋನವೊಂದು ಈ ಕವನದಲ್ಲಿ ಕಂಡು ಬಂದಿದೆ ಎನ್ನಬಹುದು.

ಹೀಗೆ ಜೋಗ ಜಲಪಾತವನ್ನು ಕುರಿತ ಪ್ರಮುಖ ಕವನಗಳನ್ನು ಸಮೀಕ್ಷಿಸಿದಾಗ. ಜಲಪಾತದ ರುದ್ರ ರಮಣೀಯ ಸೌಂದರ್ಯ ನವೋದಯದ ಪ್ರಮುಖ ಕವಿಗಳನ್ನು

ಆಕರ್ಷಿಸಿರುವುದು ಕಂಡುಬರುತ್ತದೆ. ಆದರೆ ಅದೇ ಜಲಪಾತ, ನವ್ಯ ಮತ್ತು ಬಂಡಾಯ ಧೋರಣೆಯ ಕವಿಗಳನ್ನು ಆ ಪ್ರಮಾಣದಲ್ಲಿ ಸೆಳೆದಿಲ್ಲ. ಕೆಲವು ಕವನಗಳಲ್ಲಿ ಆಧುನಿಕ ವಿಚಾರಧಾರೆ, ಶೋಷಣೆ ಇತ್ಯಾದಿ ಅಂಶಗಳು ಆರೋಪಿತವಾಗಿರುವವಾದರೂ ಈ ನಿಟ್ಟಿನಲ್ಲಿ ಶಕ್ತಿಶಾಲಿಯಾದ ಕವನ ಇನ್ನೂ ಸೃಷ್ಟಿಯಾದಂತಿಲ್ಲ. ಇದಕ್ಕೆ ಕಾರಣ ವಸ್ತುವಿನಲ್ಲಿರುವ ದೋಷವೇ ಅಥವಾ ಕವಿಗಳ ದಿವ್ಯ ನಿರ್ಲಕ್ಷ್ಯವೇ ತಿಳಿಯದು. ರಮ್ಯಸಂಪ್ರದಾಯದಲ್ಲಿ ಉತ್ತಮ ಕವನಗಳು ರಚಿತವಾಗಿವೆಯಾದರೂ ಅವು ಆ ಕವಿಗಳ ಅತ್ಯುತ್ತಮ ಕವನಗಳೆನ್ನುವಂತಿಲ್ಲ. ಆದುದರಿಂದ ಅದ್ಭುತ ರಮ್ಯದರ್ಶನವನ್ನೀಯುವ ಜೋಗ ಜಲಪಾತ ನೀಡುವ ಅನುಭವ ಅನಿರ್ವಚನೀಯವೆಂದು ಉದ್ಗರಿಸಿ ನಾವೂ ಸುಮ್ಮನಾಗೋಣವೇ ?

('ಪ್ರವಾಸೋದ್ಯಮ ವರ್ಷ'ದಲ್ಲಿ ನಮ್ಮ ಘನ ಸರಕಾರ ಜೋಗದ ಅಭಿವೃದ್ಧಿಗಾಗಿ ಹಾಗೂ ಪ್ರವಾಸಿಗರ ಆಕರ್ಷಣೆಗಾಗಿ 'ಜೋಗ ಅಭಿವೃದ್ಧಿ ಪ್ರಾಧಿಕಾರ, ಮುಂತಾದ ಅನೇಕ ಯೋಜನೆಗಳನ್ನು ನಿರೂಪಿಸಿರುವದಾಗಿ ತಿಳಿದುಬಂದಿದೆ. ಅವೆಲ್ಲ ಕಾರ್ಯಗತ ವಾದಾಗ 'ಜೋಗ' ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸೀತು ಮತ್ತು ಸ್ಫೂರ್ತಿಯನ್ನು ನೀಡೀತು.)

ಅಡಿಟಿಪ್ಪಣಿಗಳು :

೧ ದಕ್ಷಿಣ ಅಮೆರಿಕೆಯ ವೆನಿಜ್ವೇಲದ ಏಂಜಲ್ ಜಲಪಾತ (೩೨೧೨ ಅಡಿ) ಉನ್ನತವಾದುದು. ಆಲ್ಪ್ಸ್ ಪರ್ವತದಲ್ಲಿರುವ ಸೆರೊಸೋಲಿ (೨೪೦೦ ಅಡಿ); ಏವಾನ್ಸನ್ (೧೨೦೦ ಅಡಿ) ಮತ್ತು ಆರ್ಮೆ (೧೦೦೦ ಅಡಿ). ಇವು ಕೆಲವು ಜೋಗ ಜಲಪಾತಕ್ಕಿಂತ ಹೆಚ್ಚು ಎತ್ತರವಾದವು. ಕೆನಡ ಮತ್ತು ಅಮೇರಿಕೆಯ ಗಡಿಯಲ್ಲಿರುವ ನಯೊಗಾರಾ (೩೫೦೦ ಅಡಿ), ಆಫ್ರಿಕಾ ಖಂಡದ ಉತ್ತರ ಮತ್ತು ದಕ್ಷಿಣ ರೊಡೇಷಿಯಾದ ಗಡಿ ಭಾಗದಲ್ಲಿರುವ ವಿಕ್ಟೋರಿಯಾ (ಒಂದು ಮೈಲು ಅಗಲ) ತುಂಬ ಹರವುಳ್ಳ ಜಲಪಾತಗಳು. ವಿವರಗಳಿಗೆ ನೋಡಿ : ಕನ್ನಡ ವಿಶ್ವಕೋಶ ಸಂ ೭, ಮೈಸೂರು, ೧೯೭೪, ಪು. ೯೨೨, ಸಂ. ೬,(೧೯೭೩), ಪು. ೬೯೫.

೨ ಇದೊಂದು ಸ್ತಂಭ ಶಾಸನವೆನ್ನಬಹುದು. ಕ್ಲೆವೇಟ್ ಹಿಲ್ ಎಂಬ ಬ್ರಿಟಿಷ್ ರೆಜಿಮೆಂಟಿನ ಮೇಜರ್ ಜನರಲ್ ೧೮೪೫ ಜನವರಿ ೨೦ ರಂದು ಗೇರುಸೊಪ್ಪೆಯ ಜಲಪಾತದ ಬಳಿ ಮರಣವನ್ನಪ್ಪಿದ. ಅವನ ಜ್ಞಾಪಕಾರ್ಥ ಈಸ್ಟ್ ಇಂಡಿಯಾ ಕಂಪನಿಯವರು ತೊನ್ನಾವರದಲ್ಲಿ ಎತ್ತರವಾದ ಒಂದು ಸ್ತಂಭವನ್ನು ನಿಲ್ಲಿಸಿದ್ದು. ಅದರಲ್ಲಿ ಈ ವಿವರಗಳಿವೆ.

೩ ವಿವರಗಳಿಗೆ ನೋಡಿ : ಗೆಝೆಟಿಯರ್ ಆಫ್ ಬೊಂಬೆ ಪ್ರೆಸಿಡೆನ್ಸಿ ಸಂ. XV ಭಾಗ ೨, ಮುಂಬಯಿ, ೧೮೮೩.

೪ ಸುಮಾರು ಇಪ್ಪತ್ತು ಕವಿಗಳು ಜೋಗ ಜಲಪಾತವನ್ನು ಕೇಂದ್ರ ವಸ್ತುವನ್ನಾಗಿಟ್ಟುಕೊಂಡು ಕನ್ನಡದಲ್ಲಿ ಕವನಗಳನ್ನು ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ನನಗೆ ಮುಖ್ಯವೆನ್ನಿಸಿದ ಹದಿನಾಲ್ಕು ಕವನಗಳನ್ನು ಚರ್ಚೆಗೆ ಎತ್ತಿಕೊಂಡಿದ್ದೇನೆ.

೫ ಗುಂಡಪ್ಪ ಡಿ. ವಿ. ನಿವೇದನ 'ಜೋಗದ ಜಲಪಾತ' ಬೆಂಗಳೂರು, ೧೯೨೪, ಪು. ೧೯-೨೨.

೬ ಕುವೆಂಪು. ನವಿಲು 'ಜೋಗ' ಮೈಸೂರು, ೧೯೩೪, ಪು. ೩೪

೭ ಅಂಬಿಕಾತನಯದತ್ತ ಉಯ್ಯಾಲೆ, 'ತಡಸಲು', ಧಾರವಾಡ, ೧೯೩೮, ಪು. ೭೬.

೮ ಕರ್ಕಿ ಡಿ. ಎಸ್. ಭಾವತೀರ್ಥ, 'ಜೋಗದವೈಭೋಗ', ಹುಬ್ಬಳ್ಳಿ, ೧೯೫೩, ಪು. ೬೯.

೯ ಕಾವ್ಯಾನಂದ, ಜಲಪಾತ, ಹೈದರಾಬಾದ, ೧೯೫೩.

೧೦ ಶಿವರುದ್ರಪ್ಪ ಜಿ. ಎಸ್. ದೇವಶಿಲ್ಪ, 'ಜೋಗದಲ್ಲಿ ಒಂದು ನಡುಹಗಲು' ಮೈಸೂರು, ೧೯೫೯

೧೧ ಮೂಗೂರು ಮಲ್ಲಪ್ಪ 'ಜೋಗದ ಜೋಕು' ಬಾನುಲಿ. ಇದರ ಪಾಠವನ್ನು ದೊರಕಿಸಿಕೊಟ್ಟವರು ಕರ್ನಾಟಕದ ವಿಶ್ವವಿದ್ಯಾಲಯದ ಸಮಾಜ ಕಾರ್ಯವಿಭಾಗದ ಅಧ್ಯಾಪಕರಾದ ಶ್ರೀ ಎಸ್. ಎಫ್. ಪೂಜಾರರವರು ಅವರಿಗೆ ನನ್ನ ಕೃತಜ್ಞತೆಗಳು.

೧೨ ಅಕಬರ ಅಲಿ. ಎಂ. 'ಜೋಗ ಜಲಪಾತ', ಮೈಸೂರು, ೧೯೬೫.

೧೩ ಬಾಲುರಾಜು. ಎಸ್. ಕುವರ ಕವಿಯುಕಂನಾಡು, 'ಜೋಗ ಜಲಪಾತ' ಮೈಸೂರು, ೧೯೭೯, ಪು. ೬.

೧೪ ಗೋಕಾಕ ವಿ. ಕೃ. ಮತ್ತು ಕಣವಿ ಚೆನ್ನವೀರ (ಸಂ) ನವ್ಯಧ್ವನಿ. ಎಕ್ಕುಂಡಿ ಎಸ್. ಆರ್ 'ಜೋಗ ಜಲಪಾತದಲ್ಲಿ', ಧಾರವಾಡ, ೧೯೫೬

೧೫ ರಾಜರತ್ನ ಜಿ. ಪಿ. ರತ್ನನಪದಗಳು, 'ಜೋಗಿನ ಜಲಪಾತ', ಬೆಂಗಳೂರು ೧೯೩೪ (ಪ್ರ. ಮು.) ಪು. ೧೦೦-೧೦೧

೧೬ ಭಟ್, ವಿ. ಜಿ. ರಕ್ತಾಂಜಲಿ, 'ದಬದಬೆ', ಅಂಕೋಲಾ ೧೯೪೭ ಪು. ೫೩

೧೭ ದೇಸಾಯಿ ದಿನಕರ, ಹೂಗೊಂಚಲು, 'ಉತ್ತರ ಕನ್ನಡ ಜಿಲ್ಲೆ', ಅಂಕೋಲಾ ೧೯೪೮.

೧೮ ಚಿದಾನಂದ, ಕೆ, ಎಂಜಿನಿಯರಿಂಗ್ ಕವಿತೆಗಳು, 'ಜಲಪಾತ' ೧೯೮೦, ಪು. ೩೨.

ನಾಡವರು: ನಾಮ ವಿಕಸನ

● ರಾಜೇಂದ್ರ ನಾಯಕ

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ವಾಸವಾಗಿರುವ ಒಂದು ಪ್ರಭಾವ ಶಾಲಿ ಹಾಗೂ ತೇಜಸ್ವಿ ಪಂಗಡ ನಾಡವರು ಅಥವಾ ನಾಡೋರ್. ಸ್ವಾಭಾವಿಕವಾಗಿ 'ನಾಡವರು' ಎಂದರೆ 'ನಾಡಿನ ಜನರು' ಎಂದು ಅರ್ಥ ಕೊಡುತ್ತದೆ. ಇದು 'ನಾಡು' ಅಥವಾ 'ನಾಡ್' ಪದಗಳಿಂದ ಬಂದಿರಬಹುದು. ಆದರೆ ಇಂದಿನ ನಮ್ಮ ನಾಡವರು ತಮ್ಮ ಪೂರ್ವದ ಇತಿಹಾಸ ಮತ್ತು ಪರಂಪರೆಗಳನ್ನು ಸಂಪೂರ್ಣವಾಗಿ ಮರೆತದ್ದರಿಂದ ಅಲ್ಲಲ್ಲಿ ಸಿಕ್ಕಿದ ಗ್ರಂಥ ಮತ್ತು ಲೇಖನಗಳ ಆಧಾರದ ಮೇಲೆ ಮತ್ತು ನಾಡವರ ಹಳೆಯ ತಲೆಮಾರಿನ ಜನರಿಂದ ಅಷ್ಟಿಷ್ಟು ಕೇಳಿ, ತಿಳಿದು, ಸಂಗ್ರಹಿಸಿದ ಮಾಹಿತಿಗಳ ಬಲದ ಮೇಲೆ 'ನಾಡವರು' ಈ ಹೆಸರಿನ ಉತ್ಪತ್ತಿಯ ಕುರಿತು ಸಾಧ್ಯವಾದಷ್ಟು ಮಟ್ಟಿಗೆ ಬೆಳಕು ಚೆಲ್ಲಲು ಪ್ರಯತ್ನಿಸಿದ್ದೇನೆ.

Edgar Thurston' ಅವರು ಹೇಳುವಂತೆ, ನಾಡವರೆಂದರೆ ನಾಡಿನ ಜನರೆಂದು ಅರ್ಥ ಕೊಡುತ್ತದೆ. "The name Nāḍava or Nadavaru means the people of the Nāḍu or Country. It is one of the Sub-divisions of the Bants.[1]

ಮೇಲಿನ ವ್ಯಾಖ್ಯೆಯು ದಕ್ಷಿಣ ಕನ್ನಡದ ನಾಡವರಿಗೂ ಅನ್ವಯಿಸಬಹುದು ಯಾಕೆಂದರೆ ಉತ್ತರ ಕನ್ನಡದ ನಾಡವರು ದಕ್ಷಿಣ ಕನ್ನಡದಿಂದಲೇ ವಲಸೆ ಬಂದವರೆನ್ನುವ ಬಗ್ಗೆ ಸಾಕಷ್ಟು ಪುರಾವೆಗಳು ಇವೆ. ಅದಲ್ಲದೆ ಇಂದು ನಾಡವರು ನೆಲೆಸಿದ ಸ್ಥಳಗಳಾದ ಹಿರೇಗುತ್ತಿ, ಕಿರೇಗುತ್ತಿ, ಗುತ್ತಿಕೇರಿ ಮುಂತಾದವುಗಳು ಇವರು ತುಳುನಾಡಿನಿಂದಲೇ ಬಂದವರೆನ್ನುವ ಬಗ್ಗೆ ಸಾಕ್ಷಿ ಒದಗಿಸುತ್ತಿವೆ. 'ಗುತ್ತು' ನಾಡವರ ಪ್ರೀತಿ ಪಾತ್ರವಾದ ಹೆಸರು ತುಳುವ ಪ್ರದೇಶದಲ್ಲಿ ಗುತ್ತಿಗೆ ಈ ಕನ್ನಡ ಶಬ್ದದ ಅರ್ಥ ತೆರಿಗೆ ಎಂದು. ಅದೇ ರೀತಿ ಗುತ್ತಿಗೆದಾರ ಎಂದರೆ ಭೂಮಿ ಅಥವಾ ಹಳ್ಳಿಗಳ ಬಗ್ಗೆ ಸರಕಾರಕ್ಕೆ ತೆರಿಗೆ ಕೊಡುವವನು. ಗುತ್ತಿನಾಯೆ (ತುಳುಶಬ್ದ) ಇದು ಗ್ರಾಮದ ಮುಖ್ಯಸ್ಥ ಅಥವಾ ಪಾಟೀಲನ ಬಗ್ಗೆ ಇದ್ದ ಪುರಾತನ ಹೆಸರು. ಉತ್ತರ ಕನ್ನಡದ ನಾಡವರಲ್ಲಿ ಸಹ ಗುತ್ತಿಗೆ ಶಬ್ದ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

ತಮಿಳಿನ ನಾಟ್ಟರ್-(People of a Country) ಕನ್ನಡದ ನಾಡವರು ಇವೆಲ್ಲಾ ಒಂದೇ ರೂಪವೆಂದು ಡಾ. ಶಂ. ಬಾ. ಜೋಶಿಯವರು ಅಭಿಪ್ರಾಯಪಡುತ್ತಾರೆ. ಅದೇ

ರೀತಿ 'ನಾಡವರು' ಎಂಬ ಶಬ್ದ ದೇಶದವರು ಊರಿನವರು ಅರ್ಥ ಕೊಡುತ್ತದೆ ಎಂದು ಎಂಬ ಕಯ್ಯಾರ ಕಿಞ್ಞಣ್ಣ ರೈ ಅವರು ಹೇಳುತ್ತಾರೆ.

ಶ್ರೀ ಎಚ್. ವಿ ನಂಜುಂಡಯ್ಯನವರೂ ಸಹ ನಾಡುಗೌಡರ ಬಗ್ಗೆ ಬರೆಯುತ್ತಾ The "Nadavas means people of the country ಎಂದಿದ್ದಾರೆ. ಮತ್ತು The Namc Nadava is used for Bants in the northern parts of South Canara and this points among many other indications a territorial organization of Nads in Malabar"

ದಕ್ಷಿಣ ಕನ್ನಡದ ಉತ್ತರ ಭಾಗದ ಬಂಟರಿಗೆ 'ನಾಡವ' ಎಂಬ ಹೆಸರನ್ನು ಬಳಸಲಾಗುತ್ತಿದ್ದ ಮತ್ತು ಹಲವು ಸೂಚನೆಗಳ ಜೊತೆಗೆ ಇದು 'ನಾಡ'ಎಂಬ ಮಲಬಾರಿನ ಪ್ರಾದೇಶಿಕ ವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತದೆ ಎಂದಿದ್ದಾರೆ.

ಅದೇ ರೀತಿ ಕಮ್ಮರೆಂಬ ಪಂಗಡದ ಬಗೆ ಬರೆಯುತ್ತಾ ೧೯೦೧ರ ಜನಗಣತಿಯ ವರದಿಯಲ್ಲಿ Mr. ಫ್ರಾನ್ಸಿಸ್‌ರು The Kammas Kapus or Reddis Velamas and Telugus all four of these castes closely resemble one another in appearance and customs and Seem to have branched off ftom one and the Same Dravidian Stock. Originally Solidiers by Brofeeion they are now mainly agriculturists and traders and Some of them in the north are Zamindars ಎಂದಿದ್ದಾರೆ.

ಇದನ್ನು ಓದುವಾಗ ಬಂಟ ನಾಡವರ ನೆನಪಾಗುವದು ಸಹಜ. ಅದೇ ರೀತಿ ವಿಶೇಷವಾಗಿ ಪಶ್ಚಿಮ ಕರಾವಳಿಯಲ್ಲಿ ವಾಸವಾಗಿರುವ ಅನೇಕ ಜಾತಿಗಳಲ್ಲಿ ಬಂಟರು, ಅವರ ಒಳಪಂಗಡಗಳು, ನಾಯರರು, ನಾಟ್ಟುಮಂತಿಯರು, ನಾಡುಗೌಡರು, ಉತ್ತರ ಕನ್ನಡದ ನಾಡವರು ಇತ್ಯಾದಿ ಜಾತಿಗಳವರಲ್ಲಿ ತಾಯಿಬಳಿ ಪದ್ಧತಿ ಇರುವುದನ್ನು ಗಮನಿಸಿದರೆ ಬಹುಕಾಲದ ಹಿಂದೆ ಈ ಎಲ್ಲ ಜಾತಿಗಳಿಗೆ ಮೂಲವಾದ ಜನಾಂಗ ಒಂದು ಇದ್ದಿದ್ದು, ಮತ್ತು ಅದರಿಂದಲೇ ಇವೆಲ್ಲಾ ಜಾತಿಗಳು ಒಡೆದಿರಬೇಕು ಎನಿಸುತ್ತದೆ. ಮತ್ತು ಇವೆಲ್ಲವೂ ಯೋಧ ಜನಾಂಗ (warrior race) ಆಗಿದ್ದವು ಎಂಬುದಕ್ಕೆ ಆ ಕುರಿತು ಬರೆದ ವಿದ್ವಾಂಸರೆಲ್ಲ ಒಪ್ಪಿದ್ದಾರೆ.

ಮತ್ತು ಈ ಮೂಲ ಜನಾಂಗದಿಂದಲೇ ನಾಡವರು ಎಂಬ ಹೆಸರು ಬಂದಿರಬೇಕೆಂದು ಅರ್ಥೈಸಬಹುದಾಗಿದೆ. ಅದಕ್ಕೆ ಇಂಬು ಕೊಡುವಂತೆ ಈಗಿನ ಉ.ಕನ್ನಡದ ನಾಡವರು ಸಹ ಒಕ್ಕಲುತನವನ್ನು ಮುಖ್ಯ ಉದ್ಯೋಗವನ್ನು ಮಾಡಿಕೊಂಡಿದ್ದು, ಮಾತೃ ಪ್ರಧಾನ ಕುಟುಂಬಕ್ಕೆ ಸೇರಿದವರಾಗಿದ್ದಾರೆ.

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜಸರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರ ಚಿತ್ತರ್ ವಿವೇಕಿಗಳ್ **ನಾಡವರ್ಗಳ್**

ರಾಷ್ಟ್ರಕೂಟ ಕವಿ ನೃಪತುಂಗದೇವನ ಆಸ್ಥಾನದಲ್ಲಿ ರಚಿತವಾದ ಕವಿರಾಜಮಾರ್ಗದಲ್ಲಿ ಬಂದ ಮೇಲಿನ ವರ್ಣನೆಯು ಇಡೀ ಕಂನಾಡಿನ ವರ್ಣನೆಯಲ್ಲಿ; ನಾಡವರು ಎಂಬ ವಿಶಿಷ್ಟ ವರ್ಗದ್ದಾಗಿದೆ. ಈ ನಾಡವರೇ ರಾಷ್ಟ್ರಕರು ಎಂದು ಡಾ॥ ಶಂ. ಭಾ. ಜೋಶಿ ಯವರು ಅಭಿಪ್ರಾಯಪಡುತ್ತಾರೆ. ವಿನ್ಸೆಂಟ್ ಸ್ಮಿತ್‌ರೂ ಸಹ ಇದೇ ಅಭಿಪ್ರಾಯ ವನ್ನು ಸಮರ್ಥಿಸಿ, ರಾಷ್ಟ್ರಿಕರೆಂದರೆ ರಾಷ್ಟ್ರಕೂಟರು (indegeneous) ಆದಕಾರಣ ಇವರು ನಾಡವರೆಂಬುದು ನಿಶ್ಚಿತ.

ರಾಷ್ಟ್ರಿಕ ಎಂಬುದು ಸಂಸ್ಕೃತ ಪದ. ಅದನ್ನು ಕಂನುಡಿಗ ತಿರುಗಿಸಿಕೊಂಡರೆ ಅದರ ಅರ್ಥವು ನಾಡವ ಎಂದಾಗುವದು. ಮತ್ತು ನಾಡವರೆಂಬ ಜನರು ನಮ್ಮಲ್ಲಿ ಇರುವು ದನ್ನು ಕಾಣುತ್ತೇವೆ. ಅವರೂ ಸಹ ವೀರಬಂಟರು; ನಾಯಕ ಎಂಬುದು ಅವರ ಹುಟ್ಟಿ ನೊಡನೆ ಬಂದ ಪದವಿ! ದೇಶಿಯ ಹೆಸರುಗಳನ್ನು ಭಾಷಾಂತರಿಸಿಕೊಂಡು ಬಳಸುವ ರೀತಿ ಸಂಸ್ಕೃತದಲ್ಲಿ ಎಂದಿನಿಂದಲೂ ಇದೆ ಎಂದು ಶಂ. ಭಾ. ಅಭಿಪ್ರಾಯಪಡುತ್ತಾರೆ. ಅದೇ ರೀತಿ ಡಾ. ಆಳತೇಕರರೂ ಸಹ ಕಂನಾಡಿನ ಮೂಲಹೆಸರು ಕಂನುಡಿಯಂದೇ ಆಗಿರಬೇಕು. ಆದ್ದರಿಂದ ರಾಷ್ಟ್ರಿಕ ಶಬ್ದ ಮೂಲ ಕಂನುಡಿಯ ಯಾವುದೋ ಒಂದು ಪದದ ಭಾಷಾಂತರವಾಗಿರಬೇಕೆಂದು ಹೇಳಿದ್ದಾರೆ.

ಅದೇ ರೀತಿಯಾಗಿ ಕಂನಾಡು ಎಂಬುದು ಕೂಡುನುಡಿ ಕಂ ಮತ್ತು ನಾಡು ಎಂದು. ಇದರಲ್ಲಿ ಬರುವ ಪೂರ್ವಪದವು ಜನಾಂಗವಾಚಕವಲ್ಲದೆ ಅದಕ್ಕೆ ಬೇರೆ ಅರ್ಥವೇ ಇಲ್ಲ, ಮತ್ತು ಆ ಜನಾಂಗದಿಂದಲೇ ಕಂನಾಡು ಎಂಬ ಹೆಸರು ಬಂದಿರ ಬೇಕೆಂದು ಶಂ. ಭಾ. ಜೋಶಿಯವರು ಬರೆಯುತ್ತಾರೆ. ಆದರೆ ನಮ್ಮ ನಾಡವರು ತಮ್ಮ ಪೂರ್ವೇತಿಹಾಸವನ್ನು ಮರೆತಿರುವುದರಿಂದ ಇವರೇ ನಾಡವರು ಎಂದು ಗೆರೆ ಕೊರೆದು ಹೇಳಲು ಸಾಕಷ್ಟು ಸಂಶೋಧನೆಯಾಗುವುದು ಅವಶ್ಯಕವಾದುದು.

ಕನ್ನಡ ನಟರೇ ನಾಡವರು ನಾಡವರು ಎಂದರೆ ಈ ನಾಡಿನ ಮೂಲನಿವಾಸಿ ಒಕ್ಕಲು ಮಕ್ಕಳು ಎಂದರ್ಥ. ನಾಟರೆಂದರೆ ನಾಡವರು ಕಾರವಾರ ಮತ್ತು ಮಂಗಳೂರು ಸೀಮೆಯಲ್ಲಿ ನಾಡವರೇ ಪ್ರಮುಖ ಜನಾಂಗ ಅದಲ್ಲದೆ 'ಮನು'ವು ಹೇಳುವ 'ಕರಣ'ರೂ 'ಮತ್ಸ್ಯಪುರಾಣ'ದ ಕರ್ಣರೂ. ಇನ್ನೂ ಕೆಲವು ಸ್ಮೃತಿಪ್ರಬಂಧಗಳಲ್ಲಿ ಬರುವ ನಟ (ನಾಟ)ರೂ ನಮ್ಮ ಇಂದಿನ ನಾಡವರ ಪೂರ್ವಿಕರೇ ಎಂದು ನಿಸ್ಸಂದೇಹವಾಗಿ ಹೇಳಬಹುದು ಎಂದು ಶಂ. ಭಾ. ಜೋಶಿ ಯವರು ಬರೆಯುತ್ತಾರೆ.

ಅವರೇ ಮುಂದೆ ನಿಮ್ಮ ನಾಡಿನ ಮೊದಲಿಗರೆಂದು ಅಭಿಪ್ರಾಯ ಪಡಲಾದ 'ಕುಡುವರ' (ಒಕ್ಕಲಿಗರು) ಬಗ್ಗೆ ಬರೆಯುತ್ತಾ ಅವರೇ ಮುಂದೆ ನಾಡುವರಾದರೆಂದು ಹೇಳುತ್ತಾರೆ. ಪಟ್ಟಿ–ಪಾಡಿಯು ನಮ್ಮ ನಾಡಿನ ಮೊದಲಿಗರ ಆರಂಭದ ಪಾಡು ಸೂಚಿಸುವ 'ಪದ'ವಾಗಿರುವಂತೆ 'ಪಾಡಿ'ಯ ಜನಗಳು ಪಟ್ಟಿಗಳು (ಪತ್ತಿ) ಎನಿಸಿದಂತೆ, ನಾಡಿನ ಜನಗಳು ನಾಡವ (ನಾಟ್ಟವ)ರು ಎಂದು ಕರೆಯಲ್ಪಟ್ಟರು. ಅದನ್ನು ಬೆಂಬಲಿಸುವಂತೆ, 'ಪತ್ತಿ' ಗಳ ಉಲ್ಲೇಖವು 'ಯಜುರ್ವೇದ'ದಲ್ಲಿ ದೊರೆತರೆ, 'ಮನುಸ್ಮೃತಿ'ಯಲ್ಲಿ ನಟ (ನಾಡವ) ರ ಹೆಸರು ಸಿಕ್ಕುತ್ತದೆ.

ಇಂದು ಒಕ್ಕಲು (ಕುಡವ)ರು ನಾಡವರು ಭಿನ್ನವಾಗಿದ್ದರೂ ಒಕ್ಕಲುತನವು ಅವರಿಗೆ ದೂರವಾಗಿಲ್ಲ. ತುಳುಕೋಶದಲ್ಲಿ 'ಒಕ್ಕಲ್ಮೆ' ಎಂಬ ಪದಕ್ಕೆ One of the cultivating class called Bants! a bant' ಎಂದು ಇದೆ. ತಮಿಳಿನಲ್ಲಿ ಸಹ 'ನಾಟ್ಟವನ್' ಎಂದರೆ ಒಕ್ಕಲ, 'ಕುಡುವ'ನೆಂಬ ಅರ್ಥವನ್ನು ಗಮನಿಸಬಹುದು. ದಕ್ಷಿಣ ಕನ್ನಡದ ನಾಡವರಿಗೆ 'ಬಂಟ' ಎಂಬ ಅನ್ವರ್ಥಕ ನಾಮವಿರುವುದರಿಂದ ಉತ್ತರ ಕನ್ನಡದ ನಾಡವರೂ ಅಲ್ಲಿಂದಲೇ ಬಂದ ಬಗ್ಗೆ ಬಹಳ ಜನ ವಿದ್ವಾಂಸರಲ್ಲಿ ಒಮ್ಮತ ಅಭಿಪ್ರಾಯವಿರುವದರಿಂದ ಮೇಲಿನ 'ಒಕ್ಕಲ್ಮೆ' ಎಂಬ ಪದ ನಾಡವರಿಗೇ ಸಂಬಂಧಿಸಿ ಬರೆದುದಾಗಿದೆ ಎಂದು ಅಭಿಪ್ರಾಯ ಪಡಬಹುದು. ಹೊಲ, ಗಳಲಿ ಹೂಳುವಂತೆಯೇ 'ನಾಡು' ಇದರ ಮೂಲವು 'ಒಕ್ಕಲುತನ' ದಲ್ಲಿಯೇ ಇದೆ ಎಂದ ಶಂ, ಭಾ, ಅಭಿಪ್ರಾಯ ಪಡುತ್ತಾರೆ.

ಹಾಗೆಯೇ ಇನ್ನೂ ಒಂದು ಮುಖ್ಯ ಅಂಶವೆಂದರೆ ಉತ್ತರ ಕನ್ನಡದ ನಾಡವರಲ್ಲಿ ಮುಖ್ಯವಾಗಿ 'ನಾಯಕ' ಎಂಬ ಅಡ್ಡ ಹೆಸರು ಬಳಕೆಯಿಲ್ಲದೆ. ಇಲ್ಲಿ 'ನಾಡು' ಮತ್ತು 'ನಾಯಕ' ಶಬ್ದಗಳು ಒಂದಕ್ಕೊಂದು ಪೂರಕವಾಗಿರುವುದನ್ನು ಗಮನಿಸಬಹುದು. ಅದೇ ರೀತಿ ಎಲ್. ಕೆ. ಅನಂತಕೃಷ್ಣ ಐಯ್ಯರ್ ಅವರು 'ನಾಯರ್' ಬಗ್ಗೆ ಬರೆಯುತ್ತಾ 'ನಾಯರ್' ಇದನ್ನು 'ನಾಯಕ' ಶಬ್ದದಿಂದ ತೆಗೆದುಕೊಳ್ಳಲಾಗಿದ್ದು ಅದರ ಅರ್ಥ 'ಜನರ ಮುಖ್ಯಸ್ಥ' ಎಂದು ಹೇಳಿರುವರು.

ಬೌದ್ಧಗ್ರಂಥಗಳಲ್ಲಿ ಮಹಾವೀರನನ್ನು 'ನಾಟಪುತ್ರ' ಎಂದು ಕರೆದಿವೆ. Budhist texts frequently mention Nigantoa Nattaputta. ಈ ಆಧಾರದಿಂದ ಮಹಾವೀರನು ನಾಟ (ನಾಡ)ರಲ್ಲಿ ಅವತರಿಸಿದ ಒಬ್ಬ ಬಂಟನೋ ತಿಳಿಯದೆಂದು ಶಂ. ಭಾ. ಜೋಶಿಯವರು ಊಹಿಸುತ್ತಾರೆ. ನಾಡವರಲ್ಲನೇಕರು ಜೈನಮತ ಸ್ವೀಕರಿಸಿದರೂ ಮುಂದೆ ಜೈನಧರ್ಮದಿಂದ ಮತಾಂತರ ಹೊಂದಿದರೆಂದು ಹೇಳಲಾಗಿದೆ. ಈ ವಿಷಯವನ್ನು ಸಮರ್ಥಿಸಲು ನಾಡವರಲ್ಲಿ ಇಂದಿಗೂ ಪ್ರಚಲಿತದಲ್ಲಿರುವ "ಜೈನ್ರು ಬದ್ಕ ನಾಡವ್ರಿಗೇ ದಕ್ತೇದ" (ಜೈನರ ಬದುಕು ನಾಡವರಿಗೆ ಮಾತ್ರ

ಸಲ್ಲುತ್ತದೆ) ಎಂಬ 'ಹೇಳಿಕೆ' ಯಲ್ಲಿ ನಾಡವರಿಗೂ ಜೈನರಿಗೂ ಏನೋ ಪೂರ್ವ ಸಂಬಂಧವಿರಬಹುದೆಂದು ಅರಿಯಬಹುದು.

ಅದೇ ರೀತಿ ಈಗಿನ ನಾಡವರೆಂದರೆ. ಮೊದಲಿನ ‹ಕಾಡುವ› ರೆಂದು ಅಭಿಪ್ರಾಯ ಪಡಬಹುದು. 'ತುಳು'ನಾಡಿನಲ್ಲಿ ಹಾಗೆ ಅರ್ಥವೂ ಉಂಟು. ಮುಂದೆ 'ನಾಡು' ಎಂಬ ಪದ ವಿಸ್ತೃತವಾದಂತೆ ನಾಡವರೆಂಬುದಕ್ಕೂ ಒಂದು ವಿಶೇಷವಾದ ಅರ್ಥ ಪ್ರಾಪ್ತವಾಗಲೇಬೇಕಾಯಿತು. ಮುಂದೆ ಈ ಜನರು ನಾಡನ್ನು ಕಟ್ಟುವ ಕೆಲಸದಲ್ಲಿ— ರಾಜಕೀಯ ರಣರಂಗದಲ್ಲಿ ಮುನ್ನುಗ್ಗಿ ತಮ್ಮ ಹೆಸರಿಗೆ ಹೆಚ್ಚಿನ ಅರ್ಥವನ್ನು ಸಂಪಾದಿಸಿದರು. ಇದನ್ನು ಸಮರ್ಥಿಸುವಂತೆ ಉತ್ತರ ಕನ್ನಡ ಜಿಲ್ಲೆಯ ಹೆಮ್ಮೆಯ ಕವಿ, ದಿನಕರ ದೇಸಾಯಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಸಾಹಸ ಮೆರೆದ ನಾಡವರ ಕುರಿತು ಈ ಕೆಳಗಿನಂತೆ ಬರೆದಿದ್ದಾರೆ.

ನಾಡವರೇ ನಿಜ ನಾಡಿಗರು
ನೋಡು ಕಾಳಗವ ಹೂಡಿಹರು

ಸ್ವಾತಂತ್ರ್ಯದ ಸವಿಯೂಟನನುಂಡು
ವಿಜಯನಗರದಲ್ಲಿ ಕಾದಿದ ದಂಡು
ನಾಡವರಿಂದಿನ ದಾಸ್ಯವ ಕಂಡು
ಉಪ್ಪು ಮಾಡುವರು ಮುಂದಕೆ ಬಂದು...ನಾಡವರೇ...

ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲರೂ ಒಂದೆಡೆ ಕೂಡಿ
ಗಾಂಧಿ ಮಹಾತ್ಮರ ಕೊಂಬನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ....ನಾಡವರೇ....

ಕಲ್ಲಿನ ವೇಹವು ಅರಡಿ ಉದ್ದ
ಸೋಲದು ಇವರಿದ್ದರೆ ಈ ಯುದ್ಧ
ಕನ್ನಡ ನಾಡಿನ ಶೂರರು ಇವರು
ದೇಶಗೋಸುಗ ಕಾಯುತಲಿಹರು..ನಾಡವರೇ...

ಈ ಮೇಲಿನ ಪದ್ಯದಿಂದ ನಾಡವರಿಗೂ ಮತ್ತು ಕನ್ನಡ ನಾಡಿಗೂ ಇರುವ ಅನ್ಯೋನ್ಯತೆಯನ್ನು ಕಂಡುಕೊಳ್ಳಬಹುದು. ಅದೇ ರೀತಿ ನಾಡವರ ವೀರ ಪರಂಪರೆಯನ್ನು ಸಂಸ್ಕೃತಿಯನ್ನು ಸಮರ್ಥವಾಗಿ ಚಿತ್ರಿಸುವ ಈ ಕೆಳಗಿನ ‹ತ್ರಿಪದಿ› ಯನ್ನು ನೋಡಬಹುದು.

ನಾಡವು ಅಂದಾರೇ ನಾಡೀಗೆ ಅರಸಾರ
ಕೂಲಿ ಮಾಡಿದ್ರೆ ಕಡ್ವರ | ಕುಲ್ಡವ್ರು
ಬೇಡದ್ರೆ ಚಿಲ್ಲೀಸುಲ್ವರ |

ಹೀಗೆ ಹಲವಾರು ನಿದರ್ಶನಗಳಿಂದ ಕನ್ನಡ ನಾಡು ಮತ್ತು ನಾಡವರಿಗೆ ಗಾಢವಾದ ಸಂಬಂಧವಿದೆಯೆಂದು ಹೇಳಬಹುದು.

ಈ ನಾಡವರಿಗೆ ಸಂಸ್ಕೃತ ಭಾಷೆಯಿಂದ ಬಂದ 'ರಾಷ್ಟ್ರಿಕ' ರೆಂಬ ಇನ್ನೊಂದು ಹೆಸರೂ ಉಂಟು. ಕವಿರಾಜ ಮಾರ್ಗದಲ್ಲಿ ಬರುವ ನಾಡವರೇ ಈ 'ರಾಷ್ಟ್ರಿಕರು' ನಾಡವರೆಂದರೇ ರಾಷ್ಟ್ರಿಕರು ಎಂಬುದು ಆ ವರ್ಣನೆಯಿಂದ ಕಂಡುಬರುವುದು, ಆದ್ದರಿಂದ ಅದೂ ರಾಷ್ಟ್ರಕೂಟರ ವರ್ಣನೆಯೂ ಹೌದು. ರಾಷ್ಟ್ರಕೂಟರು ಕಂನಾಡವರೇ ಇರಬೇಕೆಂದು ಡಾ|| ಅಳತೇಕರ ಅವರ ಅಭಿಪ್ರಾಯ. ಯಾಕೆಂದರೆ ರಾಷ್ಟ್ರಕೂಟರ ಗುಜರಾತಿನ ಶಾಸನಗಳಲ್ಲಿ ರಾಜನು ಕೊನೆಯಲ್ಲಿ ಕಂನಾಡ ಅಕ್ಷರಗಳಲ್ಲಿ ತನ್ನ ಒಪ್ಪವನ್ನು ಹಾಕಿರುವುದು ಕಂಡುಬರುತ್ತದೆ ಅದೇ ವಂಶದ ೩ ನೆಯ ಕೃಷ್ಣನು 'ಜೂರಾ' (ಉತ್ತರ ಹಿಂದುಸ್ತಾನ) ದಲ್ಲಿ ಬರೆಯಿಸಿದ ಶಾಸನ ಕಂನುಡಿಯಲ್ಲಿದೆ. ಇವರಿಗೆ ತಮ್ಮ ನಾಡು ಮತ್ತು ನುಡಿಯಲ್ಲಿ ವಿಶೇಷ ಅಭಿಮಾನವಿದ್ದುದು ಮೇಲಿನ ಅಂಶಗಳಿಂದ ತಿಳಿದು ಬರುತ್ತದೆ.

ಅದೇನೇ ಇರಲಿ. ಈ ವಿಷಯದಲ್ಲಿ ಸಾಕಷ್ಟು ಸಂಶೋಧನೆಯಾಗದೇ ಖಚಿತ ಅಭಿಪ್ರಾಯ ಕೊಡುವುದು ಕಷ್ಟ ಸಾಧ್ಯ. ಸದ್ಯಕ್ಕೆ ಈಗಿರುವ ವಿಚಾರಗಳನ್ನೇ ಒಪ್ಪಿಕೊಳ್ಳುವುದು ಒಳ್ಳೆಯದೆಂದು ತೋರುತ್ತದೆ. ಸಂಸ್ಕೃತದ ರಾಷ್ಟ್ರ > ರಾಷ್ಟ್ರಿಕ > ರಾಷ್ಟ್ರಿಕರು ಇವುಗಳನ್ನು ಕಂನುಡಿಯಲ್ಲಿ ನಾಡ (ನಾಡ್) > ನಾಡವ > ನಾಡವರು ಎಂದು ಅರ್ಥೈಯಿಸಬಹುದು, ಒಟ್ಟಿನಲ್ಲಿ 'ನಾಡು' ಅಥವಾ 'ನಾಡ್' ಪದದಿಂದಲೇ 'ನಾಡವರು' ರೂಪ ಬಳಕೆಯಲ್ಲಿ ಬಂದಿರಬೇಕೆಂದು ದೃಢವಾಗಿ ಹೇಳಬಹುದು.

ಅಡಿ ಟಿಪ್ಪಣಿ

1 Castes and Tribes of Southern India Vol. V ಪು. 134 ಕಾರವಾರ ಜಿಲ್ಲಾ ದರ್ಶನ, ಸಂಗ್ರಹಕಾರರು ಎಸ್. ಸಿಲ್ವಾ, ಪು. ೧೭, ೧೯೬೨.
ವೈಜಯಂತಿ, ತೃತೀಯ ೧೯೮೭ ಪು. ೬೪
The Mysore tribes and Castes, Vol, IV ಪು. 397, 401
ಕನ್ನಡದ ನೆಲೆ, ಶಂ. ಬಾ. ಜೋಶಿ, ಪು. ೧೦೧
ನಾಡವರು, ಜಿ. ಎಚ್. ನಾಯಕ. ಪ್ರಬುದ್ಧ ಕರ್ನಾಟಕ
ಎಡೆಗಳು ಹೇಳುವ ಕಂನಾಡ ಕತೆ ಶಂ. ಭಾ. ಜೋಶಿ ಪುಟ, ೨೮೯
" " " " ಪುಟ, ೧೨೩, ೧೨೪, ೧೨೫, ೧೩೮
ಕನ್ನಡದ ನೆಲೆ. ೧೯೩೯, ಶಂ. ಬಾ. ಜೋಶಿ
ಎಡೆಗಳು ಹೇಳುವ ಕಂನಾಡ ಕತೆ ಶಂ.ಬಾ. ಜೋಶಿ ೧೯೪೭, ಪುಟ. ೧೨೩.
ವೈಜಯಂತಿ ತೃತಿಯು ಸಂಪುಟ ಪುಟ. ೬೪
ಕನ್ನಡದ ನೆಲೆ, ಶಂ. ಬಾ: ಜೋಶಿ, ಪುಟ. ೧೫೫.
ಪಡುಕೋಗಿಲೆ' ಪುಟ, ೧೦.
ಎಡೆಗಳು ಹೇಳುವ ಕಂನಾಡ ಕತೆ, ಪುಟ, ೧೩೪
ಶಾಲ್ಮಲಾ, ಸ್ಮರಣ ಸಂಚಿಕೆ ಪುಟ ೬೩
ಪಡುಕೋಗಿಲೆ, ಡಾ ॥ ಎನ್. ಆರ್. ನಾಯಕ, ಪುಟ ೯೮
ಎಡೆಗಳು ಹೇಳುವ ಕಂನಾಡ ಕತೆ. ಪುಟ ೧೩೫, ೧೩೬

ಡಿ.ವಿ.ಜಿ.ಯವರ ಜೀವನ ಧರ್ಮಯೋಗ

● ಗುಂಡ್ಮಿ ಚಂದ್ರಶೇಖರ ಐತಾಳ

ಭಾರತೀಯ ಸಂಸ್ಕೃತಿಯ ನವನೀತದಂತಿರುವ ಭಗವದ್ಗೀತೆ ಲೋಕಸಾಹಿತ್ಯದಲ್ಲಿಯೇ ಅಗ್ರಪಂಕ್ತಿಯಲ್ಲಿದೆ. ಈ ಮಹಾಕೃತಿಯನ್ನು ಕುರಿತಾಗಿ ಪುಂಖಾನುಪುಂಖವಾಗಿ ವಿವಿಧ ಭಾಷೆಗಳಲ್ಲಿ ವ್ಯಾಖ್ಯಾನಗಳು ಪ್ರಕಟವಾಗಿರುವುದೇ ಈ ಕೃತಿಯ ಗರಿಮೆಯನ್ನು ಎತ್ತಿಹಿಡಿದಿದೆ. ಆಧುನಿಕ ಯುಗದಲ್ಲಿಯೂ ಕೂಡ ಲೋಕಮಾನ್ಯ ಟಿಳಕ, ಮಹಾತ್ಮಾಗಾಂಧಿ, ಆಚಾರ್ಯ ವಿನೋಬಾ ಮೊದಲಾದ ಮಹಾನುಭಾವರ ದೃಷ್ಟಿಯಲ್ಲಿ ಭಗವದ್ಗೀತೆಯು ಮಾತೃಸಮಾನವಾಗಿದೆ. ಮಹಾತ್ಮಾ ಗಾಂಧೀಜಿಯವರಂತೂ ಗೀತಾಮಾತೆಯು ಹಾಲಿನಿಂದ ಸಾಕಷ್ಟು ಸಂತೃಪ್ತರಾಗಿರುವರೆಂದು ಹೇಳಿಕೊಂಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿಯೂ ಕೂಡ ರಂಗನಾಥ ದಿವಾಕರ ಮೊದಲಾದವರು ವ್ಯಾಖ್ಯಾನ ಮಾಡಿದ್ದುಂಟು. 'ಮಂಕುತಿಮ್ಮನ ಕಗ್ಗ'ದಿಂದ ಮಹಾದಾರ್ಶನಿಕರೆಂದು ಹೆಸರಾದ ಸಾಹಿತ್ಯ ಭೀಷ್ಮ ಡಿ.ವಿ.ಜಿ.ಯವರ ಅನುಭಾವದ ಮೂಸೆಯಲ್ಲಿ ಭಗವದ್ಗೀತೆ ಹೊಸ ಹುಟ್ಟನ್ನು ಪಡೆದುಕೊಂಡು 'ಜೀವನ ಧರ್ಮಯೋಗ'ವಾಗಿದೆ. ಪ್ರಸ್ತುತ ಸಮಾಜಕ್ಕೆ ಮಾರ್ಗದರ್ಶನ ಸೂತ್ರಗಳನ್ನು ನೀಡುವ ಸ್ಫೂರ್ತಿಯ ಚಿಲುಮೆಯಾಗಿರುವ ಬೃಹದ್ ಕೃತಿ 'ಜೀವನ ಧರ್ಮಯೋಗ'ವನ್ನು ಓದಲು ಎಂಟೆದೆಯು ಬೇಕಾಗುತ್ತದೆ. ೨೬೭ ಪುಟಗಳಿರುವ ಈ ಗ್ರಂಥವು ಡಿ.ವಿ.ಜಿ.ಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ತಂದುಕೊಟ್ಟಿದೆ. ಈ ಗ್ರಂಥವನ್ನು ಬರೆದ ಉದ್ದೇಶವನ್ನು ಡಿ.ವಿ.ಜಿ.ಯವರು ಹೀಗೆ ನಿವೇದಿಸಿಕೊಂಡಿದ್ದಾರೆ. "ಇದನ್ನು ಸಾಮಾನ್ಯ ಜನರಿಗಾಗಿ ಕನ್ನಡ ಭಾಷೆಯಲ್ಲಿ ವ್ಯಾಖ್ಯಾನಿಸಿದೆ. ನಾನಾ ಮತಗಳ ವ್ಯಾಖ್ಯಾನಗಳನ್ನು ಬಿಟ್ಟು ಇಲ್ಲಿ ನನಗೆ ನೇರವಾಗಿ ಅರ್ಥವಾದುದನ್ನು ಹೇಳಿದೆ. ಜೀವನ ವ್ಯವಹಾರಗಳಲ್ಲಿ ಎಲ್ಲರಿಗೂ ಯಾವಾಗಲೂ ಇದು ಅನ್ವಯಿಸುವಂತಿದೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ತಾನು ಚೆನ್ನಾಗಿ ಬದುಕಬೇಕು. ತನ್ನ ಬದುಕನ್ನು ಚೆನ್ನಾಗಿ ನಡೆಸಬೇಕು ಎಂಬ ಆಸೆ ಸ್ವಾಭಾವಿಕವಾಗಿ ಇರುತ್ತದಲ್ಲವೆ? ನಮ್ಮ ಬದುಕಿನಲ್ಲಿ ಯಾವುದು ಚೆನ್ನ? ಯಾವುದು ಸೊಗಸು? ಯಾವುದು ಬೆಲೆ ಬಾಳತಕ್ಕುದು? ಚೆನ್ನ ಅಂದರೆ ಏನು? ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕೆಂದು ಯಾರಿಗೆ ಮನಸ್ಸುಂಟೋ ಅಂಥವರು ಆಕ್ಕರೆಯಿಂದ ಓದಿ ತಿಳಿದುಕೊಳ್ಳಬೇಕಾದ ಗ್ರಂಥ ಭಗವದ್ಗೀತೆ. ಅದರಲ್ಲಿ ಜೀವ ಎಂದರೆ ಏನು? ಜೀವಕ್ಕೂ ಜಗತ್ತಿಗೂ ಏನು ಸಂಬಂಧ. ದೇವರು ಎಂದರೆ ಏನು? ಜೀವಕ್ಕೂ ದೇವರಿಗೂ ಸಂಬಂಧವೆಂಥಾದ್ದು—ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಆದುದರಿಂದಲೇ ಇದನ್ನು 'ಜೀವನಧರ್ಮ ಯೋಗ' ಎಂದು ಕರೆಯಲಾಗಿದೆ. ಹೀಗೆ ಸಮಗ್ರವಾಗಿಯೂ ಸಂಗ್ರಹವಾಗಿಯೂ ಸುಂದರವಾಗಿಯೂ ಹೇಳುವ ಕಲೆ ಡಿ.ವಿ.ಜಿ.ಯವರಿಗೆ ಕರಗತವಾಗಿದೆ.

ಮೂಲ ಭಗವದ್ಗೀತೆಯ ಅಧ್ಯಾಯಗಳನ್ನು ವ್ಯಾಖ್ಯಾನಿಸುವ ರೀತಿ ನೀತಿಗಳು ಕೂಡ ನವೋನವೋನ್ಮೇಷಶಾಲಿನಿಯಾಗಿದೆ. ಈ ಮಾತಿಗೆ ಪ್ರತಿ ಅಧ್ಯಾಯಕ್ಕೂ ಕೊಟ್ಟ ವಿನೂತನ ಶೀರ್ಷಿಕೆಗಳೇ ಕಾರಣವೆನ್ನಬಹುದು.

	ಮೂಲದ ಹೆಸರು	ಡಿ.ವಿ.ಜಿ. ಅವರು ಕೊಟ್ಟಿರುವ ಹೆಸರು
೧)	ಅರ್ಜುನ ವಿಷಾದ ಯೋಗ	ಪ್ರಾಕೃತ ಕಾರುಣ್ಯಯೋಗ
೨)	ಸಾಂಖ್ಯ ಯೋಗ	ತತ್ತ್ವವಿವೇಕ ಯೋಗ
೩)	ಕರ್ಮ ಯೋಗ	ಸ್ವಧರ್ಮಯೋಗ
೪)	ಜ್ಞಾನಕರ್ಮ ಸಂನ್ಯಾಸಯೋಗ	ನಿರ್ಲೇಪಕರ್ಮಯೋಗ
೫[	ಸಂನ್ಯಾಸಯೋಗ	ಕರ್ಮಜ್ಞಾನಸಮನ್ವಯ ಯೋಗ
೬]	ಧ್ಯಾನ ಯೋಗ	ಧ್ಯಾನಾಭ್ಯಾಸಯೋಗ
೭)	ಜ್ಞಾನ ವಿಜ್ಞಾನ ಯೋಗ	ಜಗಜ್ಜೀವೇಶ್ವರ ಯೋಗ
೮]	ಅಕ್ಷರಬ್ರಹ್ಮಯೋಗ	ಪ್ರಣವಾರ್ಥಯೋಗ
೯]	ರಾಜವಿದ್ಯಾರಾಜಗುಹ್ಯಯೋಗ	ಬ್ರಹ್ಮ ಜಗತ್ಸಂಬಂಧಯೋಗ
೧೦]	ವಿಭೂತಿ ಯೋಗ	ಈಶ್ವರ ವೈಭವ ಯೋಗ
೧೧]	ವಿಶ್ವರೂಪ ದರ್ಶನ ಯೋಗ	ವಿಶ್ವರೂಪ ಸಂದರ್ಶನ ಯೋಗ
೧೨]	ಭಕ್ತಿಯೋಗ	ಭಕ್ತಿ ಸೋಪಾನಯೋಗ
೧೩]	ಕ್ಷೇತ್ರ ಕ್ಷೇತ್ರಜ್ಞ ವಿಭಾಗಯೋಗ	ಪ್ರಕೃತಿ ಪುರುಷ ವಿವೇಕಯೋಗ
೧೪]	ಗುಣತ್ರಯ ವಿಭಾಗಯೋಗ	ತ್ರಿಗುಣತಂತ್ರ ಜಾಗರೂಕಯೋಗ
೧೫]	ಪುರುಷೋತ್ತಮ ಯೋಗ	ಅಶ್ವತ್ಥ ಮೂಲೋಪಾಸನಯೋಗ
೧೬]	ದೈವಾಸುರ ಸಂಪದ್ವಿಭಾಗಯೋಗ	ದೈವಾಸುರ ಭೇದ ವಿವೇಕಯೋಗ
೧೭]	ಶ್ರದ್ಧಾತ್ರಯ ವಿಭಾಗಯೋಗ	ಶ್ರದ್ಧಾತ್ರಯ ವಿವೇಕಯೋಗ
೧೮]	ಮೋಕ್ಷ ಸನ್ಯಾಸಯೋಗ	ತದೇಕ ಶರಣತಾ ಯೋಗ

ಡಿ. ವಿ. ಜಿ. ಯವರ ಬದುಕು ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ಸಂಶೋಧನೆ ಮಾಡಿದವರಲ್ಲಿ ಡಾ. ಗುಂಡ್ಮಿ ಚಂದ್ರಶೇಖರ ಐತಾಳ ಅವರು 'ಜೀವನ ಧರ್ಮ ಯೋಗ' ಬೃಹತ್ ಕೃತಿಯನ್ನು ಕುರಿತಾಗಿ ಸು. ೭೮ ಪುಟಗಳಲ್ಲಿ ಸಾರವತ್ತಾದ ವಿಷಯಗಳನ್ನು ಎತ್ತಿಕೊಂಡು ಸಂಕ್ಷಿಪ್ತವಾಗಿ ವ್ಯಾಖ್ಯಾನ ಮಾಡಿರುವುದು ಆಸಕ್ತರಿಗೆ ವಿಶೇಷ ಪ್ರಯೋಜನಕಾರಿಯಾಗಿದೆ. ಪ್ರ. ೧೧೭ ಆಕರಗಳ ಮುಖಾಂತರ ಮೂಲ ಕೃತಿಯ ಸೊಬಗನ್ನು ಹೆಚ್ಚಿಸಿದ್ದಾರೆ. ಅಲ್ಲಲ್ಲಿ ಸೂಕ್ತವಾದ ತಮ್ಮ ಮಾತುಗಳನ್ನು ಜೋಡಿಸಿದ್ದಾರೆ. ಇದರಲ್ಲಿ ಎತ್ತಿಕೊಂಡಿರುವಂಥ ದೃಷ್ಟಾಂತಗಳು ಓದುಗರಲ್ಲಿ ಕುತೂಹಲ ಕೆರಳಿಸುವಂತಿವೆ; ಮಾರ್ಮಿಕವಾಗಿವೆ. ಉದಾಹರಣೆಗೆ. ಹಲಸಿನ ಹಣ್ಣನ್ನು ಸುಲಿಯಬೇಕು ಕೈಕೊಳಕಾಗಬಾರದು. ಅದಕ್ಕೆ ಕೈಗೆ ಮೊದಲೇ ಎಣ್ಣೆ ಬಳಿದುಕೊಂಡಿರಬೇಕು.

ಇದು ಉಪಾಯ. ನೀರಿನಲ್ಲಿ ತಾವರೆ ಎಲೆ ಹೇಗೆ ಇರುತ್ತದೆಯೋ ಹಾಗೆ ಮನುಷ್ಯನು ಲೋಕದಲ್ಲಿ ಜೀವನ ಮಾಡಬೇಕು. ಇದೇ ಕರ್ಮಕೌಶಲ. ಇದೇ ಯೋಗ! (ಪು.೨೨) 'ಮನುಷ್ಯನಲ್ಲಿ ನಖ ರೋಮಗಳಿವೆ. ನಖರೋಮಗಳಲ್ಲಿ ಮನುಷ್ಯನಿಲ್ಲ. ಕ್ಷೌರ ಕಾಲದಲ್ಲಿ ಉಗುರು ಕೂದಲುಗಳನ್ನು ತೆಗೆದು ಹಾಕಿದರೂ ಅದರಿಂದ ಜೀವಕ್ಕೇನೂ ವ್ಯತ್ಯಾಸವಿಲ್ಲ. ಸಮುದ್ರದಲ್ಲಿ ನೊರೆ ಬುರುಗುಗಳಿವೆ. ಬುರುಗು ನೊರೆಗಳಲ್ಲಿ ಸಮುದ್ರವಿಲ್ಲ. ನೊರೆ ನೀರ್ಗುಳ್ಳೆಗಳು ಹೋದರೂ ಸಮುದ್ರಕ್ಕೇನೂ ಹಾನಿ ಇಲ್ಲ. ದೇಹಕ್ಕೆ ಕೇಶ ನಖಗಳೂ, ಸಮುದ್ರಕ್ಕೆ ಫೇನ ಬುದ್ಬುದಗಳೂ ಹೇಗೋ ಬ್ರಹ್ಮಚೈತನ್ಯಕ್ಕೆ ಜಗದ್ವಸ್ತುಗಳು ಹಾಗೆ ಆಗಂತುಕಗಳು. ಹೇಗೋ ಕ್ಷಣಿಕವಾಗಿ ಬಂದವು—ನೈಜವೇ ಆದರೂ ಅಸಾರಗಳು. ಬ್ರಹ್ಮದ ಸತ್ತ್ವವು ಜಗದ್ವಸ್ತುವಿನಲ್ಲಿಲ್ಲ . . . (ಪು. ೩೨)

ಒಟ್ಟಿನಲ್ಲಿ ಭಗವದ್ಗೀತೆಯ ಮಹತ್ವವನ್ನು ಚಿತ್ರಿಸುವಲ್ಲಿ 'ಜೀವನಧರ್ಮಯೋಗ'ದ ಜೀವಾಮೃತವನ್ನು ಉಣಿಸುವದರಲ್ಲಿ ಈ ಕೃತಿಯು ಯಶಸ್ವಿಯಾಗಿದೆಯೆನ್ನಬಹುದು. ಈ ಬಗೆಯ ಪ್ರಯೋಗಗಳು ಇತರ ಬೃಹತ್ ಕೃತಿಗಳನ್ನು ಕುರಿತಾಗಿ ನಡೆದಷ್ಟು ಒಳ್ಳೆಯದು. ಈ ದಿಸೆಯಲ್ಲಿ ಡಾ. ಗುಂಡ್ಮಿ ಚಂದ್ರಶೇಖರ ಐತಾಳರು ದಾರಿದೀಪವಾಗಿದ್ದಾರೆ. ಈ ಕೃತಿಯನ್ನು ಪ್ರಕಟಿಸಿದ ಶ್ರೀ ಧರ್ಮಸ್ಥಳದ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ ಅಭಿನಂದನೀಯ ಕೆಲಸ ಮಾಡಿದೆ.

—ಡಾ. ಮಧು ವೆಂಕಾರೆಡ್ಡಿ

ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ

[ಜನಪದ ಗೀತೆಗಳಲ್ಲಿ ಬಸವಣ್ಣ]

● **ಶಿವಾನಂದ ಗುಬ್ಬಣ್ಣವರ**

ಜಾಗತಿಕ ಸಾಂಸ್ಕೃತಿಕ ಇತಿಹಾಸದಲ್ಲಿ ಆಗೊಮ್ಮೆ ಈಗೊಮ್ಮೆ ಪುಣ್ಯಪುರುಷರು ಕೋಲ್ಮಿಂಚಿನಂತೆ ಮಿಂಚಿ ಮಾನವತೆಯ ಮಂದಾರವಾಗಿ ಬೆಳಗಿದ್ದಾರೆ. ಇಂಥವರ ಶ್ರೇಣಿಯಲ್ಲಿ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ವಿನೂತನ ಅಧ್ಯಾಯ ನಿರ್ಮಿಸಿದ ಬಸವಣ್ಣನವರು ಒಬ್ಬರಾಗಿದ್ದಾರೆ. ಬಸವಣ್ಣನವರು ಎಂಟುನೂರು ವರ್ಷಗಳಾಚೆಗೆ ಈ ನಾಡಿನಲ್ಲಿ ಜನ್ಮವೆತ್ತಿ ಹೋದರೂ ಇಂದಿಗೂ ಸಹ ಅವರ ಹೆಸರು ಕನ್ನಡಿಗರ ನಾಲಗೆಯ ಮೇಲೆ ಸದಾ ನಳನಳಿಸುತ್ತದೆ. ಐತಿಹಾಸಿಕ ಮಹಾವ್ಯಕ್ತಿಯಾದ ಬಸವಣ್ಣನವರನ್ನು ಕುರಿತಾಗಿ ಅನೇಕ ಕಾವ್ಯಗಳು ಪುರಾಣಗಳು ಬರೆಯಲ್ಪಟ್ಟಿದ್ದರೂ ಜನಪದ ಸಾಹಿತ್ಯ ಪ್ರಪಂಚದಲ್ಲಿ ಪ್ರಪ್ರಥಮ ಬಾರಿಗೆ 'ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ' ಎಂಬ ಹೆಸರಿನ ಗ್ರಂಥವು ಹೊರಬಂದಿರುವದು ಸಂತೋಷದ ಸಂಗತಿ. ಈ ಬಸವಣ್ಣನವರನ್ನು ಕುರಿತಾಗಿ ನಮ್ಮ ಜಾನಪದರು ಆಡಿಕೊಂಡ ಹಾಡಿಕೊಂಡ ಬಿಡಿ ಬಿಡಿ ಸಂಕಲನಗಳು ಹೊಂದಿರುವದೇನೋ ನಿಜ. ಆದರೆ ಈ ಕೃತಿಯನ್ನು ಅವಲೋಕಿಸಿದರೆ ಒಂದು ಮಾತು ಸ್ಪಷ್ಟವಾಗಿ ನಮ್ಮ ಗಮನಕ್ಕೆ ಬರುತ್ತದೆ. ಅದೆಂದರೆ ಧಾರವಾಡ. ಬೆಳಗಾವಿ. ಬಿಜಾಪುರ, ಕಲಬುರ್ಗಿ, ಬೀದರ ಜಿಲ್ಲೆಗಳ ಗ್ರಾಮೀಣ ಪ್ರದೇಶದ ಸುಮಾರು ಹದಿನಾಲ್ಕು ಬಾಂಧವರಿಂದ ಗೀತೆಗಳನ್ನು ಸಂಗ್ರಹಿಸಿರುವದು. ಈ ಸಂಕಲನದ ವೈಶಿಷ್ಟ್ಯವಾಗಿದೆ. ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು ಕುರಿತಾಗಿ ಹಾಡಿದ ಪದಗಳನ್ನು (೧) ಡೊಳ್ಳಿನ ಹಾಡು (೨) ಲಾವಣಿ (೩) ಹೆಣ್ಣುಮಕ್ಕಳ ಹಾಡು—ಹೀಗೆ ವಿಭಾಗಿಸಿ ಅಭ್ಯಾಸಿಗಳಿಗೆ ಒಂದುಬಗೆಯ ಅನುಕೂಲತೆಯನ್ನು ಮಾಡಿಕೊಟ್ಟಿರುವದು ಸಂಪಾದಕರ ಔಚಿತ್ಯಪ್ರಜ್ಞೆಗೆ ನಿದರ್ಶನವಾಗಿದೆ. ಡೊಳ್ಳಿನ ಹಾಡುಗಳಲ್ಲಿ ಹೇಳಿಕೊಳ್ಳುವಂಥ ಮಹತ್ವದ ಅಂಶಗಳು ಇಲ್ಲದೇ ಹೋದರೂ ಪಾರಂಪರಿಕವಾದ ವರ್ಣನಾವೈಖರಿ ಮೆಚ್ಚುವಂತಿದೆ. ಈ ಮಾತಿಗೆ ಉದಾಹರಣೆಯಾಗಿ 'ಧರಣಿ ವ್ಯಾಲ ನೋಡಪ್ಪ ಯಾರ್ಯಾರು ದೊಡ್ಡವರು' ಎನ್ನುವ ಹಾಡನ್ನು ಅವಲೋಕಿಸಬಹುದು.

ಲಾವಣಿಗಳಲ್ಲಿ ಓದುಗರ ಮನಸ್ಸನ್ನು ಸೆಳೆಯುವದರಲ್ಲಿ ಹುಲಕುಂದದ ಖ್ಯಾತ ಲಾವಣಿಕಾರ ಭೀಮಕವಿಯು ರಚಿಸಿದ 'ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು, ಯಶಸ್ವಿಯಾಗಿದೆ. ಇದರಲ್ಲಿ ಬಸವಣ್ಣನವರು ಬಾಳಿ ಬೆಳಗಿರ ಜೀವನದ ಘಟನೆಗಳು ಸಂಕ್ಷಿಪ್ತವಾಗಿ ಯಥಾರ್ಥವಾಗಿ ಮೂಡಿ ಬಂದಿವೆ. ಬಳಸಿಕೊಂಡ ಭಾಷೆಯೂ ಕೂಡ ಸೊಗಸಾಗಿದೆ.

"ಶಿವಕುಲ ಭವಿಕುಲ ಎರಡು ಬಾಗಿದೆಲ್ಲ ಗೊಡ್ಡು, ಠರಾವ ಹೀಂಗ ನಿರತ
ಅನುಭವ ಮಂಟಪ ಸ್ಥಲಕ"(ಪು.೭೯)

ಹೀಗೆ ದೇಶೀಯ ಭಾಷೆಯ ಜೆಡಗನ್ನು ಸವಿಯಬಹುದಾಗಿದೆ. ಲಾವಣಿಯ ಕೊನೆಯಲ್ಲಿ ಚಾಲ ರೂಪದಿಂದ ಮೂಡಿಬಂದ ಈ ವಾಕ್ಯಗಳು ಯಾರಾದರೂ ಮೆಲುಕು ಹಾಕುವಂತಿವೆ.

"ಬಸವಣ್ಣನವರು ಬರೆಸಿ ಬರೆದ ವಚನ
ಜಗತ್ತಳಿಯುತನ ಜನಕೆ ದಾರಿದೀಪ
ಓದಿ ನಡೆದವರಿಗ್ಹೋಗತದ ಪಾಪ
ಅವರು ಪವಾಡ ಮಾಡಿದ ವರ್ಣನ ಹೇಳಿದ್ರ ಸರಿದೂಕ ಹಾಕಿದಂತೆ ದೂಪ
ಸ್ಥಳ ಸಾಲದಕ ಬಿಟ್ಟೇನರಪ್ಪ
ಭಕ್ತಿ ಭಾಂಡಾರಿಯವರ ಪುರಾಣ ತತ್ತ್ವದರ್ಶನ
ಆತ್ಮಕೆ ಇಂಥದ ತಿಳಿಕೊಂಡವರಿಗಾದುದು ದೇವಕೃಪ"(ಪು.೮೦)

ಅಣ್ಣ ಬಸವಣ್ಣ ಚಿನ್ನದಂತ ಬದುಕಿನ ಮಹಾನ್ಯತೆ' ಎಂಬ ಲಾವಣಿಯಲ್ಲಿಯ ಈ ಚಾಲು ಚೇತೋಹಾರಿಯಾಗಿದೆ.

"ಹನ್ನೆರಡನೆಯ ಶತಮಾನ ಅಣ್ಣನವರು ಹೊತ್ತಿಸಿದ್ರು
ಕನ್ನಡದ ಗುಡಿಯಲ್ಲಿ ಜ್ಯೋತಿಯನ
ಅಂದಿನಿಂದ ಇಂದಿಗೂ ಮುಂದೆ ಎಂದೆಂದಿಗೂ
ಬೆಳಗುವವರವನ ಕೀರ್ತಿಯನ ಗೀ ಗೀ" (ಪು. ೯೩)

ಹಾಗೆಯೇ,

'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ' ಲಾವಣಿಯಲ್ಲಿಯಯಲ್ಲಿ
"ಬಸವನ ಗಾತ್ರ ಅಳಿದಿತು ತತ್ವ ಉಳಿದಿತು
ವಚನ ಸಾಹಿತ್ಯ ವಿಶ್ವಧರ್ಮಾಯ್ತು ವಿಶ್ವಕಲ್ಯಾಣಕೆ ಬೇಕಾಯ್ತು"(ಪು.೧೦೦)


ಇಲ್ಲಿಯ ನುಡಿಮುತ್ತು ಸತ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಜನಪದರು ಬಸವಣ್ಣನವರನ್ನು ಹೇಗೆ ಅರ್ಥೈಸಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಕೊನೆಯಲ್ಲಿಯು ಹೆಣ್ಣುಮಕ್ಕಳ ಹಾಡುಗಳಲ್ಲಿ ಕೋಲಿನಪದ, ಜೋಗುಳಪದ, ಆರತಿ ಪದ ಸಂಕಲನಗೊಂಡಿವೆ. ಇವುಗಳಲ್ಲಿ ಹೇಳಿಕೊಳ್ಳುವಂಥ ಮಹತ್ವದ ಅಂಶಗಳು ಇಲ್ಲವೆನ್ನಬಹುದು.

ಒಟ್ಟಿನಲ್ಲಿ ಇದೊಂದು ಸಂಕಲನ ಗ್ರಂಥವೆನ್ನಬಹುದಾಗಿದೆ. ಹಾಡಿದವರ ವಿವರಗಳನ್ನು ಗ್ರಂಥದ ಕೊನೆಯಲ್ಲಿ ಕೊಡುವದಕ್ಕಿಂತಲೂ ಆಯಾ ಪದಗಳ ಕೊನೆಯಲ್ಲಿ ಅಡಿಟಿಪ್ಪಣಿಯ ಮೂಲಕ ಕೊಟ್ಟಿದ್ದರೆ ಒಳ್ಳೆಯದಿತ್ತು. ೨೦ ಪುಟಗಳ ವಿಸ್ತಾರವಾದ

ಪ್ರಸ್ತಾವನೆಯಲ್ಲಿ ಸಂಪಾದಕರು ಪರಿಶ್ರಮವಹಿಸಿ ವಿಚಾರಪೂರ್ಣ ವಿವೇಚನೆ ನಡೆಸಿರುವದು ಶ್ಲಾಘನೀಯ. ಶಾಸ್ತ್ರೀಯವಾದ ಸಂಪಾದನಾ ತತ್ವದ ತಳಹದಿಯ ಮೇಲೆ ಇನ್ನಷ್ಟು ಪರಿಶ್ರಮವಹಿಸಿ ಸಂಪಾದಿಸಿದ್ದರೆ ಪಂಡಿತ ಮಾನ್ಯ ಕೃತಿಯಾಗಬಹುದಿತ್ತು. ಏನೇ ಇರಲಿ. ಬಸವಣ್ಣನವರನ್ನು ಕುರಿತಾಗಿ ಇಷ್ಟೊಂದು ಗಾತ್ರದಲ್ಲಿ ಗ್ರಂಥವನ್ನು ಹೊರತಂದಿರುವದು ಅಭಿನಂದನೀಯವಾಗಿದೆ. ಬಸವ ಸಮಿತಿಯವರು ಪ್ರಕಟಿಸಿ ಮಹದುಪಕಾರ ಮಾಡಿದ್ದಾರೆ.

●



೧. ಗೋಪಾಲ ಕಂಬ (ಸಾತೇನಹಳ್ಳಿ)



೨. ಗಜಲಕ್ಷ್ಮಿ ಶಿಲ್ಪ (ಶಿಗ್ಗಾಂವಿ) ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ



೩. ಶಾಸನ ಮೇಲಿನ ಮಂಗಳ ಚಿಹ್ನೆಗಳು (ಹುಲಗೂರ)



೯. [illegible] ಶಿವಲಿಂಗ (ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ)



೫. ವೀರಗಲ್ಲಿನ ಮೇಲ್ಭಾಗ (ಹುಲಗೂರು)



೬. ಸಪ್ತಮಾತೃಕೆಯರ ಶಿಲ್ಪ ಭಾಗ (ಹುಲಗೂರು)




೭ ಹುಲಗೂರಿನ ಬೈರವ (ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ)



೮: ಹುಲಗೂರಿನ ದಕ್ಷ



೯. ಸೂರ್ಯ (ಬನ್ನಿಕೋಡ)



೧೦. ಗಜಲಕ್ಷ್ಮಿ ಶಿಲ್ಪ (ಶಿಗ್ಗಾಂವ)



೧೧. ಗಜಲಕ್ಷ್ಮಿ ಶಿಲ್ಪ (ಹುಲಗೂರ)



೧೨. ನಂದಿ (ಹುಲಗೂರ)




೧೩. ಗಜಲಕ್ಷ್ಮಿ ಶಿಲ್ಪ (ಶಿಗ್ಗಾಂವಿ – ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ)



೯೪. ಮುಳಗೂರಿನ ಚತುರ್ಮುಖ ಶಿಲ್ಪ



೧೫. "ಜೋಗ ಜಲಪಾತ"



೧೬. ಶಿವಲಿಂಗ (ಚಿಕ್ಕೇರೂರ)



೧೭. ಅರ್ಜುನೇಶ್ವರ (ಬನ್ನಿಕೋಡ)

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಅಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಅಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ರೂ. ೪-೦೦

ಹಣವನ್ನು **ಫೈನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ